ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್

27 ಮೇ 2015 ಪುಟ 20 ರೂ. 15/-

ಪುಸ್ತಕ ವಿಮರ್ಶೆ
ಕಸ್ತೂರಿ ರಂಗನ್ ವರದಿ ಯಾಕೆ ಬೇಡ



ಸಂದರ್ಶನ

## ಎಲ್ಲಿದೆ ಕುರುಬರ ಗುಂಪು?

ಭೂಸ್ವಾಧೀನ ಕಾಯ್ದೆ


## ಸಿ.ಟಿ.ರವಿಯ ಸುಳ್ಳುಗಳು





## ಮಾಗಡಿಯಲ್ಲೊಬ್ಬ ಕೇಡಿ ಸ್ವಾಮಿ

# ಭೂಸ್ವಾಧೀನ ಕಾಯ್ದೆ ಮತ್ತು ಬಿಜೆಪಿ ಸಿ.ಟಿ.ರವಿ ಸುಳ್ಳುಗಳ



ಡಾ.ವಾಸು ಎಚ್.ವಿ.

ಭಾರತೀಯ ಜನತಾ ಪಕ್ಷಕ್ಕೆ ಸುಳ್ಳನ್ನು ಸತ್ಯದ ತಲೆ ಮೇಲೆ ಹೊಡೆದಂತೆ ಹೇಳುವುದನ್ನು ಯಾರೂ ಹೇಳಿಕೊಡಬೇಕಿಲ್ಲ, ಅದು ಒಂದು ರೀತಿ ಜನ್ಮಜಾತ ಪ್ರತಿಭೆ. ಸುಳ್ಳನ್ನೇ ಅಧಿಕೃತ ಸಿದ್ಧಾಂತವಾಗಿಸಿಕೊಂಡಿರುವ ಪಕ್ಷ, ಹಲವು ದಶಕಗಳ ಕಾಲ ದೇಶದ ವಿವಿಧ ಭಾಗಗಳಲ್ಲಿ ಅದರ ಪ್ರಯೋಗ ನಡೆಸಿ ಪರಿಣಿತಿ ಗಳಿಸಿಕೊಂಡ ಪಕ್ಷ ಈಗ ಒಂದು ವಿಚಾರದಲ್ಲಿ ತಿಣುಕುತ್ತಿದೆ. ಭೂಸ್ವಾಧೀನ ಕಾಯ್ದೆಯ ವಿಚಾರದಲ್ಲಿ, ಎಷ್ಟೇ ಸುಳ್ಳು ಹೇಳಿದರೂ, ಯುಪಿಎ ಸರ್ಕಾರ ತಂದಿದ್ದ 2013ರ ಕಾಯ್ದೆ ಜನಪರವಾಗಿತ್ತೆಂಬುದನ್ನೂ, ತಾವು ತರುತ್ತಿರುವ ತಿದ್ದುಪಡಿಗಳು ಬಂಡವಾಳಶಾಹಿಗಳ ಪರವಿದೆಯೆಂಬುದನ್ನೂ ಅವರಿಗೆ ಮುಚ್ಚಿಡಲಾಗುತ್ತಿಲ್ಲ, ಅದನ್ನು ಅರ್ಥ ಮಾಡಿಕೊಳ್ಳಲು ಹೆಚ್ಚೇನೂ ಸಂಶೋಧನೆಯ ಅಗತ್ಯವಿಲ್ಲ, ಸ್ವತಃ ಬಿಜೆಪಿ ಪಕ್ಷದ 'ಪ್ರಕಾಶನ ಪ್ರಕೋಷ್ಠ'ವು ಹೊರತಂದಿರುವ ಪುಸ್ತಕ ನೋಡಿದರೆ ಸಾಕು.

'ಭೂಸ್ವಾಧೀನ ಕಾಯ್ದೆ-2014, ಅನಿವಾರ್ಯತೆ, ಆರೋಪ, ವಾಸ್ತವ' ಎಂಬ ಆ ಪುಸ್ತಕದಲ್ಲಿ 1894ರ ಬ್ರಿಟಿಷ್ ಕಾಯ್ದೆ ಮತ್ತು 2013ರ ಯುಪಿಎ ಕಾಯ್ದೆಗಳಲ್ಲಿನ ಅಂಶಗಳನ್ನು ಹೋಲಿಸಿ ಒಂದು ಕೋಷ್ಟಕ ಹಾಕಲಾಗಿದೆ. ಆ ಕೋಷ್ಟಕ ನೋಡಿದವರಿಗೆಲ್ಲಾ ಯುಪಿಎ ಕಾಯ್ದೆ ಅತ್ಯಂತ ಜನಪರ ಎಂಬುದು ಸ್ಪಷ್ಟವಾಗುತ್ತದೆ. ಬಿಜೆಪಿಯವರಿಗೇ ಅದನ್ನು ಮುಚ್ಚಿಡಲು ಆಗಿಲ್ಲ, ಅನಂತರ 2013ರ ಯುಪಿಎ ಕಾಯ್ದೆ ಮತ್ತು 2014ರ ಎನ್‌ಡಿಎ ಸುಗ್ರೀವಾಜ್ಞೆಯನ್ನು ಹೋಲಿಸಿ ಇನ್ನೊಂದು ಕೋಷ್ಟಕ ಹಾಕಲಾಗಿದೆ. ಅದರಲ್ಲಿ ಮೋದಿಯ ತಿದ್ದುಪಡಿಗಳು ಅಪ್ಪಟ ರೈತವಿರೋಧಿ ಎಂಬುದನ್ನೂ ಮುಚ್ಚಿಡಲಾಗಿಲ್ಲ.

ಅಲ್ಲಿಂದ ಮುಂದಕ್ಕೆ ತಿಣುಕಾಟ ಆರಂಭವಾಗಿದೆ. ಇರುವುದು, ಇಲ್ಲದಿರುವುದು ಎಲ್ಲವನ್ನೂ ಸೇರಿಸಿ ಏನೇನೋ ಹೇಳಿದ್ದಾರೆ. ಉದಾಹರಣೆಗೆ, ಆ ಪುಸ್ತಕದಲ್ಲಿ ಆರೋಪ ಮತ್ತು ವಾಸ್ತವ ಎಂಬ ವಿಭಾಗದಲ್ಲಿ ಹೀಗೆ ಹೇಳಲಾಗಿದೆ:

ಆರೋಪ: ಕೃಷಿಯನ್ನು ಅವಲಂಬಿಸಿರುವ ಕೃಷಿ ಕಾರ್ಮಿಕರು, ಗೇಣಿದಾರರು, ಪಾಲುದಾರಿಕೆಯಲ್ಲಿ ಬೆಳೆ ಬೆಳೆಯುವ ರೈತರ ಜೀವನದ ಮೇಲೆ ಬೀರುವ ಪರಿಣಾಮವನ್ನು ಈ ಕಾಯ್ದೆ ಕಡೆಗಣಿಸಿದೆ.

ಬಿಜೆಪಿಯ ಪ್ರಕಾರ ವಾಸ್ತವ: ಕೃಷಿ ಅವಲಂಬಿತ ಈ ಜನರಿಗೆ ಉದ್ಯೋಗಗಳನ್ನು ಅಥವಾ ನಿರ್ದಿಷ್ಟ ಅವಧಿಯವರೆಗಾದರೂ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲು ಮತ್ತು ಅರ್ಹರನ್ನು ಗುರ್ತಿಸಲು ಗ್ರಾಮ ಪಂಚಾಯಿತಿಗಳನ್ನು ಮತ್ತು ಗ್ರಾಮಸಭೆಗಳನ್ನು ಸಜ್ಜುಗೊಳಿಸಲಾಗುತ್ತದೆ.

ವಾಸ್ತವವೇನು? ಸಾಮಾಜಿಕ ಪರಿಣಾಮಗಳ ಅಧ್ಯಯನ ಮಾಡಿದಾಗ ಮಾತ್ರ ಈ ರೀತಿಯ ಸಂತ್ರಸ್ತರನ್ನು ಸೂಕ್ತವಾಗಿ ಗುರ್ತಿಸಲು ಸಾಧ್ಯ. ಎನ್‌ಡಿಎ ತಿದ್ದುಪಡಿ ಅದನ್ನೇ ಇಲ್ಲವಾಗಿಸಿದೆ. ಇನ್ನು ಉದ್ಯೋಗಾವಕಾಶಗಳನ್ನು ಕಲ್ಪಿಸುವ ನಿರ್ದಿಷ್ಟ ಪ್ರಸ್ತಾಪವೇನೂ ಎನ್‌ಡಿಎ ತಿದ್ದುಪಡಿಯಲ್ಲಿ ಇಲ್ಲ, ಅದರ ಮೇಲೆ ಅವರು 'ಅರ್ಹರನ್ನು ಗುರ್ತಿಸಲು ಗ್ರಾಮಪಂಚಾಯ್ತಿ ಮತ್ತು ಗ್ರಾಮಸಭೆಗಳನ್ನು ಸಜ್ಜುಗೊಳಿಸುತ್ತವೆ' ಎಂಬುದು ಹಾಸ್ಯಾಸ್ಪದ.

ಆರೋಪ: ಸುಗ್ರೀವಾಜ್ಞೆ ತರುವ ತುರ್ತೇನಿತ್ತು?

ಬಿಜೆಪಿ ಪ್ರಕಾರ ವಾಸ್ತವ: ಅನುಷ್ಠಾನಗೊಂಡ ಯೋಜನೆಯ ಸಂತ್ರಸ್ತ ಜನರಿಗೆ ನ್ಯಾಯಯುತ ಪರಿಹಾರವನ್ನು ಕೊಡಲು 2015ರ ಜನವರಿ 1ರೊಳಗೆ ಆ 13 ನಿಬಂಧನೆಗಳಿಗೆ ತಿದ್ದುಪಡಿ ತರುವುದು ಅವಶ್ಯಕವಾಗಿತ್ತು, ಆದರೆ 2014ರ ಚಳಿಗಾಲದ ಅಧಿವೇಶನದಲ್ಲಿ ಪದೇ ಪದೇ ಆದಂತಹ ಅಡೆತಡೆಗಳಿಂದಾಗಿ, ವಿರೋಧಗಳಿಂದಾಗಿ ಮತ್ತು ರಾಜ್ಯಸಭೆಯಲ್ಲಿನ ಸಂಖ್ಯಾಬಲದ ಕೊರತೆಯಿಂದಾಗಿ ಈ 13 ನಿಬಂಧನೆಗಳಿಗೆ ತಿದ್ದುಪಡಿ ತರಲು ಸಾಧ್ಯವಾಗಲಿಲ್ಲ.

ವಾಸ್ತವವೇನು? ನ್ಯಾಯಯುತ ಪರಿಹಾರ ಕೊಡಲು ಬೇಕಾದ ಕಾಯ್ದೆಯನ್ನು ಯುಪಿಎಯೇ ತಂದಾಗಿತ್ತು, ಅದಕ್ಕೆ ನಿಯಮಗಳನ್ನೂ ರೂಪಿಸಿಯಾಗಿತ್ತು, ಅದರ ಪ್ರಕಾರವೇ ಪರಿಹಾರ ಕೊಡಲು ಯಾವ ಅಡ್ಡಿಯಿತ್ತು, ಯುಪಿಎ ಹೊರಗಿಟ್ಟಿತ್ತೆಂದು ಹೇಳಲಾದ ಕೆಲವು ವಿಭಾಗಗಳ ವಿಚಾರದಲ್ಲಿ ನೀವು ಈ ಮಾತನ್ನು ಹೇಳುತ್ತಿದ್ದೀರಾದರೆ, ಅವಕ್ಕೆ ಹೆಚ್ಚಿನ ಪರಿಹಾರವನ್ನು ಕಲ್ಪಿಸಿಕೊಡಲು ಸರ್ಕಾರಕ್ಕೆ ಯಾವ ಅಡ್ಡಿಯೂ ಇರಲಿಲ್ಲ, ಇಚ್ಛಾಶಕ್ತಿ ಮತ್ತು ಜನಪರ ಕಾಳಜಿಯ ಅಡ್ಡಿಯನ್ನು ಹೊರತುಪಡಿಸಿ!

ಆರೋಪ: ಎನ್‌ಡಿಎ ತರುತ್ತಿರುವ ತಿದ್ದುಪಡಿ ಕಾಯ್ದೆಯಡಿ 5 ವರ್ಷದ ಮಿತಿಯನ್ನು ತೆಗೆಯುತ್ತಿರುವುದು ಹಾನಿಕಾರಕ.


ಬಿಜೆಪಿ ಪ್ರಕಾರ ವಾಸ್ತವ: ಭಾರೀ ಯೋಜನೆಗಳಿಗೆ ಕೆಲವು ಪ್ರಾರಂಭಿಕ ಅಡೆತಡೆಗಳಿರುತ್ತವೆ. ಅಣು ವಿದ್ಯುತ್ ಸ್ಥಾವರದಂತಹ ಯೋಜನೆಗಳು ಮುಗಿಯಲು 5 ವರ್ಷಕ್ಕೂ ಹೆಚ್ಚು ಕಾಲ ಬೇಕಾಗುತ್ತದೆ. ಇದನ್ನು ಅರ್ಧದಲ್ಲಿಯೇ ನಿಲ್ಲಿಸಬೇಕೇ? ಕಡಿಮೆ ಬಜೆಟ್‌ನಲ್ಲಿ ಮನೆಗಳನ್ನು ನಿರ್ಮಿಸುವಂತಹ 10 ವರ್ಷದ ಮಹತ್ವದ ಯೋಜನೆಗಳಿರುತ್ತದೆ. ಇವೆಲ್ಲವನ್ನೂ ಅರ್ಧದಲ್ಲಿಯೇ ಕೈಬಿಡಬೇಕೇ? ರೈಲ್ವೇ ಹಳಿಗಳ ನಿರ್ಮಾಣದಂತಹ ಕಾರ್ಯಗಳು ಸರ್ವೇಯಿಂದ ಅನುಷ್ಠಾನದವರೆಗೆ 5 ವರ್ಷಕ್ಕೂ ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ದೇಶದ ಸಂಪರ್ಕ ಸೇತುವಾಗುವ ಅಭಿವೃದ್ಧಿಯ ಈ ಯೋಜನೆಗಳು ಬೇಡವೇ?

ವಾಸ್ತವವೇನು?: ಯುಪಿಎ ಕಾಯ್ದೆಯು 5 ವರ್ಷದೊಳಗೆ ಉದ್ದೇಶಿತ ಯೋಜನೆ ಮುಗಿದಿರಬೇಕು ಎಂದು ಹೇಳಿಲ್ಲ, 5 ವರ್ಷದೊಳಗೆ ಬಳಸಿಕೊಳ್ಳಬೇಕು ಎಂದು ಹೇಳುತ್ತದೆ. ವಶಪಡಿಸಿಕೊಂಡು 20 ವರ್ಷವಾದರೂ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಸ್ಥಾನಗಳ 2 ಲಕ್ಷಕ್ಕೂ ಹೆಚ್ಚು ಎಕರೆ ಜಮೀನನ್ನು ಇದುವರೆಗೂ ಬಳಸಿಕೊಂಡಿಲ್ಲ ಎಂಬ ಹಿನ್ನೆಲೆಯಲ್ಲಿ ಇದನ್ನು ನೋಡಬೇಕು. ಆದರೆ, ಯೋಜನೆ ಮುಗಿಸಲು ಬೇಕಾದ ವರ್ಷಗಳನ್ನು ಗೊಂದಲಗೊಳಿಸುವ ಉದ್ದೇಶದಿಂದ ಬಿಜೆಪಿ ಹೇಳುತ್ತಿದೆ.

ಇಂತಹುದೇ ಇನ್ನೂ ಸಾಕಷ್ಟು ಸುಳ್ಳುಗಳನ್ನು ಆ ಪುಸ್ತಕ ಹೇಳುತ್ತದೆ. ತನ್ನ ಬಗ್ಗೆ ತನಗೇ ವಿಶ್ವಾಸವಿಲ್ಲದಿರುವುದು ಇಡೀ ಪುಸ್ತಕದುದ್ದಕ್ಕೂ ಎದ್ದು ಕಾಣುತ್ತದೆ. ಅದನ್ನು ಮುಚ್ಚಿಟ್ಟುಕೊಳ್ಳಲು 'ವಿಧೇಯಕದ ಬಗ್ಗೆ ಪಕ್ಷದ ಕಾರ್ಯಕರ್ತರು ರಕ್ಷಣಾತ್ಮಕವಾಗಿರುವ ಅವಶ್ಯಕತೆಯಿಲ್ಲ, ಭ್ರಮೆಯನ್ನು ಬಹಳ ಕಾಲ ಉಳಿಸಿಕೊಳ್ಳಲಾಗದು. ಸತ್ಯವನ್ನು ನೇರವಾಗಿ ರೈತ ಸಮುದಾಯಕ್ಕೆ ತಿಳಿಸಿ ಹೇಳಲು ನಮ್ಮ ನಮ್ಮ ಕ್ಷೇತ್ರದಲ್ಲಿ ನಾವು ಸಮಯ ನೀಡಬೇಕು' ಎಂದು ತನ್ನ ಕಾರ್ಯಕರ್ತರಿಗೆ ಕರೆ ನೀಡುತ್ತದೆ. ಇದರಲ್ಲಿ ವಿಶ್ವಾಸ ಕಾಣುವುದಕ್ಕಿಂತ ಹುಸಿ ಧೈರ್ಯ ತುಂಬುವಿಕೆಯ ಪ್ರಯತ್ನವೇ ಹೆಚ್ಚಿದೆ.

ಇನ್ನೂ ಮುಂದುವರೆದು '2013ರ ವಿಧೇಯಕದಲ್ಲಿ ತಾಂತ್ರಿಕ ಸಮಸ್ಯೆಗಳ ಹಾಗೂ ಅದರ ಅನುಷ್ಠಾನದಲ್ಲಿನ ತೊಡಕಿನ ನಿವಾರಣೆಗೋಸ್ಕರ 2015ರ ತಿದ್ದುಪಡಿ ಮಾಡಲಾಗಿದ್ದು, ಇದರಿಂದ ರೈತರಿಗೆ ಹೆಚ್ಚಿನ ಪರಿಹಾರ, ಸೂಕ್ತ ಪುನರ್ವಸತಿ, ಉದ್ಯೋಗ, ಜೊತೆಗೆ, ದೇಶದ ವಿಕಾಸದಂತಹ ಅವಕಾಶಗಳು ಪ್ರಾಪ್ತವಾಗಲಿವೆ ಎಂಬುದನ್ನು ಸಂವಾದ, ವಿಚಾರಸಂಕಿರಣಗಳ ಮೂಲಕ ತಿಳಿಸಿ ಹೇಳಬೇಕು. ರೈತರೊಂದಿಗೆ ನೇರ ಸಂವಾದ ನಡೆಸಿ ಅವರಿಗೆ ಸ್ಪಷ್ಟತೆಯ ಬಗ್ಗೆ ತಿಳಿಸಿ ಹೇಳಿ ಈ ವಿಧೇಯಕ ರೈತ ವಿರೋಧಿಯಲ್ಲ, ಬದಲಿಗೆ ರೈತಪರ ಎಂಬ ಅಂಶವನ್ನು ಮನದಟ್ಟು ಮಾಡುವ ಅವಶ್ಯಕತೆಯಿದೆ' ಎಂಬ ಕಾರ್ಯಸೂಚಿಯನ್ನು ಆ ಪುಸ್ತಕ ತನ್ನ ಕಾರ್ಯಕರ್ತರ ಮುಂದಿಟ್ಟಿದೆ.

ಇಂತಹ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಬಿಜೆಪಿ ಈಗಾಗಲೇ ಆರಂಭಿಸಿದೆ. ಅಂತಹ ಒಂದು ಕಾರ್ಯಕ್ರಮವು ಮೇ 13ರಂದು ಮಂಡ್ಯದ ರೈತಸಭಾಂಗಣದಲ್ಲಿ ನಡೆಯಿತು. ಬಿಜೆಪಿಯ 'ವಾಗ್ಮಿ' ಸಿ.ಟಿ.ರವಿ ಅಲ್ಲಿ ಸಂವಾದವನ್ನು ನಡೆಸಿಕೊಟ್ಟರು. ರೈತಸಂಘದ ಕಾರ್ಯಕರ್ತರು ಹಾಕಿದ ಪ್ರಶ್ನೆಗಳಿಗೆ ತಬ್ಬಿಬ್ಬಾದದ್ದನ್ನು ತೋರಿಸಿಕೊಳ್ಳದಿರಲು ಅವರು ಸಾಕಷ್ಟು ಪ್ರಯತ್ನಪಟ್ಟರು. ಅದು ಸಾಧ್ಯವಿರದಾಗ, 'ಇವೆಲ್ಲದರ ಬಗ್ಗೆ ನಾವೂ ಕಾರ್ಯಕಾರಿಣಿಯಲ್ಲಿ ನಿಮಗಿಂತ ಕಟುವಾಗಿ ಪ್ರಶ್ನೆ ಮಾಡಿದ್ದೇವೆ. ಇಂತಹ ಕಾಯ್ದೆಯನ್ನು ಮುಂದಿಟ್ಟುಕೊಂಡು ರೈತರ ಬಳಿ ಹೇಗೆ ಹೋಗುವುದು ಎಂದು ಕೇಳಿದ್ದೇವೆ. ಅನಂತರ ಹಲವು ತಿದ್ದುಪಡಿಗಳನ್ನು ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿದೆ' ಎಂದು ಹೇಳುವ ಸ್ಥಿತಿ ಅವರಿಗೆ ಬಂದಿತು.



ಒಂದು ವೇಳೆ ಇದೇ ನಿಜವಾದಲ್ಲಿ, ತನ್ನ ಕಾರ್ಯಕರ್ತರಿಗೆ ನೀಡಿರುವ ಪುಸ್ತಕದಲ್ಲಿ 'ನಮ್ಮ ಕಾರ್ಯಕರ್ತರು ಸರಿಯಾದ ಎದುರುತ್ತರ ನೀಡಬೇಕು. ನಾವು ಖಂಡಿತವಾಗಿಯೂ ರೈತ ವಿರೋಧಿ ಆಗಲು ಸಾಧ್ಯವೇ ಇಲ್ಲ' ಎಂದು ಏಕೆ ಹೇಳಲಾಗಿದೆ? ಆ ಪುಸ್ತಕದಲ್ಲಿ ಹೇಳಿರುವಂಥದೇ ಸುಳ್ಳುಗಳನ್ನು ಸಿ.ಟಿ.ರವಿ ಇಲ್ಲಿಯೂ ಉದುರಿಸಿದರು.

'ನಾವು 4 ಪಟ್ಟು ಪರಿಹಾರ ಕೊಡ್ತೇವೆ. ನಾವು ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಶೇ.20ರಷ್ಟನ್ನು ರೈತರಿಗೆ ಕೊಡ್ತೇವೆ.' ಯುಪಿಎ ಕಾಯ್ದೆಯಲ್ಲಿನ ಇಂತಹ ಹಲವು ಅಂಶಗಳನ್ನು ತಮ್ಮದೆಂಬಂತೆ ಹೇಳಿಕೊಂಡರು. ಇದಲ್ಲದೇ ಅಲ್ಲಿ ಹೇಳಿದ ಇತರ ಸುಳ್ಳುಗಳು ಈ ರೀತಿ ಇವೆ.

- ಹಳೇ ಕಾಯ್ದೆಯಲ್ಲೇ ಮುಂದುವರೆದಿದ್ದರೆ ಹೆಚ್ಚು ಪರಿಹಾರ ಕೊಡಲು ಆಗುತ್ತಿರಲಿಲ್ಲ; ಉದ್ಯೋಗ ಕೊಡೋಕೆ ಆಗ್ತಿರಲಿಲ್ಲ.
- 2014ರ ಜೂನ್‌ನಲ್ಲಿ ಕರೆದಿದ್ದ ಸಭೆಯಲ್ಲಿ 35 ಜನ ಮುಖ್ಯಮಂತ್ರಿಗಳೂ ತಿದ್ದುಪಡಿಗೆ ಸಹಮತ ವ್ಯಕ್ತಪಡಿಸಿದ್ದರು. ಈಗ ರಾಜಕೀಯ ಕಾರಣಗ[...] ವಿರೋಧ ಮಾಡುತ್ತಿದ್ದಾರೆ.
- ಗುಜರಾತ್‌ನಲ್ಲಿ ಹಿಂದೆ ಸೈಕಲ್‌ನಲ್ಲಿ ಹೋ[...] ರೈತ ಇಂದು ಬೈಕ್‌ನಲ್ಲಿ ಹೋಗ್ತಿದ್ದಾನೆ. ಅಲ್ಲಿ 24 [...] ವಿದ್ಯುತ್ ಇದೆ; ವಿದ್ಯುತ್ ಮತ್ತು ನೀರಾವರಿಯ ವಿ[...] ಅಭಿವೃದ್ಧಿಯ ಸಮಾನ ಹಂಚಿಕೆಯಾಗಿದೆ.
- ನಾವು ಕೇವಲ 5 ಬಗೆಯ ಯೋಜನೆಗಳಿಗೆ [...] ಸಾಮಾಜಿಕ ಪರಿಣಾಮಗಳ ಅಂದಾಜನ್ನು ಮಾಡು[...] ಬೇಡ ಎಂದಿದ್ದೇವೆ. ಎಲ್ಲದಕ್ಕೂ ಅಲ್ಲ. (ಇದು 5 [...] ಯೋಜನೆಗಳಲ್ಲ; ಬದಲಿಗೆ ಈ ದೇಶದ ಎಲ್ಲಾ ಸ[...] ಖಾಸಗಿ ಯೋಜನೆಗಳನ್ನು ಇದರಡಿಗೆ ತರಬಹುದಾ[...] ವ್ಯಾಪ್ತಿಯುಳ್ಳವು)
- ಯುಪಿಎಯ ಕಾಯ್ದೆಯನ್ನು ವಿರೋಧಿಸಿ, ಅ[...] ಪಕ್ಷದ ಸರ್ಕಾರವಿದ್ದ ಮಹಾರಾಷ್ಟ್ರದ ಮುಖ್ಯಮಂ[...] ಪತ್ರ ಬರೆದಿದ್ದರು. (ವಾಸ್ತವದಲ್ಲಿ ಆ ಸರ್ಕಾ[...] ಮಂತ್ರಿಯೊಬ್ಬರು ವಿರೋಧಿಸಿದ್ದರು)
- ಜಿಲ್ಲಾ ನ್ಯಾಯಾಧಿಕರಣಕ್ಕೂ ಅ[...] ಹೋಗಬಹುದು; ಇತರ ನ್ಯಾಯಾಲಯಗ[...] ಹೋಗಬಹುದು. (ಕೆಳಹಂತದ ನ್ಯಾಯಾಲಯಕ್ಕೆ ಹೋ[...] ಹಾಗಿಲ್ಲ ಎಂಬುದನ್ನು ಮರೆಮಾಚಿ ಈ [...] ಹೇಳಲಾಗುತ್ತಿದೆ)
- ಈ ದೇಶದ ಒಟ್ಟು ಕೃಷಿ ಯೋಗ್ಯ ಭೂಮಿ[...] 100 ಎಕರೆ ಎಂದುಕೊಂಡರೆ, ಎಲ್ಲಾ ಯೋಜನೆ[...] ಸೇರಿ ಸ್ವಾಧೀನಪಡಿಸಿಕೊಳ್ಳುವುದು ಕೇವಲ ಅರ್ಧ [...] ಮಾತ್ರ. (ಎಲ್ಲಾ ಯೋಜನೆ ಎಂದರೆ ಏನು [...] ಈಗಾಗಲೇ ಕೈಗಾರಿಕಾ ಕಾರಿಡಾರ್‌ಗಳಿಗೆ ಉದ್ದೇಶಿ[...] ಭೂಸ್ವಾಧೀನದ ಪ್ರಮಾಣ 2.5 ಕೋಟಿ ಎಕರೆಯ[...]
- ಉದ್ಯೋಗ ಕೊಡಲಾಗದೇ ಇದ್ದರೆ ಅ[...] ಪರಿಹಾರ ಉಂಟು. 20 ವರ್ಷಗಳ ಕಾಲ ಅರ್ಧ [...] ಕಳೆದುಕೊಂಡವರಿಗೆ ತಿಂಗಳಿಗೆ 2000 ರೂ[...] ಕೊಡಲಾಗುವುದು. ಹೆಚ್ಚು ಕಳೆದುಕೊಂಡವರಿಗೆ [...] ಹಣವನ್ನು ಪ್ರತಿ ತಿಂಗಳು ನೀಡಲಾಗುವುದು. [...] ಸುಳ್ಳು)
- ಹೊಸ ಕಾಯ್ದೆ ಪ್ರಕಾರ ಭೂಮಿಯ [...] ಸರ್ಕಾರದ ಹತ್ತಿರವೇ ಇರುತ್ತದೆ. ಉದ್ದಿಮೆಗಳಿಗೆ [...] ಭೋಗ್ಯಕ್ಕೆ ಅಥವಾ ಬಾಡಿಗೆಗೆ ನೀಡಲಾಗುತ್ತದೆ. [...] ಸುಳ್ಳು)

ಯಾವಾಗ ಉತ್ತರ ಕೊಡಲು ಸಾಧ್ಯವಾಗಲಿ[...] ಆಗ, 'ನಿಮ್ಮ ಮಾತುಗಳನ್ನು ಬರೆದುಕೊಂಡಿದ್ದೇನೆ; ರೆ[...] ಸಹ ಮಾಡಿಕೊಂಡಿದ್ದೇವೆ. ಎಲ್ಲವನ್ನೂ ಪಕ್ಷದ ಗ[...] ತಂದು ಬದಲಾವಣೆ ಮಾಡ್ತೀವಿ' ಎಂದು ಜಾರಿಕೊಳ[...] ನಡೆಯಿತು. ಅದರ ಜೊತೆಗೆ 'ಹೆಚ್ಚು ಜನರಿಗೆ ಉಪ[...] ಮಾಡಲು ಕೆಲವರು ತ್ಯಾಗ ಮಾಡುವುದು ಶಾ[...] ಎಂದು ಅಪ್ಪಣೆ ಕೊಡಿಸಲಾಯಿತು. ಮೋದಿ ಸ[...] ಬಂಡವಾಳಶಾಹಿಪರ ನೀತಿಯ ಕುರಿತು ನಿ[...] ಉದಾಹರಣೆ ನೀಡಿ ಉತ್ತರಕ್ಕೆ ಆಗ್ರಹಿಸಿದಾಗ [...] ಆಮದು ಸುಂಕ ಇಳಿಸಿರುವುದು ನನಗೆ ಗೊ[...] 'ಮಾರುಕಟ್ಟೆ ದರ ನಿಷ್ಕರ್ಷೆ ಹೇಗೆ ಮಾಡ್ತಾರೆ [...] ನನಗೆ ಗೊತ್ತಿಲ್ಲ' ಎಂದು ಎಲ್ಲ ಬಲ್ಲ ವಕ್ತಾರರು ಹೇ[...] ಇನ್ನೂ ಹೆಚ್ಚು ಸಿಕ್ಕಿ ಹಾಕಿಕೊಳ್ಳುವ ಸಂಭವವಿದೆ ಎ[...] ಬಿಜೆಪಿ ಸಿಟಿಆರ್ ಜಿಮೇಲ್‌ಗೆ ಮೇಲ್ ಮಾಡಿ [...] ಹೇಳಿ ಅಲ್ಲಿಂದ ಜಾರಿಕೊಂಡರು.

ಅಂದರೆ, ಬಿಜೆಪಿ ಬಯಸಿದರೂ ತನ್ನ ಭೂಸ್[...] ಕಾಯ್ದೆ ತಿದ್ದುಪಡಿಯನ್ನು ಸಮರ್ಥಿಸಿಕೊಳ್ಳುವ ಸ್ಥಿ[...] ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹಾ[...] ಬಿಜೆಪಿ ದೊಡ್ಡದೊಂದು ಸಮಸ್ಯೆಯಲ್ಲಿ [...] ಹಾಕಿಕೊಂಡಿದೆಯೆಂದು ನಾವು ಸಮಾಧಾನದಲ್ಲಿರ[...] ಸಾಧ್ಯವಿಲ್ಲ. ಸುಳ್ಳನ್ನು ಸುಳ್ಳೆಂದೂ, ಸತ್ಯವನ್ನು ಸತ್ಯ[...] ಸಾಧಿಸಿ ತೋರಿಸಬೇಕಾದ ಕಾಲದಲ್ಲಿ ನಾವಿದ್ದೇವೆ. ಇಲ[...] ಅದನ್ನು ಉಲ್ಟಾ ತಿರುಗಿಸಲು ಬೇಕಾದ ಯಂ[...] (ಬಾಯಿಬಡುಕರು, ಮಾಧ್ಯಮಗಳು ಮತ್ತು ಸಾ[...] ಮಾಧ್ಯಮಗಳು)ವನ್ನು ಬಳಸುವ ಕಲೆ ಭಾ[...] ಕರಗತವಾಗಿದೆ. ಅದಕ್ಕಿಂತ ಹೆಚ್ಚಾಗಿ, ಭೂಸ್ವಾಧೀನ ಕಾ[...] ವಿಚಾರದಲ್ಲಿ ಜನರ ಮುಂದೆ ವಾಸ್ತವವನ್ನು ಬಿ[...] ಕೆಲಸ ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ, ಎಡಪ[...] ಆಪ್ ಹಾಗೂ ಇನ್ನಿತರ ಸಂಘಟನೆಗಳು [...] ಸಮಾವೇಶಗಳನ್ನು ನಡೆಸಿವೆ. ಕಾಂಗ್ರೆಸ್ ಪಕ್ಷವು ರಾ[...] ಗಾಂಧಿಯ ಅಜ್ಞಾತವಾಸದ ಸಂದರ್ಭದಲ್ಲಿ ಮತ್ತು [...] ಬೃಹತ್ ರ್‍ಯಾಲಿಯನ್ನೂ ಸಂಘಟಿಸಿದೆ. ಆದರೆ, ಇದು [...] ನಿರಂತರವಾದ, ವ್ಯಾಪಕವಾದ, ಪರಿಣಾಮಕಾರಿ [...] ಆಂದೋಲನವಾಗಬೇಕೆಂದರೆ ನಾವೆಲ್ಲರೂ ಕೈಜೋ[...] ಅಗತ್ಯವಿದೆ.

## ಗೆಜ್ಜಲಗೆರೆಯಲ್ಲಿ ಭೂಮಿ ಕಳೆದುಕೊಂಡವರು ಉದ್ಯೋಗ ಪಡೆದುಕೊಂಡಿದ್ದು ಮತ್ತು ಕಳೆದುಕೊಂಡಿದ್ದು

ಸಿ.ಟಿ.ರವಿ ಮಾತನಾಡುವಾಗ ಇದ್ದಕ್ಕಿದ್ದಂತೆ ಸ್ಥಳೀಯ ಬಿಜೆಪಿ ಕಾರ್ಯಕರ್ತರೊಬ್ಬರು ಅವರ ಕೈಗೆ ಒಂದು ಚೀಟಿ ಕೊಟ್ಟರು. ಅದನ್ನು ನೋಡಿ ಅವರ ಉತ್ಸಾಹ ಹೆಚ್ಚಾಯಿತು. ಏಕೆಂದರೆ ಸ್ಥಳೀಯ ಉದಾಹರಣೆಯೊಂದರ ಮೂಲಕ ಕಾಯ್ದೆಯ ಅನುಕೂಲವನ್ನು ವಿವರಿಸುವ ಅವಕಾಶ ಸಿಕ್ಕಿತ್ತು! 'ನೋಡಿ, ಮದ್ದೂರು ತಾಲೂಕು ಗೆಜ್ಜಲಗೆರೆಯಲ್ಲಿ ಕೇವಲ 50 ಎಕರೆ ಜಮೀನು ಸ್ವಾಧೀನಪಡಿಸಿಕೊಂಡು ಕೈಗಾರಿಕಾ ಪ್ರದೇಶ ನಿರ್ಮಿಸಲಾಗಿದೆ. ಅಲ್ಲಿ ಈಗ ಸಾವಿರಾರು ಕಾರ್ಮಿಕರಿಗೆ ಕೆಲಸ ನೀಡಿಲ್ಲವೇ?'. ಮೊದಲನೆಯದಾಗಿ ಅದು ಕೇವಲ 50 ಎಕರೆಯಾಗಿರಲಿಲ್ಲ, ಎರಡನೆಯದಾಗಿ, ಅಲ್ಲಿ ಈ ಭಾಗದ ಹೆಣ್ಣುಮಕ್ಕಳ ಜೀವಚೈತನ್ಯವನ್ನೇ ಹಿಂಡುವ ಗಾರ್ಮೆಂಟ್ ಕಾರ್ಖಾನೆಯಲ್ಲಿ ಕೊಟ್ಟಿರುವ ಉದ್ಯೋಗಗಳೇ ಅತ್ಯಂತ ಹೆಚ್ಚು, ಮೂರನೆಯದಾಗಿ, ಅಲ್ಲಿ ಭೂಮಿ ಕಳೆದುಕೊಂಡವರಿಗೆಲ್ಲರಿಗೂ ಒಳ್ಳೆಯ ನೌಕರಿಯನ್ನು ಉದ್ದಿಮೆಗಳು ನೀಡಿಲ್ಲ, ನಾಲ್ಕನೆಯದಾಗಿ, (ಅದೇ ಸಭೆಯಲ್ಲೇ ಮಂಡ್ಯದ ಕಾರಸವಾಡಿ ಮಹದೇವು ಅವರು ಹೇಳಿದಂತೆ) ಇದೇ ಗೆಜ್ಜಲಗೆರೆಯಲ್ಲಿ ಭೂಮಿ ಕಳೆದುಕೊಂಡು, ಉದ್ಯೋಗವನ್ನೂ ಪಡೆದುಕೊಂಡ ಕಾರ್ಮಿಕರು - ವೆಲ್‌ಸ್ಪನ್ ಕಾರ್ಖಾನೆ- ಕಾನೂನುಪ್ರಕಾರ ಯೂನಿಯನ್ ಕಟ್ಟಿಕೊಂಡರು ಎಂಬ ಒಂದೇ ಕಾರಣಕ್ಕೆ, ಆಡಳಿತ ಮಂಡಳಿ ಕೆಲಸದಿಂದ ವಜಾ ಮಾಡಿದೆ. ಅವರುಗಳು ಒಂದು ತಿಂಗಳಿಗೂ ಹೆಚ್ಚು ಕಾಲದಿಂದ ತಹಸೀಲ್ದಾರ್ ಕಚೇರಿ ಮುಂದೆ ಧರಣಿ ಕೂತಿದ್ದಾರೆ.

ಕಾರ್ಖಾನೆಯ ಮುಂದೆ ಧರಣಿ ಕೂರಬಾರದು ಎಂದು ಕಾರ್ಖಾನೆಯ ಆಡಳಿತ ಮಂಡಳಿಯು ಕೋರ್ಟ್‌ನಿಂದ ಆದೇಶ ತಂದಿದೆ! ಇದೀಗ ಕಾರ್ಮಿಕರು ಆಡಳಿತ ಮಂಡಳಿಯವರಿಗೆ ಹೊಡೆದರೆಂದು ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ!! ಸಂವಿಧಾನಬದ್ಧವಾಗಿ, ಕಾನೂನುಪ್ರಕಾರ ಒಂದು ಸಂಘ ಕಟ್ಟಿಕೊಂಡರೆ ಹೀಗೆಲ್ಲಾ ಆಗುತ್ತದಾದರೆ, ಆ ಕಾರ್ಖಾನೆಯಲ್ಲಿ ಕಾರ್ಮಿಕರ ಪರಿಸ್ಥಿತಿ ಹೇಗಿರಬಹುದು? ಈಗಲೇ ಹೀಗಿದೆ. ಇರುವ ಕಾರ್ಮಿಕ ಕಾನೂನುಗಳನ್ನು ಮೋದಿ ಸರ್ಕಾರ ದುರ್ಬಲಗೊಳಿಸಲು ಹೊರಟಿದೆ. ಅವೆಲ್ಲಾ ಜಾರಿಗೆ ಬಂದನಂತರ ಪರಿಸ್ಥಿತಿ ಹೇಗಿರಬಹುದು? ಭೂಮಿ ಕಳೆದುಕೊಂಡವರಿಗೆ ಸಿಗುವ ಉದ್ಯೋಗಗಳ ಪರಿಸ್ಥಿತಿ ಇದೇ ತಾನೇ? ಎಂಬ ಪ್ರಶ್ನೆಗೆ ಸಿ.ಟಿ.ರವಿಯ ಬಳಿ ಉತ್ತರವಿರಲಿಲ್ಲ.

ಆದರೆ, ಅಲ್ಲೇ ಇದ್ದ ಬಿಜೆಪಿ ಕಾರ್ಯಕರ್ತರ ಬಳಿ ಉತ್ತರವಿತ್ತು, 'ಯೂನಿಯನ್ ಕಟ್ಟಿಕೊಂಡರೆ ಫ್ಯಾಕ್ಟರಿ ಉದ್ಧಾರವಾಗುತ್ತಾ? ಯೂನಿಯನ್ ಕಟ್ಟಿಕೊಳ್ಳಬಾರದು'. ಅಂದರೆ, ಸಿ.ಟಿ.ರವಿಯನ್ನೂ ಮೀರಿಸಬಲ್ಲವರು ಬಿಜೆಪಿಯಲ್ಲಿ ತಯಾರಾಗುತ್ತಿದ್ದಾರೆ ಎಂದಾಯಿತು.

# ಸಾಮಾಜಿಕ ನ್ಯಾಯ ಮತ್ತು ಸಿದ್ದು ಹೆಜ್ಜೆ ಗುರುತು

ಸಾಮಾಜಿಕ ನ್ಯಾಯ ರಥದ ಸಾರಥಿ ಸಿದ್ದರಾಮಯ್ಯ ಗದ್ದುಗೆಯೇರಿ ಈಗ ಬರೋಬ್ಬರಿ ವರ್ಷ ಎರಡು. ಈ ಅವಧಿಯಲ್ಲಿನ ಸಿದ್ದು ಅವರ ಸಾಧನೆ ಅಥವಾ ವೈಫಲ್ಯ ಏನೇ ಇರಲಿ; ಕೋಮುವಾದಿ, ಭ್ರಷ್ಟ ಮತ್ತು ಪಾಳೇಗಾರ ಪ್ರವೃತ್ತಿಯ ಚೆಡ್ಡಿಗಳ ಕಪಿಮುಷ್ಠಿಯಿಂದ ಜನರನ್ನು ಸ್ವಲ್ಪಮಟ್ಟಿಗಾದರೂ ಮುಕ್ತರನ್ನಾಗಿಸಿ ನೆಮ್ಮದಿ ಮೂಡಿಸಿರುವುದು ಸುಳ್ಳಲ್ಲ.

ಚೆಡ್ಡಿ-ಕಾವಿ ಪಡೆಯ ಅನೈತಿಕ ಮತ್ತು ಅವ್ಯವಹಾರಿ ಆಡಳಿತದಿಂದ ಆತಂಕಕ್ಕೀಡಾಗಿದ್ದ ರಾಜ್ಯದ ಜನರಲ್ಲಿ ಸಿದ್ದು ಸ್ಥೈರ್ಯ ತುಂಬಿದ್ದಾರೆ.

ದೇವರಾಜ ಅರಸರ ನಂತರ ಕರ್ನಾಟಕ ಕಂಡ ಸಮಾಜಮುಖಿ ನಾಯಕ ಸಿದ್ದು ಎಂಬುದು ಈ ಎರಡು ವರ್ಷದಲ್ಲಿ ಎಂಥವರಿಗೂ ಮನದಟ್ಟಾಗಿದೆ. ಕಾಲೆಳೆವ ಹೊಟ್ಟೆಕಿಚ್ಚಿನವರೇ ತುಂಬಿರುವ ಕಾಂಗ್ರೆಸ್ ಪಕ್ಷದಲ್ಲಿ ಸಿದ್ದು ಎಲ್ಲರನ್ನೂ ಸೂಕ್ಷ್ಮವಾಗಿ ನಿಭಾಯಿಸುತ್ತ ಅನಿವಾರ್ಯ ಮುಂದಾಳಾಗಿ ಹೊರಹೊಮ್ಮಿದ್ದಾರೆ. ಶೋಷಿತರ ಸಂಕಟ ಮತ್ತು ಶೋಷಕರ ಸೊಕ್ಕು ಸ್ಪಷ್ಟವಾಗಿ ಅರ್ಥಮಾಡಿಕೊಂಡಿರುವ ಸಿದ್ದು ಮುಖ್ಯಮಂತ್ರಿ ಹುದ್ದೆಗೇರಿದ ನಂತರ ಸ್ವಲ್ಪ ಬದಲಾಗಿದ್ದಾರೆ. ಅವರಲ್ಲಿ ಹಿಂದಿನ ಸಿಡುಕು ಇಲ್ಲ, ಗದರುವ ಉತ್ಸಾಹ ಇಲ್ಲ, ಡೋಂಟ್‌ಕೇರ್ ಮಾಸ್ತರಿಕೆಯ ಶೈಲಿಯೂ ಇಲ್ಲ. ಇದನ್ನು ಹಲವರು ಅಧಿಕಾರವನ್ನು ಪಡೆದ ನಂತರ ಅವರು ಮೆತ್ತಗಾಗಿದ್ದಾರೆ ಎಂದೂ, ಹಿಂದಿದ್ದ ನಿಷ್ಠುರತೆ ಮತ್ತು ಸ್ಪಷ್ಟತೆ ಕಳೆದುಕೊಂಡಿದ್ದಾರೆಂದೂ, ಅದ್ಯಾಕೋ ಹಾರಾಟದ ಸಿದ್ದು ಹೆದರಿಕೊಂಡಂತಿದ್ದಾರೆ ಎಂದೂ ಅರ್ಥೈಸಿದ್ದೂ ಇದೆ. ಅವರಲ್ಲಿನ ಬದಲಾವಣೆಗೆ ಕಾರಣ ಅಧಿಕಾರದೊಂದಿಗೆ ಬಂದಿರುವ ಜವಾಬ್ದಾರಿ, ಬಗಲಲ್ಲೇ ಇರುವ ವೈರಿಗಳನ್ನು ನಿಭಾಯಿಸಲು ಬೇಕಾದ ತಾಳ್ಮೆ, ವಿರೋಧ ಪಕ್ಷಗಳ ಅಟ್ಟಹಾಸವನ್ನು ಎದುರಿಸಲು ಅಗತ್ಯವಾದ ಜಾಣ್ಮೆಯೂ ಇರಬಹುದು. ಅದೇನೇ ಇರಲಿ, ಸಿದ್ದು ಅವರಲ್ಲಿ ಮುಂಚೆ ಇದ್ದ ಜನಪರ ಕಾಳಜಿ ಕಿಂಚಿತ್ತೂ ಬದಲಾಗಿಲ್ಲ. ಅದಕ್ಕೆ ಅವರು ಜಾರಿಗೆ ತಂದಿರುವ ಅನ್ನಭಾಗ್ಯ, ವಿದ್ಯಾಸಿರಿ, ಸಾಲಮನ್ನಾದಂಥ ಕಾರ್ಯಕ್ರಮಗಳೇ ಸಾಕ್ಷಿ! ಸಂಘ ಪರಿವಾರದ ಸೇವಕ ಈಶ್ವರಪ್ಪ ತರಹದ ಎಡಬಿಡಂಗಿಗಳು ಅದೆಷ್ಟೇ ಕಳಪೆಯಾಗಿ ಕೆಣಕಿದರೂ ಸಹನೆ ಕಳೆದುಕೊಳ್ಳದ ಏಕಲವ್ಯ ನಿಷ್ಠೆ ಸಿದ್ದು ಅವರದ್ದು. ಸಿದ್ದರಾಮಯ್ಯನವರ ಉದ್ದೇಶ ಈ ನಾಡಿನ ಅಸಹಾಯಕರ-ಧ್ವನಿಯಿಲ್ಲದವರ ಏಳ್ಗೆ; ಇದರೊಂದಿಗೇ ಬಲಾಢ್ಯ ಜಾತಿಯವರಿಗೆ ಹಂಚಿ ತಿನ್ನುವ ಸಹಬಾಳ್ವೆ ಕಲಿಸುವ ಕನಸು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆದ ದಿನದಿಂದ ತಮ್ಮ ಮೂಲ ಧ್ಯೇಯೋದ್ದೇಶದ ಅಹಿಂದ ಸಾಮ್ರಾಜ್ಯ ಕಟ್ಟುವ ಕನಸಿಗೆ ಭಂಗ ಬರದಂತೆ ಎಚ್ಚರ ವಹಿಸುತ್ತಿದ್ದಾರೆ. ಈ ಮಹಾಸಮರದಲ್ಲಿ ಮೇಲ್ವರ್ಗದ ಮತ್ತು ಪ್ರಬಲ ಜಾತಿಯವರಿಗೂ ಅನ್ಯಾಯ ಆಗಬಾರದೆಂಬ ಅರಿವು ಇಟ್ಟುಕೊಂಡಿದ್ದಾರೆ. ದೇವರು-ಧರ್ಮದ ಹೆಸರಲ್ಲಿ ಸಮಾಜ ಒಡೆಯುವ, ಮೂಢನಂಬಿಕೆ ಬಿತ್ತಿ ಹೊಟ್ಟೆ ಹೊರೆದುಕೊಳ್ಳುವ ಮತ್ತು ಸಾವಿನ ಮನೆಯಲ್ಲಿ ಜಾತಿರಾಜಕಾರಣದ ಮೈಲೇಜು ಗಿಟ್ಟಿಸುವವರನ್ನು ಸಿದ್ದು ಏಕಾಂಗಿಯಾಗಿ ಎದುರಿಸುತ್ತಿದ್ದಾರೆ. ಅವರ ಈ ಹೋರಾಟದಲ್ಲಿ ಅವರ ಸಂಪುಟ ಸದಸ್ಯರೇ ಅವರನ್ನು ಬೆಂಬಲಿಸದಿದ್ದರೂ ಅದರ ಬಗ್ಗೆ ಅವರು ತಲೆ ಕೆಡಿಸಿಕೊಂಡಿಲ್ಲ. ಸರ್ವರಿಗೂ ಸಮಪಾಲು-ಸಮಬಾಳು ಸಿದ್ಧಾಂತದ ಕೈಂಕರ್ಯದಲ್ಲಿ ಇದೆಲ್ಲ ಎದುರಾಗುವ ಸಣ್ಣ ಎಡರು-ತೊಡಕೆಂಬಂತೆ ಅವರು ನಡೆದುಕೊಂಡಿದ್ದಾರೆ. ಸಿದ್ದುರ ಎರಡು ವರ್ಷದ ಆಡಳಿತ ವೈಖರಿ ಸೂಕ್ಷ್ಮವಾಗಿ ವಿಮರ್ಶೆಗೊಳ್ಪಡಿಸಿದರೆ ಇದೆಲ್ಲ ಎಂಥವರಿಗೂ ಸ್ಪಷ್ಟವಾಗುತ್ತದೆ.

ಜನತಂತ್ರ ವ್ಯವಸ್ಥೆಯಲ್ಲಿ ನಡೆಯುವ ಯಾವುದೇ ಸರ್ಕಾರಕ್ಕೆ ಸಾಧನೆಗಳ ಕಿರೀಟ ಇರುವಂತೆಯೇ ಸೋಲು-ಅವಮಾನದ ಹಿನ್ನಡೆಯೂ ಇರುತ್ತದೆ. ಆದರೆ ಸಾಧನೆಗಳ ಬಲದಿಂದ ವೈಫಲ್ಯ ಎದುರಿಸಿ ಜನಸಾಮಾನ್ಯರು ಹತಾಶರಾಗದಂತೆ ನೋಡಿಕೊಳ್ಳುವ ಜಾಣ್ಮೆ ನಾಯಕನಾದವನಿಗೆ ಇರಬೇಕು. ಈ ಬುದ್ಧಿವಂತಿಕೆ-ರಾಜಕೀಯ ಮುತ್ಸದ್ದಿತನ ಕಳೆದೆರಡು ವರ್ಷದಲ್ಲಿ ಸಿದ್ದರಾಮಯ್ಯ ಹಲವಾರು ಬಾರಿ ಪ್ರದರ್ಶಿಸಿದ್ದಾರೆ. ಹಾಗಾಗಿಯೇ ಕುಮಾರಸ್ವಾಮಿ ಮತ್ತು ಜಗದೀಶ್ ಶೆಟ್ಟರ್ ಜೋಡಿಯು ಎಬ್ಬಿಸಿದ್ದ 'ಅರ್ಕಾವತಿ ರೀಡೂ' ರಗಳೆಯೇ ಇರಲಿ, ಐಎಎಸ್ ಡಿ.ಕೆ. ರವಿ ಸಾವಿನಿಂದಾದ ಮುಜುಗರವೇ ಇರಲಿ, ಕಬ್ಬು ಬೆಳೆಗಾರರ ಸಮಸ್ಯೆಯೇ ಆಗಿರಲಿ, ಸಂಪುಟ ವಿಸ್ತರಣೆಯ ಸಂಕಟವೇ ಇರಲಿ, ದಲಿತ ಸಿಎಂ ಬೇಡಿಕೆಯ ಕ್ಷುಲ್ಲಕ ಚೊಟ್ಟೆಯೇ ಇರಲಿ... ಎಲ್ಲವನ್ನೂ ಆಡಳಿತಾತ್ಮಕವಾಗಿ ಮತ್ತು ರಾಜಕೀಯವಾಗಿ ನಿಭಾಯಿಸಿದ್ದಾರೆ. ಒಂದೆಡೆ ವಿಪಕ್ಷದ ಚೆಡ್ಡಿ ಚಮತ್ಕಾರಿಗಳಾದ ಜಗದೀಶ್ ಶೆಟ್ಟರ್, ಯಡ್ಡಿ, ಈಶ್ವರಿಗಳ ಆಟಾಟೋಪಕ್ಕೆ ಸರಿಯಾದ ಪಟ್ಟು ಹಾಕುತ್ತಲೇ ಸಿದ್ದರಾಮಯ್ಯ ಸ್ವ-ಪಕ್ಷದ ಪರಮೇಶ್ವರ್, ಖರ್ಗೆ, ಎಸ್.ಎಂ. ಕೃಷ್ಣ ಡಿಕೆಶಿಗಳಂಥವರು ಬಾಲ ಬಿಚ್ಚದಂತೆ ದಾಳ ಉರುಳಿಸಿದ್ದಾರೆ; ಸವಾಲುಗಳನ್ನು ಗೆಲ್ಲುತ್ತಾ ಬಂದಿದ್ದಾರೆ.

ಸಿದ್ದರಾಮಯ್ಯನವರು ಬಡವರ ಪರ, ಸಮ ಸಮಾಜ ಚಿಂತನೆಯ ನಾಯಕ ಎಂಬುದಕ್ಕೆ ಅವರು ಆರಂಭಿಸಿರುವ ಆರೆಂಟು ಭಾಗ್ಯ ಯೋಜನೆಗಳು ಮತ್ತು ಬೈಕ್-ಆಂಬುಲೆನ್ಸ್, ಶುದ್ಧ ಕುಡಿಯುವ ನೀರು ಘಟಕ, ಪಂಚಾಯತ್ ರಾಜ್ ಸುಧಾರಣೆ, ವಿದ್ಯಾ ಸಿರಿಯಂಥ ಯೋಜನೆಗಳು ಸಮರ್ಥನೆ ನೀಡುವಂತಿವೆ. ಅನ್ನಭಾಗ್ಯ ಸಿದ್ದು ಸರ್ಕಾರದ ತೀರಾ ಮಹತ್ವಾಕಾಂಕ್ಷೆಯ ಕಾರ್ಯಕ್ರಮ. 2013ರ ಜುಲೈನಲ್ಲಿ ಜಾರಿಗೆ ಬಂದಿರುವ ಈ ಯೋಜನೆಯಡಿ 1.07 ಕೋಟಿ ಕಡುಬಡ ಕುಟುಂಬಗಳು ಕೆಜಿಗೆ 1 ರೂ.ನಂತೆ ಪ್ರತಿ ತಿಂಗಳು 30 ಕೆಜಿ ಅಕ್ಕಿ ಪಡೆದಿವೆ. ಈ ವರ್ಷದ ಬಜೆಟ್‌ನಲ್ಲಿ ತಲಾ 5 ಕೆಜಿ ಅಕ್ಕಿ ಬಡ ಕುಟುಂಬದ ಪ್ರತಿ ಸದಸ್ಯನಿಗೆ ಸಿದ್ದು ಸರ್ಕಾರ ಕೊಡುತ್ತಿದೆ. ಹೀಗೆ ಹಸಿದವರಿಗೆ ಅನ್ನ ನೀಡುವುದು ಸುಮ್ಮನೇ ಮಾತಲ್ಲ; ಇದಕ್ಕೊಂದು ಸೈದ್ಧಾಂತಿಕ-ಬದ್ಧತೆ-ರಾಜಕೀಯ ಇಚ್ಛಾಶಕ್ತಿ ಇರಬೇಕಾಗುತ್ತದೆ.



ಎರಡು ವರ್ಷಗಳ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆದ ದಿನ ಅವರನ್ನು ಸಂದರ್ಶಿಸಿದಾಗ...

ಅದು ಸಿದ್ದು ಅವರಲ್ಲಿ ಇದೆ.

ಅಂಗನವಾಡಿಯಿಂದ 10ನೇ ತರಗತಿಯವರೆಗಿನ 1.04 ಕೋಟಿ ಮಕ್ಕಳಿಗೆ ಪ್ರತಿದಿನ ಬಿಸಿ ಹಾಲು ವಿತರಿಸುವುದಕ್ಕೆ ಸಿದ್ದು 856 ಕೋಟಿ ರೂ. ಮೀಸಲಿಟ್ಟಿದ್ದಾರೆ. ಮಳೆಯಾಶ್ರಿತ ಪ್ರದೇಶದ ಭೂಮಿಯ ಫಲವತ್ತತೆ ಹೆಚ್ಚಿಸಲು ತನ್ಮೂಲಕ ಜನರ ಜೀವನಮಟ್ಟ ಸುಧಾರಿಸಲು 500 ಕೋಟಿ ಒದಗಿಸಿದ್ದಾರೆ. ವಿದ್ಯಾರ್ಥಿಗಳಿಗೆ ಶೂ ಮತ್ತು ಕಾಲುಚೀಲ ವಿತರಿಸುವ ಮೂಲಕ ಕೀಳರಿಮೆಯಿಂದ ಸರ್ಕಾರಿ ಶಾಲೆ ಮಕ್ಕಳು ಬಳಲದಂತೆ ಕಾಳಜಿ ತೋರಿಸಿದ್ದಾರೆ. ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸಿಗದಿದ್ದರೆ ಅಂಥವರಿಗೆ ಊಟ-ವಸತಿ ನೋಡಿಕೊಳ್ಳಲೆಂದು 'ವಿದ್ಯಾಸಿರಿ' ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆ. 50,000 ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಈ ಯೋಜನೆ ನಿಜಕ್ಕೂ ಉಪಯುಕ್ತ. ಅಹಿಂದ ವರ್ಗದವರು ಮತ್ತು ಮಹಿಳೆಯರು ಮಾಡಿದ್ದ ಸಾಲವನ್ನು ಮನ್ನಾ ಮಾಡುವ ಮೂಲಕ ಸಿದ್ದರಾಮಯ್ಯನವರು ಅಸಹಾಯಕರಿಗೆ ನೆರವು ನೀಡಿದ್ದಾರೆ.

ಪಂಚಾಯತ್ ರಾಜ್ ಸುಧಾರಣೆ ಗ್ರಾಮೀಣ ಅಭಿವೃದ್ಧಿ ದೃಷ್ಟಿಯಿಂದ ಮಹತ್ವದ್ದೆಂದೇ ಭಾವಿಸಲಾಗಿದೆ. ಹಳ್ಳಿಗಾಡಿನಲ್ಲಿ ಸಾವಿರಕ್ಕೂ ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿರುವುದು ಜನರಲ್ಲಿ ಮೆಚ್ಚುಗೆ ಮೂಡಿಸಿದೆ. ಬೈಕ್ ಆಂಬುಲೆನ್ಸ್ ಮತ್ತು ಪಶುಭಾಗ್ಯ ಯೋಜನೆಗಳು ಹಳ್ಳಿಗಾಡಿನ ದೀನರಲ್ಲಿ ಧೈರ್ಯ ತುಂಬುವ ಪ್ರಯತ್ನವಾಗಿದೆ.

ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅವರ ಜನಸಂಖ್ಯಾ ಅನುಪಾತಕ್ಕೆ ತಕ್ಕಂತೆ ಯೋಜನಾ ವೆಚ್ಚದಲ್ಲಿ ಬಜೆಟ್ಟನ್ನು ಕಡ್ಡಾಯವಾಗಿ ತೆಗೆದಿಟ್ಟ ಶಾಸನ, ಜಾತಿ ಜನಗಣತಿ, ನಕ್ಸಲರನ್ನು ಅವರ ಘನತೆಗೆ ಚ್ಯುತಿ ಬಾರದಂತೆ ಮುಖ್ಯವಾಹಿನಿಗೆ ಕರೆತರುವಲ್ಲಿ ತೆಗೆದುಕೊಂಡ ದಿಟ್ಟ ನಿರ್ಧಾರ, ಇತ್ಯಾದಿಗಳು ಸಿದ್ದರಾಮಯ್ಯನವರ ದೃಢತೆಯನ್ನು ತೋರಿವೆ.

ಇಷ್ಟೆಲ್ಲದರ ಮಧ್ಯೆ ಕೆಲವು ಬಾರಿ ಸಿದ್ದು ಸರ್ಕಾರ ಅಪಘಾತವನ್ನೂ ಮಾಡಿಕೊಂಡಿದ್ದು ಇದೆ. ಕಬ್ಬು ಬೆಳೆಗಾರರಿಗೆ ಬಾಕಿ ಕೊಡಿಸಲಿಕ್ಕೆ ಸಿದ್ದು ಕೈಲಿ ಇನ್ನೂ ಆಗದಿರುವುದು ರೈತರಿಗೆ ಸಿಟ್ಟು ಬರಿಸಿದೆ. ಕೃಷ್ಣಾ ಕಣಿವೆ ಯೋಜನೆ ಅದ್ಯಾಕೋ ಕೈಗೂಡಿಲ್ಲ; ಕೃಷಿ ಬೆಲೆ ಆಯೋಗ ರಚಿಸಲಾಗಿದ್ದರೂ ವೈಜ್ಞಾನಿಕ ಬೆಲೆ ಕೃಷಿ ಉತ್ಪನ್ನಕ್ಕೆ ನಿಗದಿ ಮಾಡಲು ಪ್ರಾಮಾಣಿಕ ಪ್ರಯತ್ನ ನಡೆದಿಲ್ಲ. ಹಲವು ಭ್ರಷ್ಟರನ್ನು ಮಟ್ಟ ಹಾಕಲು ಸಿದ್ದು ಯಾಕೋ ಹಿಂಜರಿಯುತ್ತಿರುವಂತಿದೆ. ಲೋಕಾಯುಕ್ತಕ್ಕೆ ಸಂಪೂರ್ಣ ಅಧಿಕಾರ ಮರೀಚಿಕೆಯಾಗಿದೆ. ಗಣಿ ಅಕ್ರಮದ ನಿಷ್ಠೂರ ತನಿಖೆ ಬಗ್ಗೆ ಸಿದ್ದು ನುಡಿದಂತೆ ನಡೆಯುತ್ತಿಲ್ಲ. ಇದೆಲ್ಲ ಯಾಕೆ ಎಂಬ ಪ್ರಶ್ನೆ ಜನತೆಯನ್ನು ಕಾಡುತ್ತಿದೆ. ನ್ಯಾ. ಸಂತೋಷ ಹೆಗ್ಡೆ ವರದಿ ಶೈತ್ಯಾಗಾರ ಸೇರಿರುವುದು ಸಿದ್ದು ಆಡಳಿತಕ್ಕೊಂದು ದೃಷ್ಟಿ ಬೊಟ್ಟು ಎನ್ನುವಂತಾಗಿದೆ. ಮೂಢನಂಬಿಕೆ ಆಚರಣೆ ನಿಷೇಧ, ವೈಭವೋಪೇತ ಮದುವೆಗೆ ಕಡಿವಾಣ ಶಾಸನಗಳು ಕಡೆಗೂ ಬರಲೇ ಇಲ್ಲ. ಗೋಕರ್ಣ ಮತ್ತು ಕೃಷ್ಣ ದೇವಸ್ಥಾನಗಳನ್ನು ಕಾವಿ ಕಳ್ಳರಿಂದ ವಶಪಡಿಸಿಕೊಳ್ಳುವ ಉಸಾಬರಿಗೆ ಸಿದ್ದು ಹೋಗದಿರುವುದೂ ಒಂದು ದುರಂತ. ಮತ ನಿಯಂತ್ರಣ ಕಾಯ್ದೆಗೆ ಹೆದರಿದ್ದು ಸಿದ್ದು ಸರ್ಕಾರದ ದೊಡ್ಡ ವೈಫಲ್ಯವೇ ಸರಿ!!

ಸಿದ್ದು ದೂರಾಲೋಚನೆಯ-ಸೂಕ್ಷ್ಮತೆಯ ಸಶಕ್ತ ನಾಯಕರೆಂಬುದು ನಿಜ. ಆದರೆ ಎದುರಾಳಿ ಪಕ್ಷಗಳ ಪ್ರಭೃತಿಗಳ ದೌರ್ಬಲ್ಯವೂ ಆತನಿಗೆ ವರವಾಗಿದೆ. ಸಿಎಂ ಸಿದ್ದುರ ತಪ್ಪು-ಲೋಪ-ದೋಷ ಹೆಕ್ಕಿ ತೆಗೆದು ತಾರ್ಕಿಕ ಅಂತ್ಯ ತಲುಪಿಸಲು ಬಿಜೆಪಿ-ಜೆಡಿಎಸ್ ಕಲಿಗಳಿಂದಾಗುತ್ತಿಲ್ಲ. ಇದಕ್ಕವರ ಹಿಂದಿನ ಅನೈತಿಕತೆ-ಪಾಪಪ್ರಜ್ಞೆಯೇ ಕಾರಣ. ಸಿದ್ದು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ನೈತಿಕ ಧೈರ್ಯ ಚೆಡ್ಡಿ ಪಕ್ಷದ ಯಡ್ಡಿ-ಶೆಟ್ಟರ್-ಡಿವಿಎಸ್ ವಗೈರೆಗಳಿಗಿಲ್ಲ. ಕಾಂಗ್ರೆಸ್‌ನ ದೊಡ್ಡ ನಾಯಕ ಖರ್ಗೆಗೆ ದಿಲ್ಲಿಯಲ್ಲೇ ಹೆಚ್ಚು ಕೆಲಸ; ಹಾಗಾಗಿ ಆತ ಸಿದ್ದು ತಂಟೆಗೆ ಹೋಗಲಾಗುತ್ತಿಲ್ಲ. ಪರಮ್ ಸೃಷ್ಟಿಸಿದ್ದ ದಲಿತ ಸಿಎಂ, ಡಿಸಿಎಂ ಗಾಳಿ ಎದ್ದಷ್ಟೇ ಬೇಗ ನಶಿಸಿಹೋಗಿದೆ. ಹೀಗಾಗಿ ಸಿದ್ದು ಎರಡು ವರ್ಷದ ನಂತರ ಗದ್ದುಗೆಯಿಂದ ಇಳಿಯಬೇಕಾಗುತ್ತದೆಂಬ ಗುಸುಗುಸು ಈಗ ಅರ್ಥ ಕಳೆದುಕೊಂಡಿದೆ.

ಈಗ ಸಿದ್ದುಗೆ ಈ ಐದು ವರ್ಷದ ಅವಧಿ ಪೂರ್ಣಗೊಳಿಸುವ ಧೈರ್ಯ ಬಂದಿದೆ. ಸಿದ್ದು ಸಿಎಂ ಆದ ಹೊಸದರಲ್ಲಿ "ಕಣ್ಣಿಗೆ ಕಾಣುವ ಬದಲಾವಣೆ" ತರುವುದಾಗಿ ಹೇಳಿದ್ದರು. ಇದು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಖರೆಯಾಗಿದೆ; ಆದರೆ ಅಭಿವೃದ್ಧಿ ಕೈಗಾರಿಕೀಕರಣ, ಕರಾವಳಿಯ ಅನೈತಿಕ ಪೊಲೀಸ್‌ಗಿರಿ ಮಟ್ಟ ಹಾಕುವಿಕೆ, ಭ್ರಷ್ಟರಿಗೆ ಕಡಿವಾಣದಂಥ ಮಹತ್ವದ ವಿಷಯದಲ್ಲಿ ಸುಳ್ಳಾಗಿದೆ. ಕರಾವಳಿ ಪ್ರದೇಶಗಳಲ್ಲಿ ಸಂಘಪರಿವಾರಿಗಳ ಆಟಾಟೋಪವನ್ನು ನಿಯಂತ್ರಿಸುವಲ್ಲಿಯೂ ಸರ್ಕಾರ ವಿಫಲವಾಗಿದೆ ಎಂದರೆ ತಪ್ಪಾಗಲಾರದು.



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಸಿದ್ದರಾಮಯ್ಯನವರು ಅದು ಹೇಗೋ ಹಲವಾರು ವಿಘ್ನಗಳ ನಡುವೆ ಎರಡು ವರ್ಷಗಳನ್ನು ಕಳೆದಿದ್ದಾರೆ, ಆ ಅವಧಿಯಲ್ಲಿ ಒಂದಷ್ಟು ಒಳ್ಳೆಯ ಕೆಲಸಗಳನ್ನೂ ಮಾಡಿದ್ದಾರೆ. ಆದರೆ ಅಷ್ಟು ಸಾಕೆ? ಸಿದ್ದರಾಮಯ್ಯನವರ ಅಹಿಂದ ಬದ್ಧತೆ ಮತ್ತು ವ್ಯಕ್ತಿಗತ ಮೌಲ್ಯಗಳಿಂದಾಗಿ ಅವರ ಅಭಿಮಾನಿಗಳು ಅವರಿಂದ ಇನ್ನೂ ಹೆಚ್ಚಿನ ಸೇವೆಯನ್ನು ಬರುವ ದಿನಗಳಲ್ಲಿ ಖಂಡಿತಾ ನಿರೀಕ್ಷಿಸುತ್ತಾರೆ.

ಇಂದು ಸಿದ್ದರಾಮಯ್ಯನವರಿಗೆ ಹಿಂದೆ ದೇವರಾಜ ಅರಸ್ ಅವರಿಗೆ ಇದ್ದಂತ ಸಂದರ್ಭ ಮತ್ತು ಅವಕಾಶ ಒದಗಿಬಂದಿದೆ. ಇತ್ತ ಕಾಂಗ್ರೆಸ್ ಹೈಕಮಾಂಡ್ ಕಡೆಯಿಂದಲೂ ಸಿದ್ದರಾಮಯ್ಯನವರಿಗೆ ಹೆಚ್ಚಿನ ಕಿರಿಕಿರಿ ಇಲ್ಲ, ಅತ್ತ ಪಕ್ಷದ ಒಳಗೂ ದೊಡ್ಡ ಪ್ರತಿಸ್ಪರ್ಧಿಗಳಿಲ್ಲ. ಹೀಗಾಗಿ ಸಿದ್ದರಾಮಯ್ಯನವರು ಕಳೆದ ಎರಡು ವರ್ಷಗಳ ವಿಳಂಬ, ಅನಿಶ್ಚಯತೆ, ಅಸ್ಪಷ್ಟತೆ ಮತ್ತು ಅಧೀರತೆಯನ್ನು ನೀಗಿಕೊಂಡು ಈಗ ದಿಟ್ಟವಾಗಿ ಮುಂದಿನ ಹೆಜ್ಜೆಗಳನ್ನು ಇಡಬೇಕಾಗಿದೆ. ಅವುಗಳಲ್ಲಿ ಪ್ರಮುಖವಾದವು

- ಅವರ ಸುತ್ತ ಇರುವ ಸ್ವಜಾತಿ ಬಾಂಧವರ ಗುಂಪನ್ನು ವಿಸರ್ಜಿಸಿ ಎಲ್ಲ ಸಮುದಾಯಗಳನ್ನು ಪ್ರತಿನಿಧಿಸುವ ಥಿಂಕ್ ಟ್ಯಾಂಕ್ ಅನ್ನು ರಚಿಸುವುದು.

- ಮೌಢ್ಯ ಮತ ತರಹದ ಸೂಕ್ಷ್ಮ ವಿಷಯಗಳು ಪ್ರಸ್ತಾಪವಾಗುವ ಮುನ್ನ ಅವುಗಳ ಬಗ್ಗೆ ವಿಸ್ತೃತವಾದ ಜನಸಂವಾದ, ಚರ್ಚೆಗಳನ್ನು ನಡೆಸುವ ಮೂಲಕ ತಮ್ಮ ನಿಲುವನ್ನು ಸ್ಪಷ್ಟಪಡಿಸಿ, ಅಪಪ್ರಚಾರ, ಗೊಂದಲಗಳು ಏಳದಂತೆ ನೋಡಿಕೊಳ್ಳುವುದು.

- ಸಂಘಪರಿವಾರದ ಹಾರಾಟಗಳನ್ನು ಸಂವಿಧಾನಬದ್ಧ ಅಧಿಕಾರವನ್ನು ಬಳಸಿ ಕಿಂಚಿತ್ತೂ ರಾಜಿಯಿಲ್ಲದೆ ಮಟ್ಟಹಾಕುವುದು.

- ಯಾವುದೇ ಮುಲಾಜಿಲ್ಲದೆ ತಮ್ಮಂತೆಯೇ ಯೋಚಿಸುವ ಸಮಾನ ಮನಸ್ಕರ ಕ್ಯಾಬಿನೆಟ್ ಮತ್ತು ಅಧಿಕಾರಿ ತಂಡವನ್ನು ಕಟ್ಟಿಕೊಳ್ಳುವುದು.

- ಭ್ರಷ್ಟರನ್ನು ಮತ್ತು ಸಾಮಾಜಿಕ ಬದ್ಧತೆ ಇಲ್ಲದವರನ್ನು ಸಂಪುಟದಿಂದ ಮತ್ತು ಅಧಿಕಾರದ ಗದ್ದುಗೆಗಳಿಂದ ಕಿತ್ತುಹಾಕುವುದು.

ಸಿದ್ದರಾಮಯ್ಯನವರ ಬಗ್ಗೆ ಜನ ಇಟ್ಟುಕೊಂಡಿರುವ ನಿರೀಕ್ಷೆಗಳು ಸುಳ್ಳಾಗಿಸದಿರಲಿ ಎಂಬುದು ನಮ್ಮ ತಂಡದ ಆಶಯ. ■

## ದಿನೇಶ್ ಅಮೀನ್ ಮಟ್ಟು ಕಾಲಂ ಶುರು

ನಮ್ಮ ನಡುವಿನ ಅಪರೂಪದ ಪತ್ರಕರ್ತರಾದ ದಿನೇಶ್ ಅಮೀನ್‌ಮಟ್ಟು ವಾರಬಿಟ್ಟು ವಾರ ದೇಶ ಮತ್ತು ರಾಜ್ಯ ಸಂಗತಿಗಳ ಬಗ್ಗೆ ಈ ನಿಮ್ಮ ಪತ್ರಿಕೆಯಲ್ಲಿ ಬರೆಯಲಿದ್ದಾರೆ.

ಮಾಹಿತಿಯನ್ನು ಕರಾರುವಾಕ್ಕಾಗಿ ತೂಗಿ, ಜನಪರವಾಗಿ ಮತ್ತು ಪ್ರಗತಿಪರವಾಗಿ ನೆನಪಿನಲ್ಲುಳಿಯುವಂತಹ ಲೇಖನ ಬರೆಯುತ್ತಿದ್ದ ದಿನೇಶ್ ಹೋದಲ್ಲೆಲ್ಲಾ ಜನ ಅವರನ್ನು ಮತ್ತೆ ಬರೆಯಿರಿ ಎಂದು ಒತ್ತಾಯಿಸುತ್ತಿದ್ದರು. ಅಂಥವರಲ್ಲಿ ಗೌರಿ ಲಂಕೇಶ್ ಕೂಡ ಒಬ್ಬರು. ಬಹಳ ಜನಪ್ರಿಯತೆ ಮತ್ತು ಓದುಗ ಬಳಗವನ್ನು ಹೊಂದಿರುವ ದಿನೇಶ್ ಅವರು ಈಗ ಗೌರಿಯ ಒತ್ತಾಯಕ್ಕೆ ಮಣಿದು ಅಂಕಣ ಬರೆಯಲು ಒಪ್ಪಿಕೊಂಡಿದ್ದಾರೆ. ನಿಮ್ಮೆಲ್ಲರ ಪರವಾಗಿ ಅವರಿಗೆ ಈ ಮೂಲಕ ಸ್ವಾಗತ ಹೇಳುತ್ತಿದ್ದೇವೆ.


## ಏಜೆಂಟರ ಮತ್ತು ಓದುಗರ ಗಮನಕ್ಕೆ

ಇನ್ನು ಮುಂದೆ ಪತ್ರಿಕೆಯು ಶುಕ್ರವಾರದ ಬದಲು ಗುರುವಾರವೇ ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದ ಇತರೆಡೆಗಳಲ್ಲಿ ಶುಕ್ರವಾರವೇ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. ಏಜೆಂಟರು ಮತ್ತು ಓದುಗರು ಎಂದಿನಂತೆ ಸಹಕರಿಸಬೇಕಾಗಿ ವಿನಂತಿ


-ವ್ಯವಸ್ಥಾಪಕ

## ಮಾಗಡಿಯಲ್ಲೊಬ್ಬ ಕೇಡಿ ಸ್ವಾಮಿ

# ಅರ್ಧ ಡಜನ್ ಕಿಡ್ನಾಪ್ 1 ಡಜನ್ ಮದುವೆ, 2 ಡಜನ್ ರಾಬರಿ!!



ಕಾಳಾರಿ ಜಂಗಮ ಮಠದ ಗೂಸಲು ಸಿದ್ಧಲಿಂಗ ಸ್ವಾಮೀಜಿ



ಕಾವಿಧಾರಿ ಗೂಸಲ ಸಿದ್ಧಲಿಂಗಸ್ವಾಮಿ.

ಬಿಡದಿಯ ಖದೀಮ 'ನಿತ್ಯಾನಂದ, ರೇಪ್ ಕೇಸು ರಾಘವೇಶ್ವರ, ಡಿಸ್ಕೋಡ್ಯಾನ್ಸ್ ಕಾಳಿಸ್ವಾಮಿ, ರೋಡ್ ರೋಮಿಯೋ ದೇವೀಶ್ರೀ ಗುರೂಜಿ, ಹೋಮೋಸೆಕ್ಸ್ ಚಿಕ್ಕಲ್ಲಬಾಳು ಮಠದ ಶಿವಾನಂದ- ಹೀಗೆ ಖಾವಿ ಧರಿಸಿ ಕಾಮದುರಂಧರರಾದ ಕೇಡಿ ಸ್ವಾಮಿಗಳ ಪಟ್ಟಿಗೆ ಇವನೊಬ್ಬ ಬಾಕಿಯಿದ್ದ. ಪತ್ರಿಕೆಯ ಈ ವರದಿಗಾರ ಕಲೆ ಹಾಕಿದ ಇಲ್ಲಿನ ಎಲ್ಲಾ ಫೋಟೋಗಳನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸಿ ನೋಡಿ. ಯಾರೋ 'ಎ' ಸರ್ಟಿಫಿಕೇಟು ಸಿನಿಮಾ ನಟಿಯೊಬ್ಬಳ ಜೊತೆ ನಿಂತು 80ರ ದಶಕದ ತೆಲುಗು ಎನ್‌ಟಿಆರ್ ಧರಿಸುತ್ತಿದ್ದ ತ್ಯಾಪೆದಾರದ ಕೋಟುಧಾರಿಯೊಬ್ಬ ಥೇಟು ಎನ್‌ಟಿಆರ್‌ನಂತೆ ಹೇಗೆ ಪೋಜು ಹೊಡೆಯುತ್ತಿದ್ದಾನೆ ನೋಡಿ...!

ಇನ್ನೊಂದು ಫೋಟೋದಲ್ಲಿ ಕಾರೊಂದರ ಬಾನೆಟ್ಟಿನ ಮೇಲೆ ಪಂಚೆಧಾರಿಯೊಬ್ಬ ಥೇಟು ಥ್ರಿಲ್ಲರ್ ಮಂಜು ಚಿತ್ರದ ವಿಲನ್ ಗತ್ತಿನಲ್ಲಿ ಕೈಯಲ್ಲಿ ಲಾಂಗ್ ಹಿಡಿದು ಪೋಜು ಕೊಡುತ್ತಿದ್ದಾನೆ. ಮತ್ತೊಂದು ಫೋಟೋದಲ್ಲಿ ಅದೇ ಆಸಾಮಿ ಯಾರೋ ಮೇಕಪ್ ನಟಿಯೊಬ್ಬಳಿಗೆ ಕಾರು ಡ್ರೈವಿಂಗ್ ಕಲಿಸುತ್ತಾ ರಮಿಸುವಂತಿದೆ. ಅದೇ ಜೀನ್ಸ್‌ಧಾರಿ ಸುಂದರಿ ಜೊತೆ ಕಾರಿನ ಬಾನೆಟ್ಟಿನ ಮೇಲೆ ಕೂತು ಸಿನಿಮಾ ಶೂಟಿಂಗ್ ಶೈಲಿಯಲ್ಲಿ ಮತ್ತೊಂದು ಫೋಟೋ ತೆಗೆಸಿಕೊಂಡಿದ್ದಾನೆ. ಮಗದೊಂದು ಫೋಟೋ ಇನ್ನಾರೋ ಭಯಭೀತ ಯುವತಿಯನ್ನು ಈತ ಮದುವೆಯಾಗುತ್ತಿದ್ದಂತೆ ನಿರ್ಜನ ತಾಣಕ್ಕೊಯ್ದು ಹಾರ ಹಾಕುತ್ತಿದ್ದಂತಿದೆ. ಹಾಗೇ ಬೇರೆ ಬೇರೆ ಹೆಂಗಸರ ಜೊತೆ ಈತ ಗಂಡನಂತೆ, ಪ್ರಿಯಕರನಂತೆ ತೆಗೆಸಿಕೊಂಡ ಇತರ ಫೋಟೋಗಳನ್ನೊಮ್ಮೆ ಕುತೂಹಲಕ್ಕಾದರೂ ದಿಟ್ಟಿಸಿ ನೋಡಿ...

ಈತ ಬೇರೆ ಯಾರೂ ಅಲ್ಲ ಮಾಗಡಿ ತಾಲ್ಲೂಕು ಕಲ್ಯಾ ಪಕ್ಕದ ಪುರಾತನ ಕಾಳಾರಿ ಜಂಗಮ ಮಠದ ಪೀಠಾಧಿಪತಿ ಶ್ರೀಶ್ರೀಶ್ರೀ ಗೂಸಲು ಸಿದ್ಧಲಿಂಗ ಸ್ವಾಮೀಜಿ. ಕಾಳಾರಿ ಮಠಕ್ಕೆ 350 ವರ್ಷಗಳ ಪುರಾತನ ಇತಿಹಾಸವಿದೆ. ಆಂಧ್ರದ ಶ್ರೀಶೈಲದಿಂದ ಕೋರಣ್ಯಕ್ಕೆಂದು ಬಂದ ಸಿದ್ದಲಿಂಗ ಶಿವಯೋಗಿ ಸ್ವಾಮಿಗಳಿಂದ ಸ್ಥಾಪಿತವಾದ ಈ ಮಠದ ಆವರಣದಲ್ಲೇ ಪುರಾತನ ವೀರಭದ್ರಸ್ವಾಮಿಯ ಗುಡಿಯಿದೆ. ಅದರ ಪಕ್ಕದ್ದೇ ಸಿದ್ದಲಿಂಗ ಶಿವಯೋಗಿಗಳ ಗದ್ದುಗೆ. ಅದರ ಮೇಲೊಂದು ಭಯಾನಕ ಹುತ್ತ, ಅದರೊಳಗಿಂದ ಕಾಳಿಂಗ ಸರ್ಪವೊಂದು ಅಮಾವಾಸ್ಯೆಗೊಮ್ಮೆ ವೀರಭದ್ರಸ್ವಾಮಿ ಗುಡಿಗೆ ಬಂದು ಪ್ರಾಣದೇವರಿಗೆ ಮೂರು ಸುತ್ತು ಪ್ರದಕ್ಷಿಣೆ ಮಾಡಿ ಹುತ್ತಕ್ಕೆ ವಾಪಸ್ಸಾಗುತ್ತದೆಯಂತೆ!

### ಕಾಳಾರಿ ಮಠ!


ಈ ಹಿಂದೆ ಆಗಿಹೋದ ಐವರು ಶಿವಯೋಗಿಗಳ ಗದ್ದುಗೆಗಳೂ ಇದೇ ಮಠದ ಆವರಣದಲ್ಲಿದೆ. ಬೆಂಗಳೂರು, ರಾಮನಗರ, ಕುಣಿಗಲ್, ತುಮಕೂರುಗಳಿಂದಲೂ ಭಕ್ತಾದಿಗಳು ಬಂದುಹೋಗುವ ಮಾಗಡಿ ಕಾಳಾರಿ ಜಂಗಮ ಮಠದ ಗೂಸಲ ಸಿದ್ಧಲಿಂಗ ಸ್ವಾಮೀಜಿಯ ಲೀಲೆ ಮಹಿಮೆಗಳೇ- ಅಪಾರ. ಆಗಾಗ ಖಾವಿ, ವಿಭೂತಿ, ಲಿಂಗಧಾರಿಗಳಾಗಿಯೇ ಬೆಂಗಳೂರಿನ ಸಿವಿಲ್ ಕೋರ್ಟ್, ಹೈಕೋರ್ಟ್ ಆವರಣಗಳಲ್ಲಿ ಠಳಾಯಿಸಿಕೊಂಡಿರುತ್ತಾರೆ. ಹಾಗೇ ಮಾಗಡಿಯ ಪೊಲೀಸ್ ಠಾಣೆ, ತಾಲ್ಲೂಕು ಕಚೇರಿಗೂ ಸನ್ಯಾಸಿ ವೇಷದಲ್ಲೇ ಪ್ರತ್ಯಕ್ಷರಾಗುತ್ತಾರೆ. ಮಾಗಡಿಯಲ್ಲಿ ಮಠದ ಆಸ್ತಿ, ಸೊತ್ತು ಕಬಳಿಸಲು ಬರುವ ರಿಯಲ್ ಎಸ್ಟೇಟ್ ಖದೀಮರ ಮುಂದೆಯೂ ಸ್ವಾಮಿಯದ್ದು ಪಕ್ಕಾ ಶಿವಯೋಗಿಯದ್ದೇ ಗತ್ತು ಗೈರತ್ತು!

ಹಾಗಂತ ನೀವೇನಾದರೂ ಭಕ್ತಿಯಿಟ್ಟು ಸ್ವಾಮಿಯ ದರ್ಶನಕ್ಕೆಂದು ಪ್ರಯತ್ನಪಟ್ಟರೆ ನಿಮಗೆ ಸ್ವಾಮಿ ಸಿಕ್ಕುವುದು ಬೆಂಗಳೂರಿನ ಸುಂಕದಕಟ್ಟೆ ಪೈಪ್‌ಲೈನ್ ಶ್ರೀನಿವಾಸನಗರದ 11ನೇ ಮುಖ್ಯರಸ್ತೆ 15ನೇ ಅಡ್ಡರಸ್ತೆಯಲ್ಲಿರುವ ಅನಿಬೆಸೆಂಟ್ ಕಾನ್ವೆಂಟ್ ಪಕ್ಕದ ಬಾಡಿಗೆ ಮನೆಯಲ್ಲೇ. ಅಲ್ಲಿ ಸಿದ್ದಲಿಂಗಸ್ವಾಮಿಗಳು ಪಕ್ಕಾ ಸಂಸಾರಿ ಅವತಾರಿ. ಅಲ್ಲಿ 'ಎ' ಸರ್ಟಿಫಿಕೇಟ್ ಹಿರೋಯಿನ್ ಹೋಲುವ ಹೆಂಗಸೊಬ್ಬಳ ಜೊತೆ ತೆಲುಗು ನಟ ಎನ್‌ಟಿಆರ್ ಪಾತ್ರಧಾರಿಯಂತೆ ಸ್ವಾಮೀಜಿ ಚಕ್ಕಂದ ಆಡಿಕೊಂಡಿದ್ದಾರೆ. ಆಕೆಯ ಇಬ್ಬರು ಮಕ್ಕಳಿಗೂ 'ನಾನೇ ಡ್ಯಾಡಿ ಅಲ್ವಾ? ನನ್ನನ್ನು ಡ್ಯಾಡಿ ಅಂತ ಹೇಳಲ್ವಾ...?' ಎಂದು ಈ ಸಂಸಾರಾವತಾರಿ ಸ್ವಾಮೀಜಿ ದುಂಬಾಲು ಬೀಳುತ್ತಿರುತ್ತಾರೆ.

ಪಾಪ ಮಕ್ಕಳು ತಾನೇ ಏನು ಮಾಡಿಯಾರು? 'ಔನು ನುವ್ವೇ ಮಾ ಡ್ಯಾಡೀ....!' ಎಂದು ತೊದಲು ತೆಲುಗಿನಲ್ಲಿ ಮಿಕಿಮಿಕಿ ಕಣ್ಣು ಬಿಡುತ್ತಾರೆ. ಇದು ಮಾಗಡಿ ಕಾಳಾರಿ ಮಠದ ಅಭಿನವ ಗೂಸಲು ಸಿದ್ಧಲಿಂಗ ಸ್ವಾಮಿಯ ಸಂಸಾರ ಸಂಕಷ್ಟ. ಅಂದಹಾಗೆ ಈಗ ಸ್ವಾಮಿಯ ಪತ್ನಿಯಂತೆ ಸುಂಕದಕಟ್ಟೆ ಪೈಪ್‌ಲೈನಿನ ಬಾಡಿಗೆ ಮನೆಯಲ್ಲಿರುವಾಕೆಯ ಹೆಸರು ಸುಮತಿ. ಈಕೆ ಆಂಧ್ರದ ರಿಯಲ್ ಎಸ್ಟೇಟ್ ಗಿರಾಕಿ ಬಾಬುರೆಡ್ಡಿ ಎಂಬಾತನ ಧರ್ಮಪತ್ನಿ, ಆಂಧ್ರವನ್ನೂ ರೆಡ್ಡಿಯನ್ನೂ ಒಟ್ಟೊಟ್ಟಿಗೆ ತೊರೆದು ಸಂಸಾರಿರೂಪಿ ಸಿದ್ಧಲಿಂಗನ ಜೊತೆ ತನ್ನ ಮಕ್ಕಳ ಜೊತೆ ಇರಲು ಈಕೆಗೇನು ಕರ್ಮ ಎಂದು ಕೆದಕಹೊರಟರೆ ಮಾಗಡಿ ಉಪನೋಂದಣಾಧಿಕಾರಿ ಕಚೇರಿಯಲ್ಲೊಂದು ವಿಚಿತ್ರ ಕ್ರಯಪತ್ರ ಪತ್ತೆಯಾಗುತ್ತದೆ.

### ಸತೀಶ್ ಬಾಬು

ಅದು ಬೆಂಗಳೂರಿನ ವೈ.ಪಿ. ಸತೀಶ್ ಬಾಬು ಎಂಬಾತನ ಪತ್ನಿ ಸುಮಾರು 26 ವರ್ಷ ಪ್ರಾಯದ ಸುಮತಿಗೆ ಮಾಗಡಿ ಕಾಳಾರಿ ಮಠದ ಗೂಸಲ ಸಿದ್ಧಲಿಂಗ ಸ್ವಾಮಿಗಳು ಬರೆದುಕೊಟ್ಟ ಸ್ವಾಧೀನರಹಿತ ಕ್ರಯದ ಕರಾರುಪತ್ರ. ಆ ಪ್ರಕಾರ ಸಿದ್ಧಲಿಂಗ ಸ್ವಾಮೀಜಿ ಕಾಳಾರಿ ಗ್ರಾಮದ ಸರ್ವೆ ನಂಬರ್ 102ರಲ್ಲಿ ತನ್ನ ಸ್ವಯಾರ್ಜಿತ ಎರಡೆಕರೆ ಭೂಮಿಯ ಪೈಕಿ ಒಂದೆಕರೆ ಮೂವತ್ತು ಗುಂಟೆ ಜಮೀನನ್ನು 13 ಲಕ್ಷಕ್ಕೆ ಸತೀಶ್ ಬಾಬು ಪತ್ನಿ ಸುಮತಿಗೆ ಮಾರಿದ್ದಾನೆ.



ಸತೀಶನಿಗೆ ದೀಕ್ಷೆ ಕೊಟ್ಟ ಸಿದ್ಧಗಂಗೆಯ ಶಿವಕುಮಾರಸ್ವಾಮಿ.

ಇಲ್ಲಿ ಸುಮತಿಯ ಪತಿ ಸತೀಶ್ ಬಾಬು ಬೇರೆ ಯಾರೂ ಅಲ್ಲ ಖುದ್ದು ಸನ್ಯಾಸಿ ವೇಷಧಾರಿ ಗೂಸಲ ಸಿದ್ಧಲಿಂಗ ಸ್ವಾಮೀಜಿ! ಅಂದರೆ ತನ್ನ ಪತ್ನಿ (!) ಗೆ ತಾನೇ ಜಮೀನು ಮಾರಿ ಹಾಕಿದ್ದಾನೆ. ಅದೂ ಕಾಳಾರಿ ಮಠಕ್ಕೆ ಸೇರಿದ ಸೊತ್ತನ್ನು, ಇಲ್ಲಿ ವೈ.ಪಿ. ಸತೀಶ್‌ಬಾಬು ಎಂಬುದು ಸಿದ್ಧಲಿಂಗನ ಹುಟ್ಟು ಹೆಸರಾದರೆ ಆತನಿಂದ ಎರಡೆಕರೆಯಷ್ಟು ಮಠದ ಸೊತ್ತು ಖರೀದಿಸಿದ್ದು ಆತನದ್ದೇ, ಸೋಕಾಲ್ಡ್ ಪತ್ನಿ ಸುಮತಿ. ಇದರರ್ಥ ಯಾರೋ ಆಂಧ್ರಾರೆಡ್ಡಿಯ ಹೆಂಡತಿಯನ್ನು ಪಟಾಯಿಸಿ ತನ್ನ ತೃಷೆ ತೀರಿಸಿಕೊಳ್ಳಲು ಮಠದ ಆಸ್ತಿ ಬರೆದುಕೊಟ್ಟಿದ್ದಾನೆ ಖದೀಮ ಸಿದ್ಧಲಿಂಗ ಸ್ವಾಮೀಜಿ.

ಲೆಕ್ಕ ಹಾಕುತ್ತಾ ಹೋದರೆ ಸೋಕಾಲ್ಡ್ ಸಿದ್ಧಲಿಂಗ ಸ್ವಾಮೀಜಿಗೆ ಈ ಸುಮತಿ ಎಂಬಾಕೆ 6ನೇ ಪತ್ನಿ ಮತ್ತು ಇಪ್ಪತ್ತೊಂಬತ್ತನೇ ಪ್ರೇಯಸಿ!

ಬೆಂಗಳೂರಿನ ಬ್ಯಾಟರಾಯನಪುರ, ಕಾಮಾಕ್ಷಿಪಾಳ್ಯ, ಬಸವೇಶ್ವರನಗರ, ವಿಜಯನಗರ, ಚಂದ್ರಾಲೇಔಟ್, ಜ್ಞಾನಭಾರತಿ, ಪೀಣ್ಯ, ಯಶವಂತಪುರ, ಗಿರಿನಗರ, ಮಾಗಡಿ ಸೇರಿದಂತೆ ತುಮಕೂರು, ನೆಲಮಂಗಲ, ಸಿರಾ, ಕೋಲಾರ, ರಾಮನಗರದಿಂದ ಹಿಡಿದು ದೂರದ ಗುಡಿಬಂಡೆ ಪೊಲೀಸ್ ಠಾಣೆಯವರೆಗೂ ಈತನ ವಿರುದ್ಧ ಎರಡು ಡಜನ್ನಿಗೂ ಅಧಿಕ ದಾಬರಿ, ಡಕಾಯಿತಿ ಕೇಸುಗಳಿವೆ. ಈ ಪೈಕಿ ಬಹುತೇಕವು ಕಾರನ್ನು ಬಾಡಿಗೆಗೆ ಹಿಡಿದು ನಡುರಸ್ತೆಯಲ್ಲಿ ಡ್ರೈವರ್‌ನನ್ನು ದೋಚಿ ಕಾರಿನ ಸಮೇತ ಪರಾರಿಯಾಗಿದ್ದು. ಮಿಕ್ಕಂತೆ ಸಿಕ್ಕಸಿಕ್ಕ ಯುವತಿಯರನ್ನು ಯಾಮಾರಿಸಿ ಕಿಡ್ನಾಪ್ ಮಾಡಿ, ಬೆದರಿಸಿ ಮದುವೆಯಾಗಿ ಮುಕ್ಕಿದ ಕೇಸುಗಳು. ಇಷ್ಟೇ ಅಲ್ಲದೆ ರೌಡಿ ಪಡೆ ಕಟ್ಟಿಕೊಂಡು ಮಠದ ಸೊತ್ತು ಕಬಳಿಸಲೆತ್ನಿಸಿದ್ದು, ಫೋರ್ಜರಿ, ನಕಲಿ ದಾಖಲೆ, ವಂಚನೆ- ಹೀಗೆ ಎಲ್ಲಾ ವೆರೈಟಿಯ ಕೇಸುಗಳೂ ಈತನ ಮೇಲಿವೆ.

### ಇಣುಕಿದ ಕಾಮ

ಇಷ್ಟೇ ಆಗಿದ್ದರೆ ಅದು ಪೊಲೀಸರು ಮತ್ತು ಈತನ ಬಲಿಪಶುಗಳ ನಡುವಿನ ಜಂಜಾಟವೆಂದೇ ಸುಮ್ಮನಿರಬಹುದಿತ್ತು. ಆದರೆ ಸತೀಶ್ ಬಾಬು @ ಸಿದ್ಧಲಿಂಗ ಸ್ವಾಮೀಜಿ ಇವತ್ತಿಗೂ ಖಾವಿ ಧರಿಸುತ್ತಾನೆ. ತನ್ನನ್ನು ತಾನೇ ಸಿದ್ಧಲಿಂಗ ಸ್ವಾಮೀಜಿ ಎಂದು ವಿಸಿಟಿಂಗ್ ಕಾರ್ಡು ಉದುರಿಸುತ್ತಾನೆ. ಖಾವಿ ಧರಿಸಿಕೊಂಡೇ ಕಂಡಕಂಡ ಭಕ್ತಾದಿಗಳ ಮನೆ ಹೊಕ್ಕುತ್ತಾನೆ ಮತ್ತು ಅಂಥ ಮನೆಯ ಮುಗ್ಧ ಯುವತಿಯರ ಮಾನ ದೋಚುತ್ತಲೇ ಇದ್ದಾನೆ.

ಮಾಗಡಿಯಲ್ಲಿ ಖಾವಿಧಾರಿಯಾದರೆ ಬೆಂಗಳೂರಿನಲ್ಲೀತ ಸೂಟುಬೂಟು ಧಾರಿ!

## ಗಂಡ ಕಾರು ಕಳ್ಳ, ಹೆಂಡತಿ ಮೊಬೈಲ್ ಕಳ್ಳಿ!

2013 ರಲ್ಲಿ ವಿಜಯನಗರದ ರಿಯಲ್ ಎಸ್ಟೇಟ್ ಆಸಾಮಿಯೊಬ್ಬನ ಇಂಡಿಕಾ ಕಾರು ಕಳುವಾಯಿತು. ರಸ್ತೆಯಲ್ಲಿ ನಿಲ್ಲಿಸಿದ್ದ ಕಾರನ್ನು ಯಾರೋ ಹೊತ್ತೊಯ್ದಿದ್ದರು. ಪೊಲೀಸರು ವಿಚಾರಣೆ ಶುರು ಹಚ್ಚಿಕೊಂಡು ಹಿಂದೆ ಯಾರೆಲ್ಲ ಡ್ರೈವರ್‌ಗಳಾಗಿದ್ದರೆಂಬ ಬಗ್ಗೆ ಕೆದಕುತ್ತಾ ಹೋದಂತೆ ಸತೀಶ ಹೆಸರೂ ಬಂದಿತ್ತು, ಕರೆದು ಬಾಯಿ ಬಿಡಿಸಿದರೆ ಸತೀಶ ತಾನು ಕೆಲಸ ಬಿಟ್ಟೇ ಎಷ್ಟೋ ತಿಂಗಳಾಯಿತೆಂದ. ಆತನ ಹಿನ್ನೆಲೆ ಕೆದಕಿದಂತೆಲ್ಲ ಅನುಮಾನ ಹೆಚ್ಚಾಗಿದೆ. ಬಟ್ಟೆ ಬಿಚ್ಚಿಸಿದ್ದೇ ಬಾಯಿ ಬಿಡಿಸಿದಾಗ ಸತೀಶ ಡ್ರೈವರ್ ಕೆಲಸ ಮಾಡಿಕೊಂಡಿದ್ದೇ ಕಾರಿನ ಕೀ ನಕಲು ಮಾಡಿಕೊಂಡು ಕದ್ದಿದ್ದನ್ನು ಬಾಯಿಬಿಟ್ಟಿದ್ದ.

ಈ ಬಗ್ಗೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ಇವತ್ತಿಗೂ ಸತೀಶ್ ಬಾಬು ಅಲಿಯಾಸ್ ಗೂಸಲು ಸಿದ್ಧಲಿಂಗ ಸ್ವಾಮೀಜಿ ಎಂದು ಕಾರ್ ಕದ್ದ ಕೇಸಿನಲ್ಲಿ ಹೆಸರು ದಾಖಲಾಗಿದೆ. ಹೀಗೆ ವಿಜಯನಗರದಿಂದ ಕಾರು ಕದ್ದು ಪರಾರಿಯಾದವನು ಕೆಲಕಾಲ ಕೋಲಾರದಲ್ಲಿದ್ದ, ಅಲ್ಲೂ ಕಾರ್ ಕದಿಯುತ್ತಿದ್ದ. ಸದ್ಯ ಕೋಲಾರದ ಶಾಸಕರಾಗಿರುವ ವರ್ತೂರು ಪ್ರಕಾಶ್ ಬೆಂಬಲಿಗನೊಬ್ಬನ ಮಗಳಿಗೂ ಬಲೆಬೀಸಿದ. ತಾನು ಅಜ್ಞಾತವಾಸದಲ್ಲಿರುವ ಸ್ವಾಮೀಜಿ, ಸಿಕ್ಕಾಪಟ್ಟೆ ಆಸ್ತಿಯಿದೆ ಎಂದೆಲ್ಲ ನಂಬಿಸಿದ. ಯಾರೂ ಇಲ್ಲದ ವೇಳೆ ಮನೆಗೆ ನುಗ್ಗಿ ಚಕ್ಕಂದ ಶುರುವಿಟ್ಟ. ಆಕೆಯ ಜೊತೆ ತರಹೇವಾರಿ ಭಂಗಿಯ ಫೋಟೋ ತೆಗೆಸಿಕೊಂಡು ಬ್ಲಾಕ್‌ಮೇಲಿಗಿಳಿದ.

ಇದು ಗೊತ್ತಾಗಿದ್ದೇ ತಡ, ವರ್ತೂರು ಪ್ರಕಾಶ್ ಬೆಂಬಲಿಗನ ಗ್ಯಾಂಗ್ ಲಾಂಗು ದೊಣ್ಣೆಗಳೆತ್ತಿಕೊಂಡು ಕಳ್ಳಸ್ವಾಮಿಯನ್ನು ಅಟ್ಟಾಡಿಸಿತು. ಅವತ್ತು ಕೋಲಾರ ಬಿಟ್ಟವನು ಸೀದಾ ಮಾಗಡಿಗೆ ಬಂದಿದ್ದೇ ಕಾಳಾರಿ ಮಠದ ಧರ್ಮಾಧಿಕಾರಿಯಾಗಿದ್ದ ತನ್ನ ತಂದೆ ಪರಮಶಿವಯ್ಯನ ವಿರುದ್ಧವೇ ರೌಡಿ ಗ್ಯಾಂಗ್ ಕಟ್ಟಿಕೊಂಡು ದಾಳಿಗಿಳಿದ. ಈತ ಮಾರಿ ಹಾಕಿದ್ದ ಮಠದ ಸೊತ್ತಿಗಾಗಿ ತಂದೆ ಹೈಕೋರ್ಟ್ ಮೆಟ್ಟಿಲೇರಿದರೆ ಈತ ತಂದೆಯ ವಿರುದ್ಧವೇ ರಿಯಲ್ ಎಸ್ಟೇಟ್ ಖದೀಮರ ಪರ ವಹಿಸಿ ಗೂಂಡಾಗಿರಿಗಿಳಿದ.


ಸದ್ಯ ಈತನ ಪತ್ನಿ ಎಂದು ಹೇಳಿಕೊಳ್ಳುವ ಸುಮತಿಯನ್ನು ಆಕೆಯ ಗಂಡ ಬಾಬುರೆಡ್ಡಿ ಹುಡುಕುತ್ತಿದ್ದಾನೆ. ಗೊತ್ತಾದರೆ ರೆಡ್ಡಿಯೇ ಕಳ್ಳಸ್ವಾಮಿಯನ್ನು ಮುಗಿಸುತ್ತಾನೆ. ವಿಚಿತ್ರವೆಂದರೆ ಗಂಡನಿಗೆ ಕೈಕೊಟ್ಟು ಪಾಪಿ ಸ್ವಾಮಿಯ ಕೈಹಿಡಿದ ತಪ್ಪಿಗೆ ಸುಮತಿ ನಸೀಬು ಹಳ್ಳ ಹಿಡಿದಿದೆ. ಸುಮತಿ ಬಾಡಿಗೆಗಿದ್ದ ಮನೆಯೊಡತಿಯ ಒಡವೆ ಕದ್ದು ಒಮ್ಮೆ ಬಸವೇಶ್ವರ ನಗರ ಪೊಲೀಸರ ಅತಿಥಿಯಾದರೆ ಅಲ್ಲಿಂದ ಮನೆ ಖಾಲಿ ಮಾಡಿಕೊಂಡು ಪ್ರೇಮನಗರಕ್ಕೆ ಬಂದವಳು ಮತ್ತೆ ನೆರೆಮನೆಯವರ ಮೊಬೈಲ್ ಕದ್ದು ಸಿಕ್ಕಿಬಿದ್ದಿದ್ದಾಳೆ. ಗಂಡ ಕಾರು ಕಳ್ಳ, ಅತನನ್ನು ನಂಬಿದ ತಪ್ಪಿಗೆ ಹೆಂಡತಿಯೂ ಮೊಬೈಲ್ ಕಳ್ಳಿ! ಸಿದ್ಧಲಿಂಗನ ಮುಂದಿನ ಬೇಟೆಗೆ ಬಲಿಯಾಗುವ ಹೆಣ್ಣು ಜೀವ ಯಾರಾಗುತ್ತಾರೋ ದೇವರೇ ಬಲ್ಲ.



ಅಪಹರಿಸಿದ ರಾಗಿಣಿ ಜೊತೆ



ಹೊತ್ತು ತಂದು ಪದ್ಮಾ ಜೊತೆ ಫೋಟೋ ತೆಗೆಸಿಕೊಂಡದ್ದು





ಹಾರಿಸಿ ತಂದ ಸುಮತಿ ಜೊತೆ ಎನ್‌ಟಿಆರ್ ಕೋಟುಧಾರಿ

# ಕಷ್ಟಕ್ಕೆ ಬಂದವನ ಪತ್ನಿಯನ್ನೇ ಪಟಾಯಿಸಿದ!


ಸಿರಾದಲ್ಲಿ ರಸ್ತೆ ದರೋಡೆ ಮಾಡಿ ರೆಡ್‌ಹ್ಯಾಂಡ್ ಸಿಕ್ಕಿಬಿದ್ದ ಸತೀಶ ಮಧುಗಿರಿ ಜೈಲು ಪಾಲಾದನಲ್ಲ; ಆರೇ ಂಗಳಿಗೆ ಜಾಮೀನು ಗಿಟ್ಟಿಸಿ ಹೊರಬಂದಾಗ ಆತನಿಗೆ ಆಸರೆ ನೆರಳು ಕೊಟ್ಟವನು ಚಂದ್ರಾಲೇಔಟಿನ ಚಂದ್ರಶೇಖರ್. ವೃತ್ತಿಯಿಂದ ಸಿನಿಮಾ ಮೇಕಪ್‌ಮನ್ ಆಗಿದ್ದ ಚಂದ್ರುಗೆ ಪ್ರೇಮಾ ಎಂಬ ಪತ್ನಿ, ಪುಟ್ಟ ಮಗು ಮನೆ ಎಲ್ಲವೂ ಇತ್ತು. ೊದಮೊದಲು ಗೆಳೆಯನ ಪತ್ನಿಯನ್ನು ಅಕ್ಕ ಎಂದೇ ಸಿದ್ಧಲಿಂಗ ಅಲಿಯಾಸ್ ಸತೀಶ ಸಂಭೋದಿಸುತ್ತಿದ್ದ. ಬರುಬರುತ್ತ ಂದ್ರ ಹೊರಬೀಳುವುದನ್ನೇ ಕಾದಿದ್ದು ಮನೆ ಸೇರಿಕೊಳ್ಳಲಾರಂಭಿಸಿದ.

ಅದೇನೆಂದು ಗಾಳ ಹಾಕಿದನೋ, ತಾನೊಬ್ಬ ಸ್ವಾಮಿ, ತನಗೆ ಕೋಟಿಗಟ್ಟಲೇ ಆಸ್ತಿಯಿದೆ ಎಂಬುದನ್ನು ಪ್ರೇಮಾ ಂಬಿಬಿಟ್ಟಳು. ಆಕೆಯನ್ನು ಮಠಕ್ಕೆ ಕರೆದೊಯ್ದು ತಾನು ಖಾವಿತೊಟ್ಟೇ ಎಲ್ಲವನ್ನೂ ತೋರಿಸಿಕೊಂಡು ಬಂದ. ಠದ ಅರ್ಧ ಸೊತ್ತಿನ ಆಸೆಯನ್ನೂ ಹುಟ್ಟಿಸಿದ. ಪ್ರೇಮಾ ಬುಟ್ಟಿಗೆ ಬೀಳಲು ಇನ್ನೆಷ್ಟು ಹೊತ್ತು?

ಗಂಡನ ಮನೆ ತೊರೆದು ಕಳ್ಳಸ್ವಾಮಿ ಜೊತೆ ಓಡಿಹೋಗಲು ಪ್ರೇಮಾ ಅಣಿಯಾದಳು. ಅದಕ್ಕೆ ತಕ್ಕಂತೆ ಮಠದ ತ್ತೆಕರೆ ಹೊಲ ಮತ್ತು ಎರಡೂವರೆ ಎಕರೆ ಗದ್ದೆಯನ್ನೂ ಮಾರಿಬಿಟ್ಟ. ಬಂದ ದುಡ್ಡೆತ್ತಿಕೊಂಡಿದ್ದೇ ಪ್ರೇಮಾಳನ್ನು ರಕೊಂಡು ತುಮಕೂರಿಗೆ ಪರಾರಿಯಾದ. ತಿಂಗಳಾನುಗಟ್ಟಲೇ ಮೋಜು, ಮಸ್ತಿ ರಾತ್ರಿ ಎಲ್ಲವೂ ಮುಗಿಯಿತು. ಇತ್ತ ಂಡ ಚಂದ್ರು ಮತ್ತು ಪ್ರೇಮಾ ಅಣ್ಣ ಭದ್ರಿ ಪರಾರಿಯಾದ ಜೋಡಿಗಾಗಿ ಹುಡುಕಾಟ ನಡೆಸುತ್ತಲೇ ಇದ್ದರು. ಹೇಗೋ ುಮಕೂರಿನ ಮನೆ ಪತ್ತೆ ಹಚ್ಚಿದ್ದೇ ಅದೊಂದು ದಿನ ನುಗ್ಗಿದ್ದೇ ಸತೀಶನನ್ನು ಎತ್ತಾಕಿಕೊಂಡು ಬಂದು ಕೊಲ್ಲಲು ಣಿಯಾದರು.

ಆಗ ಹುಷಾರಾದ ಸಿದ್ದಲಿಂಗ ಚಂದ್ರೂ ಕಾಲಿಗೆ ಬಿದ್ದು ಅತ್ತೂ ಕರೆದು ಗೋಳಾಡಿ ಇದೊಂದು ಸಾರಿ ಬಿಟ್ಟುಬಿಡಿ ಂದು ಕಣ್ಣೀರುಗರೆದ. ನಂಬಿದ ಚಂದ್ರು ಎಚ್ಚರಿಕೆ ಕೊಟ್ಟು ಬಿಟ್ಟು ಕಳಿಸಿದ್ದ. ಹಾಗಂತ ಸಿದ್ದಲಿಂಗನ ಚಪಲ ಡಬೇಕಲ್ಲ, ಇದಾಗಿ ಆರು ತಿಂಗಳಿಗೇ ಮತ್ತೆ ಪ್ರೇಮಾಳನ್ನು ಮಾಗಡಿಗೆ ಹಾರಿಸಿಕೊಂಡು ಬಂದು ಕಾಮೋತ್ಸವಕ್ಕಿಳಿದ. ದು ಕೂಡ ಮತ್ತೆ ಪತಿ ಚಂದ್ರುಗೆ ಗೊತ್ತಾಗ್ತಿ ಈ ಬಾರಿ ಕೊಂದೇ ಹಾಕಲೆಂದು ಮಾಗಡಿಗೆ ನುಗ್ಗಿದ್ದೇ ಸಿದ್ದಲಿಂಗನನ್ನು ೊತ್ತೊಯ್ದು ಕೊಲ್ಲಲು ಮುಹೂರ್ತವಿಟ್ಟರು. ಅದು ಹೇಗೋ ಮಾಡಿ ತಪ್ಪಿಸಿಕೊಂಡು ಬಂದ ಸತೀಶ ಸೀದಾ ್ಕಟರಾಯನಪುರ ಪೊಲೀಸ್ ಠಾಣೆ ಹೊಕ್ಕಿದ್ದೇ ಬಚಾವಾದ. ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ವತ್ತಿಗೂ ಕೇಸಿದೆ. ಅವತ್ತು ತಪ್ಪಿಸಿಕೊಂಡ ಸತೀಶನನ್ನು ಮುಗಿಸಲು ಪ್ರೇಮಾ ಗಂಡ ಚಂದ್ರು ಮತ್ತು ಅಣ್ಣ ಬದ್ರಿ ವತ್ತಿಗೂ ಹುಡುಕುತ್ತಿದ್ದಾರೆ. ಸದ್ಯ ಮತ್ತಾರದ್ದೋ ಹೆಂಡತಿಯನ್ನು ಹಾರಿಸಿ ತಂದು ಕಳ್ಳಾಟಕ್ಕಿಳಿದ ಸತೀಶನ ಕಚ್ಚೆ ರಕುತನ ಮುಗ್ಧೆ ಪ್ರೇಮಾಳಿಗಿನ್ನೂ ಗೊತ್ತಿರಕ್ಕಿಲ್ಲ.

ಸುಮತಿಗೆ ಮಠದ ಸೊತ್ತಿನ ಕ್ರಯ ಪತ್ರ



ಈತ ಕಾಳಾರಿ ಮಠಕ್ಕೆ ವಕ್ಕರಿಸಿದ್ದು ತನ್ನ 13ನೇ ಯಸ್ಸಿನಲ್ಲಿ. ಹೇಳಿಕೇಳಿ ಕಾಳಾರಿ ಮಠ ಬಹುತೇಕ ಂಗಾಯತ ಮಠಗಳಂತೆ ವಿರಕ್ತ ಮಠವಲ್ಲ. ಅದು ಶವಾಹಿ ಖಾಸಗಿ ಜಂಗಮ ಮಠ. ನಾಲ್ಕು ತಲೆಮಾರುಗಳ ದೆ ಕುಣಿಗಲ್ ತಾಲ್ಲೂಕು ಯಲಿಯೂರು ಮಠದ ಚನ್ನವೀರ ದೇವರು ಇದಕ್ಕೆ ಪೀಠಾಧಿಪತಿಯಾಗಿದ್ದರು. ನಂತರ ಅವರ ಮೊಮ್ಮಗ ಸಿದ್ಧಲಿಂಗ ಶಿವಯೋಗಿಯನ್ನು ಮೀಜಿ ಮಾಡಲಾಯಿತು. ಇವರ ಕಾಲಾನಂತರ ಟ್ಟಕ್ಕೇರಿದ್ದು ಅವರ ಖಾಸಾ ತಮ್ಮ ಸಿದ್ಧವೀರಯ್ಯ ಲಿಯಾಸ್ ಸಿದ್ಧವೀರ ದೇವರು. ಇವರ ತರುವಾಯ ದರೆ 1938ರಲ್ಲಿ ಸಿದ್ಧವೀರಯ್ಯನ ಸ್ವಂತ ಅಕ್ಕ ಗುಳೂರಿನ ವೀರಮ್ಮ ಕೋಂ ಕೊಪ್ಪಣ್ಣ ದೇವರು ಅವರ ಪುತ್ರ ರಭದ್ರ ಸ್ವಾಮಿಗೆ ಸ್ವಾಮಿ ಪಟ್ಟ ಕಟ್ಟಲಾಯ್ತು.

ಆದರೆ ವೀರಭದ್ರಸ್ವಾಮಿ ತನ್ನ ಪ್ರೇಯಸಿಯೊಬ್ಬಳನ್ನು ತಂದಿದ್ದೇ ಮಠದೊಳಗಡೆಯೇ ಕಳ್ಳಸಂಸಾರ ರುಹಚ್ಚಿಕೊಂಡ. ಇದು ಗೊತ್ತಾಗಿದ್ದೇ ಕಾಳಾರಿ ಗಾಯತರೆಲ್ಲ ರೊಚ್ಚಿಗೆದ್ದು ವೀರಭದ್ರಸ್ವಾಮಿಯ ಖಾವಿ ್ರೋಡಿಸಿ ಆ ಜಾಗಕ್ಕೆ ತಂದದ್ದು ಯಲಿಯೂರು ವೀರಯ್ಯನ ಎರಡನೇ ಮಗ ಪರಮೇಶ್ವರಯ್ಯರ ಮತ್ತು ಗಮ್ಮ ದಂಪತಿಗಳ ಮೂರನೇ ಮಗ ವೈ.ಪಿ. ೕಶ್‌ಬಾಬುವನ್ನು. 1990ರ ಮೇ 7ರಂದು ೕಶ್‌ಬಾಬುಗೆ ಕಾಳಾರಿ ಮಠದಲ್ಲೇ ಅದ್ದೂರಿಯಾಗಿ ್ಟಾಭಿಷೇಕ ಮಾಡಿ ಶ್ರೀಶ್ರೀಶ್ರೀ ಅಭಿನವ ಸಿದ್ಧಲಿಂಗ ಮೀಜಿ ಎಂದು ನಾಮಕರಣ ಮಾಡಲಾಯಿತು. ಆಗಿನ್ನೂ ೕಶನಿಗೆ ಹದಿಮೂರ ಬಾಲಕಾವಸ್ಥೆ. ಸನ್ಯಾಸ ದೀಕ್ಷೆ ತ್ತು ಪಟ್ಟಾಭಿಷೇಕಕ್ಕೆಂದು ಖುದ್ದು ಸಿದ್ಧಗಂಗೆಯ ಕುಮಾರ ಸ್ವಾಮಿಗಳೇ ಕಾಳಾರಿಯತನಕ ಪಾದ ಸಿದ್ದರು.

## ಪಾದಪೂಜೆಯಲ್ಲಿ...!

ಸಿದ್ಧಗಂಗೆಯ ಶಿವಕುಮಾರ ಸ್ವಾಮಿಗಳಿಂದ ದೀಕ್ಷೆ ದಿದ್ದೇ ಮಹತ್ವದಾಗಲಿ ಅದರ ಪಾವಿತ್ರ್ಯತೆಯಾಗಲಿ ಸಮಾರರ ಘೋರ ಸೋಕಾನಿಗಲ್ಲಿ ಗೊತ್ತಾಗಬೇಕು. ಲಿಂಗ ಸ್ವಾಮಿಯೆಂಬ ಹೆಸರು ಹೊತ್ತು ಮುಂದಿನ ಟ್ಟಾಭಿಷೇಕದು ತುಮಕೂರಿನ ಸಿದ್ಧಗಂಗೆಯ ಮಠವನ್ನೇ

ಸೇರಿಕೊಂಡ. ಆದರೆ ಮಠದ ಕಿರಿಯ ಶ್ರೀಗಳ ಬೆಳ್ಳಿಯ ಕೈಗಡಿಯಾರವನ್ನೇ ಕದ್ದು ರೆಡ್‌ಹ್ಯಾಂಡ್ ಸಿಕ್ಕಿಬಿದ್ದ. ಇನ್ನು ಕೇಳಬೇಕೆ? ನಿನ್ನಂಥೋನು ಇಲ್ಲಿಗೆ ಲಾಯಕ್ಕಲ್ಲ ಎಂದಿದ್ದೇ ಸಿದ್ದಲಿಂಗನನ್ನು ಮಠದಿಂದ ಹೊರದಬ್ಬಲಾಯಿತು. ವಾಪಸ್ಸು ಕಾಳಾರಿಗೆ ಬಂದರೆ ಆ ಹೊತ್ತಿಗಾಗಲೇ ಹಿಂದಿದ್ದ ವೀರಭದ್ರಸ್ವಾಮಿಗೆ ಪಿತ್ಥ ನೆತ್ತಿಗೇರಿತ್ತು, ತನ್ನ ಪ್ರೇಯಸಿ ಪಾರ್ವತಮ್ಮನ ಹೆಸರಿಗೆ ಮಠದ ಇಪ್ಪತ್ತೆಕರೆಗೂ ಅಧಿಕ ಮೌಲ್ಯದ ಸೊತ್ತನ್ನು ದಾನಕ್ಕೆ ಬರೆದು ಬಿಟ್ಟಿದ್ದ!

ಇದರ ವಿರುದ್ಧ ಸರಿಸುಮಾರು 12 ವರ್ಷಗಳ ಕಾಲ ಹೈಕೋರ್ಟಿನಲ್ಲಿ ಹೋರಾಡಿದ್ದು ಮಠದ ಧರ್ಮಾಧಿಕಾರಿ ವೈ.ಎಸ್. ಪರಮಶಿವಯ್ಯ. ಮಠದ ಅಷ್ಟೂ ಸೊತ್ತೇನೋ ವಾಪಸ್ಸು ಬಂತು ನಿಜ. ಆದರದು ಪೀಠಕ್ಕೆ ವಕ್ಕರಿಸಿದ್ದ ಸತೀಶ್‌ಬಾಬು ಅಲಿಯಾಸ್ ಗೂಸಲ ಸಿದ್ಧಲಿಂಗಸ್ವಾಮಿಯ ಹೆಸರಿಗೆ ಜಮೆಯಾಗಿತ್ತು, ಏಕೆಂದರೆ ಆಗ ಮಠಾಧಿಪತಿ ಗದ್ದುಗೆಯೇರಿದ್ದು ಇದೇ ಸತೀಶ್‌ಬಾಬು ಮತ್ತು ಆಗಷ್ಟೇ ಆತನ ಯೌವನಕ್ಕೂ ಪ್ರಾಯ ಬಂದಾಗಿತ್ತು, ಹರೆಯದ ಸನ್ಯಾಸಿಗೆ ದೇವರ ಭೀತಿಯುಂಟೆ ದೆವ್ವದ ಕಾಟವುಂಟೆ?

ಅದು ಇಸವಿ 2000ದ ಫೆಬ್ರವರಿ ತಿಂಗಳ ಸಮಯ. ಹೇಗೂ ಕಾಳಾರಿ ಮಠದ ಸ್ವಾಮಿ ತಾನೆ? ಅದೊಂದು ದಿನ ಬೆಂಗಳೂರಿನ ಟಿ. ದಾಸರಹಳ್ಳಿಯ ರಾಜಣ್ಣ ಎಂಬ ಧರ್ಮ ಬೀರುವೊಬ್ಬರು ಸ್ವಾಮಿಯನ್ನು ಪಾದಪೂಜೆಗೆಂದು ಮನೆಗೆ ಬರಮಾಡಿಕೊಂಡರು. ತಾನೆಂಥ ಮಹಾಪಾಪವೆಸಗಿದೆ ಎಂಬುದು ಅಮಾಯಕ ರಾಜಣ್ಣನಿಗೆ ಗೊತ್ತಾಗುವ ಹೊತ್ತಿಗಾಗಲೇ ಕಾಲ ಮಿಂಚಿತ್ತು. ಪಾದಪೂಜೆಯ ನಡುವೆಯೇ ರಾಜಣ್ಣನ ಪುತ್ರಿ ರಾಗಿಣಿಗೆ ಸ್ವಾಮಿ ಕಾಳು ಹಾಕಿಬಿಟ್ಟ. ಮೊದಮೊದಲು ನೀನೇ ಪಾರ್ವತಿ ದೇವಿ ನಾನೇ ಶಿವ ಪರಮಾತ್ಮ ಎಂದು ನನಗೆ ಅಶರೀರವಾಣಿಯಾಗಿದೆ ಅದನ್ನು ಟೇಪ್‌ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೇನೆ ಎಂದು ತಾನೇ ಗಂಟಲು ಹರಿದಂತೆ ಮಾತಾಡಿದ್ದನ್ನು ಕೇಳಿಸಿದ್ದ. ಇಡೀ ಮಠದ ಆಸ್ತಿಗೆ ನೀನೇ ಒಡತಿ. ಮಠದ ಅಷ್ಟೂ ಸೊತ್ತು ನನ್ನ ಹೆಸರಲ್ಲಿದೆ. ಇದು ನೋಡು ನಿನಗೆಂದು ಖರೀದಿಸಿ ತಂದ ಹೊಚ್ಚ ಹೊಸ ಟಾಟಾ ಸುಮೋ. ಇದನ್ನೂ ನಿನಗೇ ಗಿಫ್ಟ್ ಕೊಡುತ್ತೇನೆ. ನೀನೇ ಪಾರ್ವತಿಯಾದ್ದರಿಂದ ನಿನ್ನ ಬಿಟ್ಟು ಬೇರೆ ಯಾರನ್ನೂ ನಾನು ಪ್ರೀತಿಸುವಂತಿಲ್ಲ ಎಂದು ರಾಜಣ್ಣನ ಮಗಳ ತಲೆ ತಿಕ್ಕಿದ್ದ. ಅಷ್ಟಕ್ಕೂ ಹುಡುಗಿ ಜಗ್ಗದೇ ಹೋದಾಗ ತಂದ ಸುಮೋದಲ್ಲೇ ಆಕೆಯನ್ನು ಕಾಳಾರಿ ಮಠಕ್ಕೆ ಹೊತ್ತೊಯ್ದ. ಅಲ್ಲೇ ಅತ್ಯಾಚಾರಕ್ಕೂ ಈಡುಮಾಡಿಬಿಟ್ಟ. ವಿಧಿಯಿಲ್ಲದೇ ಆಕೆ ಸ್ವಾಮಿ ಜೊತೆ ರಿಜಿಸ್ಟರ್ ಮದುವೆಯಾದಳು. ಆಕೆಯ ಹೆಸರು ರಾಗಿಣಿ!

## ಕದ್ದ ಕಾರಿಗೆ ಜೈಲು

ಆದರೆ ಮದುವೆಯಾದ ಮೂರೇ ತಿಂಗಳಿಗೆ ಸ್ವಾಮೀಜಿಯ ಅಸಲಿಯತ್ತೇನೆಂಬುದು ಅರ್ಥವಾಗಿತ್ತು, ಕದ್ದ ಸುಮೋ ಕಾರಿನ ಬೆನ್ನತ್ತಿ ದಾಬಸ್‌ಪೇಟೆ ಪೊಲೀಸರು ಕಾಳಾರಿ ಮಠಕ್ಕೆ ರೇಡು ಬಿದ್ದಿದ್ದರು. ಕದ್ದ ಸುಮೋ ಸಮೇತ ಸ್ವಾಮಿ ಜೈಲು ಪಾಲಾಗಿದ್ದ. ಪೊಲೀಸರನ್ನು ವಿಚಾರಿಸಿದ ರಾಗಿಣಿಗೆ ಕೇಸಿನ ವಿವರ ತಿಳಿದೇ ಎದೆ ನಡುಗಿತ್ತು, ಧರ್ಮಸ್ಥಳಕ್ಕೆಂದು ಸುಮೋ ಬಾಡಿಗೆಗೆ ಹಿಡಿದು ತಂದಿದ್ದ ಸ್ವಾಮೀಜಿ ದಾಬಸ್‌ಪೇಟೆ ಸಮೀಪದ ನಿರ್ಜನ ಕಾಡಿನ ಬಳಿ ಡ್ರೈವರ್‌ನನ್ನು ಮರಕ್ಕೆ ಕಟ್ಟಿದ್ದೇ ಆತನ ದುಡ್ಡು ಒಡವೆ ದೋಚಿ ಸುಮೋ ಸಮೇತ ಪರಾರಿಯಾಗಿದ್ದ.

ಹಾಗೇ ದೋಚಿದ ಸುಮೋ ಬಳಸಿಯೇ ರಾಗಿಣಿಯನ್ನು ಹೊತ್ತೊಯ್ದು ಆಕೆಯ ಶೀಲವನ್ನೂ ದೋಚಿದ್ದ. ಸುಮೋ ಕದ್ದು ಜೈಲು ಪಾಲಾಗುವ ಮೊದಲೇ ಆಕೆಯ ಒಡವೆ ಚಿನ್ನವನ್ನೆಲ್ಲ ಕಿತ್ತುಕೊಂಡಿದ್ದ. ಕುಡಿದು ಬಂದು ಪ್ರತಿನಿತ್ಯ ಪೀಡಿಸುತ್ತಿದ್ದ. 10 ಲಕ್ಷದ ವರದಕ್ಷಿಣೆಗೂ ಹಿಂಸಿಸುತ್ತಿದ್ದ. ಇತ್ತ ಸಿದ್ಧಲಿಂಗ ಕಾರು ದೋಚಿದ ಕೇಸಲ್ಲಿ ಜೈಲು ಪಾಲಾಗುತ್ತಿದ್ದಂತೆ ರಾಗಿಣಿಯೂ ತಿರುಗಿಬಿದ್ದಳು. ಜೈಲಿಂದ ಹೊರಬಂದವನ ವಿರುದ್ಧ ವರದಕ್ಷಿಣೆ ಕಿರುಕುಳ, ಕಿಡ್ನಾಪ್, ರೇಪ್, ಪ್ರಾಣ ಬೆದರಿಕೆಯ ಮದುವೆ, ವಂಚನೆ ಪ್ರಕರಣಗಳು ದಾಖಲಾದವು.

ಇದು ಕಾಳಾರಿ ಮಠದ ಆಡಳಿತ ಮಂಡಳಿಗೆ ಗೊತ್ತಾಯಿತು. ಆದರೆ ಸತೀಶ ಹುಟ್ಟಾ ಪಾಕಡ. ಇದೆಲ್ಲ ರಾಗಿಣಿಯ ತಂದೆ ಹಾಕಿಸಿದ ಸುಳ್ಳು ಕೇಸು ಶಿವನಾಣೆ ನಾನು ತಪ್ಪು ಮಾಡಿಲ್ಲ ಎಂದು ಕಣ್ಣೀರಿಟ್ಟ. ನಂಬಿದ ತಂದೆ ಪರಮಶಿವಯ್ಯ ತಾವು ಗ್ರಾಮಲೆಕ್ಕಿಗರಾಗಿ ಬಂದ ನಿವೃತ್ತಿಯ ಹಣವನ್ನೆಲ್ಲ ತಂದು ಮಠಕ್ಕೆ ಸುರಿದರು. ಅಲ್ಲೇ ಮನೆ ಕಟ್ಟಿಸಿಕೊಂಡು ತಾವೇ ನಿಂತು ದೇವತಾ ಕಾರ್ಯದ ಮೇಲುಸ್ತುವಾರಿ ವಹಿಸಿಕೊಂಡರು. ಇದಾಗಿ ಎರಡೇ ತಿಂಗಳಿಗೆ ಮತ್ತೆ ಕಾಳಾರಿ ಮಠದ ಮೇಲೆ ಪೊಲೀಸರು ರೇಡು ಬಿದ್ದು ಸ್ವಾಮಿ ಬಳಸುತ್ತಿದ್ದ ಕ್ವಾಲೀಸ್ ಕಾರನ್ನು ಹೊತ್ತೊಯ್ದರು. ಹಕೀಕತ್ತೇನೆಂದರೆ ಈ ಕ್ವಾಲೀಸ್ ಕೂಡ ಹಿಂದಿನಂತೆ ಡಕಾಯಿತಿ ನಡೆಸಿ ತಂದಿದ್ದಾಗಿತ್ತು, ಸುಮೋ ಕದ್ದು ಜೈಲಿಗೆ ಹೋಗಿದ್ದ ಸಿದ್ಧಲಿಂಗ ಅಲಿಯಾಸ್ ಸತೀಶ್‌ಬಾಬು ಜೈಲೊಳಗೆ ಸೈಯದ್ ಫಯಾಜುಲ್ಲಾ ಮತ್ತು ಫಯಾಜ್‌ಖಾನ್ ಎಂಬಿಬ್ಬರು ಪಳಗಿದ ಕ್ರಿಮಿನಲ್‌ಗಳನ್ನು ಜೊತೆ ಹಾಕಿಕೊಂಡಿದ್ದ!

## ಗುಡಿಬಂಡೆಯ ಹುಡುಗಿ

ಜೈಲಿಂದ ಬಂದಿದ್ದೇ ಸಿದ್ಧಲಿಂಗನ ಗೆಟಪ್ಪೇ ಬದಲಾಗಿತ್ತು, ಇದ್ದಕ್ಕಿದ್ದಂತೆ ಜೀನ್ಸು ಧರಿಸಿ ಯಾವ್ಯಾವುದೋ ಕಾರೆತ್ತಿಕೊಂಡು ಬೆಂಗಳೂರಿಗೆ ಬರುತ್ತಿದ್ದ. ಕಾಟಾಚಾರಕ್ಕೆಂಬಂತೆ ಮಠಕ್ಕೆ ಬಂದು ಸ್ವಾಮಿ ನಾಟಕ ನಟಿಸುತ್ತಿದ್ದ. ಬೆಂಗಳೂರು ಹೊರವಲಯ, ಕೋಲಾರ, ತುಮಕೂರು ವ್ಯಾಪ್ತಿಯಲ್ಲಿ ಸುತ್ತಾಡುತ್ತಾ ಕಾರು ಕದ್ದು ಫಯಾಜ್ ಗ್ಯಾಂಗಿಗೆ ಮಾರುತ್ತಿದ್ದ. ಹೀಗೆ ನೋಎಂಟ್ರಿಯಲ್ಲಿದ್ದ ಸಿದ್ದಲಿಂಗನ ಕಣ್ಣಿಗೆ ಬಿದ್ದವಳು ಗುಡಿಬಂಡೆಯ ಯುವತಿ ಪದ್ಮ. ಬೆಂಗಳೂರಿನ ಕಂಪನಿಯೊಂದರಲ್ಲಿ ರಿಸೆಪ್ಷನಿಸ್ಟ್ ಆಗಿದ್ದ ಪದ್ಮಳ ಬೆನ್ನು ಬಿದ್ದ ಸತೀಶ್‌ಬಾಬು ಆಕೆ ಏನೇ ಅತ್ತು ಕರೆದರೂ ಬೆನ್ನು ಬಿಡಲಿಲ್ಲ. ಕಾಟ ತಾಳಲಾರದೇ ಆಕೆ ಗುಡಿಬಂಡೆ ಸೇರಿಕೊಂಡರೆ ಅಲ್ಲಿಗೂ ಹಾವಳಿಯಿಟ್ಟ. ಆಕೆಯ ರಕ್ಷಣೆಗೆಂದು ಆಕೆಯ ಮಾವ ಭಾಸ್ಕರ್ ಬಂದರೆ ಆತನನ್ನೇ ಕಿಡ್ನಾಪ್ ಮಾಡಿ ಬೆಂಗಳೂರಿಗೆ ಹೊತ್ತೊಯ್ದ.

ಮಾವ ಭಾಸ್ಕರ್‌ಗೆ ಸತೀಶ್ ಕೊಟ್ಟ ಚಿತ್ರಹಿಂಸೆ ಹೇಗಿತ್ತೆಂದರೆ ಇನ್ನೆಲ್ಲಿ ಸತ್ತು ಹೋಗುತ್ತೇನೋ ಎಂದು ನಡುಗಿದ ಆತ ಉಪಾಯವಾಗಿ ಪದ್ಮಳನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದೇ ಸತೀಶನಿಗೊಪ್ಪಿಸಿದ್ದ. ಆಕೆಯನ್ನು ಯಾವುದೋ ಕಾಡೊಂದರ ಪಾಳು ದೇವಾಲಯಕ್ಕೊಯ್ದು ಅರಿಶಿನ ಕೊಂಬು ಕಟ್ಟಿದ ಶಾಸ್ತ್ರ ಮುಗಿಸಿದ ಸತೀಶ್ ಮೂರು ತಿಂಗಳ ಕಾಲ ಆಕೆಯನ್ನು ಬಂಧನದಲ್ಲಿಟ್ಟು ಸತತ ಅತ್ಯಾಚಾರ ಗೈದಿದ್ದ. ನೊಂದು ಬಸವಳಿದ ಪದ್ಮ ಉಪಾಯವಾಗಿ ಸತೀಶನನ್ನು ಪ್ರೀತಿಸಿದಂತೆ ನಾಟಕವಾಡಿ ಹೇಗೋ ಅಲ್ಲಿಂದ ಪರಾರಿಯಾದಳು. ಈ ಬಗ್ಗೆ ಗುಡಿಬಂಡೆ ಪೊಲೀಸರಿಗೆ ದೂರನ್ನೂ ಕೊಟ್ಟಳು. ಆದರೆ ಪೊಲೀಸರು ಬರುವ ಹೊತ್ತಿಗೆ ಸತೀಶನೇ ಅಲ್ಲಿಂದ ನಾಪತ್ತೆಯಾಗಿದ್ದ.

ಹೀಗೆ ತಲೆಮರೆಸಿಕೊಂಡಿದ್ದ ಕಳ್ಳ ಸ್ವಾಮಿ ಮೂರನೇ



ಬಾರಿ ಮಧುಗಿರಿ ಜೈಲು ಪಾಲಾಗಿದ್ದು ಸಿರಾ ತಾಲ್ಲೂಕಿನಲ್ಲಿ ನಡೆಸಿದ ಭಯಾನಕ ರಸ್ತೆ ದರೋಡೆಯ ಕೇಸಿನಲ್ಲಿ, ಈಗಲೂ ಡ್ರೈವರ್‌ನನ್ನು ದೋಚಿ ಕಾರು ಸಮೇತ ಪರಾರಿಯಾಗಿದ್ದ. ಅಷ್ಟೇ ಬೇಗ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಹಾಗೇ ಜೈಲುಪಾಲಾದ. ಅಲ್ಲಿಂದಾಚೆಗೆ ಆತ ನಡೆಸಿದ ಹಾವಳಿ, ತಿಂದು ತೇಗಿದ ಯುವತಿಯರ ಪಾಡಿನದ್ದೇ ಪ್ರತ್ಯೇಕ ಪುರಾಣವಾಗುತ್ತದೆ. ಸಾಮಾನ್ಯವಾಗಿ ಅತ್ಯಾಚಾರಕ್ಕೀಡಾದ ಹೆಂಗಸರು ಮರ್ಯಾದೆಗೆ ಅಂಜಿ ಅದನ್ನು ಪೊಲೀಸರತನಕ ತರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿಯೇ ಸತೀಶ ಹತ್ತಾರು ಹೆಂಗಸರ ಬಾಳಿಗೆ ಬೆಂಕಿ ಇಟ್ಟ. ಅಂಥ ಅಬಲೆಯರ ಸೊತ್ತು ಒಡವೆ ಬಿಡದೆ ದೋಚುತ್ತಿದ್ದ. (ಬಾಕ್ಸ್ ನೋಡಿ)


## ರೌಡಿಯಾಗಿ


ಇಷ್ಟೆಲ್ಲವೂ ಒಂದೊಂದಾಗಿ ಕಾಳಾರಿ ಮಠದ ಆಡಳಿತ ಮಂಡಳಿಯ ಗಮನಕ್ಕೆ ಬರುತ್ತಲೇ ಇತ್ತು. ಈ ಮಧ್ಯೆ ಧಾರ್ಮಿಕ ದತ್ತಿ ಇಲಾಖೆಯಿಂದ ವೀರಭದ್ರಸ್ವಾಮಿ ದೇವಾಲಯಕ್ಕೆಂದು ಬಿಡುಗಡೆಯಾಗಿದ್ದ ತಸ್ತೀಕ್ ಹಣವನ್ನೆಲ್ಲ ಸಿದ್ಧಲಿಂಗ ನುಂಗಿ ನೀರು ಕುಡಿದಿದ್ದ; ಮಠದ ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಠೇವಣಿ ಕೂಡ ಉಳಿಸದೇ ಮಜಾ ಉಡಾಯಿಸಿದ್ದ. ಮಠದ ಸೊತ್ತನ್ನೆಲ್ಲ ಯಾರ್‍ಯಾರಿಗೋ ಪುಡಿಕಾಸಿಗೆ ಮಾರಿ ಹಾಕಿದ್ದ. ಹೊತ್ತಲ್ಲದ ಹೊತ್ತಲ್ಲೇ ಖಾವಿ ತೊಟ್ಟುಕೊಂಡೇ ಮಠದ ಆವರಣದಲ್ಲಿ ಕುಡಿದು ಸಿಗರೇಟು ಸೇದುತ್ತಿದ್ದ. ತನಗೆ ಬೀಫ್ ಅಂದರೆ ದನದ ಬಾಡು ತುಂಬಾ ಇಷ್ಟ ಎಂದು ಚೇಲಾಗಳಾದ ಫಯಾಜ್ ಜೋಡಿಯ ಕೈಯಲ್ಲಿ ಮಾಂಸದ ಪ್ಯಾಕೆಟ್ಟು ತರಿಸಿ ತಿನ್ನುತ್ತಿದ್ದ. ಇದನ್ನು ಪ್ರಶ್ನಿಸಿದ ಮಠದ ಪೂಜಾರಿಯನ್ನೇ ನೆಲಕ್ಕೆ ಹಾಕಿ ತುಳಿದ. ಇದನ್ನೆಲ್ಲ ನೋಡಿ ಕಂಗಾಲಾದ ಲಿಂಗಾಯತರೆಲ್ಲ 2014ರಲ್ಲಿ ಆತನ ಖಾವಿ ಕಿತ್ತು ಹೊರದಬ್ಬಿದ್ದಾರೆ. ಆಡಳಿತ ಮಂಡಳಿ ಆತನನ್ನು ಉಚ್ಚಾಟಿಸಿದ್ದೂ ಆಗಿದೆ. ಹಾಗಂತ ಖದೀಮ ಸಿದ್ಧಲಿಂಗ ಜಗ್ಗುತ್ತಿಲ್ಲ.

ರೌಡಿ ಪಡೆ ಕಟ್ಟಿಕೊಂಡಿದ್ದೇ ಪದೇ ಪದೇ ಕಾಳಾರಿ ಮಠಕ್ಕೆ ನುಗ್ಗಿ ಹಾವಳಿಯಿಡುತ್ತಿದ್ದಾನೆ. ಪುರಾತನ ಗುರುಮಠವನ್ನೇ ಧ್ವಂಸ ಮಾಡಿ ಆ ಜಾಗವನ್ನು ರಿಯಲ್ ಎಸ್ಟೇಟ್ ಖದೀಮರಿಗೆ ಮಾರಿದ್ದೇನೆಂದು ಹೂಂಕರಿಸುತ್ತಾನೆ. ಮಠದ ಹಿರೀಕರೆಲ್ಲ ಈ ಬಗ್ಗೆ ಮಾಗಡಿ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟರೆ ಅಲ್ಲಿಗೆ ಸಿದ್ಧಲಿಂಗ ಸ್ವಾಮಿ ವೇಷಧಾರಿಯಾಗಿ ಬಂದು ಶಿವನಾಮ ಜಪಿಸುತ್ತಾನೆ. ಆತನ ವಿರುದ್ಧ ಬೆಂಗಳೂರು ಪೊಲೀಸ್ ಠಾಣೆಗಳಲ್ಲಿ ರಾಬರಿ, ಡಕಾಯಿತಿ, ಕಿಡ್ನಾಪ್ ಕೇಸುಗಳ ಪಟ್ಟಿಯೇ ದೊಡ್ಡದಿದೆ. ಬರೋಬ್ಬರಿ ಎರಡು ಡಜನ್ ಕ್ರಿಮಿನಲ್ ಪ್ರಕರಣಗಳಲ್ಲಿ ಆತನನ್ನು ರಾಜ್ಯದ ನಾನಾ ಪೊಲೀಸ್ ಠಾಣೆಗಳ ಪೊಲೀಸರು ಇವತ್ತಿಗೂ ಹುಡುಕುತ್ತಿದ್ದಾರೆ.


ವಿಪರ್ಯಾಸವೆಂದರೆ ಸಿದ್ಧಲಿಂಗಸ್ವಾಮಿಯೇ ಸತೀಶ್ ಬಾಬು ಎಂಬುದು ಅನೇಕ ಪೊಲೀಸರಿಗೆ ಗೊತ್ತೇ ಇಲ್ಲ, ಗೊತ್ತಿದ್ದರೂ ಒಂದು ಅಡ್ರೆಸ್ಸಿನಲ್ಲಾತ ವರ್ಷಕ್ಕಿಂತ ಹೆಚ್ಚು ಕಾಲ ನಿಲ್ಲುವುದಿಲ್ಲ ಮತ್ತು ಇವತ್ತಿಗೂ ಖಾವಿ ತೊಟ್ಟು ತನ್ನ ಚಂದದ ಹೆಂಗುಸರ ಶಿಕಾರಿಯನ್ನೂ ನಿಲ್ಲಿಸಿಲ್ಲ. ಬಹುಶಃ ಗೃಹಸಚಿವ ಜಾರ್ಜ್ ಸಾಹೇಬರಿಗಿದು ಗೊತ್ತೇ ಇಲ್ಲ.

ರಾ.ಸೋಮನಾಥ





# ಮಂಡ್ಯ: ಹೋರಾಟದ ಪಾಠ ಕಲಿಸಿದ 'ಸ್ಲಂ ಜನ'



'ಸುಮ್ಮನಿದ್ದರೆ ಸುಲಿಗೆ ತಪ್ಪದು, ಹೋರಾಡಿದರೆ ಜಯ ನಮ್ಮದು' ಎಂಬ ವಾಕ್ಯದಲ್ಲಿ ನಂಬಿಕೆಯಿಟ್ಟು ಕಳೆದೊಂದು ವರ್ಷದಿಂದ ಸುದೀರ್ಘ ಹೋರಾಟ ಮಾಡಿದ ಮಂಡ್ಯ ಸ್ಲಂ ಜನರಿಗೆ ಕೊನೆಗೂ ಜಯ ಸಿಕ್ಕಿದೆ. ಮಂಡ್ಯ ನಗರದ ಹಾಲಹಳ್ಳಿ ಸ್ಲಂ ಜನರಿಗೆ ಜಿ-3 ಮಾದರಿಯ ಮನೆಗಳನ್ನು ಕಟ್ಟಲು ನಿರ್ಧರಿಸಿದ್ದ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವಿರುದ್ಧ ತಿರುಗಿಬಿದ್ದ ಸ್ಲಂ ಜನರು ಮಂಡ್ಯ ನಗರ ಸ್ಲಂ ನಿವಾಸಿಗಳ ಒಕ್ಕೂಟದ ನೇತೃತ್ವದಲ್ಲಿ ನಡೆಸಿದ ಹೋರಾಟಕ್ಕೆ ಮಣಿದ ಜಿಲ್ಲಾ ಉಸ್ತುವಾರಿ ಹಾಗೂ ವಸತಿ ಸಚಿವ ಅಂಬರೀಶ್ ಹಿಂದೆ ಇದ್ದಂತೆ ಜಿ-1 (ನೆಲಮಹಡಿ) ಮಾದರಿಯ ಮನೆಗಳ ನಿರ್ಮಾಣಕ್ಕೆ ಮೇ 2 ರಂದು ಗುದ್ದಲಿಪೂಜೆ ನೆರವೇರಿಸಿದ್ದಾರೆ. ಆ ಮೂಲಕ ಕರ್ನಾಟಕ ಜನಶಕ್ತಿಯ ಅಂಗ ಸಂಘಟನೆಯಾದ ಮಂಡ್ಯ ನಗರ ಸ್ಲಂ ನಿವಾಸಿಗಳ ನೇತೃತ್ವದ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ.

ಕಳೆದ 8 ವರ್ಷಗಳ ಹಿಂದೆಯೇ ಹಾಲಹಳ್ಳಿ ಸ್ಲಂನ ಮನೆಗಳು ವಾಸಿಸಲು ಯೋಗ್ಯವಿಲ್ಲ ಎಂದು ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಸ್ಲಂ ಜನರಿಗೆ ನೋಟಿಸ್ ಕೊಟ್ಟಿದ್ದರು. ಅವತ್ತಿನಿಂದಲೂ ತಮಗೆ ಸುಭದ್ರ ಸೂರು ನಿರ್ಮಿಸಿಕೊಡುವಂತೆ ಜನ ತಮ್ಮ ಜನಪ್ರತಿನಿಧಿಗಳನ್ನು ಎಡತಾಕಿದ್ದರೂ ಪ್ರಯೋಜನವಾಗಿರಲಿಲ್ಲ. ಕೊನೆಗೆ ಬೀದಿಗಿಳಿದು ಪ್ರತಿಭಟಿಸಿದ ಪರಿಣಾಮ ಕಳೆದ ವರ್ಷ ರಾಜೀವ್ ಆವಾಸ್ ಯೋಜನೆಯಡಿ 1,335 ಮನೆಗಳ ನಿರ್ಮಾಣ ಮಾಡಲು ಯುಪಿಎ ಅವಧಿಯಲ್ಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿತ್ತು. ಆದರೆ ಯುಪಿಎ ಸರ್ಕಾರ ಉರುಳಿ, ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದನಂತರ 65 ಕೋಟಿ ರೂ. ವೆಚ್ಚದಲ್ಲಿ ಮನೆಗಳ ನಿರ್ಮಾಣ ಕಾಮಗಾರಿಯ ಟೆಂಡರ್ ಕರೆಯಲಾಯಿತು. ಟೆಂಡರ್ ಗೌರಿ ಇನ್‌ಫ್ರಾ ಇಂಜಿನಿಯರ್ಸ್ ಪ್ರೈ.ಲಿ. ಕಂಪನಿ ಪಾಲಾಗಿತ್ತು. ಟೆಂಡರ್ ಕರೆಯುವುದಕ್ಕೂ ಮುನ್ನ ಆರ್‌ಎವೈ ಯೋಜನೆಯ ಗೈಡ್‌ಲೈನ್‌ನಲ್ಲಿರುವಂತೆ ಹಾಲಹಳ್ಳಿ ಸ್ಲಂ ಫಲಾನುಭವಿಗಳ ಅಭಿಪ್ರಾಯ ಕೇಳಬೇಕಿತ್ತು. ಆದರೆ ಫಲಾನುಭವಿಗಳ ಅಭಿಪ್ರಾಯವನ್ನು ಕೇಳದೆ ಜಿ-3 (ಮೂರು ಮಹಡಿ ಗೃಹ ಸಂಕೀರ್ಣ) ಮನೆಗಳ ನಿರ್ಮಾಣಕ್ಕೆ ಕೊಳಗೇರಿ ಅಭಿವೃದ್ಧಿ ಮಂಡಳಿ ಮುಂದಾಯಿತು. ಜಿಲ್ಲಾ ಉಸ್ತುವಾರಿ ಮತ್ತು ವಸತಿ ಸಚಿವ ಅಂಬರೀಶ್‌ರವರೇ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೂ ಆಗಿದ್ದರಿಂದ ಶೀಘ್ರ ಮನೆಗಳ ನಿರ್ಮಾಣ ಕಾಮಗಾರಿ ಆರಂಭಿಸುವುದಕ್ಕೆ ಮುಂದಾಗಿದ್ದೇ ತಡ ಹಾಲಹಳ್ಳಿ ಸ್ಲಂ ನಿವಾಸಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಹಾಲಹಳ್ಳಿ ಸ್ಲಂ ಜನರಿಗೆ ಹಾಲಿ ಇದ್ದಂತೆ ಜಿ?1 ಮನೆಗಳೇ ನಿರ್ಮಿಸಬೇಕು. ಇಲ್ಲದಿದ್ದರೆ ನಾವು ಹೀಗೆ ಶಿಥಿಲವಾದ ಮನೆಗಳಲ್ಲೇ ಇದ್ದು ಜೀವ ಬಿಡುತ್ತೇವೆ ಅಂತ ತಿರುಗೇಟು ನೀಡಿದ್ದರು.

## ಅಮರಾವತಿ ಚಂದ್ರು ಎಂಟ್ರಿ

ಯಾವಾಗ ಸ್ಲಂ ಜನ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದರೊ, ಆಗ ಜಿಲ್ಲಾ ಉಸ್ತುವಾರಿ ಸಚಿವ ಅಂಬಿ ತಮ್ಮ ಪರಮಾಪ್ತ ಅಮರಾವತಿ ಚಂದ್ರನನ್ನು ಸಮಸ್ಯೆ ಬಗೆಹರಿಸಲು ಗೊತ್ತು ಮಾಡಿದ್ದರು. ಅದರಂತೆ ಚಂದ್ರು, ನಗರಸಭೆಯಲ್ಲಿ ಸ್ಲಂ ಒಕ್ಕೂಟದ ಮುಖಂಡರು ಹಾಗೂ ಅಲ್ಲಿನ ನಿವಾಸಿಗಳನ್ನು ಕರೆದು ಮಾತುಕತೆ ನಡೆಸಲು ಮುಂದಾಗಿದ್ದರು. ಅಂದಿನ ಸಭೆಯಲ್ಲಿ ಹಾಲಹಳ್ಳಿಯ 712 ಮನೆಗಳ ಜೊತೆಗೆ ಜಿಲ್ಲಾಸ್ಪತ್ರೆಯ ಪಕ್ಕದ ತಮಿಳು ಕಾಲೋನಿಯ ನಿವಾಸಿಗಳಿಗೆ 480 ಮನೆಗಳು, ಕಾಳಿಕಾಂಭ ಸ್ಲಂ ಜನರಿಗೆ 45 ಮನೆಗಳನ್ನು ಇಲ್ಲಿಯೇ ನಿರ್ಮಿಸಲಾಗುವುದೆಂದು ಸ್ಲಂಬೋರ್ಡ್ ಅಧಿಕಾರಿಗಳು ಹೇಳುತ್ತಿದ್ದಂತೆ ಜನರು ಅದಕ್ಕೆ ವಿರೋಧ ವ್ಯಕ್ತಪಡಿಸಿ 2-3 ಸ್ಲಂಗಳನ್ನು ಒಂದೇ ಜಾಗದಲ್ಲಿ ತರುವ ಕೊಳಗೇರಿ ಅಭಿವೃದ್ಧಿ ಮಂಡಳಿ ನಿರ್ಧಾರವನ್ನು ತಿರಸ್ಕರಿಸಿ ಹೊರನಡೆದಿದ್ದರು.

ಅಂಬರೀಶ್ ಬಳಿ ಚರ್ಚಿಸಿದ ಕೆಲ ದಿನಗಳ ನಂತರ ಅಮರಾವತಿ ಚಂದ್ರಶೇಖರ್‌ರವರ ಹೋಟೆಲ್ ಬಳಿ 2ನೇ ಸುತ್ತಿನ ಮಾತುಕತೆ ನಡೆಯಿತು. ಆ ಸಂಧಾನದಲ್ಲಿ 'ಜಿ-3ಗೆ ಬದಲಾಗಿ ಜಿ-2 ಮನೆಗಳನ್ನು ನಿರ್ಮಿಸಿಕೊಡಲು ಅಂಬರೀಷ್ ಅಧಿಕಾರಿಗಳಿಗೆ ಸೂಚಿಸುತ್ತಾರಂತೆ ಅದಕ್ಕಾದರು ಒಪ್ಪಿಕೊಳ್ಳಿ' ಅಂತ ಅಮರಾವತಿ ಹೊಸ ವರಸೆ ತೆಗೆದಿದ್ದರು. ಆಗ ಕರ್ನಾಟಕ ಜನಶಕ್ತಿಯ ಡಾ.ವಾಸು 'ಆರ್‌ಎವೈ ಯೋಜನೆಯಡಿ ಈಗಾಗಲೇ ರಾಜ್ಯದ ಬಹುತೇಕ ಕಡೆ ಜಿ-1 ಮಾದರಿ ಮನೆಗಳನ್ನೇ ನಿರ್ಮಿಸಲಾಗಿದೆ. ಕರ್ನಾಟಕದಲ್ಲಿ ಶೇ.80 ರಷ್ಟು ಮನೆಗಳು ಜಿ-1 ಆಗಿದೆ. ಹಾಲಹಳ್ಳಿ ಸ್ಲಂನಲ್ಲಿ ಸಾಕಷ್ಟು ಜಾಗವಿರುವಾಗ ಜಿ-2 ಮನೆಗಳನ್ನು ನಿರ್ಮಿಸುವುದು ಸರಿಯೆನಿಸುವುದಿಲ್ಲ. ಸಾಕಷ್ಟು ಜಾಗವಿಲ್ಲದಿದ್ದರೆ ಬೇರೆ ಮಾತು. ನಾವು ಜಿ-3ಗೆ ಒಪ್ಪಿಕೊಳ್ಳುತ್ತಿದ್ದೆವು. 712 ಕುಟುಂಬಗಳಿಗೆ ಈಗಿರುವಷ್ಟು ಜಾಗ ಸಾಕು. 2-3 ಸ್ಲಂಗಳನ್ನು ಒಂದೇ ಜಾಗದಲ್ಲಿ ತಂದರೆ ಹೋಬಳಿ ಕೇಂದ್ರಕ್ಕಿಂತಲೂ ಹೆಚ್ಚು ಜನರು ಒಂದೇ ಕಡೆ ನೆಲೆಸುವಂತಾಗುತ್ತದೆ. ದಿನನಿತ್ಯ ಗಲಾಟೆ, ಗದ್ದಲ ನಡೆದು ಅಲ್ಲಿಯ ಸಾಮಾಜಿಕ ವಾತಾವರಣವೇ ಹಾಳಾಗುತ್ತದೆ' ಎಂದೆಲ್ಲಾ ಅನಾನುಕೂಲತೆಯ ಸಂಭಾವ್ಯತೆಯನ್ನು ವಿವರಿಸಿದಾಗಲೂ ಅಮರಾವತಿ ಚಂದ್ರಶೇಖರ್ ಹಾಗೂ ಸ್ಲಂಬೋರ್ಡ್ ಅಧಿಕಾರಿಗಳು ಜಿ-2 ಮನೆ ನಿರ್ಮಾಣಕ್ಕೇ ಸ್ಲಂ ನಿವಾಸಿಗಳೆಲ್ಲ ಒಪ್ಪಿಕೊಳ್ಳಬೇಕೆಂದು ಪಟ್ಟು ಹಿಡಿದಿದ್ದರು. ಹಾಗಾಗಿ 2ನೇ ಸಭೆ ಕೂಡ ವಿಫಲವಾಗಿತ್ತು.

## ಜಿಲ್ಲಾಧಿಕಾರಿ ಬಂದ್ರು

ಸ್ಲಂ ಜನರನ್ನು ಸುಲಭವಾಗಿ ಒಪ್ಪಿಸಬಹುದೆಂದು ಕೊಂಡಿದ್ದ ಅಂಬಿಗೆ ಅದ್ಯಾವಾಗ ಜನ ಗಟ್ಟಿಯಾಗಿ ತಿರುಗಿ ನಿಂತರೊ ಆಗ ಸ್ಲಂ ಜನರನ್ನು ಒಪ್ಪಿಸುವ ಇಡೀ ಉಸಾಬರಿಯನ್ನು ಜಿಲ್ಲಾಧಿಕಾರಿ ಅಜಯ್‌ನಾಗಭೂಷಣ್ ಹೆಗಲಿಗೆ ವರ್ಗಾಯಿಸಿದ್ದರು. ಜಿಲ್ಲಾಧಿಕಾರಿ ಅಜಯ್‌ನಾಗಭೂಷಣ್ ತಮ್ಮ ಕಚೇರಿಯಲ್ಲಿ ಕರೆದಿದ್ದ ಸಭೆಯಲ್ಲಿ ಬೇರೆ ರೀತಿಯ ಅಭಿಪ್ರಾಯಗಳು ಬರಲೇ ಇಲ್ಲ. ಮತ್ತದೇ ಜಿ-2 ಮನೆಗಳ ನಿರ್ಮಾಣಕ್ಕೆ ಒಪ್ಪಿಕೊಳ್ಳಿ. ಇಲ್ಲದಿದ್ದರೆ ಮನೆಗಳ ಕಾಮಗಾರಿ ಬೇರೆ ಜಿಲ್ಲೆಗೆ ಹೋಗಿ ಬಿಡುತ್ತದೆ. ಅಲ್ಲದೆ ಜಿ-2 ಗಿಂತ ಕಡಿಮೆ ಮಾಡಲು ಸಾಧ್ಯವಿಲ್ಲ, ಜಿ-1 ಮನೆಗಳನ್ನು ನಿರ್ಮಿಸಲು ಸಾಧ್ಯವೇ ಇಲ್ಲ, ಅಲ್ಲದೆ ಖರ್ಚು ಕೂಡ ಜಾಸ್ತಿ ಆಗುವುದರಿಂದ ಹೆಚ್ಚಿನ ಹಣವನ್ನು ಕೊಡಲು ಸಾಧ್ಯವಿಲ್ಲ ಎಂದೆಲ್ಲ ಹೇಳಿ ಜನರನ್ನು ಬೆದರಿಸುವ ಪ್ರಯತ್ನ ಅಂದಿನ ಸಭೆಯಲ್ಲಿ ನಡೆಯಿತೇ ವಿನಾಃ ಜನರ ಅಭಿಪ್ರಾಯ ಕೇಳುವ ಇರಾದೆಯೂ ಅಲ್ಲಿದ್ದವರಿಗೆ ಇರಲಿಲ್ಲ.


ಈ ಮಧ್ಯೆ ಒಮ್ಮೆ ನೇರವಾಗಿ ಸಚಿವ ಅಂಬರೀಶ್‌ರನ್ನೇ ಭೇಟಿ ಮಾಡಿ ತಾಪತ್ರಯ ಹೇಳಿಕೊಳ್ಳೋಣವೆಂದು ಸ್ಲಂ ನಿವಾಸಿಗಳು ಪ್ರವಾಸಿಮಂದಿರಕ್ಕೆ ತೆರಳಿದ್ದಾಗ, ಕ್ಷೇತ್ರದ ಜನರ




ಸಮಸ್ಯೆಯನ್ನು ಆಲಿಸುವ ಬದಲು '65 ಕೋಟಿ ರೂ.ಗಳ ಟೆಂಡರ್ ಕರೆಯಲಾಗಿದ್ದು, ಕೆಲಸ ಪ್ರಾರಂಭಿಸಬೇಕಿದೆ. ನಾನು ಇರುವಾಗಲೇ ಮನೆ ಕಟ್ಟಿಸಿಕೊಳ್ಳಿ. ಇಲ್ಲದಿದ್ದರೆ ಬೇರೆ ಜಿಲ್ಲೆಗೆ ಈ ಯೋಜನೆಯ ಮನೆಗಳು ಹೋಗುತ್ತವೆ. ನೀವು ವಾಸಿಸುವ ಮನೆಗಳಲ್ಲಿ ನಮ್ಮ ಮನೆಯ ನಾಯಿಯೂ ವಾಸಿಸುವುದಿಲ್ಲ' ಅಂತೆಲ್ಲಾ ಯಡವಟ್ಟಿನ ಮಾತಾಡಿದ್ದ ಅಂಬಿ ಕೊನೆಗೆ ಮಂಡ್ಯದಲ್ಲಿ ಸ್ಲಂ ಜನರಿಂದ ಬೃಹತ್ ಪ್ರತಿಭಟನೆಯನ್ನೂ ಎದುರಿಸಬೇಕಾಗಿ ಬಂದಿತ್ತು. ಸಂಧಾನ ಸಭೆಗಳೆಲ್ಲ ವಿಫಲವಾದ ಬಳಿಕ ಕರ್ನಾಟಕ ಜನಶಕ್ತಿಯ ಡಾ.ವಾಸು, ಕೃಷ್ಣಪ್ರಕಾಶ್, ಮಲ್ಲಿಗೆ, ಕಮಲ, ಮಂಡ್ಯ ಸ್ಲಂ ಒಕ್ಕೂಟದ ಮುಖಂಡರಾದ ನಾಗೇಶ್, ಸಿದ್ದರಾಜು, ಕೃಷ್ಣಪ್ಪ ಬಾಬು, ಸುರೇಶ್, ಮುತ್ಯಾಲಯ್ಯ ಗನಿ, ಮುಜೀಬ್, ಗುಂಡ, ಪಳನಿ, ಅಲಮೇಲು, ರತ್ನಮ್ಮ, ವೆಂಕಟಲಕ್ಷ್ಮಿ ಮೊದಲಾದ ಮುಖಂಡರು ಹೋರಾಟವನ್ನು ತೀವ್ರಗೊಳಿಸಲು ಮುಂದಾಗಿದ್ದರು.

## ಅಹೋರಾತ್ರಿ ಧರಣಿ

ಅಂಬೇಡ್ಕರ್ ಜಯಂತಿಯ ಮುನ್ನಾ ದಿನ, ಅಂದರೆ ಏಪ್ರಿಲ್ 13 ರಂದು ಸಾವಿರಕ್ಕೂ ಹೆಚ್ಚು ಸಂಖ್ಯೆಯ ಜನರು ಸಿಲ್ವರ್‌ಜ್ಯೂಬಿಲಿ ಪಾರ್ಕ್‌ನಿಂದ ಮೆರವಣಿಗೆಯಲ್ಲಿ ಬಂದು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಧರಣಿ ಕುಳಿತಿದ್ದರು. ಯಥಾಪ್ರಕಾರ ಧರಣಿ ಕೈಬಿಡಿ, ಮಾತುಕತೆಯಲ್ಲಿ ಎಲ್ಲಾ ಬಗೆಹರಿಸುತ್ತೇವೆ ಅಂತ ಜಿಲ್ಲಾಧಿಕಾರಿ ಧ್ವನಿಸಾಂತ್ವನಕ್ಕೆ



ಅಮರಾವತಿ ಚಂದ್ರಶೇಖರ್

ಮುಂದಾದರೂ ಜನ ಜಗ್ಗದೆ ಅಹೋರಾತ್ರಿ ಧರಣಿ ನಡೆಸಿದ್ದರು. ವಿಪರ್ಯಾಸವೆಂದರೆ ಏಪ್ರಿಲ್ 14ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂದಿರುವ ಪಾರ್ಕ್‌ನಲ್ಲಿ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ನಡೆಯುತ್ತಿದ್ದರೆ ಅಲ್ಲಿಂದ ಕೂಗಳತೆ ದೂರದಲ್ಲಿ ಅಂಬೇಡ್ಕರ್ ಯಾವ ಜನರ ಬದುಕುಗಳ ಭದ್ರತೆಗಾಗಿ ಹೋರಾಡಿದ್ದರೊ ಅದೇ ಜನ ತಮ್ಮ ತಲೆ ಮೇಲಿನ ಸೂರಿಗಾಗಿ ಅಧಿಕಾರಶಾಹಿಗಳ ಕಣ್ಣುತೆರೆಸಲು ಬೀದಿಗಿಳಿದು ಕೂತಿದ್ದರು. ಕೊನೆಗೆ ಜಿಲ್ಲಾಧಿಕಾರಿಯವರ ಸಲಹೆಯಂತೆ ಸ್ಥಳಕ್ಕೆ ಬಂದ ಸಚಿವ ಅಂಬರೀಶ್ ಮತ್ತದೇ ಜಿ-2 ರಾಗ ಹಾಡುತ್ತಿದ್ದಂತೆಯೇ ಜನ 'ನಿರ್ಮಿಸಿಕೊಡುವುದಿದ್ದರೆ ಜಿ-1 ಮನೆ ನಿರ್ಮಿಸಿ ಕೊಡಿ. ಇಲ್ಲದಿದ್ದರೆ ಅದೇ ಮನೆಯಲ್ಲಿದ್ದು ಸಾಯ್ತೇವೆ' ಅಂತ ಹತಾಶ ಭಾವೋದ್ವೇಗ ಹೊರಹಾಕಿದ್ದರು. ಜನರ ಹೋರಾಟಕ್ಕೆ ಮಣಿದ ಅಂಬರೀಶ್ ಜಿ-1 ಮನೆಗಳನ್ನೇ ನಿರ್ಮಿಸಿ ಕೊಡುವುದಾಗಿ ಸ್ಥಳದಲ್ಲಿಯೇ ಘೋಷಣೆ ಮಾಡಿದ್ದರು. ಅಲ್ಲಿಗೆ ಕಳೆದ 1 ವರ್ಷದಿಂದ ನಡೆದ ಹಾಲಹಳ್ಳಿ ಸ್ಲಂ ಜನರ ಹೋರಾಟ ಸಾರ್ಥಕವಾದಂತಾಗಿತ್ತು.

## ಸಮಯಸಾಧಕರು

ಹಾಲಹಳ್ಳಿ ಸ್ಲಂ ಜನರ ಪರವಾಗಿ ಹೋರಾಟ ರೂಪಿಸಿದ್ದು ಕರ್ನಾಟಕ ಜನಶಕ್ತಿಯ ಅಂಗಸಂಘಟನೆಯಾದ ಮಂಡ್ಯ ನಗರದ ಸ್ಲಂ ನಿವಾಸಿಗಳ ಒಕ್ಕೂಟ ಸಂಘಟನೆ. ಕಳೆದೊಂದು ವರ್ಷದಿಂದ 5-6 ಬಾರಿ ಸಭೆ ಅಷ್ಟೇ ಸಂಖ್ಯೆಯಲ್ಲಿ ಪ್ರತಿಭಟನೆ, ಕೊನೆಗೆ ಅಹೋರಾತ್ರಿ ಧರಣಿ ಮಾಡಿ ಜಿ-1 ನಿವೇಶನ ನಿರ್ಮಿಸಿಕೊಡುವುದಾಗಿ ಸಚಿವ ಅಂಬರೀಶ್ ಹೇಳಿದ ಮೇಲೆಯೇ ಹೋರಾಟವನ್ನು ಸ್ಲಂ ಮುಖಂಡರು ಹಾಗೂ ಸ್ಲಂ ಜನರು ಅಂತ್ಯಗೊಳಿಸಿದ್ದು. ಅಲ್ಲಿಯವರೆಗೂ ಸ್ಲಂ ಜನರತ್ತ ಸುಳಿಯದ ಹಾಲಿ- ಮಾಜಿ ನಗರಸಭಾ ಸದಸ್ಯರು ಶಂಕುಸ್ಥಾಪನೆ ಸಮಾರಂಭದ ದಿನ ಗರಿಗರಿ ಬಟ್ಟೆಯಲ್ಲಿ ವೇದಿಕೆಯಲ್ಲಿ ಮಿಂಚುತ್ತಿದ್ದರು. ಹಾಲಹಳ್ಳಿ ಸ್ಲಂ ಜನರು ಡಿಸಿ ಕಚೇರಿ ಎದುರು 2 ದಿನ ಅಹೋರಾತ್ರಿ ಧರಣಿ ನಡೆಸಿದರೂ ಅತ್ತ ಸುಳಿಯದ ಇದೇ ವಾರ್ಡಿನ ನಗರಸಭಾ ಸದಸ್ಯೆ ನರಸಮ್ಮ ಅಂದು ವೇದಿಕೆಯಲ್ಲಿ ಹಲ್ಲು ಕಿರಿಯುತ್ತಾ ಮುಖಾರವಿಂದವನ್ನು ಪ್ರದರ್ಶನಕ್ಕಿಟ್ಟಿದ್ದರು. ಜನರ ಸಮಸ್ಯೆಗಳ ಬಗ್ಗೆ ಗಮನಹರಿಸದ ನರಸಮ್ಮ ಈ ಮೊದಲು ನಗರಸಭೆ ಅಧ್ಯಕ್ಷ ಸಿದ್ದರಾಜು ಕೊಟ್ಟ ಪ್ರಸಾದವನ್ನು

⏭06




ಹಾಲಹಳ್ಳಿ ಸ್ಲಂ ಜನರು ಅಹೋರಾತ್ರಿ ನಡೆಸಿದ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಅಂಬರೀಶ್



ಮಂಡ್ಯದ ಹಾಲಹಳ್ಳಿಯಲ್ಲಿ ರಾಜೀವ್‌ಗಾಂಧಿ ವಸತಿ ಯೋಜನೆಯಡಿ ಸ್ಲಂ ಮನೆಗಳ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಗುದ್ದಲಿ ಪೂಜೆ ಮಾಡಿದರು. ಪಿ.ರಮೇಶ್, ಮಲ್ಲಾಜಮ್ಮ ಇತರರಿದ್ದಾರೆ.

# ಡಾ. ಶ್ರೀಕಂಠ ಕೂಡಿಗೆಗೆ ಸಿಕ್ಕ ಅಧ್ಯಕ್ಷಗಿರಿ



ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಶ್ರೀಕಂಠ ಕೂಡಿಗೆಯವರು ಗ್ರಂಥಾಲಯ ಇಲಾಖೆ ಪುಸ್ತಕಗಳ ಆಯ್ಕೆ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಇಂತಹ ಸ್ಥಾನಮಾನಗಳಿಗೆ ಲಾಬಿ ಮಾಡದೆ ತಮ್ಮಷ್ಟಕ್ಕೆ ತಾವು ಮನೆಯಲ್ಲಿರುವಂತಹ ಯೋಗ್ಯರನ್ನ ಹುಡುಕಿ ನೇಮಿಸುವುದು, ಈ ಸರ್ಕಾರದ ಮೆಚ್ಚತಕ್ಕ ಅಂಶ. ಆ ಕಾರಣಕ್ಕೆ ಈವರೆಗೆ ಯಾವುದೇ ಸ್ಥಾನಗಳಿಗೂ ಅಪಾತ್ರರು ನೇಮಕವಾದ ಉದಾಹರಣೆಯಿಲ್ಲ. ಆದರೆ, ಈ ಹಿಂದೆ ಗ್ರಂಥಾಲಯ ಇಲಾಖೆ ಪುಸ್ತಕ ಆಯ್ಕೆ ಸಮಿತಿ ಮತ್ತು ಅಧ್ಯಕ್ಷಗಿರಿಯಲ್ಲಿ ಶುದ್ಧ ತರಲೆಗಳೇ ತುಂಬಿಕೊಂಡು ನಾಡಿನ ವಿದ್ವಾಂಸರಲ್ಲಿ ಒಂದು ರೀತಿ ಅಸಹನೆ ತಾಂಡವವಾಡುತ್ತಿತ್ತು. ಹಲವು ಹಗರಣಗಳ ಆಪಾದನೆ ಹೊತ್ತ ವ್ಯಕ್ತಿಯೊಬ್ಬ ಅಧ್ಯಕ್ಷನಾಗಿ ಒಂದು ರೀತಿ ಭಂಡತನದಲ್ಲೇ ತನ್ನ ಅವಧಿ ಮುಗಿಸಿದ್ದ. ಅಂದು ಆಯ್ಕೆಗೊಂಡ ಪುಸ್ತಕಗಳನ್ನು ಖರೀದಿ ಮಾಡಿ ಎಂಬ ಅಜ್ಞಾರೂಪದ ಪತ್ರ ಬರೆಯುತ್ತಿದ್ದ ಕೆಲವು ಸಾಹಿತಿಗಳು, C/o ಬಿಜೆಪಿ ಎಮ್ಮೆಲ್ಲೆ ಅಡ್ರೆಸ್ ಕೊಡುತ್ತಿದ್ದ ಕೆಟ್ಟ ಸಂಪ್ರದಾಯವೂ ಬೆಳೆದಿತ್ತು. ಇನ್ನು ಮುಂದೆ ಅಂತಹ ಅಸಾಹಿತ್ಯಕ ನಡವಳಿಕೆ ನಡೆಯದಂತೆ ಎಚ್ಚರ ವಹಿಸಬೇಕು.

ಆಯ್ಕೆ ಸಮಿತಿಯಿಂದ ತಿರಸ್ಕೃತಗೊಂಡ ಪುಸ್ತಕಗಳನ್ನು ಲಂಚ ತೆಗೆದುಕೊಂಡು ಪಟ್ಟಿಗೆ ಸೇರಿಸುವಂತಹ ಸಿಬ್ಬಂದಿಗಳ ಬಗ್ಗೆಯೂ ಎಚ್ಚರ ವಹಿಸಬೇಕು. ಎಲ್ಲಕ್ಕಿಂತ 40-50 ಪಬ್ಲಿಕೇಷನ್ ಹೊಂದಿ ಇಡೀ ಇಲಾಖೆಯನ್ನೇ ಭ್ರಷ್ಟಗೊಳಿಸುವಂತಹ ಪ್ರಕಾಶಕರನ್ನ ಹದ್ದುಬಸ್ತಿನಲ್ಲಿಡಬೇಕು. ಅಂತಹವರ ವಿರುದ್ಧ ತನಿಖೆಯನ್ನು ಮಾಡಿಸಬೇಕು. ಇಂತವರ ಕೈಯಲ್ಲಿ ಸಿಕ್ಕಿಕೊಂಡ ವ್ಯವಹಾರಸ್ಥರಲ್ಲದ ಸಾಹಿತಿಗಳ ಗೋಳು ಹೇಳತೀರದಾಗಿದೆ.

ಶ್ರೀಕಂಠ ಕೂಡಿಗೆ ಕುವೆಂಪು ವಿ.ವಿ. ರಚನೆಗೊಳ್ಳಲು ಭದ್ರಬುನಾದಿ ಹಾಕಿದ ವಿದ್ವಾಂಸರಲ್ಲೊಬ್ಬರು. ಕಡಿಮೆ ಬರೆದರೂ, ಬರವಣಿಗೆಗಿಂತಲೂ ಚೊಕ್ಕವಾಗಿ ಮತ್ತು ಪ್ರಾಮಾಣಿಕವಾಗಿ ಬದುಕಿ ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶನ ಹಾಕಿಕೊಟ್ಟವರು.

ಅವರೊಮ್ಮೆ ಪತ್ರಿಕೆ ಆಫೀಸಿಗೆ ಫೋನ್ ಮಾಡಿ, ಹೊಸ ತಲೆಮಾರು ಲಂಕೇಶ್‌ರ ನಾಟಕ ಕಥೆ ಕಾದಂಬರಿಗಳನ್ನು ಓದಬೇಕಾದರೆ ನೀವು ಅವರ ಪುಸ್ತಗಳನ್ನು ಪ್ರಕಟಿಸಬೇಕು ಎಂಬ ಸಲಹೆ ಕೊಟ್ಟರು. ಗುಣಮುಖದಿಂದ ಪ್ರಾರಂಭಗೊಂಡ ನಮ್ಮ ಪ್ರಕಾಶನ ಈಗ ನೂರು ಪುಸ್ತಕದ ಗಡಿ ತಲುಪಿದೆ.

ಶ್ರೇಷ್ಠ ಅಭಿರುಚಿಯ ಕೂಡಿಗೆ ವಿದ್ವಾಂಸರಲ್ಲಿರಬೇಕಾದ ನೈತಿಕ ಜವಾಬ್ದಾರಿಯನ್ನ ಕಾಪಾಡಿಕೊಂಡು ಬದುಕಿದವರು. ಈ ಹಿಂದಿದ್ದ ಸಂಶೋಧಕರಾದ ಶೆಟ್ಟರ್ ಅವಧಿಯಂತೆ ಶ್ರೀಕಂಠ ಕೂಡಿಗೆಯವರ ಅವಧಿಯಲ್ಲೂ ಒಳ್ಳೆಯ ಪುಸ್ತಕಗಳಿಂದ ತುಂಬಿದ ಗ್ರಂಥಾಲಯಗಳು, ಓದುಗರನ್ನ ಬೆಳೆಸಲಿ. ಶೂದ್ರ ಶ್ರೀನಿವಾಸ್, ಅಗ್ರಹಾರ ಕೃಷ್ಣಮೂರ್ತಿ ಇನ್ನು ಮುಂತಾದ ಅನುಭವೀ ವಿದ್ವಾಂಸರ ಪಡೆಯೇ ಆಯ್ಕೆ ಸಮಿತಿಯಲ್ಲಿರುವುದೊಂದು ವಿಶೇಷ! ●

---

05 ⏮

ತಣ್ಣಗೊತ್ತಿಕೊಂಡು ಆತನ ಪರವಾಗಿದ್ದಳು. ಈಗ ನಗರಸಭೆ ಅಧ್ಯಕ್ಷ ಸ್ಥಾನದಿಂದ ಸಿದ್ದರಾಜುನನ್ನು ಇಳಿಸಲು ಅಂಬರೀಶ್ ಶಿಷ್ಯ ಅಮರಾವತಿ ಚಂದ್ರಶೇಖರ್ ಮುಂದಾಗುತ್ತಿದ್ದಂತೆ ಸಿದ್ದರಾಜುನಿಂದ ದಿಢೀರ್ ತನ್ನ ನಿಷ್ಠೆಯನ್ನು ಅಮರಾವತಿ ಚಂದ್ರಣ್ಣನ ಕಡೆ ಬದಲಾಯಿಸಿದ್ದಾಳೆ. ಸ್ಲಂ ಜನರ ಸುದೀರ್ಘ ಹೋರಾಟದ ಒಂದು ದಿನವೂ ಇತ್ತ ಮುಖ ಹಾಕದ ನರಸಮ್ಮ ಶಂಕುಸ್ಥಾಪನೆಯ ದಿನ ಇದಕ್ಕೆಲ್ಲ ನಾನೇ ಕಾರಣ ಎನ್ನುವವಳಂತೆ ರಾರಾಜಿಸುವುದನ್ನು ಕಂಡು ಕಾರ್ಯಕ್ರಮ ಮುಗಿದನಂತರ ಮಂಗಳಾರತಿ ಎತ್ತಲು ಜನ ಕಾಯುತ್ತಿದ್ದರು. ಇದರ ಸೂಚನೆ ಅರಿತವಳಂತೆ ಕಾರ್ಯಕ್ರಮ ಮುಗಿಯುವುದಕ್ಕೂ ಮುನ್ನ ಜನಸಂದಣಿಯಲ್ಲಿ ಮರೆಯಾಗಿ ಅಲ್ಲಿಂದ ಪೇರಿಕಿತ್ತಿದ್ದಳು.

ಇನ್ನು ಇದೇ ವಾರ್ಡಿನಿಂದ ಗೆದ್ದು ಮಾಜಿಯಾಗಿರುವ ರುದ್ರಪ್ಪ ಕಾಂಗ್ರೆಸ್ ಲೀಡರ್. ಅಂಬರೀಶ್ ಆಪ್ತಬಳಗದ ಸದಸ್ಯ. ರುದ್ರಪ್ಪ ಅಂಬಿ ಮಾತನ್ನು ಕಟುವಾಗಿ ವಿರೋಧಿಸುವವರಲ್ಲ. ಡಿಸಿ ಕಚೇರಿಯ ಮುಂದೆ 2 ದಿನ ಸ್ಲಂ ಜನರು ಅಹೋರಾತ್ರಿ ಧರಣಿ ನಡೆಸುವಾಗ ಅತ್ತ ತಲೆಹಾಕದ ರುದ್ರಪ್ಪ ಧರಣಿ ಸ್ಥಳಕ್ಕೆ ಅಂಬರೀಶ್ ಬರುತ್ತಿದ್ದಂತೆ ಮಾಧ್ಯಮಗಳ ಎದುರು ಪೋಸು ಕೊಡಲು ಅವರೊಂದಿಗೆ ಬಂದಿದ್ದನ್ನು ಕಂಡು ಸ್ಲಂ ಜನರೇ ಈವಾಗ ಬಂದಿದ್ದೀಯ, ಎಲ್ಲೋಗಿದ್ದೆ ಇಷ್ಟು ದಿನ ಎಂದು ಏಕವಚನದಲ್ಲೇ ತರಾಟೆಗೆ ತೆಗೆದುಕೊಂಡಿದ್ದರು. ಶಂಕುಸ್ಥಾಪನೆ ದಿನ ಈತ ಕೂಡ ವೇದಿಕೆ ಮೇಲೆ ಬಿಳಿ ವಸ್ತ್ರದಲ್ಲಿ ಮಿಂಚುತ್ತಿದ್ದ. ಇನ್ನು ತಮಿಳು ಕಾಲೋನಿ ವಾರ್ಡಿನ ಸುಕುಮಾರ್ ಕೂಡಾ ವೇದಿಕೆಯಲ್ಲಿ ಕಂಗೊಳಿಸುತ್ತಿದ್ದ. ತಾನು ಪ್ರತಿನಿಧಿಸುವ ತಮಿಳು ಕಾಲೋನಿ ಸಂಪೂರ್ಣ ಸುಟ್ಟು ಭಸ್ಮವಾಗಿ 8 ವರ್ಷ ಕಳೆದರೂ ಆ ಜನರ ಸಹಾಯಕ್ಕೆ ನಿಲ್ಲದ ಈತ ಹೇತ್ಲಾಂಡಿ ಗಿರಾಕಿ. ಸಂಘಟನೆ ಮುಖಂಡರು ಎದುರಿಗಿದ್ದಾಗ ನಿಮ್ಮ ಹೋರಾಟ ಸರಿ ಎನ್ನುವ ಸುಕುಮಾರ್, ಸಂಘಟನೆಯ ಸದಸ್ಯರು ಅತ್ತ ಹೋಗುತ್ತಿದ್ದಂತೆ ಅವರ ಮಾತು ಕೇಳಬೇಡಿ, ಅವರ ಜೊತೆ ಹೋದ್ರೆ ಮನೆ ಸಿಗಲ್ಲ ಅಂತೆಲ್ಲಾ ಜನರನ್ನು ಬೆದರಿಸುವ ಕಾಂಟ್ರಾಕ್ಟು ಹಿಡಿದಿದ್ದ. ಅಷ್ಟೇಕೆ, ಹೋರಾಟದ ಸಮಯದಲ್ಲಿ ತಮ್ಮ ಬೆಂಬಲಕ್ಕೆ ನಿಲ್ಲುವಂತೆ ಜನ ಈತನ ಮನೆಗೇ ಹೋಗಿ ಕೇಳಿದಾಗ ನಿಮ್ಮ ಸಹವಾಸ ಬೇಡ ಎಂಬರ್ಥದ ರಣಹೇಡಿ ಮಾತನ್ನಾಡಿದ್ದವನು ಅಂದು ವೇದಿಕೆ ಏರಿದ್ದ. ಇನ್ನು ಪಕ್ಕದ ವಾರ್ಡಿನ ಗುರುವಮ್ಮ ಕೂಡ ನರಸಮ್ಮನ ಅಪರಾವತಾರ. ಅವಳಂತೆಯೇ ಆಗಾಗ ಸಿದ್ದರಾಜು- ಅಮರಾವತಿ ಚಂದ್ರು ಬಣಕ್ಕೆ ನಿಷ್ಠೆ ಬದಲಾಯಿಸುವ ಇವರೆಲ್ಲಾ ಅದ್ಯಾವ ಮುಖವಿಟ್ಟುಕೊಂಡು ಮರ್ಯಾದೆಯಿಲ್ಲದೆ ವೇದಿಕೆಯಲ್ಲಿ ಕುಳಿತಿದ್ದರೋ ಅವರೇ ಹೇಳಬೇಕು.

ಅದೇನೇ ಇರಲಿ ಹೋರಾಟ, ಚಳವಳಿಗಳಲ್ಲಿ ನಂಬಿಕೆಗಳನ್ನೇ ಕಳೆದುಕೊಳ್ಳುತ್ತಿರುವ ಇವತ್ತಿನ ಸಂದರ್ಭಕ್ಕೆ ಹಾಲಹಳ್ಳಿ ಸ್ಲಂ ಜನರ ಹೋರಾಟ ಒಂದು ಪಾಠವಾಗುವುದಂತೂ ಸತ್ಯ.

■ ವರದಿಗಾರ

---

# ಸಿದ್ದಣ್ಣ ಇನ್ನು ಮೂರೊರ್ಷ ಇದ್ರು ನಮಿಗೇನ್ರಿ!

## ಥೂತ್ತೇರಿ

▶ ಯಾಹೂ



ಸಿದ್ದು ಸರ್ಕಾರದ ಎರಡು ವರ್ಷದ ಸಾಧನೆ ಬಗ್ಗೆ, ಸಿದ್ದು ಮನೆ ಸಮೀಪ ಆಡ್ತಾಡುತ್ತಿದ್ದ ಶೆಪರ್ಡ್‌ಗಳನ್ನ ಕೇಳಿದರೆ ಶಾನೆ ಕೆಂಡಮಂಡಲವಾದರಲ್ಲ. ಅವರ ಪ್ರಕಾರ "ಸಿದ್ದಣ್ಣ ಮುಖ್ಯಮಂತ್ರಿಯಾಗಿ ನಮಿಗೇನು ಮಾಡಿದರೀ? ಕುಮಾರಣ್ಣ ಅವರ ಜನಾಂಗದ ಎಂಟು ಜನಗಳ ಮಂತ್ರಿ ಮಾಡಿದ್ದ. ಯಡಿಯೂರಪ್ಪ ಹನ್ನೊಂದು ಜನ ಮಂತ್ರಿ ಮಾಡಿದ್ದ. ಇವನು ಯಾರನ್ನೂ ಮಾಡಿಲ್ಲ, ನಾವೆಲ್ಲಿಗೋಗಬೇಕು? ನಮ್ಮಲ್ಲೇ ಒಳ್ಳೆ ಲಾಯರಿದ್ರೂ ಆ ರವಿವರ್ಮನ್ನ ಅಡವೋಕೇಟ್ ಜನರಲ್ ಮಾಡಿದ. ನಮ್ಮಲ್ಲೇ ಒಳ್ಳೆ ಪತ್ರಕರ್ತರಿದ್ರೂ ಆ ದಿನೇಶ್ ಅಮ್ಮಿನಮಟ್ಟು ಅನ್ನೋನ್ನ ತಂದು ಬೆನ್ನ ಹಿಂದೆ ನಿಲ್ಲಿಸಿಕೊಂಡ. ಹೋಗ್ಲಿ ನಮ್ಮ ಕವಿ ಸಿದ್ದರಾಮಯ್ಯನಿಗಿಂತ ವಿದ್ವಾಂಸ ಬೇಕೆ? ಆ ಹನುಮಂತಯ್ಯನ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ತಂದ. ಆ ಜಂಬಗೆರೆ ಜಯಪ್ರಕಾಶ್‌ನಂಥೋರೆ ನಮ್ಮಲ್ಲೇ ಒಂದು ಡಜನ್ನವ್ರೆ. ನಿಜವಾಗ್ಲು ನಾವು ಸಿದ್ದರಾಮಯ್ಯನ ಭಾಗಕ್ಕೆ ಕುರಿಗಳು ಕಂಡ್ರೀ. ಕಂಬಳಿಯೆಲ್ಲ ಅವ್ರನ ಪಾಲಾಯ್ತು. ಚಿಟ್ಟೆಗೆ ಮನಿಕತ್ತನೆ. ಇಂಥೋನ್ನು ಇನ್ನ ಮೂರೊರುಷ್ಲ ಆರೊರುಸಿದ್ರು ನಮ್ಮ ಕತೆ ಇಷ್ಟೇ ನೋಡಿ. ಅದೇ ಕುಮಾರಣ್ಣನ ಮನೆತಕ್ಕೊದ್ರೇ "ಬನ್ನಿ ಬ್ರದರ್" ಅಂತ ಕೆನ್ನೆಗೆ ಮುತ್ತು ಕೊಡ್ತಾನೆ. ದೇವೇಗೌಡ್ರು ಕಂಕುಳಿಗೆ ಸಿಗಿಸಿಕೊಂಡು ಹಿಂಸುಕಿ ಕಳುಸ್ತಾರೆ. ಯಡಿಯೂರಪ್ಪ ಎಷ್ಟು ಜನಿದ್ರು ಕರೆದು ಮಾತಾಡುಸ್ತಾರೆ. ಅದೇ ಸಿದ್ದರಾಮಯ್ಯ ಸುಮ್ಮನೆ ನೋಡ್ತನೆ. ನಾವೇನಂತ ತಿಳಕೋಬೇಕು? ನಮಿಗೂ ಸಾಕಾಗಿದೆ ಕಂಡ್ರಿ" ಎಂದು ಶೆಪರ್ಡ್ ಭಾಷೆಯಲ್ಲಿ ಶಪಿಸುತ್ತಾ ಹೋದವಲ್ಲ, ಥೂತ್ತೇರಿ!

* **

ಮಕ್ಕಳು ಆಡುವ ಆಟಗಳಲ್ಲಿ ಬಿಜೆಪಿ ಬೆಳೆಯುವ ಅಂಶಗಳನ್ನು ಸೇರಿಸಬೇಕೆಂಬ ವಿಷಯ ಚೆಡ್ಡಿಗಳ ವಲಯದಲ್ಲಿ ವ್ಯಾಪಕವಾಗಿ ಚರ್ಚೆಯಾಯ್ತಂತಲ್ಲ, ಈಗಾಗಲೇ ಒಬ್ಬ ಔರಂಗಜೇಬ ಎಂದು ಓಡುವುದು, ಶಿವಾಜಿ ಎನ್ನುತ್ತಾ ಅವುರಂಗಿ ಜೇಬನನ್ನು ಚಚ್ಚುವುದು... ಇದನ್ನು ಚೆಡ್ಡಿ ಇಕ್ಕಿದ ಕಾಲದಿಂದಲೇ ನಡೆಸಿಕೊಂಡು ಬರಲಾಗುತ್ತಿದೆ. ಇಂತವೇ ಆಟಗಳನ್ನು ಶೋಧಿಸಬೇಕಲ್ಲಾ ಎಂದು ಚೆಡ್ಡಿಗಳು ಗಾಢವಾಗಿ ಚಿಂತಿಸುತ್ತಿರಬೇಕಾದರೆ, ಅತ್ತ ಶೃಂಗೇರಿ ಮಠದವರು ದೇವಸ್ಥಾನದ ಬಾಗಿಲಿನ ಹೊಸ್ತಿಲಿಗೇ ಮೂರು ಕಮಲಗಳನ್ನ ಬರೆಸಿ ಮಾಸದಂತೆ ಆಗಾಗ್ಗೆ ಬಣ್ಣ ಹೊಡೆಸುತ್ತಿವೆಯಂತಲ್ಲಾ, ಇದಲ್ಲವೆ ಸದ್ದಿಲ್ಲದೆ ಪಾರ್ಟಿ ಬೆಳೆಸುವ ಕೆಲಸ ಥೂ, ಥೂ, ಥೂತ್ತೇರಿ!!

* * *

ಬಿಜೆಪಿ ಬೆಳೆಸುವ ಆಟ ಆಟದ ಮೈದಾನಕ್ಕಿಂತ ಪಾರ್ಟಿ ಪವರಿಗೆ ಬಂದಾಗಲೇ ವ್ಯಾಪಕವಾಗಿ ಬೆಳೆಯಲಾರಂಭಿಸಿತಂತಲ್ಲ, ಉದಾಹರಣೆಗೆ, ಹಳೆಯ ಟೆಂಪೋ ಗಾಡಿಯಂತೆ ಕಾಣುವ ಅಶೋಕ ಸಾರಿಗೆ ಸಚಿವನಾದಾಗ 'ಅಟಲ್ ಸಾರಿಗೆ' ಎಂದು ಹೆಸರಿಟ್ಟ. ಕೆಟ್ಟ ಬಣ್ಣದ ಆ ಗಾಡಿ ಹುಟ್ಟು ಶೆಟ್ಟುಗಾಡಿಗಳಾಗಿ ಹೋದವು. ಇನ್ನ ಆರೋಗ್ಯ ಇಲಾಖೆ ಜವಾಬ್ದಾರಿ ಹೊತ್ತ ಅನಾರೋಗ್ಯ ಪೀಡಿತರು 'ಅಟಲ್ ಆರೋಗ್ಯ ಭಾಗ್ಯ' ಎಂದಿಟ್ಟರು. ಹತ್ತು ವರ್ಷದಿಂದ ಪ್ರಜ್ಞೆಯನ್ನೇ ಕಳೆದುಕೊಂಡು ಮಲಗಿರುವ ಅಟಲ್‌ಜಿ ಹೆಸರಿನಲ್ಲಿ ಟ್ರೀಟ್‌ಮೆಂಟ್ ಪಡೆಯಲು ಅಸಂಖ್ಯಾತ ಕಾಯಿಲೆಯಿಟ್ಟುಕೊಂಡವರೇ ಹೆದರುತ್ತಿದ್ದಾರಂತಲ್ಲಾ, ಥೂತ್ತೇರಿ!!

* * *


ಆಟದ ಮೈದಾನಕ್ಕೆ ಬಿಜೆಪಿ ಆಟ ತರುವುದಾದರೆ ಕೆಲವು ಆಟಗಳಿಗೆ ನಾವೂ ಹೆಸರು ಕೊಟ್ಟು ಬಿಜೆಪಿ ಆಟಗಾರರನ್ನ ಉತ್ತೇಜಿಸಬಹುದಲ್ಲ, ಅವುಗಳ ಸ್ಯಾಂಪಲ್ಲೆಂದರೆ ಆಯನೂರ್ ಮಂಜುನಾಥ್ ರನ್ನಿಂಗ್ ರೇಸ್, ಶೋಭಾ ಎಡೂರ್ ಕೊಕ್ಕೊ, ಈಶ್ವರಪ್ಪ ನೋಟು ಎಣಿಸುವ ಆಟ, ಸಿ.ಟಿ. ರವಿ ಸೀಮೆಎಣ್ಣೆ ಆಟ, ಅಶೋಕ್ ಟೈರಿನ ಆಟ, ರೆಡ್ಡಿಗುಂಡಿಯ ಆಟ, ಭಟ್ಟನ ಊಟದ ಆಟ, ಹಾಲಪ್ಪನ ಹಾಸಿಗೆ ಆಟ, ರಾಮದಾಸ್ ಸಾವಿನ ಆಟ, ಜಗದೀಶ್ ಶೆಟ್ಟರ್ ಸೈಟಿನ ಆಟ, ಪೇಜಾವರನ ಪಾದಯಾತ್ರೆ ಆಟ, ಸವದಿ ಮೊಬೈಲ್ ಆಟ, ರೇಣುಕಾ ಜಯ ಕಣ್ಣಾಮುಚ್ಚಾಲೆ ಆಟ... ಎಲ್ಲಾ ಮುಗಿದಮೇಲೆ ರಾಘವನ ರಾಮಕಥಾ ಭಜನೆ ಮಾಡಿ ಕಡೆಗೆ ಎದ್ದುನಿಂತು 'ನಮಸ್ತೇ ಸದಾ ವತ್ಸಲೇ ಮಾತೃ ಭೂಮಿ' ಎಂದರೆ ಎಂಥಾ ಮಜ ಏನು ಮಜ ಅಲ್ಲವೇ, ಥೂತ್ತೇರಿ!!

* * *

ತಮಿಳುನಾಡಿನ ಜಯಮ್ಮ ಖುಲ್ಲಂ ಖುಲಾಸೆಯಾದ ಸುದ್ದಿ ಕೇಳಿದ ಭಾರತದ ಸಾಮಾನ್ಯ ಪ್ರಜೆ ಬೆಚ್ಚಿಬಿದ್ದನಂತಲ್ಲ, ನಂತರ ಅವನ ಉದ್ಧಾರದಲ್ಲಿ ಭಾರತದ ನ್ಯಾಯಾಂಗ ಹಳ್ಳಿ ಜನಗಳ ಗೌಡಿಕೆ ನ್ಯಾಯಕ್ಕೆ ಇಳಿದಿದೆಯಲ್ಲಾ, ಗೌಡರ ಮಗ ಎಳನೀರು ಕದ್ದರೇ ಬಾಯಾರಿತ್ತು, ಹರಿಜನರವನು ಕದ್ದರೆ ಕಳ್ಳ ಕಂಬಕ್ಕೆ ಕಟ್ಟಿ ಹೊಡೆಯಿರಿ ಎನ್ನುವಂತೆ ಕಾಣುವ ಈ ನ್ಯಾಯಾಂಗವ್ಯವಸ್ಥೆ ಬಡವರಿಗೆ ಶಿಕ್ಷೆ ಕೊಡಲೋಸ್ಕರವೇ ಇರುವಂತೆ ಕಾಣುತ್ತಿದೆ ಎಂದರಂತಲ್ಲ, ಅದೆಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕದ ಜನರ ಕಣ್ಣಿಗೆ ಹೊಡೆದಂತೆ ಕಾಣುವ ಪ್ರಸಂಗ ದಾಖಲಿಸುವುದಾದರೆ, ಹರತಾಳು ಹಾಲಪ್ಪ ಹಾಸಿಗೆಯಲ್ಲೇ ಸಿಕ್ಕು ಬೇಲ್ ಪಡೆದ. ಲೈಂಗಿಕ ಕಿರುಕುಳದ ಆಪಾದನೆಗೆ ತರುಣ ತೇಜ್‌ಪಾಲ್ ಎಂಬ ಪತ್ರಕರ್ತ ಆರು ತಿಂಗಳು ಜೈಲಿನಲ್ಲಿದ್ದ. ಅಂತದೆ ಲೈಂಗಿಕ ಕಿರುಕುಳ ನೀಡಿದ ಎಂಬ ಕಾರಣಕ್ಕೆ ಚಿತ್ರದುರ್ಗದ ಲಂಬಾಣಿ ಸ್ವಾಮಿ ಒಂದೇ ದಿನವೆಂದು ಜೈಲಿಗೆ ಹೋದವರು ಇನ್ನೂ ಬಿಡುಗಡೆ ಕಂಡಿಲ್ಲ. ಅಂತದೇ ಇನ್ನೊಂದು ಸ್ವಾಮಿ, ಬರೋಬ್ಬರಿ ಶತಕದ ಸಮೀಪದವರೆಗೂ ಸಂಭೋಗ ಮಾಡಿ, ಸಿಕ್ಕಿಬಿದ್ದರೂ ಅರೆಸ್ಟಾಗಿಲ್ಲ. ಅವನನ್ನ ಕರೆಸಿ ವಿಚಾರಿಸಲು ಹೆದರಿದ ಐದು ಜನ ಜಡ್ಜುಗಳು ಪಂಚಪಾಂಡವರಂತೆ ಅಜ್ಞಾತವಾಸಕ್ಕೆ ತೆರಳಿದ್ದಾರಂತಲ್ಲಾ, ಥೂತ್ತೇರಿ!! ■

---

# ದೃಶ್ಯಮಾಧ್ಯಮಗಳಿಗೆ ಕಿಮ್ಮನೆ ಲಾತ




## ಒಂದು ಪತ್ರ


ಕಳೆದ ಸಂಚಿಕೆಯಲ್ಲಿ 'ಪಬ್ಲಿಕ್ ಟಿವಿ ರಂಗಣ್ಣನಿಗೆ ಬಹಿರಂಗ ಪತ್ರ'ದ ಮೂಲಕ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರರವರು ಕೇವಲ ಪಬ್ಲಿಕ್ ಟಿವಿಗೆ ಮಾತ್ರವಲ್ಲ, ಬಹುಪಾಲು ದೃಶ್ಯ ಮಾಧ್ಯಮಗಳಿಗೆ ಲಾತ ಕೊಟ್ಟಿದ್ದಾರೆ. ಸಾತ್ವಿಕ ಸ್ವಭಾವದ ವ್ಯಕ್ತಿಯೊಬ್ಬರು ಕೆರಳಿದರೆ ಅವರ ಪ್ರತಿಕ್ರಿಯೆ ಹೇಗಿರುತ್ತದೆ ಎನ್ನುವುದಕ್ಕೆ ಕಿಮ್ಮನೆಯವರ ಬಹಿರಂಗ ಪತ್ರ ಸಾಕ್ಷಿ. ದೃಶ್ಯ ಮಾಧ್ಯಮಗಳು ಹೇಗಿವೆ ಎಂದರೆ ರಾಜ್ಯದ ಯಾವುದೇ ಮೂಲೆಯಲ್ಲಿ ಯಾವುದೇ [illegible] ನಡೆಯಲಿ ಕೂಡಲೆ ಮುಖ್ಯಮಂತ್ರಿಗಳೇ ನೀವೇನು ಮಾಡುತ್ತಿದ್ದೀರಿ, ಆರೋಗ್ಯ ಸಚಿವರೇ ನೀವೆಲ್ಲಿ ಇದ್ದೀರಿ ಎಂದು [illegible] ಬೈಯುವ ಕಾರ್ಯ ನಡೆಯುತ್ತದೆ.


ಚೆಲ್‌ಬಂದಿ ಎಂಬ ಕಾರ್ಯಕ್ರಮವನ್ನು ರಾಧಾ ಹಿರೇಗೌಡ ಎಂಬ ಎಳಸು ಮಹಿಳೆ ನಡೆಸಿಕೊಡುವ ರೀತಿ ಮತ್ತು ಆ ಕಾರ್ಯಕ್ರಮದಲ್ಲಿ ವಿಚಾರಗಳ ವಿಶ್ಲೇಷಣೆ ಅವರ ಬುದ್ಧಿಮಟ್ಟವನ್ನು ಪ್ರದರ್ಶಿಸುತ್ತದೆ. ಡಿ.ಕೆ.ರವಿ ಸಾವಿನ ವೇಳೆಯಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಸಿಂಧೂರಿಯವರ ವಾಟ್ಸಾಪ್ ಸಂದೇಶಗಳು ಪ್ರಕಟಗೊಂಡಾಗ, ಅವರಿಗೆ ಮೈ ತೀರಾ ತುರಿಕೆಯಾಗಿತ್ತು, ಇದಕ್ಕಾಗಿಯೇ ಎರಡು ದಿನಗಳ ಕಾರ್ಯಕ್ರಮ ನಡೆಸಿ, ತಮ್ಮ ತೀಟೆ ತೀರಿಸಿಕೊಂಡು, ಮಧ್ಯದಲ್ಲಿ ವಕೀಲರೊಬ್ಬರು ಪ್ರಜಾವಾಣಿ ವಿಶ್ವಾಸರ್ಹ ಪತ್ರಿಕೆ ಎಂದಾಗ, ಈ ಒಂದು ವಿಚಾರದಲ್ಲಿ ಅಲ್ಲ ಎಂದು ಹೇಳುವ ಮೂಲಕ ತಮ್ಮ ಅಭಿಪ್ರಾಯವೇ ಅಂತಿಮವಾದ ಅಭಿಪ್ರಾಯ ಎಂದು ಹೇರುವ ಯತ್ನವನ್ನು ಮಾಡುತ್ತಿದ್ದಾರೆ ಎಂಬುದು ಖಚಿತ.

ಅದರಲ್ಲೂ ಪಬ್ಲಿಕ್ ಟಿವಿಯ ರಂಗನಾಥ್ ಅಂತೂ ತಾನೊಬ್ಬ ಸರ್ವಜ್ಞ, ಬೇರೆಯವರೆಲ್ಲರೂ ಮುಟ್ಠಾಳರು ಎನ್ನುವಂತೆ ಸುದ್ದಿ ವಿಶ್ಲೇಷಣೆಯನ್ನು ಭಯಂಕರವಾಗಿ ಮಾಡುತ್ತಾರೆ. ರಾಧ ಹಿರೇಗೌಡ ಮತ್ತು ಹರೀಶ್ ನಾಗರಾಜ್ ಎಂಬ ಸುದ್ದಿ ಓದುಗರು ನರ್ಸರಿ ವಿದ್ಯಾರ್ಥಿಗಳ ಶೈಲಿಯಲ್ಲಿ ಪ್ರಶ್ನೆ ಕೇಳುವುದು, ಅದಕ್ಕೆ ಉದ್ದಾಮ ಪಂಡಿತ ರಂಗಣ್ಣ ಉತ್ತರಿಸುವ ಶೈಲಿ ನೋಡಲು ಅಸಹ್ಯವಾಗಿರುತ್ತದೆ. ಈ ಸುದ್ದಿ ವಾಚನ ವೇಳೆಯಲ್ಲಿ ಸಚಿವರಾಗಲಿ, ಅಧಿಕಾರಿಗಳಾಗಲಿ ನೇರ ಸಂಪರ್ಕಕ್ಕೆ ಬಂದರೆ ನೀವು ಇದೇ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ರಂಗನಾಥ್ ಫರ್ಮಾನು ಹೊರಡಿಸುತ್ತಾರೆ. ಉತ್ತರಿಸುವವರು ಆಗಲಿ ಎಂದು ಗೋಣು ಅಲ್ಲಾಡಿಸುವುದು ಏಕೆ ಎಂಬುದು ತಿಳಿಯುವುದಿಲ್ಲ, ಈ ರೀತಿ ನಮಗೆ ಆದೇಶ ನೀಡಲು ನೀವು ಯಾರು? ನೀವು ಸರಕಾರ ನಡೆಸುತ್ತಿದ್ದೀರಾ ಎಂದು ಯಾರೂ ಪ್ರಶ್ನಿಸದಿರುವುದು ಅವರ ಉದ್ಧಟತನ ಉಲ್ಬಣಕ್ಕೆ ಕಾರಣ ಎಂದು ಹೇಳಬಹುದು. ಕಿಮ್ಮನೆ ರತ್ನಾಕರ ಮಾತ್ರವಲ್ಲ ಬಹಳಷ್ಟು ಸಚಿವರು ಮತ್ತು ಅಧಿಕಾರಿಗಳು ತಿರುಗಿ ಬಿದ್ದರೆ ಮಾತ್ರ ಅವರ ಈ ವರ್ತನೆ ಬದಲಾಗಬಹುದೇನೋ? ಬಹುತೇಕ ರಾಜಕಾರಣಿಗಳು ರಾಜಕೀಯ ಲಾಭಕ್ಕಾಗಿ ಮಾಧ್ಯಮದವರನ್ನು ಎದುರು ಹಾಕಿಕೊಳ್ಳುವುದಿಲ್ಲ, ಅದರ ಅತಿರೇಕವಾದರೆ, ಕಿಮ್ಮನೆಯಂತಹ ಸೌಮ್ಯ ಸ್ವಭಾವದವರು ತಿರುಗಿ ಬೀಳುತ್ತಾರೆ.

-ಬಿ.ಎನ್. ಮನು [illegible], [illegible]







# ಕಪ್ಪು ಆರ್ಥಿಕತೆಯ ಕರಾಳ ಮುಖ

ಚುನಾವಣಾ ಪ್ರಚಾರದ ಸಂದರ್ಭದಲ್ಲಿ 'ಕಪ್ಪು ಹಣ'ವನ್ನು ವಾಪಸ್ ತಂದು ದೇಶ ಉದ್ಧಾರ ಮಾಡುತ್ತೇನೆಂದು ದೇಶದ ತುಂಬಾ ಬೊಂಬಡಾ ಬಜಾಯಿಸಿದ್ದ ನರೇಂದ್ರ ಮೋದಿ ಪ್ರಧಾನಿಯಾದ ನಂತರ ಕಪ್ಪು ಹಣದ ಬಗ್ಗೆ ಬಾಯೇ ಬಿಚ್ಚುತ್ತಿಲ್ಲ. ವಿಪರ್ಯಾಸ ಏನೆಂದರೆ ಈ 'ಕಪ್ಪು ಹಣ'ದ ಬಗ್ಗೆ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಲು ಮತ್ತು ಮೋದಿಯ ಭಾಷಣಕ್ಕಾಗಿ ಆಯೋಜಿಸಿದ್ದ ಭಾರೀ ಬಹಿರಂಗ ಸಭೆಗಳು ಎಲ್ಲವೂ ನಡೆದದ್ದು ಕಪ್ಪುಹಣದಿಂದಲೇ! ಕೊನೆಗೆ ಮತದಾರರಿಗೆ ಹಂಚಿದ ಹಣ, ಹೆಂಡ ಎಲ್ಲವೂ ಕಪ್ಪು ಹಣದಿಂದಲೇ!!

ತಮ್ಮ ನೆಚ್ಚಿನ ಅಭ್ಯರ್ಥಿ ಮೋದಿಯನ್ನು ಪ್ರಧಾನಿ ಮಾಡಲು ಈ ದೇಶದ ಪ್ರಮುಖ ಕಾರ್ಪೊರೇಟ್ ಶಕ್ತಿಗಳು ಸಾವಿರಾರು ಕೋಟಿ ಕಪ್ಪುಹಣವನ್ನು ಹರಿಸಿದ್ದವು. ಇಂಥಾ ಕಪ್ಪು ಹಣದ ವೇದಿಕೆಗಳ ಮೇಲೆ ಕುಳಿತು ಕಾಂಗ್ರೆಸ್ ಪಾರ್ಟಿಯನ್ನು ಟಾರ್ಗೆಟ್ ಮಾಡಿ ಭರ್ಜರಿ ಭಾಷಣ ಮಾಡಿದ್ದು ಜನರನ್ನು ಯಾಮಾರಿಸಿ, ಓಟು ಗಿಟ್ಟಿಸಲಿಕ್ಕಾಗಿ ಮಾತ್ರ ಎಂಬುದು ಈಗ ಗುಟ್ಟಾಗಿ ಉಳಿದಿಲ್ಲ.

ಮೋದಿ ಮತ್ತು ಪಟಾಲಂ ಕಪ್ಪು ಹಣದ ಬಗ್ಗೆ ಭಾರೀ ಪ್ರಚಾರ ಕೈಗೊಂಡಿದ್ದರ ಹಿಂದೆ ಮತ್ತೊಂದು ಭಾರೀ ಷಡ್ಯಂತ್ರವೂ ಇದೆ. ಈ ದೇಶವನ್ನು ಹಿಂಡಿ ಹಿಪ್ಪೆ ಮಾಡುತ್ತಿರುವ ಕರಾಳ ಕಪ್ಪು ಆರ್ಥಿಕತೆಯನ್ನು ಮರೆ ಮಾಚಿ, 'ಕಾಂಗ್ರೆಸ್‌ನವರ ಕಪ್ಪು ಹಣ'ದ ಹೆಸರಿನಲ್ಲಿ ಜನರನ್ನು ದಿಕ್ಕುತಪ್ಪಿಸುವುದೇ ಈ ಷಡ್ಯಂತ್ರ!

ಹೌದು, ಬ್ಲಾಕ್ ಮನಿ ಎಂಬುದು ಈ ದೇಶವನ್ನು ಉದ್ದಗಲಕ್ಕೂ ಆಕ್ರಮಿಸಿಕೊಂಡಿರುವ ಕರಾಳ ಕಪ್ಪು ಆರ್ಥಿಕತೆಯ ಕೇವಲ ಒಂದು ಸಣ್ಣ ಅಂಶ ಮಾತ್ರ.

ಮೋದಿ ಪ್ರಧಾನಿಯಾದ ನಂತರ ಹೊಸದೊಂದು ಆರ್ಥಿಕ ಪರಿಕಲ್ಪನೆಯನ್ನು ಚಲಾವಣೆಗೆ ಬಿಟ್ಟಿದ್ದಾರೆ. ಅದು 'ಮೇಕ್ ಇನ್ ಇಂಡಿಯಾ' ಎಂಬ ಘೋಷಣೆ. ಭಾರತದಲ್ಲಿ ತಯಾರು ಮಾಡಿ ಎಂಬುದು ಜಾಗತಿಕ ಹೂಡಿಕೆದಾರರಿಗೆ ಮೋದಿ ಕೊಟ್ಟಿರುವ ಕರೆ. ಈ ಉದ್ದೇಶವನ್ನು ಸಾಕಾರಗೊಳಿಸಲಿಕ್ಕಾಗಿ ಮೋದಿ ಹತ್ತಾರು ದೇಶಗಳನ್ನು ಈಗಾಗಲೇ ಸುತ್ತಿ ಅದ್ದೂರಿ ಪ್ರಚಾರ ಮಾಡಿದ್ದಾರೆ. ಕಾರ್ಪೊರೇಟ್ ಹಿಡಿತದಲ್ಲಿರುವ ಭಾರತದ ಮಾಧ್ಯಮಗಳು ಮೋದಿಯ ಒಂದೊಂದು ಪ್ರವಾಸಕ್ಕೂ ರೆಕ್ಕೆಪುಕ್ಕ ಕಟ್ಟಿ, ಬಣ್ಣ ಹಚ್ಚುವ ತಮ್ಮ ಕಲೆಯನ್ನು ಪ್ರದರ್ಶನಕ್ಕಿಟ್ಟಿವೆ.

ಪ್ರಧಾನಿಯ ಪ್ರವಾಸಗಳಲ್ಲಿ ಕೆಲವು ವಿಶೇಷ ಗಮನ ಸೆಳೆಯುತ್ತವೆ.

## ಮೋದಿಯ ಸ್ಪೆಷಲ್ ಟೂರ್!

ಈ ಪ್ರವಾಸಗಳ ನಡುವೆ ಇದೇ ಮಾರ್ಚ್ ತಿಂಗಳಲ್ಲಿ ಮೋದಿ ನಡೆಸಿದ ಎರಡು ದೇಶಗಳ ಪ್ರವಾಸ ಬಹಳ ವಿಶೇಷವಾದದ್ದು. ಒಂದನೆಯದು, ಮಾರ್ಚ್ 10ನೇ ತಾರೀಕು ಸೀಷೆಲ್ಸ್ ಪ್ರವಾಸ, 11 ಮತ್ತು 12ನೇ ತಾರೀಕು ಮಾರಿಷಸ್ ಪ್ರವಾಸ. ಮಾರಿಷಸ್ ಎಂಬ ಹೆಸರು ವಿದೇಶಿ ಪ್ರವಾಸ ಇತ್ಯಾದಿ ಕಾರಣಗಳಿಗೆ ಭಾರತದಲ್ಲಿ ಆಗೊಮ್ಮೆ ಈಗೊಮ್ಮೆ ಕೇಳಿಬರುತ್ತದೆ. ಆದರೆ ಈ ಸೀಷೆಲ್ಸ್ ಹೆಸರನ್ನು ಕೇಳಿದವರೇ ವಿರಳ.

ಹೀಗಾಗಿ ಈ ದೇಶದ ಬಗ್ಗೆ ಒಂದಷ್ಟು ಮಾಹಿತಿ ನೀಡುವುದು ಒಳ್ಳೆಯದು.

ಸೀಷೆಲ್ಸ್ ಎಂಬುದು ಆಫ್ರಿಕಾ ಖಂಡಕ್ಕೆ ಹೊಂದಿಕೊಂಡಂತೆ ಹಿಂದೂ ಮಹಾಸಾಗರದಲ್ಲಿರುವ ಒಂದು ಪುಟ್ಟ ದ್ವೀಪ ರಾಷ್ಟ್ರ. ಇದರ ಜನಸಂಖ್ಯೆ ಇಡೀ ಆಫ್ರಿಕಾ ಖಂಡದಲ್ಲೇ ಅತಿ ಕಡಿಮೆ. ಅಂದರೆ ಎಷ್ಟು ಗೊತ್ತೆ? ಕೇವಲ 90,024! ನಮ್ಮ ದೇಶದ ಬಹುಪಾಲು ತಾಲೂಕು



ಕೇಂದ್ರಗಳು ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿವೆ ಎಂಬುದನ್ನು ನೆನಪಿಟ್ಟುಕೊಳ್ಳಿ.

ಈ ದೇಶದ ಒಟ್ಟು ವಿಸ್ತೀರ್ಣ 459 ಚ ಕಿಮೀ. ಅಂದರೆ ಸುಮಾರು 21 ಕಿ.ಮೀ ಉದ್ದ ಮತ್ತು 21 ಕಿ.ಮೀ ಅಗಲದಷ್ಟು. ಇದರ ರಾಜಧಾನಿ ವಿಕ್ಟೋರಿಯಾ ನಗರ (ನಗರ ಎನ್ನಬೇಕೋ ಬೇಡವೋ ಗೊತ್ತಿಲ್ಲ) ಜನಸಂಖ್ಯೆ ಕೇವಲ 24,970! ನಮ್ಮಲ್ಲಿ ಕೆಲವು ದೊಡ್ಡ ಹಳ್ಳಿಗಳ ಅಥವ ಪಂಚಾಯ್ತಿ ಕೇಂದ್ರಗಳ ಜನಸಂಖ್ಯೆಯಷ್ಟು.

ಇಂಥಾ ದೇಶವನ್ನು ಹುಡುಕಿಕೊಂಡು ಹೋದ ನಮ್ಮ ಪ್ರಧಾನಿಯನ್ನು ಸೀಷೆಲ್ಸ್‌ನ ಅಧ್ಯಕ್ಷರು ಆದರದಿಂದ ಬರಮಾಡಿಕೊಂಡರು. ಅಲ್ಲೂ ಭಾಷಣ ಕುಟ್ಟಿದ ಮೋದಿ "ಎರಡೂ ದೇಶಗಳ ನಡುವಿನ ಸಂಬಂಧ ಬಹಳ ಮಹತ್ವದ್ದು. ನಮ್ಮ ನಡುವಿನ ಆರ್ಥಿಕ ಸಂಬಂಧ ವ್ಯೂಹಾತ್ಮಕವಾದುದು. ಅದನ್ನು ಇನ್ನಷ್ಟು ಗಟ್ಟಿಗೊಳಿಸಬೇಕು" ಇತ್ಯಾದಿಯಾಗಿ ಬಣ್ಣಿಸಿದರು. ಒಂದು ತಾಲೂಕು ಪಂಚಾಯ್ತಿಯಷ್ಟಿರುವ ದೇಶದೊಂದಿಗೆ ಅಂಥಾ ವ್ಯೂಹಾತ್ಮಕ ಆರ್ಥಿಕ ವ್ಯವಹಾರ ಏನಿರಬಹುದು?

ಆ ವ್ಯವಹಾರದ ವಿವರಗಳಿಗೆ ಹೋಗುವ ಮುಂಚೆ ಪ್ರಧಾನಿಯ ಮರುದಿನದ ಮಾರಿಷಸ್ ಪ್ರವಾಸದ ಬಗ್ಗೆಯೂ ಸ್ವಲ್ಪ ಗಮನ ಹರಿಸೋಣ.

ಆಫ್ರಿಕಾ ಖಂಡದ ಪೂರ್ವಭಾಗದಲ್ಲಿ ಹಾಗೂ ಏಷ್ಯಾ ಖಂಡದ ಪಶ್ಚಿಮ ಭಾಗದಲ್ಲಿ ಈ ದ್ವೀಪ ರಾಷ್ಟ್ರವಿದೆ. ಇದರ ಜನಸಂಖ್ಯೆ 13 ಲಕ್ಷ. ಇದರ ರಾಜಧಾನಿ ಪೋರ್ಟ್ ಲೂಯಿಸ್‌ನ ಜನಸಂಖ್ಯೆ ಸುಮಾರು ಒಂದು ಲಕ್ಷಕ್ಕೂ ಸ್ವಲ್ಪ ಹೆಚ್ಚು. ಇದರ ವಿಸ್ತೀರ್ಣ 2040 ಚದರ ಕಿಮೀಗಳು. ಅಂದರೆ ಸುಮಾರು 45 ಕಿಮೀ ಉದ್ದ ಹಾಗೂ 45 ಕಿಮೀ ಅಗಲದಷ್ಟು. ಇಲ್ಲಿನ ಜನಸಂಖ್ಯೆಯ ಸುಮಾರು 60ಕ್ಕಿಂತಲೂ ಹೆಚ್ಚಿನವರು ಭಾರತ ಮೂಲದವರು.

ಮಾರ್ಚ್ 12ರಂದು ಮಾರಿಷಸ್‌ನ ಸ್ವಾತಂತ್ರ್ಯ ದಿನಾಚರಣೆ. ಈ ಬಾರಿ ಸ್ವಾತಂತ್ರ್ಯ ಉತ್ಸವಕ್ಕೆ ನರೇಂದ್ರ ಮೋದಿಯೇ ಮುಖ್ಯ ಅತಿಥಿ. ಮಾಮೂಲಿಯಂತೆ ಭಾಷಣ ವೀರ ಮೋದಿ ಭರ್ಜರಿ ಭಾಷಣ ಮಾಡಿದರು. ಎರಡೂ ದೇಶಗಳ ನಡುವಿನ ಬಾಂಧವ್ಯ ಮತ್ತಷ್ಟು ಗಟ್ಟಿಗೊಳ್ಳಬೇಕು ಎಂದರು, ಪರಸ್ಪರ ಆರ್ಥಿಕ ಸಹಕಾರ ಇನ್ನಷ್ಟು ಸುಗಮವಾಗಬೇಕೆಂದರು.

ಈ ಸೀಷೆಲ್ಸ್, ಮಾರಿಷಸ್‌ಗಳಿಗೂ ನಮ್ಮ ಆರ್ಥಿಕತೆಗೂ ಎತ್ತಣಿಂದೆತ್ತಣ ಸಂಬಂಧ? ಇಡೀ ಮಾರಿಷಸ್ ದೇಶ ಅತ್ಯಂತ ಕಡಿಮೆ ಜನಸಂಖ್ಯೆ ಹೊಂದಿರುವ ನಮ್ಮ ಕೊಡಗು ಜಿಲ್ಲೆಯಷ್ಟೂ ಇಲ್ಲ. ಇನ್ನೂ ಸೀಷೆಲ್ಸ್ ಅಂತೂ ಕೇಳುವುದೇ ಬೇಡ. ಇಡೀ ದೇಶವೇ ಒಂದು ತಾಲೂಕಿನಷ್ಟು. ಹೀಗಿರುವಾಗ ಪ್ರಪಂಚದ ಅತಿ ದೊಡ್ಡ ಪ್ರಜಾತಂತ್ರ ದೇಶದ ಆರ್ಥಿಕತೆಗೂ ಈ ಪುಟ್ಟ ರಾಷ್ಟ್ರಗಳಿಗೂ ಎಂಥ ಘನ ವ್ಯವಹಾರವಿದ್ದಿರಬಹುದು? ಇದ್ದರೂ ಅದಕ್ಕೆ 120 ಕೋಟಿ ಜನರ ಈ ಬೃಹತ್ ದೇಶಕ್ಕೆ ಎಷ್ಟು ಮಹತ್ವವಿರಬಹುದು? ಇಂಥಾ ಪ್ರಶ್ನೆಗಳು ದುತ್ತನೆ ಎದುರಾಗುತ್ತವೆ.

ಈ ಪುಟ್ಟ ದೇಶಗಳೊಂದಿಗಿನ ಆರ್ಥಿಕ ವ್ಯವಹಾರ ಕಟ್ಟಿಕೊಂಡು ನಮ್ಮ ದೇಶದ 120 ಕೋಟಿ ಜನರಿಗೆ ಏನೂ ಆಗಬೇಕಾದ್ದಿಲ್ಲ. ಆದರೆ ಪ್ರಧಾನಿ ಪಟ್ಟದ ಸುತ್ತ ನೆರೆದಿರುವ ಕಾರ್ಪೊರೇಟ್ ಖದೀಮರಿಗೆ, ಕಾಳ ಸಂತೆಕೋರರಿಗೆ ಈ ಪುಟ್ಟ ದೇಶಗಳೊಂದಿಗಿನ ವ್ಯವಹಾರ ಬಹಳ ಪ್ರಾಮುಖ್ಯತೆ ಪಡೆದುಕೊಂಡಿದೆ.

## ಕಳ್ಳ ಹಣಕ್ಕೆ ಕೆಂಪುಹಾಸಿನ ಸ್ವಾಗತ!

ಇಷ್ಟು ಹೇಳಿದರೆ ನಮ್ಮ ಆರ್ಥಿಕತೆಗೂ ಈ ಸೀಷೆಲ್ಸ್, ಮಾರಿಷಸ್‌ಗಳಿಗೂ ಎಂಥಾ ಸಂಬಂಧವಿದೆ ಎಂಬ ಒಗಟು ಬಗೆಹರಿಯುವುದಿಲ್ಲ. ಈ ಒಗಟನ್ನು ಬಿಡಿಸಲು ಕೆಲವೊಂದು ಅಂಕಿಅಂಶಗಳತ್ತ ಗಮನ ಹರಿಸುವುದು ಒಳ್ಳೆಯದು.

ಇತ್ತೀಚೆಗೆ ಮೋದಿ 'ಮೇಕ್ ಇನ್ ಇಂಡಿಯಾ, ಮೇಕ್ ಇನ್ ಇಂಡಿಯಾ' ಅಂತಾ ಬೊಬ್ಬೆ ಹಾಕುತ್ತಾ ವಿದೇಶಿ ಬಂಡವಾಳವನ್ನು ತರಲು ನಾನಾ ದೇಶಗಳನ್ನು ಸುತ್ತಿ ಭಾರೀ 'ಕಷ್ಟ' ಪಡುತ್ತಿದ್ದಾರೆ. ಕಷ್ಟ ಪಡಲಿ ಬಿಡಿ, ಅದರಿಂದ ದೇಶಕ್ಕೆ ಏನಾಗುತ್ತೋ ಗೊತ್ತಿಲ್ಲ, ಮೋದಿಗಾದರೂ ಒಳ್ಳೇದಾಗಲಿ.

ಮೊದಲಿಗೆ ಇದುವರೆಗೂ ನಮ್ಮ ದೇಶಕ್ಕೆ ಹರಿದುಬಂದ ವಿದೇಶಿ ಬಂಡವಾಳದ ಬಗ್ಗೆ ಸ್ವಲ್ಪ ನೋಡೋಣ. ಕಳೆದ ಹತ್ತು ವರ್ಷಗಳಲ್ಲಿ ಭಾರತ ದೇಶಕ್ಕೆ ಯಾವ ದೇಶದಿಂದ ಅತಿ ಹೆಚ್ಚಿನ ವಿದೇಶಿ ಬಂಡವಾಳ ಹರಿದುಬಂದಿದೆ ಎಂದು ಯಾರಾದರೂ ಕೇಳಿದರೆ, ತಕ್ಷಣ ನಮಗೆ ಅಮೆರಿಕ ನೆನಪಾಗುತ್ತದೆ. ಅದು ತಪ್ಪು ಉತ್ತರ ಎಂದರೆ ಇಂಗ್ಲೆಂಡೋ, ಜರ್ಮನಿಯೋ ಅಥವ ಚೀನಾ ದೇಶವೋ ಇರಬಹುದೆಂದು ಊಹಿಸುವುದು ಸಹಜ. ಆದರೆ ನಮ್ಮ ಊಹೆ ತಪ್ಪು, ಕಳೆದ ಹತ್ತು ವರ್ಷಗಳಲ್ಲಿ ನಮ್ಮ ದೇಶಕ್ಕೆ ಹರಿದುಬಂ[ದ] ಬಂಡವಾಳದ ಶೇ. 40ರಷ್ಟು ಮೊತ್ತ ಮಾರಿಷಸ್ ಎಂ[ಬ] ಪುಟ್ಟ ದೇಶದಿಂದ ಬಂದಿದೆ. ಎರಡನೇ ಸ್ಥಾನದ[ಲ್ಲಿ] ಸಿಂಗಾಪುರ್ ಮುಂತಾದ ದೇಶಗಳಿವೆ. ಇನ್ನೂ ಅಮೆರಿ[ಕ,] ಇಂಗ್ಲೆಂಡ್ ಮುಂತಾದ ಶ್ರೀಮಂತ ದೇಶಗಳಿಂದ ಬಂ[ದ] ಬಂಡವಾಳ ಶೇ. 10ಕ್ಕಿಂತಲೂ ಕಡಿಮೆ!

ಇದು ಹೇಗೆ ಸಾಧ್ಯ ಎಂದು ಆಶ್ಚರ್ಯವೆನಿಸುತ್ತಿ[ದೆ] ಅಲ್ಲವೆ? ಮೋದಿಯನ್ನು ಪ್ರಧಾನಿ ಮಾಡಲು ಸಾವಿರಾರ[ು] ಕೋಟಿ ಹರಿಸಿದ ಕಾರ್ಪೊರೇಟ್ ಧಣಿಗಳ ಮಸಲತ್[ತು] ಅಡಗಿರುವುದೇ ಇಲ್ಲಿ.

## ರೌಂಡ್ ಟ್ರಿಪ್ಪಿಂಗ್ ಎಂಬ ದೇಶದ್ರೋಹಿ ದಂಧೆ!

ಅನಾದಿಕಾಲದಿಂದಲೂ ಈ ದೇಶದ ಆರ್ಥಿಕತೆಯ ಚುಕ್ಕಾಣಿ ಹಿಡಿದಿರುವ ಕಾರ್ಪೊರೇಟ್ ಕುಳಗಳು, ಭ್ರ[ಷ್ಟ] ರಾಜಕಾರಣಿಗಳು ಹಾಗೂ ಉನ್ನತ ಅಧಿಕಾರಿಗಳ ತ್ರಿವಳಿಕೂ[ಟ] ಉದಾರೀಕರಣ ನೀತಿಗಳು ಬಂದನಂತರ ಒಂದು ವಿನೂತ[ನ] ವಿಧಾನವನ್ನು ಆವಿಷ್ಕಾರ ಮಾಡಿವೆ. ನಮ್ಮ ದೇಶದ[ಲ್ಲಿ] ನಾನಾ ಮಾರ್ಗಗಳಿಂದ ಗಳಿಸಿದ ಹಣವನ್ನು ಬೇರೆ ದೇಶಗಳಿ[ಗೆ] ಸಾಗಿಸಿ, ಅದಕ್ಕೆ ವಿದೇಶಿ ಮುಖವಾಡ ತೊಡಿಸುವುದು[,] ನಂತರ ಅದನ್ನು 'ವಿದೇಶಿ ನೇರ ಹೂಡಿಕೆ'ಯ ಹೆಸರಿನ[ಲ್ಲಿ] ರಾಜಮಾರ್ಗದಲ್ಲಿ, ರಾಜ ಮರ್ಯಾದೆಯೊಂದಿಗೆ ಭಾರತ ದೇಶ[ಕ್ಕೆ] ತಂದು ತಮಗೆ ಬೇಕೆನಿಸಿದ ಉದ್ದಿಮೆಗಳಲ್ಲಿ, ವ್ಯಾಪಾರಗಳ[ಲ್ಲಿ] ತೊಡಗಿಸುವುದು. ಈ ದಂಧೆಯಲ್ಲಿ ತೊಡಗಿರುವವರ[ು] ಕೇವಲ ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಿಗಳ[ು] ಮಾತ್ರವಲ್ಲ, ಈ ದೇಶದ ಆರ್ಥಿಕತೆಯನ್ನು ತಮ[್ಮ] ಮುಷ್ಟಿಯಲ್ಲಿಟ್ಟುಕೊಂಡಿರುವ ಅಂಬಾನಿ, ಟಾಟಾ, ಬಿರ್ಲಾ[,] ಅದಾನಿ, ಎಸ್ಸಾರ್‌ನಂತಹ ಕಾರ್ಪೊರೇಟ್ ಕುಳಗಳೇ ಈ ಧಂಧೆಯ ಪ್ರಮುಖ ಪಾತ್ರಧಾರಿಗಳು!

ಈ ಉದ್ದೇಶಕ್ಕಾಗಿ ತೆರಿಗೆ ಸ್ವರ್ಗಗಳು ಎಂದ[ು] ಕುಖ್ಯಾತವಾಗಿರುವ ಹತ್ತಾರು ದೇಶಗಳನ[್ನು] ಬಳಸಿಕೊಳ್ಳಲಾಗುತ್ತದೆ. ಇದಕ್ಕೆ ಕಾನೂನಿನ ಮಾನ್ಯ[ತೆ] ತಂದುಕೊಳ್ಳಲು 'ದುಪ್ಪಟ್ಟು ತೆರಿಗೆ ವಿಧಿಸುವುದನ[್ನು] ತಡೆಗಟ್ಟುವ ಒಪ್ಪಂದ-ಡಿಟಿಎಟಿ' ಎಂಬ ಒಪ್ಪಂದವನ[್ನು] ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ.

## ಏನಿದು ಡಿಟಿಎಟಿ?

ವಾಸ್ತವದಲ್ಲಿ ಈ ಡಿಟಿಎಟಿಯ ಉದ್ದೇಶ ಹೀಗಿ[ದೆ:] ಒಂದು ದೇಶದ ಪ್ರಜೆಗಳು ಬೇರೊಂದು ದೇಶದ[ಲ್ಲಿ] ವಾಸಿಸುತ್ತಿದ್ದು ಅಲ್ಲಿ ವ್ಯಾಪಾರ, ಉದ್ಯೋಗಗಳ ಮೂಲ[ಕ] ಗಳಿಸಿದ ಹಣಕ್ಕೆ ಅನ್ವಯವಾಗುವ ತೆರಿಗೆಯನ್ನು ಆ ದೇಶದ[ಲ್ಲಿ] ಪಾವತಿ ಮಾಡಿರುತ್ತಾರೆ. ಅಂಥವರು ಮರಳಿ ತಮ್ಮ ದೇಶ[ಕ್ಕೆ] ಆ ಹಣವನ್ನು ತಂದಾಗ ಮತ್ತೆ ಮೂಲ ದೇಶದಲ್ಲಿ ತೆರಿ[ಗೆ] ವಿಧಿಸಿದರೆ ಆ ಹಣಕ್ಕೆ ಎರಡೆರಡು ಬಾರಿ ತೆರಿ[ಗೆ] ವಿಧಿಸಿದಂತಾಗುತ್ತದೆ. ಇಂಥಾ ದುಪ್ಪಟ್ಟು ತೆರಿಗೆಯನ[್ನು] ತಡೆಗಟ್ಟಲು ಮಾಡಿಕೊಂಡಿರುವ ಒಪ್ಪಂದವೇ ಈ ಡಿಟಿಎ[ಟಿ.] ಇದನ್ನೇ ವಿಸ್ತರಿಸಿ ಒಂದು ದೇಶದಲ್ಲಿ ನೋಂದಣಿಯಾಗಿರು[ವ] ಕಂಪನಿ ಮತ್ತೊಂದು ದೇಶದಲ್ಲಿ ಬಂಡವಾಳ ಹೂ[ಡಿ] ಲಾಭ ಮಾಡಿದರೆ ಅಂಥಾ ಬಂಡವಾಳದ ಮೇಲಾಗ[ಲಿ,] ಲಾಭದ ಮೇಲಾಗಲಿ ತೆರಿಗೆ ವಿಧಿಸುವಂತಿಲ್ಲ ಎಂ[ಬ] ಅಂಶಗಳನ್ನು ಸೇರ್ಪಡೆ ಮಾಡಲಾಗಿದೆ.

ಇಂಥಾ ಡಿಟಿಎಟಿ ಒಪ್ಪಂದ ಈಗ ಹಾಲಿ ಮಾರಿಷ[ಸ್,] ಸಿಂಗಾಪುರ್, ಜರ್ಸಿ, ಸೀಷೆಲ್ಸ್, ಬ್ರಿಟಿಷ್ ವರ್ಜಿ[ನ್] ಐಲ್ಯಾಂಡ್ಸ್, ಸಿಪ್ರಸ್, ಹಾಂಗ್‌ಕಾಂಗ್, ಕೇಮನ್ ಐಲ್ಯಾಂಡ್[ಸ್] ಮುಂತಾದ ಹಲವು ದೇಶಗಳೊಂದಿಗೆ ಚಾಲ್ತಿಯಲ್ಲಿ[ದೆ.] ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಿರು[ವ] ಕಾರ್ಪೊರೇಟ್‌ಗಳು ಒಂದು ಕಡೆ ನಮ್ಮ ದೇಶದ

ಬೇಕಾದ ತೆರಿಗೆಯನ್ನು ವಂಚಿಸುತ್ತಿದ್ದಾರೆ. ಮತ್ತೊಂದು ನಾ ಕಳ್ಳಮಾರ್ಗಗಳ ಮೂಲಕ ಗಳಿಸಿದ ಕಪ್ಪುಹಣಕ್ಕೆ ದೇಶಿ ಹಣದ ಹೆಸರಿನಲ್ಲಿ ರಾಜಗೌರವ ಲಭಿಸುವಂತೆ ತ್ತಿದ್ದಾರೆ.

## ಾರಿಷಸ್‌ನ ಉದಾಹರಣೆ ನೋಡಿ

ಾರಿಷಸ್‌ನ ರಾಜಧಾನಿ ಪೋರ್ಟ್ ಲೂಯಿಸ್‌ನಲ್ಲಿ ಕೆತಡ್ರಲ್ ಸ್ಕೇರ್ ಎಂಬ ಬಹುಮಹಡಿ ವೊಂದಿದೆ. ಈ ಕಟ್ಟಡವೊಂದರಲ್ಲೇ ಮಾರಿಷಸ್ ದ ವಿವಿಧ ಇಲಾಖೆಗಳ ಕಚೇರಿಗಳಿವೆ. ಅಲ್ಲದೆ ಆಜುಬಾಜಿನಲ್ಲೇ ನೂರಾರು ಬೇನಾಮಿ ಕಂಪನಿಗಳ ಗಳೂ ಇವೆ. ಕಪ್ಪುಹಣವನ್ನು ಬಿಳುಪು ಮಾಡಿ ವಾಪಸ್ ಕಳಿಸುವ ದಂಧೆ ಇಲ್ಲಿ ಅವ್ಯಾಹತವಾಗಿ

ಲ್ಲಿ ಹೊಸದಾಗಿ ಕಂಪನಿ ಸ್ಥಾಪಿಸುವವರು ಬೇಕಾದ್ದಿಷ್ಟು. 10 ಅಡಿ ಉದ್ದ 10 ಅಡಿ ಅಗಲದ ಕಚೇರಿ ಜಾಗವನ್ನು ಖರೀದಿಸುವುದು, ಅದಕ್ಕೆ ಬೋರ್ಡ್ ನೇತು ಹಾಕುವುದು, ಜೊತೆಗೆ ಒಂದು ಮತ್ತು ಫೋನ್ ನಂಬರ್ ಇದ್ದರೆ ಸಾಕು, ಕಂಪನಿ ರ್ ಆಗಿಬಿಡುತ್ತದೆ. ಅಲ್ಲಿನ ಸರ್ಕಾರಕ್ಕೆ ಒಂದಷ್ಟು ೂಪದ ಶುಲ್ಕ, ಅಧಿಕಾರಿಗಳಿಗೆ ಒಂದಷ್ಟು ಲಂಚ ರೆ ಅಲ್ಲಿಗೆ ಎಲ್ಲವೂ ಮುಗಿದುಹೋದಂತೆಯೇ. ಯಲ್ಲಿ ಯಾರೂ ಕುಳಿತುಕೊಳ್ಳಬೇಕಾದ ರ್ಯತೆಯೂ ಇರೋದಿಲ್ಲ. ಇದು ಮಾರಿಷಸ್‌ನ ಯಾಗಿ ಸಾವಿರಾರು ಕೋಟಿಗಳ ವಹಿವಾಟು ಆ ಯ ಹೆಸರಿನಲ್ಲಿ ಶುರುವಾಗಿ ಬಿಡುತ್ತದೆ. ಮಾರಿಷಸ್‌ಗೆ ದರೆ ನೀವು ಹಲವಾರು ಬಹು ಮಹಡಿ ಕಟ್ಟಡಗಳ ನೂರಾರು ನೇಮ್‌ಪ್ಲೇಟ್‌ಗಳು ನೇತಾಡುತ್ತಿರುವುದನ್ನು ಬಹುದು.

ಾರತದಿಂದ ಹೊರಕ್ಕೆ ಹಣ ರವಾನಿಸಲು ನಾನಾ ಗಳನ್ನು ಕಂಡುಕೊಂಡಿದ್ದಾರೆ. ಖೊಟ್ಟಿ ಬಿಲ್ಲುಗಳನ್ನು ಹಣ ಪಾವತಿಸುವುದು, ಸೇವೆಯ ಹೆಸರಿನಲ್ಲಿ, ಾತಿನ ಹೆಸರಿನಲ್ಲಿ, ತಾಂತ್ರಿಕ ನೆರವಿನ ಶುಲ್ಕದ ನಲ್ಲಿ ಕಂಪನಿಗಳು ತಮ್ಮ ಲಾಭದ ಮೊತ್ತವನ್ನು ದೇಶಗಳ ಸುಳ್ಳು ಕಂಪನಿಗಳಿಗೆ ವರ್ಗಾಯಿಸುತ್ತಾರೆ. ಲಾ ದಂಧೆಯ ಮೂಲಕವೂ ಹಣ ಸಾಗಿಸಲಾಗುತ್ತದೆ. ಹವಾಲಾ ದಂಧೆಯಲ್ಲಿ ಗುಜರಾತ್ ಮೂಲದ ಮಿಗಳು ತೊಡಗಿಸಿಕೊಂಡಿರುವುದು ಹಲವಾರು ಬಾರಿ ಂಗಗೊಂಡಿದೆ.

ಾರತ ಮೂಲದ ಉದ್ಯಮಿಗಳು ಅತಿ ಹೆಚ್ಚಾಗಿ ೊಂಡಿರುವುದು ಮಾರಿಷಸ್ ದೇಶವನ್ನು. ಇಲ್ಲಿನ ಸಂಖ್ಯಾತರು ಭಾರತ ಮೂಲದವರು. ನ್ಯಾಷನಲ್ ್ಯಗಾರ್ಡ್ ಮುಖ್ಯಸ್ಥ ಇಂಡಿಯನ್ ನೇವಿಯ ದರ್, ಮಾರಿಷಸ್ ಪ್ರಧಾನಿಯ ನ್ಯಾ ಸೆಕ್ಯೂರಿಟಿ ದರ್ ಭಾರತದ ನಿವೃತ್ತ ಐಪಿಎಸ್ ಅಧಿಕಾರಿ. ಹೀಗೆ ಅಧಿಕಾರಿಗಳು ಇವರ ಕೆಲಸವನ್ನು ುತಗೊಳಿಸುತ್ತಾರೆ.

ಂಥ ಸದವಕಾಶವನ್ನು ರೂಪಿಸಿಕೊಂಡಿರುವ ರ್ಪೊರೇಟ್ ಧಣಿಗಳು ನೂರೆಂಟು ಬೇನಾಮಿ ಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಪ್ರಾಣಿಗಳ ಪಕ್ಷಿಗಳ ು ನದಿಗಳ ಹೆಸರಿನಲ್ಲಿ ಇಲ್ಲಿ ಕಂಪನಿಗಳು ಸಾಮಾನ್ಯ. 2ಜಿ ಹಗರಣ ಹೊರಬಂದಾಗ ರಿಲಯನ್ಸ್ ಾ ಕಂಪನಿ ಇಂಥದೇ ಕಂಪನಿಗಳನ್ನು ರಿಜಿಸ್ಟರ್ ಿಸಿದ್ದು ಬಹಿರಂಗವಾಗಿತ್ತು.

ಇಂಥಾ ಮಾರ್ಗಗಳಿಂದ ಹರಿದುಬರುವ ಬಂಡವಾಳ ದ ಷೇರು ಮಾರುಕಟ್ಟೆಯಲ್ಲಿ, ರಿಯಲ್ ಎಸ್ಟೇಟ್‌ನಲ್ಲಿ, ವಜ್ರದ ವ್ಯಾಪಾರದಲ್ಲಿ ಭಾರೀ ಪ್ರಮಾಣದಲ್ಲಿ ವಣೆಯಲ್ಲಿದೆ.

ಇಲ್ಲಿಗೆ ಎರಡು ವರ್ಷಗಳ ಹಿಂದೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸುಚೇತ ದಲಾಲ್ ಎಂಬ ಅಂಕಣಕಾರ್ತಿ ಪ್ರತಿ ವಾರ ಇಂಥಾ ರೌಂಡ್ ಟ್ರಿಪ್ಪಿಂಗ್ ವ್ಯವಹಾರದ ಬಗ್ಗೆ ಬರೆದರು. ಕ್ರಿಸ್ ಬ್ರೈರನ್ ಎಂಬ ತನಿಖಾ ವರದಿಗಾರನ ಜೊತೆ ಸೇರಿ 200 ಕಂಪನಿಗಳ ಬಗ್ಗೆ ಅಕೌಂಟ್ ನಂಬರ್ ಸಮೇತ ಮಾಹಿತಿಯನ್ನು ಬಯಲಿಗೆಳೆದರು. ಇದು ಒಂದಷ್ಟು ಸುದ್ದಿ ಮಾಡಿತು. ಮಾಮೂಲಿಯಂತೆ ತೆರಿಗೆ ಅಧಿಕಾರಿಗಳು ಸುಚೇತ ದಲಾಲ್ ಮನೆಗೆ ಬಂದರು. ಎಲ್ಲ ಮಾಹಿತಿ ಪಡೆದುಕೊಂಡರು. ಪೆನ್‌ಡ್ರೈವ್‌ನಲ್ಲಿ ಕಾಪಿ ಮಾಡಿಕೊಂಡರು. ಅಲ್ಲಿಂದಾಚೆಗೆ ಒಂದು ಹುಲ್ಲು ಕಡ್ಡಿಯೂ ಅಲುಗಲಿಲ್ಲ. ಬಹುಶಃ ತನಿಖಾಧಿಕಾರಿಗಳು ಪಡೆದುಕೊಂಡ ಮಾಹಿತಿಯಿಂದ ಅವರ ಜೇಬುಗಳು ಭರ್ತಿಯಾಗಿರಬೇಕು ಅಷ್ಟೇ.

ಮೋದಿಯ ಪರಮ ಆಪ್ತರಾದ ಶಶಿಕಾಂತ ರುಯ್ಯ, ರವಿಕಾಂತ್ ರುಯ್ಯ ಸೋದರರ ಒಡೆತನದ ಎಸ್ಸಾರ್ ಕಂಪನಿಯ ಮುಕ್ಕಾಲು ಭಾಗ ಉದ್ಯಮಗಳು, ವಹಿವಾಟು ಇರುವುದು ಭಾರತದಲ್ಲೇ, ಆದರೆ ಈ ಮಹಾನುಭಾವರ ಕಂಪನಿಯ ಕೇಂದ್ರ ಕಚೇರಿ ಇರುವುದು ಮಾರಿಷಸ್‌ನಲ್ಲಿ ಎಂದರೆ ಇದಕ್ಕೆ ಏನು ಹೇಳಬೇಕು?

ಇಲ್ಲಿಗೆ ಸರಿಯಾಗಿ 2 ವರ್ಷಗಳ ಹಿಂದೆ 2012ರ ಮಾರ್ಚ್ 9ನೇ ತಾರೀಕು ಅದಾನಿ ಪೋರ್ಟ್ ಅಂಡ್ ಎಸ್‌ಇಜೆಡ್ ಕಂಪನಿಗೆ ಮಾರಿಷಸ್ ಮಾರ್ಗದಿಂದ ಹರಿದುಬಂದ ಬಂಡವಾಳದ ಬಗ್ಗೆ ಭಾರತದ ತನಿಖಾಧಿಕಾರಿಗಳು ತನಿಖೆ ಕೈಗೊಂಡಿದ್ದರು. ಆದರೆ ಅದು ಎಲ್ಲಿಗೂ ಮುಟ್ಟಿಲ್ಲ, ಮುಟ್ಟುವುದೂ ಇಲ್ಲ ಎಂಬುದು ಬೇರೆ ಮಾತು.

ಕಳೆದ ಕೆಲವು ವರ್ಷಗಳಿಂದ ವೋಡಾಫೋನ್-ಎಸ್ಸಾರ್ ಕಂಪನಿಯ ತೆರಿಗೆ ಪ್ರಕರಣವೊಂದು ವಿವಾದಕ್ಕೆ ಕಾರಣವಾಗಿತ್ತು. ಎಸ್ಸಾರ್ ಕಂಪನಿಯ ಪಾಲನ್ನು ವೋಡಾಫೋನ್ ಕಂಪನಿ 5.46 ಬಿಲಿಯನ್ ಡಾಲರ್ ಅಂದರೆ ಸುಮಾರು 33,000 ಕೋಟಿ ರೂ ಮೊತ್ತಕ್ಕೆ ಕೊಂಡುಕೊಂಡಿತ್ತು. ಈ ವ್ಯವಹಾರದಲ್ಲಿ ಬಂಡವಾಳ ಗಳಿಕೆ ತೆರಿಗೆಯಾಗಿ ಸುಮಾರು 3200 ಕೋಟಿಗಳಷ್ಟು ಮೊತ್ತವನ್ನು ಪಾವತಿಸಬೇಕಿತ್ತು. ತೆರಿಗೆ ಅಧಿಕಾರಿಗಳು ನೋಟಿಸ್ ಜಾರಿ ಮಾಡಿ, ಕೇಸು ದಾಖಲಿಸಿದರು. ಆದರೆ ಎಸ್ಸಾರ್ ಮತ್ತು ವೋಡಾಫೋನ್ ಕಂಪನಿಗಳು ತಮ್ಮ ವಿದೇಶಿ ನೋಂದಣಿಯನ್ನು ತೋರಿಸಿ, ತೆರಿಗೆ ಕಟ್ಟಲು ನಿರಾಕರಿಸಿದವು. ಪ್ರಕರಣ ಮುಂಬೈ ಹೈಕೋರ್ಟ್ ಮೆಟ್ಟಿಲೇರಿತು. ಭಾರಿ ಪ್ರಮಾಣದ ತೆರಿಗೆ ಮತ್ತು ದಂಡ ವಿಧಿಸಿ ಕೋರ್ಟ್ ತೀರ್ಪು ನೀಡಿತು. ಆದರೆ ಕಂಪನಿ ಈ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿತು. ದುರದೃಷ್ಟವಶಾತ್ ಸುಪ್ರೀಂಕೋರ್ಟ್ ಹೈಕೋರ್ಟ್ ತೀರ್ಪನ್ನು ರದ್ದುಪಡಿಸಿ ಕಂಪನಿಯ ಪರ ತೀರ್ಪು ನೀಡಿತು.

ಮೋದಿಯ ಪರಮಾಪ್ತ ಗೌತಮ್ ಅದಾನಿ ಬಗ್ಗೆ ಒಂದಿಷ್ಟು ತಿಳಿದಿದ್ದೇವೆ. ಆತನಿಗೆ ವಿನೋದ್ ಅದಾನಿ ಎಂಬ ಅಣ್ಣ ಇದ್ದಾನೆ. ಇಲ್ಲಿಗೆ ಮೂರು ವರ್ಷಗಳ ಹಿಂದೆ ಅದಾನಿ ಗ್ರೂಪ್ ಆಫ್ ಕಂಪನಿಗೆ ಸೇರಿದ 1 ಬಿಲಿಯನ್ ಡಾಲರ್ ಅಂದರೆ ಸುಮಾರು 6000 ಕೋಟಿ ರೂ.ಗಳನ್ನು ಖೊಟ್ಟಿ ಬಿಲ್ ಸೃಷ್ಟಿಸಿ, ಮೋಸಪೂರಿತ ತಂತ್ರದ ಮೂಲಕ ಮಾರಿಷಸ್‌ನ ಬೇನಾಮಿ ಕಂಪನಿಗೆ ವರ್ಗಾಯಿಸಿಬಿಟ್ಟಿದ್ದ. ಕಂಪನಿಯಲ್ಲಿ ಹಣ ಹೂಡಿದ್ದ ಷೇರುದಾರರು ಈ ಅನ್ಯಾಯವನ್ನು ಪ್ರಶ್ನಿಸಿ ದೂರು ನೀಡಿದರು. ಮಾಮೂಲಿ ತನಿಖೆ ಪ್ರಗತಿಯಲ್ಲಿದೆ.

ಆನಂದ್ ಪಂಡಿತ್ ಎಂಬ ಉದ್ಯಮಿ ಮೋದಿಯ ಆಪ್ತ ವಲಯದಲ್ಲಿರುವ ವ್ಯಕ್ತಿಗಳಲ್ಲಿ ಒಬ್ಬ. ಈತ ಮೋದಿ ಆಡಳಿತದಲ್ಲಿ ಗುಜರಾತ್ ರಾಜ್ಯ ಬಿಜೆಪಿ ಪಕ್ಷದ ಕಾಮರ್ಸ್ ಸೆಲ್‌ನ ಸಂಚಾಲಕನಾಗಿದ್ದ. ಬ್ಯಾಂಕ್ ಆಫ್ ಮಹಾರಾಷ್ಟ್ರದ ನಿರ್ದೇಶಕ ಮಂಡಳಿಯಲ್ಲಿ ಹಾಗೂ ಸಿಂಡಿಕೇಟ್ ಬ್ಯಾಂಕ್‌ನ ಮಂಡಳಿಯ ನಿರ್ದೇಶಕನೂ ಆಗಿದ್ದ. ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದಾನೆ. ಈತ ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್‌ನಲ್ಲಿ ಬೇನಾಮಿ ಕಂಪನಿಯೊಂದನ್ನು ಪ್ರಾರಂಭಿಸಿ ಅಲ್ಲಿಗೆ ಕಳ್ಳಮಾರ್ಗದಿಂದ ಹಣ ಸಾಗಿಸಿದ ಆರೋಪದ ಮೇಲೆ ಕೇಸು ದಾಖಲಿಸಲಾಗಿತ್ತು. ನಂತರ ಆಗಿದ್ದೇನು? ಮತ್ತೇನು, ತನಿಖೆ ನಡೆಯುತ್ತಿದೆ.

ಹೀಗೆ ಈ ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುವ ಕಂಪನಿಗಳು ಕನಿಷ್ಟ ಈ ನೆಲಕ್ಕೆ ಸಲ್ಲಬೇಕಾದ ತೆರಿಗೆಗಳಿಂದಲೂ ವಂಚಿಸುತ್ತಿವೆ. ಜಾಗತೀಕರಣ ನೀತಿಗಳು ಜಾರಿಗೆ ಬಂದಮೇಲೆ ಅಮೆರಿಕ, ಜಪಾನ್ ಮುಂತಾದ ಶ್ರೀಮಂತ ದೇಶಗಳ ಹೂಡಿಕೆದಾರರು ಕೂಡ ತಮ್ಮ ಬಂಡವಾಳವನ್ನು ತೆರಿಗೆ ಸ್ವರ್ಗಗಳೆಂದು ಕರೆಯುವ ಮೇಲಿನ ದೇಶಗಳ ಮೂಲಕ ಒಳ ಕಳುಹಿಸುತ್ತಿದ್ದಾರೆ. ಭಾರತದ ಕಾರ್ಪೊರೇಟ್ ಕುಳಗಳು ಆಫ್ರಿಕಾ ಮತ್ತಿತರ ದೇಶಗಳಲ್ಲಿ ಹೂಡಿಕೆ ಮಾಡಲು ಇಂಥಾ ಕಳ್ಳ ಮಾರ್ಗವನ್ನೇ ಅನುಸರಿಸುತ್ತಿವೆ.


ಇಂಥಾ ಕಂಪನಿಗಳು ಭಾರತದಲ್ಲಿ ನೂರಾರು, ಸಾವಿರಾರು ಕೋಟಿಗಳ ಬಂಡವಾಳ ಹೂಡುತ್ತಾರೆ. ಅದು ರೂಪಾಯಿಯಲ್ಲಿ ಅಲ್ಲ ಡಾಲರ್‌ಗಳಲ್ಲಿ, ಮತ್ತು ಇಲ್ಲಿಂದ ಲಾಭವನ್ನೂ ಒಳಗೊಂಡಂತೆ ತಮ್ಮ ಬಂಡವಾಳವನ್ನು ವಾಪಸ್ ತೆಗೆದುಕೊಂಡು ಹೋಗುತ್ತಾರೆ. ಇದರಿಂದಾಗಿ ಡಾಲರ್ ಗಳಿಕೆಯ ಒತ್ತಡ ಮತ್ತಷ್ಟು ಹೆಚ್ಚಾಗಿ ರೂಪಾಯಿಯ ಅಪಮೌಲ್ಯಕ್ಕೂ ಕಾರಣವಾಗುತ್ತದೆ.

ಈ ಮೇಲಿನ ಉದಾಹರಣೆ ಕೇವಲ ಸಾಂಕೇತಿಕ ಮಾತ್ರ. ಕೆದಕುತ್ತಾ ಹೋದರೆ ಈ ಕರಾಳ ವ್ಯವಹಾರದ ಸಾವಿರಾರು ಪ್ರಕರಣಗಳಿವೆ. ಮೋದಿ ಮತ್ತು ಪಟಾಲಂನ ನೇರ ಉಸ್ತುವಾರಿಯಲ್ಲಿ ಇಂಥಾ ಪ್ರಕರಣಗಳ ಸಂಖ್ಯೆ ಎಗ್ಗೂಸಿಗ್ಗೂ ಇಲ್ಲದೆ ಬೆಳೆಯುತ್ತಿವೆ. ಸ್ವತಃ ಪ್ರಧಾನಮಂತ್ರಿಯೇ ಮಾರಿಷಸ್, ಸೀಷೆಲ್ಸ್‌ಗಳಿಗೆ ಖುದ್ದು ಭೇಟಿಕೊಟ್ಟು ತಮ್ಮವರ (ಅ)ವ್ಯವಹಾರಗಳಿಗೆ ಯಾವುದೇ ಚ್ಯುತಿ ಬರದಂತೆ ಮುತುವರ್ಜಿ ಮಾಡುತ್ತಿದ್ದಾರೆ. ಅವುಗಳಿಗೆ ವಿದೇಶಿ ಹೂಡಿಕೆಯ ಆಕರ್ಷಣೆ ಎಂಬ ಮುಖವಾಡವನ್ನು ತೊಡಿಸುತ್ತಿದ್ದಾರೆ. ಇಂಥಾ ಆರ್ಥಿಕತೆಯ ಕರಾಳ ಮುಖವನ್ನು ಮರೆಮಾಚಲು 'ಕಪ್ಪುಹಣ'ವನ್ನು ವಾಪಸ್ ತರುವ ಹಗಲು ವೇಷ ಹಾಕುತ್ತಿದ್ದಾರೆ.

ಭಾರತದ ಆರ್ಥಿಕತೆಯಲ್ಲಿ ಇಂಥಾ ಕರಾಳ ಅಧ್ಯಾಯಗಳು ಮಿತಿಮೀರಿ ಬೆಳೆದಿರುವುದಕ್ಕೂ ಭಾರತದ ರಾಜಕಾರಣದಲ್ಲಿ ನರೇಂದ್ರ ಮೋದಿ ಅಂಡ್ ಕಂಪನಿ ಪ್ರತಿಷ್ಠಾಪಿತರಾಗಿರುವುದಕ್ಕೂ ನೇರಾನೇರ ಸಂಬಂಧವಿದೆ. ಏನಂತೀರಿ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

# ಐಪಿಎಲ್ ಆಟದಲ್ಲಿ ಜೋಡಿ ಮೋದಿಗಳು!



ಐಪಿಎಲ್ ಕ್ರಿಕೆಟ್ ವ್ಯವಹಾರ ಈಗ ಸಾವಿರಾರು ಕೋಟಿಗಳ ದಂಧೆಯಾಗಿದೆ ಎಂಬುದು ತಿಳಿದ ವಿಚಾರ. ಕಳ್ಳ ದಂಧೆಗೆ ಕುಖ್ಯಾತವಾಗಿರುವ ಈ ಐಪಿಎಲ್ ಐಡಿಯಾ ಹೊಳೆದದ್ದೇ ಲಲಿತ್ ಮೋದಿ ಎಂಬ ಗುಜರಾತ್ ಮೂಲದ ಉದ್ಯಮಿಗೆ. ಅಂದಿನ ಗುಜರಾತ್ ಸಿಎಂ ಮೋದಿ ಮತ್ತು ಕಾಳಸಂತೆಯಲ್ಲಿ ಪಳಗಿರುವ ಲಲಿತ್ ಮೋದಿ ನಡುವೆ ಸುಮಧುರ ಸಂಬಂಧವಿತ್ತು, ಈಗಲೂ ಇದೆ.

ಈ ಇಬ್ಬರು ಮೋದಿಗಳು ಸೇರಿ ಅನಿಲ್ ಅಂಬಾನಿಯ ಹಣ ಹಾಕಿಸಿ ಅಹಮದಾಬಾದ್‌ನ ತಂಡವೊಂದನ್ನು ಕಟ್ಟಲು ವಿಫಲ ಯತ್ನ ನಡೆಸಿದ್ದರು. ಈ ಲಲಿತ್ ಮೋದಿಯ ಹಿನ್ನೆಲೆ ಕುತೂಹಲದಾಯಕ. ಈತ ವಿದ್ಯಾರ್ಥಿ ದೆಸೆಯಲ್ಲೇ ಕೊಕೈನ್ ಎಂಬ ಮಾದಕ ವಸ್ತು ಕಳ್ಳಸಾಗಣೆ ಮಾಡಿ ಸಿಕ್ಕಿಬಿದ್ದು ಜೈಲು ಶಿಕ್ಷೆಗೆ ಗುರಿಯಾಗಿದ್ದ, ಅದೂ ಅಮೆರಿಕದಲ್ಲಿ. ಈಶಾನ್ಯ ಭಾರತದ ರಾಜ್ಯಗಳಲ್ಲಿ ಅಕ್ರಮ ಲಾಟರಿ ವ್ಯವಹಾರ ನಡೆಸಿ ಸಿಕ್ಕಿಬಿದ್ದಿದ್ದ. ಈತ ರಾಜಸ್ಥಾನದ ಬಿಜೆಪಿ ಸಿಎಂ ವಸುಂಧರ ರಾಜೇಗೆ ಬಲಗೈ ಬಂಟನೂ ಹೌದು.

ಈಗಲೂ ಈ ಮೋದಿಯೇನು ಕೈಕಟ್ಟಿ ಕೂತಿಲ್ಲ. ತೆರಿಗೆ ಸ್ವರ್ಗಗಳಲ್ಲಿ ರಿಜಿಸ್ಟರ್ ಮಾಡಿಸಿರುವ ಬೇನಾಮಿ ಕಂಪನಿಗಳ ಮೂಲಕ ಐಪಿಎಲ್‌ನ ಬೇರೆಬೇರೆ ಫ್ರಾಂಚೈಸಿಗಳಲ್ಲಿ ಹಣ ಹೂಡಿದ್ದಾನೆ.

ಪ್ರೀತಿ ಜಿಂಟಾ, ನೆಸ್ ವಾಡಿಯಾ ಒಡೆತನದ ಕಿಂಗ್ಸ್ ಇಲೆವೆನ್ ಪಂಜಾಬ್ ಹೆಸರಿನ ತಂಡವೊಂದಿದೆಯಲ್ಲಾ. ಇದರ ಒಡೆತನ ಕೆಪಿಎಚ್ ಡ್ರೀಮ್ ಕ್ರಿಕೆಟ್ ಎಂಬ ಸಂಸ್ಥೆ ಕೈಯಲ್ಲಿದೆ. ಇದಕ್ಕೆ ಹೆಚ್ಚಿನ ಬಂಡವಾಳ ಹೂಡಿದ್ದು ಮಾರಿಷಸ್‌ನಲ್ಲಿರುವ ಕೋಲ್‌ವೇ ಇನ್‌ವೆಸ್ಟ್‌ಮೆಂಟ್ಸ್ ಎಂಬ ಕಂಪನಿ. ಈ ಕಂಪನಿಯ ಸಂಪೂರ್ಣ ಒಡೆತನ ಬ್ಯಾಸ್‌ಟ್ರೀ ಇನ್‌ವೆಸ್ಟ್‌ಮೆಂಟ್ಸ್ ಹೆಸರಿನ ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್ ಕಂಪನಿ ಹೊಂದಿದೆ. ತನಿಖೆಯ ನಂತರ ಕಂಡುಬಂದ ಸಂಗತಿಯೆಂದರೆ ಇದು ಲಲಿತ್ ಮೋದಿಯ ಬಂಧು ಗೌರವ್ ಬರ್ಮನ್ ಹೆಸರಿನಲ್ಲಿದೆ ಎಂಬುದು.

ಮತ್ತೊಂದು ಉದಾಹರಣೆ ನೋಡಿ. ರಾಜಸ್ಥಾನ್ ರಾಯಲ್ಸ್ ತಂಡದ ಮಾಲಿಕರಾದ ಶಿಲ್ಪಾ ಶೆಟ್ಟಿ, ರಾಜ್ ಕುಂದ್ರಾ ಇತ್ಯಾದಿಗಳ ಕಂಪನಿಯ ಹೆಸರು ಜೈಪುರ್ ಐಪಿಎಲ್. ಈ ಜೈಪುರ್ ಐಪಿಎಲ್‌ನ ಶೇಕಡ 99.9 ಹೂಡಿಕೆ ಮಾಡಿರುವುದು ಮಾರಿಷಸ್‌ನಲ್ಲಿರುವ ಇ.ಎಂ. ಸ್ಪೋರ್ಟ್ಸ್ ಹೋಲ್ಡಿಂಗ್ ಕಂಪನಿ. ಇನ್ನುಳಿದ 0.1% ಬಂಡವಾಳ ಕೂಡ ಭಾರತ ನೆಲದಿಂದ ಹೂಡಿಕೆಯಾಗಿಲ್ಲ. ಇಂಗ್ಲೆಂಡ್‌ನ ಎಮರ್ಜಿಂಗ್ ಮೀಡಿಯಾ ಎಂಬ ಕಂಪನಿಯಿಂದ ಬಂದಿದ್ದು! ಈ ಎಮರ್ಜಿಂಗ್ ಮೀಡಿಯಾದ ಹೂಡಿಕೆ ಮತ್ತೊಂದು ತೆರಿಗೆ ಸ್ವರ್ಗ ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್‌ನಿಂದ ಬಂದಿದೆ. ಲಲಿತ್ ಮೋದಿಯ ಭಾಮೈದ ಸುರೇಶ್ ಚೆಲ್ಲಾರಾಮ್ ಎಂಬುವವನು ಈ ವ್ಯವಹಾರದ ಪಾಲುದಾರ!

ಇನ್ನು ಶಾರುಖ್ ಖಾನ್, ಜೂಹಿ ಚಾವ್ಲಾ ಒಡೆತನದ ಕೋಲ್ಕೊತ್ತಾ ನೈಟ್ ರೈಡರ್ಸ್ ತಂಡದ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. 2009 ಮತ್ತು 2010ರಲ್ಲಿ ಈ ತಂಡದ ಷೇರುಗಳನ್ನು ಸೀ ಲ್ಯಾಂಡ್ಸ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಎಂಬ ಬೇನಾಮಿ ಕಂಪನಿಗೆ ಮಾರಾಟ ಮಾಡಲಾಗಿತ್ತು. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಈ ವ್ಯವಹಾರದ ಬೆನ್ನುಹತ್ತಿದರು. ಅಂತಿಮವಾಗಿ ಈ ಕಂಪನಿ ಬ್ರಿಟಿಷ್ ಉದ್ಯಮಿ ಜಯ್ ಮೆಹ್ತಾನ ಒಡೆತನದಲ್ಲಿದೆ ಎಂಬುದು ಬಯಲಾಗಿತ್ತು. ಈ ಜಯ್ ಮೆಹ್ತಾ ಬೇರಾರೂ ಅಲ್ಲ; ಜೂಹಿ ಚಾವ್ಲಾಳ ಸ್ವಂತ ಪತಿದೇವರು!

ಮುಂಬೈ ಇಂಡಿಯನ್ಸ್ ತಂಡದ ಮಾಲಿಕ ಮುಕೇಶ್ ಅಂಬಾನಿ. ರಾಯಲ್ ಚಾಲೆಂಜರ್ಸ್ ತಂಡದ ದೊರೆ ಮಲ್ಯ. ಪುಣೆ ವಾರಿಯರ್ಸ್‌ನ ಕುಖ್ಯಾತ ಸಹಾರಾ ಗ್ರೂಪ್‌ನ ಮಾಲಿಕ ಸುಬ್ರತೋ ರಾಯ್. ಇದೇ ಐಪಿಎಲ್‌ನ ಹೂರಣ.

ಹೀಗೆ ಐಪಿಎಲ್‌ನಲ್ಲಿ ಕಳ್ಳ ಹಣದ್ದೇ ಕಾರುಬಾರು. ಈ ವ್ಯವಹಾರಗಳಲ್ಲಿ ಸಕ್ರಿಯರಾಗಿರುವ ಮಹಾಶಯರು ನಿತ್ಯವೂ ನರೇಂದ್ರ ಮೋದಿಯವರ ಕೈ-ಕಾಲಿಗೆ ತಗಲುವವರೇ. ಆದರೆ ಮೋದಿಯ ಕೈಗೆ "ಸಿಕ್ಕಿ ಬೀಳುತ್ತಿಲ್ಲ" ಅಷ್ಟೇ.

# ಹುಟ್ಟಿದ ಒಂದು ಕೂಸಿಗೆ ಒಂದೂವರೆ ಕಂಪನಿ!

ಯಾವುದಾದರೂ ದೇಶದಲ್ಲಿ ಪ್ರತಿಯೊಂದು ಕೂಸಿಗೂ ತಲಾ ಒಂದೂವರೆ ನಿ ನೋಂದಣಿಯಾಗಿವೆ ಎಂದರೆ ನೀವು ನಂಬುತ್ತೀರಾ? ಕೆಳಗಿನ ವಿವರ ನೋಡಿ:

ಕೇಮನ್ ಐಲ್ಯಾಂಡ್ಸ್ ಎಂಬುದು ಕೆರಿಬಿಯನ್ ಸಾಗರದ ನಡುವಿನ ಮೂರು ಪುಟ್ಟ ದ್ವೀಪಗಳ ರಾಷ್ಟ್ರ. ಇದರ ಜನಸಂಖ್ಯೆ – 56,700. ಇದರ ವಿಸ್ತೀರ್ಣ ಚದರ ಕಿಮೀ. ಈ ಪುಟ್ಟ ದೇಶ ಇಂದಿಗೂ ಇಂಗ್ಲೆಂಡ್‌ನ ಆಡಳಿತದಡಿಯಲ್ಲಿದೆ. ೂ ಸ್ವತಂತ್ರ ಸಂವಿಧಾನ, ಸರ್ಕಾರ ಎಲ್ಲವೂ ಇದೆ. ಇಲ್ಲಿ ಮೊದಲ ರಾಜಕೀಯ ಹುಟ್ಟಿದ್ದು 2000ದಲ್ಲಿ.

ಂದೆ ಈ ದ್ವೀಪ ಕಡಲುಗಳ್ಳರ ಆಶ್ರಯತಾಣವಾಗಿತ್ತು. ಕೆಲವು ರಾಜರು ಕೆಲವೊಮ್ಮೆ ಸೇನಾ ಶಿಬಿರಗಳನ್ನು ಸ್ಥಾಪಿಸಿದ್ದೂ ಉಂಟು. ಕಳೆದ ಎರಡು ಮೂರು ಶತಮಾನಗಳಿಂದ ವಸತಿ ಕಾಯಂ ಆಗಿ ಒಂದಷ್ಟು ಕೃಷಿ, ಮೀನುಗಾರಿಕೆ ಇತ್ಯಾದಿಗಳಲ್ಲಿ ಗಿಸಿಕೊಂಡಿದ್ದಾರೆ.

ಇಂಥಾ ದೇಶದ ವಿಚಿತ್ರ ನೋಡಿ. ಇಲ್ಲಿನ ಜನಸಂಖ್ಯೆಗಿಂತಲೂ ಹೆಚ್ಚಿನ ಬ್ಯುಸಿನೆಸ್ ಗಳು ಇಲ್ಲಿ ರಿಜಿಸ್ಟರ್ ಆಗಿವೆ! ಇಲ್ಲಿನ ಜನಸಂಖ್ಯೆ 56,700 ಆದರೆ ಇಲ್ಲಿ ನೋಂದಾಯಿತ ಕಂಪನಿಗಳು ಬರೋಬ್ಬರಿ 92,000! ಕಳೆದ ಹತ್ತು ವರ್ಷಗಳಿಂದ ಸರಾಸರಿ 9,000 ಕಂಪನಿಗಳು ರಿಜಿಸ್ಟರ್ ಆಗುತ್ತಲೇ ಇವೆ. ಅಂದರೆ ಪ್ರತಿದಿನ 28 ಕಂಪನಿಗಳು!

ಅದು ಎಂತೆಂಥ ಕಂಪನಿಗಳು ಅಂತೀರಿ. ಜಗತ್ತಿನಲ್ಲಿ ಭಾರೀ ಹೆಸರು ಮಾಡಿರುವ ಬಹುತೇಕ ಕಂಪನಿಗಳು ತಮ್ಮ ಶಾಖೆಗಳನ್ನು ಇಲ್ಲಿ ಹುಟ್ಟುಹಾಕಿವೆ. ಜಗತ್ತಿನ ಅತಿದೊಡ್ಡ 50 ಬ್ಯಾಂಕುಗಳ ಪಟ್ಟಿಯಲ್ಲಿರುವವರ ಪೈಕಿ 40 ಬ್ಯಾಂಕುಗಳು ಕೇಮನ್ ಐಲ್ಯಾಂಡ್ಸ್‌ನಲ್ಲಿ ಶಾಖೆ ತೆರೆದಿವೆ ಎಂದರೆ ನಂಬಲು ಸಾಧ್ಯವೆ?


ಈ ದೇಶದಲ್ಲಿ ರಿಜಿಸ್ಟರ್ ಆಗಿರುವ ಕಂಪನಿಗಳ ತಲಾವಾರು ಲೆಕ್ಕ ಹಾಕಿದರೆ ಪ್ರತಿಯೊಂದು ಕೂಸಿಗೂ ಒಂದೂವರೆ ಕಂಪನಿ ಬರುತ್ತದೆ. ಪರವಾಗಿಲ್ಲ, ಬಡ ದೇಶ ಬದುಕಿಕೊಳ್ಳಲಿ ಎನ್ನಬೇಡಿ. ಈ ಕಂಪನಿಗಳು ಆ ದೇಶದ ಜನರಿಗೆ ದಕ್ಕುವಂಥವಲ್ಲ. ಅಥವ ಅಲ್ಲಿ ಯಾವುದೇ ಉತ್ಪಾದನೆ, ವಾಣಿಜ್ಯ ಯಾವುದನ್ನು ನಡೆಸುವುದಿಲ್ಲ. ಇಲ್ಲಿರುವ ಕಂಪನಿಗಳು ಕೇವಲ ಬೋರ್ಡ್ ನೇತುಹಾಕಿರುವ ಕಂಪನಿಗಳಷ್ಟೆ. 'ರೌಂಡ್ ಟ್ರಿಪ್ಪಿಂಗ್' ವಹಿವಾಟು ನಡೆಸಲು ಅಥವ ತೆರಿಗೆ ವಂಚಿಸಿ ಜಗತ್ತಿನ ವಿವಿಧ ದೇಶಗಳಲ್ಲಿ ತಮ್ಮ ಬೇನಾಮಿ ಹಣವನ್ನು ಹೂಡಲು ಈ ನೇಮ್ ಬೋರ್ಡ್‌ಗಳನ್ನು ಉಪಯೋಗಿಸಲಾಗುತ್ತಿದೆ.

ಅವರಿಗೆ ದಕ್ಕುವುದೇನಿದ್ದರೂ ರಿಜಿಸ್ಟರ್ ಶುಲ್ಕ ಮತ್ತು ಅಲ್ಪ ಮಟ್ಟದ ನಾಮಿನಲ್ ತೆರಿಗೆ ಮಾತ್ರ. ಇದೇ ಆ ದೇಶಕ್ಕೆ ಭಾರೀ ಆದಾಯ ತರುವ ಮೂಲವಾಗಿದೆ. ಇಂಥಾ ಆದಾಯದಿಂದಲೇ ಆ ದೇಶದ ತಲಾದಾಯ ಭಾರತಕ್ಕಿಂತ 26 ಪಟ್ಟು ಹೆಚ್ಚಾಗಿದೆ. ಅಂದರೆ ಭಾರತದ ತಲಾದಾಯ 1,808 ಡಾಲರ್. ಅಲ್ಲಿನ ತಲಾದಾಯ 47,000 ಡಾಲರ್‌ಗಳು!

# “ಎಲ್ಲಿದೆ ಕುರುಬರ ಗುಂಪು?”: ಸಿದ್ದು

ಸಿದ್ದರಾಮಯ್ಯನ ಸರ್ಕಾರಕ್ಕೆ ಎರಡು ವರ್ಷ ಆಗೇಬಿಟ್ಟಿತು. ಇಂತಹ ಎರಡು ವರ್ಷದ ಸಂಭ್ರಮವೊಂದು ಶುರುವಾದದ್ದು 'ಬಂ' ಕಾಲದಿಂದ. ಆಗ ವಕೀಲ ಮತ್ತು ಪತ್ರಕರ್ತ ಗಂಗಾಧರಮೂರ್ತಿ ಕೊಲೆಯಾಗಿತ್ತು. ನಾಡಿನ ತುಂಬ “ಅಪರಾಧಿಗಳನ್ನು ಬಂಧಿಸಿ” ಎಂದು ಧರಣಿ, ರಸ್ತೆ ತಡೆ ಮತ್ತು ಪ್ರತಿಭಟನೆಗಳೆಲ್ಲ ನಡೆಯುತ್ತಿದ್ದವು. ಇದಾವುದಕ್ಕೂ ಕೇರ್ ಮಾಡದ 'ಬಂ' ಸಾಧನೆ ಹೇಳಲು ತಯಾರಾಗಿದ್ದರು. ಆ ದಿನ ಹಾಸನದಿಂದ ಬರುವ ಬಸ್ಸುಗಳನ್ನು ಕದಬಹಳ್ಳಿ ಎಂಬ ಸಂತೆಯಲ್ಲಿ ತಡೆದು ಗೋಲಿಬಾರಾಗಿ ಕೊಲೆಯಾದವನ ಜೊತೆ ಮತ್ತಿಬ್ಬರು ತೀರಿಕೊಂಡು ಈ ನಾಡೆ ಒಂದು ರೀತಿ ಪ್ರಕ್ಷುಬ್ಧಗೊಂಡಿತ್ತು.

ಈಗ ಅದೇ ಕಾಂಗ್ರೆಸ್ ಸರ್ಕಾರದ ಎರಡು ವರ್ಷದ ಸಾಧನೆ ಸಮಾವೇಶವೊಂದು ದಾವಣಗೆರೆಯಲ್ಲಿ ನಡೆಯಲಿದೆಯಂತೆ. ಈ ಎಲ್ಲವನ್ನು ಯೋಚಿಸುತ್ತ ಸಿದ್ದರಾಮಯ್ಯನವರನ್ನು ಮಾತನಾಡಿಸಲು ಹೊರಟಾಗ, ಅವರಾಗಲೇ ಪ್ರೆಸ್‌ಕ್ಲಬ್ಬಿನಲ್ಲಿ ಮಾಧ್ಯಮದವರ ಜೊತೆ ಸಂದರ್ಶನನಿರತರಾಗಿದ್ದರು. ನಾವು ಅವರ ಮನೆ ಬಳಿಗೆ ಹೋದ ಹತ್ತು ನಿಮಿಷಗಳಲ್ಲಿ ಬಂದೇಬಿಟ್ಟರು. ಈಗಾಗಲೇ ಮಾಧ್ಯಮಕ್ಕೆ ಕೊಟ್ಟ ಹೇಳಿಕೆಗಳನ್ನು ರಿಪೀಟ್ ಮಾಡಿಸಲು ನಮಗಿಷ್ಟವಿಲ್ಲವಾದ್ದರಿಂದ ವಿಮರ್ಶಾತ್ಮಕ ಪ್ರಶ್ನೆಗಳನ್ನೇ ಕೇಳಿದೆವು.





*ಪ್ರಶ್ನೆ: ಕಳೆದ ಎರಡು ವರ್ಷಗಳಿಂದ ನಿಮ್ಮ ಸರ್ಕಾರ ಮಂದಗತಿಯಲ್ಲಿ ಸಾಗಿದೆ ಎಂಬುದು ಹಲವರ ಗ್ರಹಿಕೆ. ನಿಮಗೆ ಹೇಗನಿಸುತ್ತದೆ?*

ಆ ಥರ ಏನಿಲ್ಲ. ಮಂದಗತಿಯಲ್ಲಿದೆ ಎಂಬುದು ವಿರೋಧ ಪಕ್ಷಗಳ ಅಪಪ್ರಚಾರ. ನಾವು ಈಗ ಏನು ಕಾರ್ಯಕ್ರಮಗಳನ್ನು ಕೊಟ್ಟಿದ್ದೀವಿ, ಅವೆಲ್ಲ ಜನರನ್ನು ತಲುಪುತ್ತಿವೆ. ಅನ್ನಭಾಗ್ಯ ಕ್ಷೀರಭಾಗ್ಯ ವಿದ್ಯಾಸಿರಿ, ಕೃಷಿ ಭಾಗ್ಯ ಸಾಲ ಮನ್ನ ಮತ್ತು ಕಡಿಮೆ ಬಡ್ಡಿಯಲ್ಲಿ ಕೃಷಿ ಸಾಲ, ಎಸ್‌ಟಿಪಿಟಿ ಇತ್ಯಾದಿ ಕಾರ್ಯಕ್ರಮಗಳು ಮಂದಗತಿಯಲ್ಲಿ ಸಾಗುತ್ತಿವೆ ಎನ್ನುವ ಪ್ರಶ್ನೆ ಹೇಗೆ ಬರುತ್ತೆ?

*ಪ್ರಶ್ನೆ: ಅಂದರೆ ಪಬ್ಲಿಸಿಟಿ ಕೊರತೆ ಇದೆ ಅನ್ನಿಸುತ್ತದೆಯಾ?*

ಹೌದು, ಇವುಗಳಿಗೆ ಇನ್ನೂ ಹೆಚ್ಚು ಪಬ್ಲಿಸಿಟಿ ಕೊಡಬೇಕಿತ್ತು. ಆ ನಿಟ್ಟಿನಲ್ಲಿ ನಾವು ಎಷ್ಟು ಮಾಡಬಹುದಿತ್ತೋ ಅಷ್ಟನ್ನು ಮಾಡಿಲ್ಲ ಅನ್ನಿಸುತ್ತೆ.

*ಪ್ರಶ್ನೆ: ಒಂದು ಸರ್ಕಾರ ಬದಲಾದ ಕ್ಷಣದಿಂದ ಆಡಳಿತ ಯಂತ್ರ ಕೂಡ ಬದಲಾಗುತ್ತದೆ, ಚಟುವಟಿಕೆ ಕಾಣಿಸುತ್ತದೆ. ಅದು ನಿಮ್ಮ ಅವಧಿಯಲ್ಲಿ ಕಂಡುಬಂದಿಲ್ಲ ಯಾಕೆ?*

ಬಿಜೆಪಿ ಅಧಿಕಾರಾವಧಿಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದರಿಂದ ಆಡಳಿತಾಂಗದಲ್ಲಿ ಬಹಳ ಜಡತ್ವ ಬಂದಿತ್ತು, ಆ ಜಡತ್ವದಲ್ಲಿ ಕ್ರಮೇಣ ಬದಲಾವಣೆ ಆಗುತ್ತಿದೆ.

*ಪ್ರಶ್ನೆ: ನಿಮ್ಮ ಸರ್ಕಾರದಲ್ಲಿ ನೀವು ಒಂದು ತರಹ ಏಕಾಂಗಿಯಾಗಿ ಕಾಣಿಸುತ್ತೀರಿ. ನೀವು ಏನೇ ಮಾಡಿದರೂ ನಿಮ್ಮ ಸಂಪುಟದ ಸದಸ್ಯರಾಗಲಿ, ಕಾಂಗ್ರೆಸ್ ಶಾಸಕರಾಗಲಿ ನಿಮ್ಮ ಬೆಂಬಲಕ್ಕೆ ನಿಲ್ಲುವುದೇ ಇಲ್ಲ. ಉದಾಹರಣೆಗೆ ನೀವು ಬಜೆಟ್ ಮಂಡಿಸುತ್ತಿದ್ದಾಗ ಬಹಳಷ್ಟು ಕಾಂಗ್ರೆಸ್ ಶಾಸಕರು ತಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಕೂತಿದ್ದರು. ಅದೇ ಯಡಿಯೂರಪ್ಪ ಬಜೆಟ್ ಮಂಡಿಸಿದಾಗ ಬಿಜೆಪಿ ಸದಸ್ಯರು ಮೇಜನ್ನು ತಟ್ಟುತ್ತಾ ಬೆಂಬಲ ನೀಡುತ್ತಿದ್ದರು.*

ಹಾಗೇನಿಲ್ಲ, ಪಾಪ ಕೆಲವರು ಬೆಂಬಲ ನೀಡುತ್ತಿದ್ದಾರೆ. ಎಲ್ಲರೂ ಬೆಂಬಲಿಸಬೇಕು ಎಂಬ ನಿರೀಕ್ಷೆ ಇದೆ. ಕೆಲ ಎಂಎಲ್‌ಎಗಳು ಯಾವ್ಯಾವಾಗ ಸಹಕಾರ ಕೊಡಬೇಕೋ ಆಗೆಲ್ಲ ಕೊಟ್ಟಿದ್ದಾರೆ. ಅಸಹಕಾರ ಎಂಬುದೆಲ್ಲ ಏನಿಲ್ಲ, ನಮ್ಮವರು ಸರ್ಕಾರದ ಪರ ಇನ್ನೂ ಹೆಚ್ಚು ಮಾತನಾಡಬೇಕು ಅನ್ನೋದು ನಿಜ.

*ಪ್ರಶ್ನೆ: ಬಿಜೆಪಿಗರು ಒಂದು ದನಿಯಲ್ಲಿ ಮಾತನಾಡುತ್ತಿದ್ದರು. ಅದು ನಿಮ್ಮ ಸರ್ಕಾರದಲ್ಲಿ ಕಂಡುಬರುತ್ತಿಲ್ಲ ಯಾಕೆ?*

ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದರಿಂದ ಅವರೆಲ್ಲ ಏರುದನಿಯಲ್ಲಿ ಮಾತನಾಡುವುದು ಅವರಿಗೆ ಅಗತ್ಯವಾಗಿತ್ತು, ತಮ್ಮನ್ನ ಡಿಫೆಂಡ್ ಮಾಡಿಕೊಳ್ಳೋದಕ್ಕೆ ಅವರು ಹೆಚ್ಚು ವೋಕಲ್ ಆಗಿರುತ್ತಿದ್ದರು. ನಮ್ಮಲ್ಲಿ ಹಾಗಿಲ್ಲ, ಭ್ರಷ್ಟಾಚಾರ, ಹಗರಣ ಅಂತಹವು ನಮ್ಮ ಅವಧಿಯಲ್ಲಿ ಆಗಿಲ್ಲ, ಆದ್ದರಿಂದ ಏರುದನಿಯಲ್ಲಿ ಮಾತನಾಡುವ ಅಗತ್ಯ ನಮಗೆ ಕಂಡುಬಂದಿಲ್ಲ.

*ಪ್ರಶ್ನೆ: ನಿಮ್ಮ ಸರ್ಕಾರದ ಪ್ರಮುಖ ವೈಫಲ್ಯ 'ಕ್ರೈಸಿಸ್ ಮ್ಯಾನೇಜ್‌ಮೆಂಟ್'. ಅಂದರೆ ಯಾವುದೇ ಸಮಸ್ಯೆ ಎದುರಾದಾಗ ಅದನ್ನು ಬೇಗ ಪರಿಹರಿಸುವ ಹೆಜ್ಜೆಗಳನ್ನು ತೆಗೆದುಕೊಳ್ಳುವುದು ನಿಮ್ಮ ಸರ್ಕಾರದಿಂದ ಆಗುತ್ತಿಲ್ಲ, ಯಾಕೆ? ಉದಾಹರಣೆಗೆ ಐಎಎಸ್ ಅಧಿಕಾರಿ ಡಿ.ಕೆ.ರವಿ ಸಾವಿನ ಪ್ರಕರಣ. ಇದಕ್ಕೆ ಕಾರಣ ಪಕ್ಷದವರಿಂದ ಅಥವಾ ಅಧಿಕಾರಿಗಳಿಂದ ಸಹಕಾರ ಸಿಗದಿರುವುದೇ?*

ಇಲ್ಲ ಹಾಗೇನಿಲ್ಲ, ಎಲ್ಲರೂ ಸಹಕರಿಸುತ್ತಿದ್ದಾರೆ. ಆದರೆ ನಾವು ಇನ್ನೂ ಹೆಚ್ಚು ಚುರುಕಾಗುವ ಅಗತ್ಯ ಇದ್ದೇ ಇದೆ. ಅಂತಹ ಕ್ರೈಸಿಸ್‌ಗಳು ಉದ್ಭವಿಸಿದಾಗ ನಾವು ಇನ್ನೂ ಅಗ್ರೆಸಿವ್ ಆಗಿ, ವೋಕಲ್ ಆಗಿ ಪ್ರತಿಕ್ರಿಯಿಸಬೇಕಿದೆ, ನಿಜ.

*ಪ್ರಶ್ನೆ: ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗಿದ್ದರೂ ಈಗಲೂ ಕರಾವಳಿ ಪ್ರದೇಶದಲ್ಲಿ ಕಲ್ಲಡ್ಕ ಪ್ರಭಾಕರ ಭಟ್ಟರ ಸರ್ಕಾರವೇ ನಡೆಯುತ್ತಿದೆ. ಯಾಕೆ ಹೀಗೆ?*

ಆ ಪ್ರದೇಶದಲ್ಲಿ ಇಡೀ ಆಡಳಿತ ಕೇಸರಿಮಯವಾಗಿತ್ತು, ಪೊಲೀಸರು 'ಮಾರಲ್ ಪೊಲೀಸಿಂಗ್' ಮಾಡುತ್ತಿದ್ದವರೊಂದಿಗೆ ಕೈಜೋಡಿಸಿದ್ದರು. ಅದನ್ನೆಲ್ಲ ಕ್ರಮೇಣ ಕಡಿಮೆ ಮಾಡುತ್ತಿದ್ದೇವೆ. ಈಗಲೂ ಕೆಲವು ಕಮ್ಯೂನಲ್ ಎಲಿಮೆಂಟ್‌ಗಳು ಬೇರೆ ಬೇರೆ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದನ್ನೆಲ್ಲ ತಡೆಯಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

*ಪ್ರಶ್ನೆ: ಯಾಕೆ ನೀವು ಕೆಲವು ವಿಷಯಗಳಲ್ಲಿ ಹಿಂಜರಿದಿದ್ದೀರಿ? ಮೌಢ್ಯ ವಿರೋಧಿ ಕಾಯಿದೆ, ಮಠಗಳ ನಿಯಂತ್ರಣ ಕಾಯಿದೆ ವಿಚಾರಗಳಲ್ಲಂತೂ ವಿರೋಧ ವ್ಯಕ್ತವಾಗುತ್ತಿದ್ದಂತೆ ನೀವು ಯಾಕೆ ಹಿಂಜರಿದಿರಿ? 'ಯಾರು ಏನೇ ಹೇಳಲಿ, ನಾನು ಮಾಡೇ ಮಾಡುತ್ತೀನಿ' ಎನ್ನುತ್ತಿದ್ದ ಸಿದ್ದರಾಮಯ್ಯ ಈಗ ಎಲ್ಲಿ ಹೋಗಿದ್ದಾರೆ?*

ಹಿಂಜರಿಕೆ ಏನಿಲ್ಲ, ಮೌಢ್ಯ ತಡೆ ಯೋಜನೆ ನಮ್ಮ ಮ್ಯಾನಿಫೆಸ್ಟೋದಲ್ಲಿದ್ದ ಕಾರ್ಯಕ್ರಮವೇನಲ್ಲ, ಬಜೆಟ್‌ನಲ್ಲಿ ಘೋಷಿಸಿದ ಹೆಜ್ಜೆಯೂ ಅಲ್ಲ, ಆದರೆ ಅಂತಹ ಚಿಂತನೆ ಮಾಡಿದ್ದು ನಿಜ. ನ್ಯಾಷನಲ್ ಲಾ ಸ್ಕೂಲ್‌ನವರು ಒಂದು ಡ್ರಾಫ್ಟ್ ಕೊಟ್ಟರು. ಅದರ ಬಗ್ಗೆ ಒಂದು ದೊಡ್ಡ ಚರ್ಚೆ ನಡೆಯಲಿ ಎಂಬ ಆಶೆ ಇತ್ತು, ಪರ, ವಿರೋಧ, ಎಲ್ಲವೂ ವ್ಯಕ್ತವಾದವು. ನಾವು ಅದರ ಬಗ್ಗೆ ಇನ್ನೂ ಆಲೋಚನೆ ಮಾಡ್ತಾ ಇದ್ದೀವಿ.

*ಪ್ರಶ್ನೆ: ನಾವೂ ಆ ಡ್ರಾಫ್ಟ್ ಓದಿದ್ದೀವಿ. ಅದು ತುಂಬಾನೆ ಚೆನ್ನಾಗಿತ್ತು, ಅದರ ಬಗ್ಗೆ ಆದ ಅಪಪ್ರಚಾರವನ್ನು ತಡೆಯಲು ಕಾಂಗ್ರೆಸ್ ಪಕ್ಷವಾಗಲಿ, ಯೂತ್ ಕಾಂಗ್ರೆಸ್ ಆಗಲಿ ಯಾಕೆ ಏನನ್ನೂ ಮಾಡಲಿಲ್ಲ?*

ಅದು ತುಂಬಾ ಸೂಕ್ಷ್ಮ ವಿಚಾರ. ಈಗ ಬಹಳಷ್ಟು ಜನ ಈ ಮೌಢ್ಯ ಮತ್ತು ಕಂದಾಚಾರಗಳನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಅದಕ್ಕೆ ಅವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ಅಂತಹ ನಂಬಿಕೆಗಳಿಂದ ಸಮಾಜಕ್ಕೆ ಎಂತಹ ಅಪಾಯ ಆಗುತ್ತಿದೆ ಎಂಬುದರ ಬಗ್ಗೆ ಎಚ್ಚರ ಮೂಡಿಸಿದ ನಂತರ ಕಾನೂನನ್ನು ಜಾರಿ ಮಾಡಿದರೆ ಹೆಚ್ಚು ಪರಿಣಾಮಕಾರಿ ಆಗಿರುತ್ತದೆ ಅನ್ನಿಸುತ್ತದೆ. ಇಲ್ಲದಿದ್ದರೆ ಏನಾಗುತ್ತೆ ಅಂದರೆ ಯಾರು ಮೌಢ್ಯ ಮತ್ತು ಕಂದಾಚಾರವನ್ನು ಅನುಸರಿಸುತ್ತಿದ್ದಾರೋ ಅವರು ಸರ್ಕಾರ ನಮ್ಮ ನಂಬಿಕೆಗಳನ್ನು ಮತ್ತು ವೈಯಕ್ತಿಕ ಸ್ವಾತಂತ್ರವನ್ನು ಕಿತ್ತುಕೊಳ್ಳೊ ಪ್ರಯತ್ನ ಮಾಡುತ್ತಿದೆ ಅಂತ ಭಾವಿಸುತ್ತಾರೆ.

*ಪ್ರಶ್ನೆ: ಮಠಗಳ ಬಗೆಗಿನ ಕಾಯಿದೆ?*

ಅದು ನಾವು ಮಾಡಿದ್ದಲ್ಲ, ಕೋರ್ಟ್ ಆದೇಶದ ಮೇಲೆ ಅದನ್ನು ತಂದದ್ದು.

*ಪ್ರಶ್ನೆ: ನೀವು ಜಾತಿವಾದಿ ಅಲ್ಲ, ಆದರೆ ನಿಮ್ಮ ಸುತ್ತ ಒಂದು ಕುರುಬರ ಗುಂಪು ಇದೆ ಅಂತ ಆರೋಪ ಇದೆಯಲ್ಲಾ?*

ಹಾಹಾಹಾ, ಅದೆಲ್ಲಿದೆ? ಅಂತಹ ಗುಂಪು ಇದೆ ಅಂತ ಕೆಲವರು ಆರೋಪ ಮಾಡ್ತಾರೆ. ಇರೋನು ನಾನೊಬ್ಬನೆ ಕುರುಬ ಮುಖ್ಯಮಂತ್ರಿ. ಇನ್ನೊಬ್ಬ ಕುರುಬನನ್ನು ಮಂತ್ರಿ ಮಾಡಿಲ್ಲ.

*ಪ್ರಶ್ನೆ: ಆ ಬಗ್ಗೆ ಕುರುಬರೇ ಸಿಟ್ಟಾಗಿದ್ದಾರಲ್ಲ?*

ನೋಡಿ, ಕುರುಬರೇ ಸಿಟ್ಟಾಗಿದ್ದರೆ ನನ್ನ ಸುತ್ತ ಕುರುಬರ ಗುಂಪು ಹೇಗಿರುತ್ತೇ?! (ನಗು)

*ಪ್ರಶ್ನೆ: ಕೆಲ ಕುರುಬರು 'ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ನಮ್ಮನ್ನ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು, ಆದರೆ ಸಿದ್ದರಾಮಯ್ಯನ ಹತ್ತಿರ ಹೋಗೋದಕ್ಕೂ ಆಗ್ತಿಲ್ಲ' ಅಂತಿದ್ದಾರೆಲ್ಲಾ?*

ನೋಡಿ, ನಾವು ಎಷ್ಟೇ ಎಚ್ಚರ ವಹಿಸಿದರೂ ಇಂತಹ ಆರೋಪ ಮಾಡ್ತಾರೆ. ನಾನು ಯಾವತ್ತೂ ಜಾತಿವಾದಿಯಾಗಿ ನಡೆದುಕೊಂಡಿಲ್ಲ, ಮುಂದೆ ನಡೆದುಕೊಳ್ಳುವುದೂ ಇಲ್ಲ.

*ಪ್ರಶ್ನೆ: ದೇವರಾಜ್ ಅರಸು ಅವರನ್ನು ಸಮಾಜ ಪರಿವರ್ತನೆಯ ಹರಿಕಾರ ಎಂದು ಜನ ನೆನೆಯುತ್ತಾರೆ. ತಾವು ಅರಸು ಜೊತೆ ತಮ್ಮನ್ನು ಕಂಪೇರ್ ಮಾಡಿಕೊಳ್ಳುತ್ತೀರಾ?*

ಅರಸು ಜೊತೆ ಕಂಪೇರ್ ಮಾಡಿಕೊಳ್ಳುವುದು ತಪ್ಪು, ಅರಸು ಅವರು ಇದ್ದಂತಹ ಕಾಲಘಟ್ಟ, ಈಗ ನಾವು ಇರುವ ಕಾಲಘಟ್ಟ, ಅವತ್ತು ಇದ್ದಂತಹ ಜನರ ನಿರೀಕ್ಷೆಗಳು, ಇವತ್ತಿನ ಜನರ ನಿರೀಕ್ಷೆಗಳು, ಇವೆಲ್ಲವುಗಳ ನಡುವೆ ಬಹಳ ವ್ಯತ್ಯಾಸಗಳಿವೆ. ಅರಸು ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಸಿದ್ಧಾಂತ ಇತ್ತು, ಬಹಳ ಮುಖ್ಯವಾಗಿ ಅರಸು ಏನು ಮಾಡಿದರು ಅಂದರೆ ಅವರು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಅನ್ನು ಜಾರಿಗೆ ತಂದರು. ಹಾವನೂರ್ ಆಯೋಗದ ಮೂಲಕ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕೊಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಿದರು. ಅವರು ಬಹಳಷ್ಟು ಪ್ರೊಗ್ರೆಸಿವ್ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಜೊತೆಗೆ ಅರಸು ಬೆನ್ನಿಗೆ ಕೇಂದ್ರ ಸರ್ಕಾರ ದೊಡ್ಡ ಶಕ್ತಿಯಾಗಿ ನಿಂತಿತ್ತು, ಇವತ್ತು ನಾವೂ ಅದೇ ಸಾಮಾಜಿಕ ನ್ಯಾಯ ನೀಡುವ ದಾರಿಯಲ್ಲಿ ನಡೆಯೋದಿಕ್ಕೆ ಪ್ರಯತ್ನ ಮಾಡ್ತಿದ್ದೀವಿ. ಜೊತೆಗೆ ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತತೆ ಕಾಂಗ್ರೆಸ್ ಪಕ್ಷದ ಸಿದ್ಧಾಂತ ಕೂಡ ಹೌದು. ಅದಕ್ಕಾಗಿ ನಾವು ಸಾಮಾಜಿಕ ನ್ಯಾಯ ಕೊಡುವುದಕ್ಕೇ ಬಹಳಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

*ಪ್ರಶ್ನೆ: ಜನ ನಿಮ್ಮನ್ನು ಯಾವ ತರಹ ಗುರುತಿಸಬೇಕು ಎಂದು ನೀವು ಬಯಸುತ್ತೀರಿ?*

ನನ್ನನ್ನ! ಸಿದ್ದರಾಮಯ್ಯನ ತರಹ ಗುರುತಿಸಬೇಕು ಅಷ್ಟೇ! ಯಾಕೆ ಅಂದ್ರೆ ನಾನು ಮೊದಲು ಹೇಗಿದ್ದೇನೋ ಈಗಲೂ ಹಾಗೆ ಇದ್ದೀನಿ. ಜನತಾದಲ್ಲಿದ್ದವನು ಇವತ್ತು ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಆಗಿದ್ದೀನಿ, ಹೌದು ಆದರೆ ನಾನು ನಂಬಿದ್ದ ಮತ್ತು ಪ್ರತಿಪಾದಿಸಿದ ಸಿದ್ಧಾಂತದಲ್ಲಿ, ನಿಲುವಿನಲ್ಲಿ ಯಾವ ಬದಲಾವಣೆಗಳಾಗಲಿ, ಕಾಂಪ್ರೊಮೈಸ್ ಆಗಲೀ ಆಗಿಲ್ಲ.

*ಪ್ರಶ್ನೆ: ನೀವು ಅಧಿಕಾರಕ್ಕೆ ಬಂದನಂತರ ಇಬ್ಬರು ನಕ್ಸಲ್ ನಾಯಕರು ಮುಖ್ಯವಾಹಿನಿಗೆ ಬಂದರು. ಆದರೆ ಕಳೆದ ವಾರ ವಿಠಲ್ ಮಲೆಕುಡಿಯ ಎಂಬ ಯುವಕನಿಗೂ, ನಕ್ಸಲರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಮಂಗಳೂರು ಪೊಲೀಸರು ಆತ ನಕ್ಸಲ್ ಎಂದು ಆರೋಪಿಸಿ ಚಾರ್ಜ್‌ಶೀಟ್ ಹಾಕಿದ್ದಾರೆ. ಯಾಕೆ ನಿಮ್ಮ ಕಾಳಜಿಗಳು ಅಧಿಕಾರಿ ವರ್ಗಕ್ಕೆ ತಾಗುತ್ತಿಲ್ಲ?*

ಅದು ನನ್ನ ಗಮನಕ್ಕೆ ಬಂದಿಲ್ಲ. ವಿಚಾರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇನೆ.

*ಪ್ರಶ್ನೆ: ನಿಮ್ಮ ಮಿತ್ರರಾದ ದೇವನೂರ ಮಹಾದೇವ ಅವರು ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾತೃಭಾಷೆಯಲ್ಲೇ ಇರಬೇಕು ಎಂದು ಒತ್ತಾಯಿಸಿದ್ದಾರೆ. ಆ ಬಗ್ಗೆ ನೀವು ಏನು ಮಾಡುತ್ತಿದ್ದೀರಿ?*

ದೇವನೂರು ಅವರು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮಾತೃಭಾಷೆಯೇ ಒಂದನೆ ತರಗತಿಯಿಂದ ಐದನೆ ತರಗತಿಯವರೆಗೆ ಶಿಕ್ಷಣದ ಮಾಧ್ಯಮ ಆಗಬೇಕು ಎಂಬ ನಿಲುವು ನನ್ನದು ಕೂಡ. ಮೊನ್ನೆ ನಾನು ವಿರೋಧ ಪಕ್ಷಗಳ ಸದಸ್ಯರೂ ಇರುವ ನಿಯೋಗವನ್ನು ಕರೆದುಕೊಂಡು ಹೋಗಿ, ಪ್ರಧಾನಿ ಅವರನ್ನು ಭೇಟಿ ಮಾಡಿ “ಎಲ್ಲಾ ರಾಜ್ಯಗಳ ಶಿಕ್ಷಣ ಸಚಿವರ ಸಭೆಯನ್ನು ಕರೆಯಿರಿ. ಸುಪ್ರೀಂಕೋರ್ಟ್ ನಮ್ಮ ವಿರುದ್ಧದ ತೀರ್ಪು ನೀಡಿದೆ. ಆದ್ದರಿಂದ ಸಂವಿಧಾನ ತಿದ್ದುಪಡಿ ಆಗಬೇಕಿದೆ” ಎಂದೆಲ್ಲ ವಿವರಿಸಿದೆ. ಪ್ರಧಾನಿ ಅವರು ಪರಿಶೀಲಿಸುತ್ತೇನೆ ಅಂದಿದ್ದಾರೆ.

*ಪ್ರಶ್ನೆ: ನಮ್ಮ ಸಮೀಕ್ಷೆಯ ಪ್ರಕಾರ ಸರ್ಕಾರಿ ಶಾಲೆಗಳಲ್ಲಿ ಮೇಷ್ಟ್ರುಗಳ ಕೊರತೆ ಇರುವುದರಿಂದ ಮಕ್ಕಳ ಶಿಕ್ಷಣ ಸರಿಯಾಗಿ ನಡೆಯುತ್ತಿಲ್ಲ, ಏಕೋಪಾಧ್ಯಾಯ ಶಾಲೆಗಳಿಂದಾಗಿ ಐದನೆ ತರಗತಿಯ ಮಕ್ಕಳಿಗೂ ವ್ಯಾಕರಣ ಗೊತ್ತಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆಯನ್ನು ನಿವಾರಿಸಲು ಏನು ಕ್ರಮ ಕೈಗೊಂಡಿದ್ದೀರಿ?*

ನಿಜ, ಮೇಷ್ಟ್ರುಗಳ ಕೊರತೆಯಿಂದಾಗಿ ಈ ಸಮಸ್ಯೆ ಉಂಟಾಗಿದೆ. ಅದಕ್ಕೆ ಸದ್ಯದಲ್ಲೇ 11,000 ಮೇಷ್ಟ್ರುಗಳನ್ನು ರೆಕ್ರೂಟ್ ಮಾಡ್ತಾ ಇದ್ದೀವಿ. ಜೊತೆಗೆ ಖಾಸಗಿ ಶಾಲೆಗಳಲ್ಲೂ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಕಲಿಸಬೇಕು ಎಂಬ ಕಾನೂನನ್ನು ಜಾರಿಗೆ ತಂದಿದ್ದೀವಿ.

*ಪ್ರಶ್ನೆ: ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಗಡಿ ಪ್ರದೇಶಗಳ ಜನರ ಸಮಸ್ಯೆಗಳು ಬಗೆಹರಿಯುತ್ತಿಲ್ಲ,*

# ಸಂದರ್ಶನ

ಸಂದರ್ಶಕರು:
.ಚಂದ್ರೇಗೌಡ & ಗೌರಿ ಲಂಕೇಶ್

ಬಗ್ಗೆ ನೀವೇನು ಮಾಡುತ್ತಿದ್ದೀರಿ?

ಆ ಭಾಗದಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಬಾರಿ ಹೆಚ್ಚು ಹಣವನ್ನು ಬಜೆಟ್‌ನಲ್ಲಿ ನೀಡಿದ್ದೇನೆ.

ಪ್ರಶ್ನೆ: ಉತ್ತರ ಕರ್ನಾಟಕವನ್ನು ಪ್ರತ್ಯೇಕ ಮಾಡುವ ಗು ಮತ್ತೆ ಕೇಳಿಬರುತ್ತಿದೆಯಲ್ಲಾ? ಆ ಬಗ್ಗೆ ಏನು ಳುತ್ತೀರಿ?

ಆ ಕೂಗಿನಲ್ಲಿ ಯಾವ ತಾತ್ವಿಕತೆಯೂ ಇಲ್ಲ, ಬರೀ ಪಕೀಯ ಲಾಭಕ್ಕೆ ಮಾಡುತ್ತಿರುವ ಕೂಗು ಅದು. ಮೇಶ್ ಕತ್ತಿ ಯಾವಾಗಿನಿಂದ ಎಮ್‌ಎಲ್‌ಎ ರುವುದು? ಬಹಳ ವರ್ಷಗಳಿಂದ. ಆದರೆ ಆತ ಶಾಸಕ ಥವಾ ಮಂತ್ರಿ ಆಗಿದ್ದಾಗ ಈ ಬಗ್ಗೆ ಮಾತನಾಡಿರಲಿಲ್ಲ. ಮ್ಮ ಪಕ್ಷದ ಎ.ಎಸ್.ಪಾಟೀಲ್ ಕೂಡ ಈಗ ಅದರ ಗ್ಗೆ ಮಾತನಾಡಿದ್ದಾರೆ. ಆತ ವಿರೋಧ ಪಕ್ಷದಲ್ಲಿದ್ದಾಗ ಬಗ್ಗೆ ಒಂದೇ ಒಂದು ದಿನ ಮಾತನಾಡಲಿಲ್ಲ ಯಾಕೆ? ದರೆ ಈಗ ಯಾಕೆ ಮಾತನಾಡುತ್ತಿದ್ದಾರೆ? ಇದರ ಹಿಂದೆ ಜಕೀಯ ದುರುದ್ದೇಶ ಮತ್ತು ಸ್ವಾರ್ಥ ಇದೆ ಅಷ್ಟೇ.

ಪ್ರಶ್ನೆ: ಕಳೆದ ಎರಡು ವರ್ಷಗಳಲ್ಲಿ ನಿಮಗೆ ದೊಡ್ಡ ಲೆನೋವಾಗಿದ್ದು ಯಾವ ವಿಷಯ?

ತಲೆನೋವಾಗಿದ್ದಂತಹ ಯಾವ ವಿಚಾರವೂ ಇಲ್ಲ.

ಪ್ರಶ್ನೆ: ಜಿ. ಪರಮೇಶ್ವರ್?

ಪರಮೇಶ್ವರ್ ಯಾಕೆ ತಲೆನೋವಾಗುತ್ತಾರೆ ಪಾಪ? ನಾವು ಮತ್ತು ಅವರು ಚೆನ್ನಾಗೆ ಇದ್ದೀವಿ.

ಪ್ರಶ್ನೆ: ನಿಮ್ಮ ಮತ್ತು ಮೋದಿ ಸಂಬಂಧ ಹೇಗಿದೆ?

ಚೆನ್ನಾಗೇ ಇದೆ.

ಪ್ರಶ್ನೆ: ಚುನಾವಣೆ ಸಮಯದಲ್ಲಿ ನೀವು ಮೋದಿಯನ್ನು ಬಾ ಟೀಕೆ ಮಾಡಿದ್ರಿ.

ಈಗಲೂ ಟೀಕೆ ಮಾಡ್ತಿನಿ. ಮೊನ್ನೆ ಬಜೆಟ್‌ನಲ್ಲೂ ಮ್ಮ ರಾಜ್ಯಕ್ಕೆ ಅನ್ಯಾಯ ಮಾಡಿದರು ಅಂತ ಟೀಕೆ ಡಿದ್ದೀನಿ. ಅರುಣ್ ಜೈಟ್ಲಿ ಅವರನ್ನು ಮೊನ್ನೆ ಭೇಟಿ ಾಗಲೂ ರಾಜ್ಯಕ್ಕೆ ಏನೇನು ಅನ್ಯಾಯ ಆಗಿದೆ ಅಂತಲೂ ಸವಿ ಕೊಟ್ಟಿದ್ದೀನಿ. ಟೀಕೆ ಮಾಡೋದು ಬೇರೆ. ಆದರೆ ವರು ಪ್ರಧಾನಿ ಆಗಿದ್ದು, ನಾನು ಮುಖ್ಯಮಂತ್ರಿ ಆಗಿದ್ದು ಫೆಡರಲ್ ವ್ಯವಸ್ಥೆಯಲ್ಲಿ ನಮ್ಮಿಬ್ಬರ ನಡುವೆ ಕೆಲಸ ಡಲು ಎಂತಹ ಸಂಬಂಧ ಇರಬೇಕೋ ಅಂತಹ ಬಂಧವನ್ನು ಮೋದಿ ಜೊತೆ ಇಟ್ಟುಕೊಂಡಿದ್ದೀನಿ.

ಪ್ರಶ್ನೆ: ರಾಜ್ಯದಲ್ಲಿ ಮೋದಿ ಅಲೆ ಕಡಿಮೆ ಆಗುತ್ತಿದೆ ನ್ನಿಸುತ್ತಿದೆಯಾ ನಿಮಗೆ?

ಹೌದು ಮೋದಿ ಅಲೆ ಕಡಿಮೆ ಆಗುತ್ತಿದೆ.

ಪ್ರಶ್ನೆ: ಯಾವ ಕಾರಣಕ್ಕೆ?

ಯಾಕೆ ಅಂದರೆ ಮೋದಿ ಅವರು ಸುಳ್ಳನ್ನೇ ಮಾರಾಟ ಮಾಡಿದ್ದರು. ತುಂಬಾ ಭರವಸೆಗಳನ್ನು ಕೊಟ್ಟಿದ್ದರು. ್ಯಾವುದನ್ನೂ ಈಡೇರಿಸಲಿಕ್ಕೆ ಆಗುತ್ತಿಲ್ಲ. ಮೊನ್ನೆ ಅಟಲ್ ್ಯನ್ ಎಂಬ ಕಾರ್ಯಕ್ರಮ ಮಾಡಿದರು. ವಿಧಿ ಇಲ್ಲದೆ ನೂ ಅದಕ್ಕೆ ಹೋಗಿದ್ದೆ. ಅದರಲ್ಲಿ 18 ವರ್ಷದಿಂದ ವರ್ಷದವರೆಗೆ ದುಡ್ಡು ಕಟ್ಟುತ್ತಾ ಹೋಗಬೇಕು. ಮೇಲೆ ಹಾಗೆ ಕಟ್ಟಿದ್ದ ದುಡ್ಡನ್ನೇ ವಾಪಸ್ ಕೊಡ್ತಾರೆ. ಮೇಲೆ ಇನ್ನೊಂದು ಯೋಜನೆಯಲ್ಲಿ ಅಪಘಾತ. ಆದರೆ ದುಡ್ಡು ಕೊಡ್ತೀವಿ ಅಂತಾರೆ. ಆದರೆ ಇವೆಲ್ಲಾ ಮುಂಚೆ ದ್ದ ಯೋಜನೆಗಳೆ. ಅವನ್ನೆಲ್ಲ ಈಗ ಬೇರೆ ಬೇರೆ ಸರಲ್ಲಿ, ವಾಜಪೇಯಿ ಹೆಸರಲ್ಲಿ, ಪ್ರಧಾನ ಮಂತ್ರಿ ಹೆಸರಲ್ಲಿ ರಿಗೆ ತರುತ್ತಿದ್ದಾರಷ್ಟೇ.

ಪ್ರಶ್ನೆ: ಈಗ ಕೇಂದ್ರದಲ್ಲಿ ಬಿಜೆಪಿ ಧಿಕಾರದಲ್ಲಿರುವುದರಿಂದ ಎಲ್ಲೆಡೆ ಗಾಂಧಿಯನ್ನು ಕೊಂದ ೋಡ್ಸೆಯ ವೈಭವೀಕರಣ ನಡೆಯುತ್ತಿದೆ. ಕರ್ನಾಟಕದಲ್ಲೂ ೋಡ್ಸೆ ಪ್ರತಿಮೆಯನ್ನು ಸ್ಥಾಪಿಸುತ್ತೇವೆ ಎಂದಿದ್ದಾರೆ. ಗೊಮ್ಮೆ ಅವರು ಮಾಡಿದರೆ ನೀವು ಯಾವ ಕ್ರಮ ೆದುಕೊಳ್ಳುತ್ತೀರಿ?

ಕೋಮುಸೌಹಾರ್ದವನ್ನು ಹಾಳು ಮಾಡುವಂತಹ ಾವುದೇ ಕೃತ್ಯವನ್ನು ನಾವು ತಡೆಯುತ್ತೇವೆ.

ಪ್ರಶ್ನೆ: ನೀವು ಮುಖ್ಯಮಂತ್ರಿ ಆದಮೇಲೆ ನೀವು ರಾಜಕೀಯ ಆಕಾಂಕ್ಷೆಯನ್ನು ಡೇರಿಸಿಕೊಂಡಿರುವುದರಿಂದ ಒಂದು ರೀತಿಯಲ್ಲಿ ನಿಮ್ಮಲ್ಲಿ ಲತೆ ಇದೆ ಎಂಬುದು ಹಲವರ ಅಭಿಪ್ರಾಯ. ೇನಂತೀರಿ?

ಹಾಗೇನಿಲ್ಲ, ಮೊದಲು ನಾನು ಮತ್ತೊಮ್ಮೆ ನಾವಣೆಯಲ್ಲಿ ಸ್ಪರ್ಧಿಸಲ್ಲ ಎಂದು ಘೋಷಿಸಿದ್ದೆ. ಆದರೀಗ ನ್ನು ಬದಲಾಯಿಸಿಕೊಂಡಿದ್ದೇನೆ. ಮತ್ತೆ ನಾವಣೆಗೆ ನಿಲ್ಲಬೇಕು. ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸ್ಥೈರ್ಯ ಮತ್ತು ಹುರುಪನ್ನು ತುಂಬಬೇಕು. ಮತ್ತೆ ಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ್ಯನಾಡಿ ಶಕ್ತಿಗಳನ್ನು ತಡೆಯಬೇಕು ಅಂತ ತೀರ್ಮಾನ ಮಾಡಿದ್ದೀನಿ. ನನಗೆ ಮುಖ್ಯಮಂತ್ರಿ ಆಗ ಬೇಕು ಅನ್ನೋ ಆಸೆ ಇದ್ದದ್ದು ನಿಜ. ಇಲ್ಲ ಅಂತ ಹೇಳಲ್ಲ. ಆದರೆ ಆಸೆ ಈಡೇರಿದ ಮೇಲೆ ಮುಖ್ಯಮಂತ್ರಿ ಆಗಿ ಮಾಡೋದು ಏನೂ ಇಲ್ಲ ಎಂಬ ಭಾವನೆ ನನಗಿಲ್ಲ. ಇಲ್ಲದಿದ್ದರೆ ಇಷ್ಟೊಂದು ಜನಪರ ಯೋಜನೆಗಳನ್ನು ಜಾರಿಗೆ ತರುವ ಅಗತ್ಯವೇ ನನಗೆ ಇರಲಿಲ್ಲ. ಮುಖ್ಯಮಂತ್ರಿ ಆದ ಮೇಲೆ ಕರ್ನಾಟಕದ ಜನ ನಮ್ಮನ್ನ ನೆನಪು ಮಾಡಿಕೊಳ್ಳುವಂತಹ, ಜನರ ನಿರೀಕ್ಷೆಗಳಿಗೆ ತಕ್ಕಂತಹ ಕೆಲಸಗಳನ್ನು ಮಾಡುತ್ತಿದ್ದೇವೆ.

ಪ್ರಶ್ನೆ: ಹಲವರ ಪ್ರಕಾರ ಜಾತಿಗಣತಿಯ ಉದ್ದೇಶ ಮೇಲುವರ್ಗಗಳ ವಿರುದ್ಧ ಹಿಂದುಳಿದ ವರ್ಗಗಳನ್ನು



ಒಗ್ಗೂಡಿಸುವುದಾಗಿದೆ. ಅದಕ್ಕೆ ಲಿಂಗಾಯತರು ಮತ್ತು ಒಕ್ಕಲಿಗರು ಅದನ್ನು ವಿರೋಧಿಸಿದರು. ನಿಮ್ಮ ಅಭಿಪ್ರಾಯ?

ಅದನ್ನು ವಿರೋಧಿಸುವ ಅಗತ್ಯ ಇಲ್ಲ. ರಾಜ್ಯದ ಎಲ್ಲ ಜನರ ಸಾಮಾಜಿಕ, ಆರ್ಥಿಕ ಮತ್ತು ಶಿಕ್ಷಣ ಕುರಿತ ಅಧ್ಯಯನ ಇದು. ಇಂತಹ ಒಂದು ಅಧ್ಯಯನ ನಡೆದದ್ದು 1931ರಲ್ಲಿ, ಬ್ರಿಟಿಷರ ಕಾಲದಲ್ಲಿ, ಅನಂತರ ನಡೆದಿರಲಿಲ್ಲ. ಕೋರ್ಟುಗಳಲ್ಲಿ ಅನೇಕ ಬಾರಿ ಮೀಸಲಾತಿ ಕುರಿತು ಚರ್ಚೆಗಳು ನಡೆದಾಗ ನ್ಯಾಯಾಲಯಗಳು ಅಥೆಂಟಿಕ್ ಮಾಹಿತಿಯನ್ನು ಕೇಳುತ್ತಿದ್ದವು. ಯಾವ ಆಧಾರದ ಮೇಲೆ ಹಿಂದುಳಿದವರ ಸಂಖ್ಯೆ ಇಷ್ಟು ಎಂದು ಹೇಳುತ್ತೀರಿ ಎಂದು ಪ್ರಶ್ನಿಸುತ್ತಿದ್ದವು. ಅದಕ್ಕೆ ಒಂದು ಕರಾರುವಾಕ್ಕಾದ ಮಾಹಿತಿಯನ್ನು ಸಂಗ್ರಹಿಸಲು ಈ ಗಣತಿಯನ್ನು ಮಾಡಿದ್ದು.

ಪ್ರಶ್ನೆ: ಒಟ್ಟು 1351 ಜಾತಿಗಳಿವೆ ಆ ಪಟ್ಟಿಯಲ್ಲಿ?



ಇನ್ನೂ ಜಾಸ್ತಿ ಇವೆ. ಒಂದೊಂದು ಜಾತಿಯಲ್ಲೂ ಸುಮಾರು ಉಪಜಾತಿ, ಪಂಗಡಗಳಿವೆ. ಪೂರ್ಣ ವರದಿ ಬಂದಮೇಲೆ ಗೊತ್ತಾಗುತ್ತೆ!

ಪ್ರಶ್ನೆ: ಕರ್ನಾಟಕದಲ್ಲಿ ಬಡವರ ಸಂಖ್ಯೆ 23 ಪರ್ಸೆಂಟ್ ಇದೆ ಅಂತ ಕೇಳಿ ಆಶ್ಚರ್ಯ ಆಯ್ತು. ನಮ್ಮ ರಾಜ್ಯದಲ್ಲಿ ಯಾಕೆ ಇಂತಹ ಪರಿಸ್ಥಿತಿ ಇದೆ?

ಆಂಧ್ರ, ತಮಿಳುನಾಡು ಮತ್ತು ಕೇರಳಕ್ಕೆ ಹೋಲಿಸಿದರೆ ನಮ್ಮಲ್ಲೇ ಬಡವರ ಸಂಖ್ಯೆ ಹೆಚ್ಚು. ಆಂಧ್ರದಲ್ಲಿ 22, ಕೇರಳದಲ್ಲಿ 12, ತಮಿಳುನಾಡಿನಲ್ಲಿ 17 ಇದ್ದರೆ ನಮ್ಮಲ್ಲಿ 23.6 ಪರ್ಸೆಂಟ್ ಬಡವರಿದ್ದಾರೆ. ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಬಡವರ ಸಂಖ್ಯೆ ಹೆಚ್ಚು.

ಪ್ರಶ್ನೆ: ಇವತ್ತು ದೊಡ್ಡ ರಾಜ್ಯಗಳಲ್ಲಿ ಕರ್ನಾಟಕದಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರದಲ್ಲಿರುವುದು. ಕಾಂಗ್ರೆಸ್ ಪಕ್ಷ ರಾಷ್ಟ್ರ ಮಟ್ಟದಲ್ಲಿ ಮತ್ತೆ ಪ್ರಾಮುಖ್ಯತೆ ಪಡೆಯಲು ಏನು ಮಾಡಬೇಕು?

ಜನರ ಸಮಸ್ಯೆಗಳನ್ನು ತೆಗೆದುಕೊಂಡು ಜನರ ಬಳಿ ಹೋಗಬೇಕು. ಕೇಂದ್ರ ಸರ್ಕಾರದ ಟೊಳ್ಳುತನ, ಅವರ ಜನ ಮತ್ತು ರೈತ ವಿರೋಧಿ ಯೋಜನೆಗಳು, ಪ್ರೋಗ್ರಾಮ್‌ಗಳು, ಕಾನೂನುಗಳು ಇವೆಲ್ಲ ಜನರ ಹತ್ತಿರ ತೆಗೆದುಕೊಂಡು ಹೋಗಿ ಜನಪರ ಹೋರಾಟವನ್ನು ಮಾಡಬೇಕಿದೆ. ಈಗ ರಾಹುಲ್ ಗಾಂಧಿ ಅವರು ಅಂತಹ ಕಾರ್ಯಗಳನ್ನು ಎಲ್ಲೆಡೆ ಪ್ರಾರಂಭಿಸಿದ್ದಾರೆ. ಜನರ, ರೈತರ ಸಮಸ್ಯೆಗಳನ್ನು ಅವರೊಂದಿಗೆ ಚರ್ಚಿಸುವುದು, ಪಾದಯಾತ್ರೆ ಮಾಡುವುದು. ಅಂಥವನ್ನೆಲ್ಲ ರಾಹುಲ್ ಗಾಂಧಿ ಮಾಡುತ್ತಿದ್ದಾರೆ. ಅದು ಒಳ್ಳೆಯ ಬೆಳವಣಿಗೆ.

ಪ್ರಶ್ನೆ: ಮುಂದಿನ ಮೂರು ವರ್ಷಗಳಿಗೆ ನಿಮ್ಮ ಕನಸೇನು?

ಕರ್ನಾಟಕವನ್ನು ಒಂದು ಮಾದರಿ ರಾಜ್ಯ ಮಾಡಬೇಕೆನ್ನುವುದು ಮೊದಲಿನಿಂದಲೂ ಇರುವ ಆಶೆ. ಆ ದಿಕ್ಕಿನಲ್ಲಿ ಏನೇನು ಮಾಡಬೇಕೋ ಅದನ್ನೆಲ್ಲ ಮಾಡುತ್ತಿದ್ದೇವೆ.

ಪ್ರಶ್ನೆ: ಯಾವ ತರಹ?

ಜನರಿಗೆ ಏನು ಬೇಕು? ಅನ್ನ, ಬಟ್ಟೆ, ನೀರು, ವಸತಿ, ರಸ್ತೆ ಇತ್ಯಾದಿಗಳು. ರೈತರ ಬೆಳೆಗಳಿಗೆ ನ್ಯಾಯಯುತವಾದ ಬೆಲೆ, ಉದ್ಯೋಗ ಸೃಷ್ಟಿ, ನೀರಾವರಿ ಹೆಚ್ಚಿಸುವುದು, ಇವುಗಳ ನಿಟ್ಟಿನಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದೇವೆ.

ಪ್ರಶ್ನೆ: ಬರುವ ಮೂರು ವರ್ಷಗಳಲ್ಲಿ ಸಾಧಿಸಬೇಕೆನ್ನುವ ಇನ್ನಾವುದಾದರೂ ಕನಸುಗಳಿವೆಯೇ?

ಪ್ರಣಾಳಿಕೆಯಲ್ಲಿರುವ 75% ಅಂಶಗಳನ್ನು ಈಗಾಗಲೇ ಜಾರಿಗೆ ತಂದಿದ್ದೀವಿ. ಉಳಿದವನ್ನು ಇಂಪ್ಲಿಮೆಂಟ್ ಮಾಡಬೇಕಿದೆ.

ಪ್ರಶ್ನೆ: ಅನ್ನಭಾಗ್ಯದಿಂದ ಜನರ ಹೊಟ್ಟೆ ತುಂಬಿಸಿದ್ದೀರಿ, ನಿಜ, ಆದರೆ ಉದ್ಯೋಗಕ್ಕೆ ಏನು ಮಾಡಿದ್ದೀರಿ?

ಕೈಗಾರಿಕೆಗೆ, ಅದರಲ್ಲೂ ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಒತ್ತುಕೊಡುತ್ತಿದ್ದೇವೆ. ನಾವು ಅಧಿಕಾರಕ್ಕೆ ಬಂದಮೇಲೆ 318 ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಕೊಟ್ಟಿದ್ದೀವಿ. ಜೊತೆಗೆ 95,519 ಕೋಟಿ ಬಂಡವಾಳ ಬರುತ್ತಿದೆ. ಅದರ ಜೊತೆ 2,27,000 ಉದ್ಯೋಗಗಳು ಸೃಷ್ಟಿ ಆಗುತ್ತಿವೆ. ಅದಕ್ಕೋಸ್ಕರವೇ ಹೊಸ ಇಂಡಸ್ಟ್ರಿಯಲ್ ಪಾಲಿಸಿ ಮಾಡಿದ್ದೀವಿ. ಅದು ತುಂಬಾ ಪ್ರಗತಿಪರವಾಗಿದೆ. ಬೇರೆ ರಾಜ್ಯಗಳು ನಮ್ಮ ಪಾಲಿಸಿಯನ್ನು ಪಾಲಿಸುತ್ತಿವೆಯಲ್ಲದೆ ಇಂಡಸ್ಟ್ರಿಗಳು ನಮ್ಮ ಪಾಲಿಸಿಯನ್ನು ಒಪ್ಪಿಕೊಂಡಿದ್ದಾವೆ. ಹೊಸದಾಗಿ ಬಂಡವಾಳ ಆಕರ್ಷಿಸಲಿಕ್ಕೆ ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ ಕೂಡ ಮಾಡ್ತಾ ಇದ್ದೀವಿ.

ಪ್ರಶ್ನೆ: ನೀವು ಈ ಹಿಂದೆ ಪಶು ಸಂಗೋಪನಾ ಸಚಿವರಾಗಿದ್ದಾಗ ಅಜ್ಜಂಪುರದ ಅಮೃತಮಹಲ್ ಕೇಂದ್ರ ಚೆನ್ನಾಗಿತ್ತು. ಆದರೀಗ ಅದು ಪತನವಾಗುತ್ತಿದೆ. ಅಮೃತಮಹಲ್ ತಳಿನೇ ನಾಶವಾಗುವ ಹಂತ ತಲುಪಿದೆ. ಅದನ್ನು ರಕ್ಷಿಸುವ ಯೋಜನೆ ಇದೆಯೇ?

ಅಜ್ಜಂಪುರ ಕೇಂದ್ರವನ್ನು ಉದ್ಧಾರ ಮಾಡಲು ಬಜೆಟ್‌ನಲ್ಲಿ ಹತ್ತು ಕೋಟಿ ರೂಪಾಯಿ ಇಟ್ಟಿದ್ದೀನಿ. ಅದನ್ನು ಪುನಶ್ಚೇತನ ಮಾಡುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀವಿ. ನಮ್ಮ ಸ್ಥಳೀಯ ತಳಿಗಳನ್ನು ಮತ್ತು ಜಾನುವಾರುಗಳನ್ನು ಅಭಿವೃದ್ಧಿಪಡಿಸಲು ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನೆಲ್ಲ ಮಾಡುತ್ತಿದ್ದೇವೆ.

ಪ್ರಶ್ನೆ: ಕೆಲವು ಮಾಧ್ಯಮಗಳು ನಿಮ್ಮನ್ನು ಟೀಕೆ ಮಾಡುತ್ತಿವೆ. ಅದಕ್ಕೆ ಸಿದ್ದರಾಮಯ್ಯನವರ ಸಿಟ್ಟು ಮತ್ತು ಸೆಡವು ಕಾರಣವಾಗಿರಬಹುದೇ ಅಥವಾ ಇತರ ಕಾರಣಗಳಿರಬಹುದೆ?

ಪ್ರಜಾಪ್ರಭುತ್ವದಲ್ಲಿ ಮಾಧ್ಯಮದವರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಇರುತ್ತೆ, ಟೀಕೆ ಮಾಡುವುದು ಅವರ ಹಕ್ಕು, ಮಾಡ್ಲಿ ಬಿಡಿ!

ಪ್ರಶ್ನೆ: ಲೋಕಾಯುಕ್ತ ಈಗ ಅಷ್ಟು ಕ್ರಿಯಾಶೀಲವಾಗಿಲ್ಲ ಎಂಬ ಅಭಿಪ್ರಾಯ ಜನರಲ್ಲಿದೆ.

ಏನಾಯ್ತು ಅಂದರೆ, ಸಂತೋಷ್ ಹೆಗ್ಡೆ ಲೋಕಾಯುಕ್ತರಾಗಿದ್ದಾಗ ಅಕ್ರಮ ಗಣಿಗಾರಿಕೆ ನಡೆಯುತ್ತಿತ್ತು, ಹಾಗಾಗಿ ಅದು ಹೆಚ್ಚು ಪ್ರಚಾರ ಪಡೀತಿತ್ತು, ಆದರೀಗ ಯಾವ ಹಗರಣಗಳೂ ನಡೀತಿಲ್ಲ, ಆದ್ದರಿಂದ ಸುದ್ದಿ ಆಗುತ್ತಿಲ್ಲ ಅಷ್ಟೇ.

ಪ್ರಶ್ನೆ: ಆದರೀಗ ಭ್ರಷ್ಟ ಅಧಿಕಾರಿಗಳನ್ನು ನಿಯಂತ್ರಿಸುವ ಸಮಸ್ಯೆ ಇದೆಯಾ ಎಂಬ ಸಂಶಯ ಇದೆ. ಉದಾಹರಣೆಗೆ ಲೋಕಾಯುಕ್ತದಲ್ಲಿ ಅಧಿಕಾರಿಯಾಗಿದ್ದ ಕರಿಬಸವನಗೌಡ ಎಂಬಾತನ ಮೇಲೆಯೇ ರೈಡ್ ಆಗಿ ಆತ ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಹೊಂದಿದ್ದು ಪತ್ತೆಯಾಗಿತ್ತು. ಆದರೀಗ ಆತನಿಗೆ ಬಡ್ತಿ ನೀಡಲಾಗುತ್ತಿದೆ.

ಇದರ ಬಗ್ಗೆ ಗೊತ್ತಿಲ್ಲ, ವಿಚಾರಿಸುತ್ತೇನೆ.

ಪ್ರಶ್ನೆ: ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಬಹಳಷ್ಟು ಜನ ಮುಗ್ಧರು ಆರಿಸಿ ಬರುತ್ತಿದ್ದರು. ಈಗ ಎದುರಾಗಲಿರುವ ಚುನಾವಣೆಯಲ್ಲಿ ಯುವ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಸುವಂತೆ ನಿಮ್ಮ ಪಕ್ಷದಿಂದ ಯೋಚನೆ ಇದೆಯೇ?

ಪಂಚಾಯತಿ ಚುನಾವಣೆ ಪಕ್ಷದ ಸಿಂಬಲ್ ಮೇಲೆ ನಡೆಯುವಂತಹದ್ದಲ್ಲ, ಜೊತೆಗೆ ಈ ಚುನಾವಣೆಯಲ್ಲಿ ಮಹಿಳೆಯರಿಗೆ 50% ಮೀಸಲಾತಿ ಇದೆ. ಆಗ ಏನಾಗುತ್ತದೆ ಅಂದರೆ ಅನೇಕ ಕಡೆ ವಿದ್ಯಾವಂತ ಮಹಿಳಾ ಅಭ್ಯರ್ಥಿಗಳು ಸಿಗೋದಿಲ್ಲ, ಜೊತೆಗೆ ವಿವಿಧ ಕಾರಣಗಳಿಗೆ ಮಹಿಳೆಯರು ಮೀಸಲಾತಿ ಕೋಟಾದಲ್ಲಿ ನಿಂತು ಗೆಲ್ಲುವ ಸ್ಥಿತಿ ನಿರ್ಮಾಣವಾಗುತ್ತದೆ. ಶಾಸಕ ಆಗುವುದಕ್ಕೋ, ಸಂಸದ ಆಗುವುದಕ್ಕೋ ಯಾವುದೇ ಶಿಕ್ಷಣ ಅರ್ಹತೆ ಇಲ್ಲ, ದುಡ್ಡಿರುವವರೆಲ್ಲ ಎಲ್ಲಾ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಾರೆ. ಆದರೂ ಸಾಧ್ಯವಾದಷ್ಟು ಮಟ್ಟಿಗೆ ಯುವಕರು ಭಾಗವಹಿಸುವಂತೆ ನೋಡಿಕೊಳ್ಳುತ್ತೇವೆ.

ಪ್ರಶ್ನೆ: ನಿಮ್ಮ ಸರ್ಕಾರದ ಪ್ರತಿ ಹೆಜ್ಜೆಯ ವಿರುದ್ಧ ವಿರೋಧ ಪಕ್ಷಗಳು ಮತ್ತು ಹಲವು ಮಾಧ್ಯಮಗಳು ವ್ಯವಸ್ಥಿತ ಪಿತೂರಿ ನಡೆಸುತ್ತಿರುವಂತಿದೆಯಲ್ಲ?

ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯನ್ನು ಒಂದು ಉದಾಹರಣೆಯಾಗಿ ಕೊಡುತ್ತೇನೆ. ಬಿಜೆಪಿ ಅವರೇ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಬಿಬಿಎಂಪಿಯನ್ನು ವಿಭಜಿಸುವುದಾಗಿ ಹೇಳಿದ್ದಾರೆ. ನಾವೂ ನಮ್ಮ ಪ್ರಣಾಳಿಕೆಯಲ್ಲಿ ಅದನ್ನೇ ಹೇಳಿದ್ದೇವೆ. ಆದರೀಗ ಬಿಜೆಪಿಯವರು ಅದನ್ನು ವಿರೋಧಿಸುತ್ತಿದ್ದಾರೆ. ಅವರು ಅಧಿಕಾರದಲ್ಲಿದ್ದಾಗ ಒಂದನ್ನು ಹೇಳಿ ಈಗ ಇನ್ನೊಂದನ್ನು ಹೇಳುತ್ತಿದ್ದಾರೆ. ಹಾಗೇನೇ ತೀರ್ಥಹಳ್ಳಿಯ ನಂದಿತಾ ಪ್ರಕರಣ. ಅದು ಆತ್ಮಹತ್ಯೆ ಅಂತ ಗೊತ್ತಿದ್ದರೂ ಕೂಡ ಅದು ಅತ್ಯಾಚಾರ, ಕೊಲೆ ಅಂತ ದೊಡ್ಡದಾಗಿ ಗುಲ್ಲೆಬ್ಬಿಸಿದರು, ಗಲಾಟೆ ಮಾಡಿದರು, ಪ್ರತಿಭಟಿಸಿದರು, ಬಂದ್ ಮಾಡಿದರು. ಹಾಗೇನೇ ಶಿವಮೊಗ್ಗೆಯಲ್ಲಿ ಕೊಲೆ ಆಗಿದ್ದರೆ ಅದು ಕೋಮುಗಲಭೆಯಲ್ಲಿ ನಡೆದದ್ದು ಅಂತ ಬಿಂಬಿಸಿದರು. ಉರಿಯುತ್ತಿರುವ ಮನೆಯಲ್ಲಿ ಗಳ ಹಿರೀತಾರಲ್ಲ, ಅಂತಹ ಕೆಲಸನ್ನು ವಿರೋಧ ಪಕ್ಷಗಳು ಮಾಡುತ್ತಿವೆ.

ಪ್ರಶ್ನೆ: ಕಾಂಗ್ರೆಸ್‌ನ ಮಾಜಿ ಮುಖ್ಯಮಂತ್ರಿಯೊಬ್ಬರು ನೀವು ನಿಮ್ಮ ಸಚಿವಸಂಪುಟದ ಮೌಲ್ಯಮಾಪನ ಮಾಡಬೇಕು ಎಂಬ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ತುಂಬಾ ಚೆನ್ನಾಗಿ ತಮ್ಮ ಸಂಪುಟದ ಮೌಲ್ಯಮಾಪನ ಮಾಡಿದ್ದರಿಂದ ಅವರ ಸಂಪುಟದಲ್ಲಿದ್ದ ಬಹಳಷ್ಟು ಸಚಿವರು ಚುನಾವಣೆಯಲ್ಲಿ ಕೊಚ್ಚಿಹೋದರು, ಅದು ಬೇರೆ ಮಾತು. ಆದರೆ ನೀವು ನಿಮ್ಮ ಸಂಪುಟದ ಮೌಲ್ಯಮಾಪನ ಮಾಡುತ್ತಿದ್ದೀರಾ?

ಅದು ಸದಾ ನಡೆಯುವ ಕ್ರಿಯೆ. ಅದು ಪರೀಕ್ಷೆಯಲ್ಲಿ ಮಾರ್ಕ್ಸ್ ಕೊಡುವಂತಹ ಕ್ರಿಯೆಯಲ್ಲ, ಪ್ರತಿಯೊಬ್ಬರೂ ತಮ್ಮ ಇಲಾಖೆಯನ್ನು ಹೇಗೆ ನಿಭಾಯಿಸುತ್ತಿದ್ದಾರೆ, ಸರ್ಕಾರದ ಯೋಜನೆಗಳನ್ನು ಹೇಗೆ ಇಂಪ್ಲಿಮೆಂಟ್ ಮಾಡುತ್ತಿದ್ದಾರೆ ಎಂಬುದು ಮುಖ್ಯ.


ಪ್ರಶ್ನೆ: ನಿಮ್ಮ ಸಚಿವ ಸಂಪುಟದಲ್ಲಿರುವವರೆಲ್ಲರೂ ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಕೆಲಸ ಮಾಡುತ್ತಿದ್ದಾರೆ ಅನ್ನಿಸುತ್ತಿದೆಯಾ?


ಮಾಡುತ್ತಿದ್ದಾರೆ. ಆದರೆ ಕೆಲವರು ಇನ್ನೂ ಹೆಚ್ಚು ಕೆಲಸ ಮಾಡಬೇಕಿದೆ.

ಪ್ರಶ್ನೆ: ಕೊನೆಯದಾಗಿ, ನಿಮ್ಮ ಮನೆ ಮತ್ತು ಕಚೇರಿಯಲ್ಲಿ ಹಲವಾರು ಬುದ್ಧ ಪ್ರತಿಮೆಗಳು ಇವೆ. ಬುದ್ಧ ಯಾಕೆ ಇಷ್ಟವಾಗುತ್ತಾನೆ ನಿಮಗೆ?

ಮೊದಲನೆಯದಾಗಿ ಬುದ್ಧ ದೇವರ ಅಸ್ತಿತ್ವದ ಬಗ್ಗೆ ಮಾತನಾಡುವುದಕ್ಕೆ ಹೋಗಲಿಲ್ಲ. ಎರಡನೆಯದಾಗಿ ಅವನು ಸಮಾನತೆಗೆ ಮತ್ತು ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತು ಕೊಟ್ಟರು. ಹಾಗಾಗಿ ಬುದ್ಧ ಮತ್ತು [illegible] ತತ್ವಗಳು [illegible] ಪ್ರಸ್ತುತವಾಗುತ್ತಾರೆ ನನಗೆ ■

# ಅಂಬೇಡ್ಕರ್ ಮತ್ತು ಗಾಂಧಿ



ಮೇ 6, 2015ರ ಗೌರಿ ಲಂಕೇಶ್ ಪತ್ರಿಕೆಯಲ್ಲಿ "ಗಾಂಧೀ ನಿಜಕ್ಕೂ ಮಹಾತ್ಮರೇ? ಎಂಬ ಅಂಬೇಡ್ಕರರ ಪ್ರಶ್ನೆ, ಮತ್ತವರ ಉತ್ತರ" ಎಂಬ ಲೇಖನ ಓದಿದೆ. ಈ ಲೇಖನವನ್ನು ರಘೋತ್ತಮ ಹೊ.ಬ ಎಂಬುವರು ಪರಿಚಯಿಸಿದ್ದಾರೆ. ಗಾಂಧಿಯವರ ಸಮಕಾಲೀನರೂ, ದಲಿತರ ಏಳಿಗೆಗಾಗಿ ಕೆಲಸಮಾಡಿದ ಸಹನಾಯಕರೂ ಆಗಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರರು ಗಾಂಧೀಜಿಯವರ ವ್ಯಕ್ತಿತ್ವ ಮತ್ತು ವಿಚಾರಗಳ ಬಗ್ಗೆ ಸಾಕಷ್ಟು ಅಸಂತೋಷ ಹೊಂದಿದ್ದರೆಂಬ ಸಂಗತಿ ಪರಿಚಯಾತ್ಮಕವಾದ ಈ ಲೇಖನ ದಿಂದ ಗೊತ್ತಾಗುತ್ತದೆ. ಡಾ.ಅಂಬೇಡ್ಕರರ ಬುದ್ಧಿಮತ್ತೆಯನ್ನು ಪ್ರಶ್ನಿಸುವ ಯೋಗ್ಯತೆ ನನಗಿಲ್ಲ, ಗಾಂಧಿಯವರ ಬಗ್ಗೆ ಅವರ ಕಾರ್ಯ ಮತ್ತು ವಿಚಾರಗಳಿಂದ ಪ್ರಭಾವಿತನಾಗಿ ಅವರ ಬಗ್ಗೆ ಗೌರವ ಹೊಂದಿರುವ ನನಗೆ ಸಹಜವಾಗಿ ಈ ಲೇಖನದಿಂದ ಮನಸ್ಸಿಗೆ ಬಹಳ ನೋವಾಯಿತು. ಲೇಖನ ಓದಿದ ರಾತ್ರಿಯೆಲ್ಲ ಚಡಪಡಿಸಿದ್ದೇನೆ. ಲೇಖನಕ್ಕೆ ಪ್ರತಿಕ್ರಿಯೆ ಬರೆದು ಹೃದಯದ ಭಾರವನ್ನು ಇಳಿಸಿಕೊಳ್ಳಬೇಕೆಂದು ಅನಿಸಿದ್ದರಿಂದ ಈಗ ಈ ಪ್ರತಿಕ್ರಿಯೆ ಬರೆದಿದ್ದೇನೆ.

ಅಂಬೇಡ್ಕರ್ ಮತ್ತು ಗಾಂಧಿಯವರ ಬಗ್ಗೆ ಅಪಾರವಾದ ಗೌರವವಿದೆ. ನಾನು ತಿಳಿದಿರುವಂತೆ ಅವರಿಬ್ಬರೂ ಸಮಾಜದ ಹಲವಾರು ಸಮಸ್ಯೆಗಳ ಬಗ್ಗೆ ಮುಖ್ಯವಾಗಿ ದಲಿತರ ಸಮಸ್ಯೆಯ ಬಗ್ಗೆ ಚಿಂತನೆ ಮಾಡಿ ಅವರ ಸಮಸ್ಯೆಗಳನ್ನು ಬಗೆಹರಿಸಲು ತಮ್ಮದೇ ಆದ ರೀತಿಗಳಲ್ಲಿ ಪ್ರಯತ್ನಿಸಿ ದಂತವರು. ಮಾರ್ಗಗಳು ಬೇರೆಯಾಗಿದ್ದರೂ ಕೂಡ ಗಮ್ಯ ಅಥವಾ ಗುರಿ ಒಂದೇ ಆಗಿತ್ತು, ಗಾಂಧೀಜಿಯವರ ಗುರಿಯ ಬಗ್ಗೆ ಡಾ.ಅಂಬೇಡ್ಕರ್ ಪ್ರಶ್ನಿಸಲಿಲ್ಲ. ಅದರಂತೆಯೇ ಡಾ.ಅಂಬೇಡ್ಕರರ ಗುರಿಯನ್ನು ಗಾಂಧೀಜಿ ಪ್ರಶ್ನಿಸಲಿಲ್ಲ. ದಲಿತರ ಏಳಿಗೆಗಾಗಿ ಹೋರಾಡಿದ ಡಾ.ಅಂಬೇಡ್ಕರ್ ಮತ್ತು ಗಾಂಧೀಜಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಗಾಂಧೀಜಿ ಎಂದೂ ತಮ್ಮನ್ನು ಮಹಾತ್ಮರೆನಿಸಿಕೊಳ್ಳಲು ಬಯಸಲಿಲ್ಲ.

ಕವಿ ಮತ್ತು ಸಾಹಿತಿ ಡಾ.ರವೀಂದ್ರನಾಥ್ ಠಾಕೂರ್ ಮೊದಲಬಾರಿಗೆ ಗಾಂಧೀಜಿಯವರನ್ನು ಮಹಾತ್ಮ ಎಂದು ಕರೆದರು. ಆನಂತರ ಜನಸಾಮಾನ್ಯರು ಅವರನ್ನು ಮಹಾತ್ಮ ರೆಂದು ಕರೆಯಲಾರಂಭಿಸಿದರು. ಜ್ಞಾನ ಮತ್ತು ಶೈಕ್ಷಣಿಕ ಅರ್ಹತೆಯಲ್ಲಿ ಡಾ.ಅಂಬೇಡ್ಕರರು ಗಾಂಧೀಜಿಯವರಿಗಿಂತ ಉನ್ನತ ಮಟ್ಟದಲ್ಲಿದ್ದಾರೆ ಎಂಬ ಕಾರಣದಿಂದಾಗಿಯೇ ಮಹಾತ್ಮ ಎಂಬ ಟೈಟಲನ್ನು ಪ್ರಶ್ನಿಸುವ ಸಹಜತೆ ಮತ್ತು ಸಾಮರ್ಥ್ಯ ಬರುತ್ತದೆ ಎಂಬ ಮಾತನ್ನು ಒಪ್ಪುವುದು ಕಷ್ಟವೆನಿಸುತ್ತದೆ. ಯಾಕೆಂದರೆ ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ ಗೌರವ ಮೂಡುವುದು ಮತ್ತು ಆ ವ್ಯಕ್ತಿಗೆ ತಮ್ಮದೇ ಆದ ಗೌರವಸೂಚಕ ಪದವನ್ನು ನೀಡುವುದರ ಹಿಂದೆ ಯಾವುದೇ ಗಣಿತಶಾಸ್ತ್ರವಿರುವುದಿಲ್ಲ, ಅದು ಆಯಾ ಜನರಲ್ಲಿಯ ಭಾವನೆ, ಗೌರವ, ಅನುಭವ ಮುಂತಾದ ಭಾವನಾಲೋಕದ ತುಡಿತಗಳಿರುತ್ತವೆ. ಒಂದು ವೇಳೆ ಜನರು ಕೊಟ್ಟ ಪದವಿ ನಮಗಿಷ್ಟವಾಗದಿದ್ದಲ್ಲಿ ಅದನ್ನು ನಾವು ಉಪಯೋಗಿಸಬಾರದಷ್ಟೇ. ಬೇಸರವಾಗಿದೆಯೆಂಬ ಕಾರಣಕ್ಕಾಗಿ ಸಂಬಂಧಿಸಿದ ವ್ಯಕ್ತಿಯಲ್ಲಿ ಇಲ್ಲದೇ ಇರುವ ದೋಷಗಳನ್ನು ಕಂಡುಹಿಡಿಯಲು ಪ್ರಯತ್ನಿಸಬಾರದು.

ಇದುವರೆಗೆ ಪ್ರಕಟವಾಗಿರುವ ಗಾಂಧೀ ಕುರಿತ ಅಪಾರವಾದ ಸಾಹಿತ್ಯದಲ್ಲಿ ಮೋಹನದಾಸ್ ಕರಮಚಂದ ಗಾಂಧೀ ವೇಷ ಬದಲಿಸಿ ಮಹಾತ್ಮರಾದರೆಂದು ಎಲ್ಲೂ ಉಲ್ಲೇಖಿತವಾಗಿಲ್ಲ. ಅವರ ವ್ಯಕ್ತಿತ್ವ ಹೇಗೆ ಬದಲಾಗುತ್ತಾ ಮತ್ತು ಬೆಳೆಯುತ್ತಾ ಬಂದಿತೆಂಬುದು ಗಾಂಧಿ ಕುರಿತ ಎಲ್ಲ ಇತಿಹಾಸಕಾರರಿಗೆ ಗೊತ್ತಿದೆ. ಯಾವ ಇತಿಹಾಸಕಾರರೂ ಇದುವರೆಗೆ ಗಾಂಧೀಜಿ ವೇಷ ಬದಲಾಯಿಸಿ ಗಟಾರದ ನೀರನ್ನು ಕುಡಿದು ಮಹಾತ್ಮರಾದರೆಂದು ಸಂಶೋಧಿಸಿಲ್ಲ. ಯಾವುದೇ ನಾಗರಿಕ ದೇಶಗಳಲ್ಲಿ ಗಾಂಧೀಜಿ ತಮ್ಮ ಜೀವನದಲ್ಲಿ ಮಾಡುತ್ತಿದ್ದ ಪ್ರಯೋಗಗಳಿಂದ ನಕ್ಕಿದ್ದಿಲ್ಲ, ಟೀಕೆ ಟಿಪ್ಪಣಿ ಮಾಡಿರಬಹುದು. ಆದರೆ ಅವರ ಶ್ರದ್ಧೆಯನ್ನು ಪ್ರಶ್ನಿಸಿಲ್ಲ, ಬದಲಿಗೆ ಗಾಂಧಿಗೆ ಕೊಟ್ಟ ಸೆರೆಮನೆ ವಾಸದ ಶಿಕ್ಷೆಗಾಗಿ ಪ್ರಾಯಶ್ಚಿತ್ತಪಟ್ಟಿದ್ದಾರೆ.

ಗಾಂಧೀಜಿಯವರು ಸತ್ಯ ಮತ್ತು ಅಹಿಂಸಾ ಸಿದ್ಧಾಂತಗಳು ತಮ್ಮ ಒರಿಜಿನಲ್ ಸಿದ್ಧಾಂತಗಳೆಂದು ಎಲ್ಲಿಯಾದರೂ ಹೇಳಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ, ಅವೆರಡೂ ಸಿದ್ಧಾಂತಗಳು ಬೌದ್ಧಧರ್ಮದ ಸಿದ್ಧಾಂತಗಳೆಂದು ಗಾಂಧೀಜಿ ಕೂಡ ಹೇಳಿದ್ದಾರೆ. ಅವು ಹಿಮಾಲಯದಷ್ಟು ಪ್ರಾಚೀನವೆಂದೂ ಹೇಳಿದ್ದಾರೆ. ಪ್ರಾಚೀನತಮವಾದ ಮತ್ತು ಕೇವಲ ಧರ್ಮದ ಚೌಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ಆ ಸಿದ್ಧಾಂತಗಳನ್ನು ಸಾರ್ವಜನಿಕ ಜೀವನದಲ್ಲಿ ಮುಖ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಪ್ರಯೋಗ ಮಾಡಿದ್ದಾರೆ. ಆ ಸಿದ್ಧಾಂತಗಳ ಬಗ್ಗೆ ಗಾಂಧಿ ಕಾಪಿರೈಟ್ ಹೊಂದಿದ್ದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಸತ್ಯವನ್ನು ಎತ್ತಿಹಿಡಿಯುವುದು ಹೇಗೆ ಮತ್ತು ಅಹಿಂಸೆಯನ್ನು ಯಾವ ಹಂತದವರೆಗೆ ಪಾಲಿಸಬಹುದು ಎಂಬುದರ ಪ್ರಯೋಗವನ್ನು ಗಾಂಧಿ ಮಾಡಿದ್ದಾರೆ. ತಮ್ಮ ತೀರ್ಮಾನವೇ ಅಂತಿಮವಲ್ಲವೆಂದೂ, ಪ್ರತಿಯೊಬ್ಬರು ತಮ್ಮ ತಮ್ಮ ಪ್ರಯೋಗಗಳ ಬೆಳಕಿನಲ್ಲಿ ಮುನ್ನಡೆಯಬೇಕೆಂದು ಹೇಳಿದ್ದಾರೆ. ಸತ್ಯ ಮತ್ತು ಅಹಿಂಸೆಯ ಪ್ರಯೋಗದಿಂದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಗಾಂಧೀಜಿ ಪ್ರಯತ್ನಿಸಿದರೆ ಹೊರತು ಹೊಸ ಸಮಸ್ಯೆಗಳನ್ನು ಉಂಟುಮಾಡಲು ಅಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಗಾಂಧೀಜಿಯವರು ಬೌದ್ಧಧರ್ಮದಿಂದ ಸತ್ಯ ಮತ್ತು ಅಹಿಂಸೆಯ ವಿಚಾರಗಳನ್ನು ಪಡೆದರೆ ಕ್ರಿಶ್ಚಿಯನ್ ಧರ್ಮದಿಂದ ಪ್ರೇಮದ ವಿಚಾರವನ್ನು ಪಡೆದರು. ಇಸ್ಲಾಂ ಧರ್ಮದಿಂದ ಸಹೋದರತ್ವದ ವಿಚಾರ ಪಡೆದರು. ಎಲ್ಲ ಧರ್ಮಗಳಲ್ಲಿಯ ಶ್ರೇಷ್ಠ ವಿಚಾರಗಳನ್ನು ಪಡೆದು ಮಾನವ ಧರ್ಮವೆಂಬ ನವನೀತವನ್ನು ಕೊಟ್ಟರು. ಅವರು ಎಂದೂ ಬೇರೆಯವರ ಬಂಡವಾಳದಲ್ಲಿ ಯಾವುದೇ ಪ್ರಕಾರದ ವ್ಯಾಪಾರ ಮಾಡಿಲ್ಲ, ಆಯಾ ವಿಚಾರದ ಮೂಲ ಪುರುಷರಿಗೆ ತಮ್ಮ ಕೃತಜ್ಞತೆ ತಿಳಿಸಿದ್ದಾರೆ.

ಗಾಂಧೀಜಿಯವರ ಜೀವನ ವಿಷಯ ಗಂಭೀರತೆ ಮತ್ತು ಪ್ರಾಮಾಣಿಕತೆಯಿಂದ ತುಂಬಿದುದಾಗಿದೆ ಎಂಬ ಸಂಗತಿ ಅವರ ಜೀವನ ಚರಿತ್ರೆ, ದಕ್ಷಿಣ ಆಫ್ರಿಕಾದಲ್ಲಿಯ ಸತ್ಯಾಗ್ರಹ ಮತ್ತು ಅವರ ಲೇಖನಗಳನ್ನು ಓದಿದವರಿಗೆಲ್ಲ ಗೊತ್ತಾಗುತ್ತದೆ. ಅವರು ಎಂದೂ ತಮ್ಮ ಅಂಗಿಯ ತೋಳಿನ ಸಂದಿಯಲ್ಲಿ ಕತ್ತಿಯನ್ನು ಅಡಗಿಸಿಟ್ಟುಕೊಂಡಿರಲಿಲ್ಲ, ಅವರ ವ್ಯವಹಾರವೆಲ್ಲ ಪಾರದರ್ಶಕವಾಗಿತ್ತು. ಅವರೆಂದೂ ಯಾರಿಗೂ ವಿಶ್ವಾಸಘಾತಮಾಡಿದ ಉಧಾಹರಣೆಯಿಲ್ಲ, ಅವರು ಎಂದೂ ಹಿಂದಿನಿಂದ ಯಾರ ಮೇಲೂ ದಾಳಿ ಮಾಡಿದವರಲ್ಲ, ದುಂಡು ಮೇಜಿನ ಪರಿಷತ್ತು ಸಂಪೂರ್ಣವಾಗಿ ರಾಜಕೀಯ ಪರಿಷತ್ತಾಗಿತ್ತು, ಅಲ್ಲಿಯೂ ಇಂಗ್ಲಿಷರು "ಒಡೆದು ಆಳುವ ನೀತಿಯನ್ನು" ಅನುಸರಿಸಲು ಪ್ರಯತ್ನಿಸುತ್ತಿದ್ದರು. ಭಾರತದಲ್ಲಿಯ ದಲಿತರ ಸಮಸ್ಯೆ ರಾಜಕೀಯವಾದುದಲ್ಲ ಅದೊಂದು ಉಗ್ರವಾದ ಸಾಮಾಜಿಕ ಸಮಸ್ಯೆಯಾಗಿತ್ತು, ಸಾಮಾಜಿಕ ಸಮಸ್ಯೆಯ ಪರಿಹಾರಕ್ಕೆ ರಾಜಕೀಯ ತಂತ್ರವನ್ನು ಉಪಯೋಗಿಸಿದಲ್ಲಿ ಸಮಸ್ಯೆ ಕರಾಳ ರೂಪವನ್ನು ತಾಳುತ್ತದೆಯೆಂಬ ಯೋಚನೆಯಿಂದ ಗಾಂಧೀಜಿ ಆ ಸಮಸ್ಯೆಯನ್ನು ತಮ್ಮ ಹತೋಟಿಯಲ್ಲಿರಿಸಿಕೊಳ್ಳಲು ಪ್ರಯತ್ನಿಸಿದರೆ ವಿನಃ ಬೇರೆ ಯಾವುದೇ ಮುಖಂಡರನ್ನು ಅಲ್ಲಗಳೆಯುವ ಕುಹಕ ನೀತಿಯಾಗಿರಲಿಲ್ಲ.

ದಲಿತರ ಸಮಸ್ಯೆಗೆ ಕಾರಣವಾಗಿದ್ದ ಹಿಂದೂ ಧರ್ಮದಲ್ಲಿಯ ಲೋಪದೋಷಗಳ ನಿವಾರಣೆಗಾಗಿ ಅವರು ಬಹಳಷ್ಟು ಪ್ರಯತ್ನಿಸಿದರು, ಪಶ್ಚಾತ್ತಾಪಪಟ್ಟರು, ಮುಂದಿನ ಜನ್ಮದಲ್ಲಿ ದಲಿತ ಬಾಲಕಿಯಾಗಿ ಜನ್ಮ ಪಡೆಯಬೇಕೆಂಬ ಇಚ್ಛೆಪಟ್ಟರು. ಹಿಂದೂ ಧರ್ಮದ ಶುದ್ಧೀಕರಣಕ್ಕಾಗಿ ಅವರು ಮಾಡಿದ ಪ್ರಯತ್ನ ಹರಿಜನೋದ್ಧಾರಕ್ಕಾಗಿ ಮಾಡಿದ ಪ್ರಯತ್ನ ಎಲ್ಲರಿಗು ವಿದಿತವಾಗಿದೆ. ಗಾಂಧೀಜಿಯವರು ಗೋಪಾಲಕೃಷ್ಣ ಗೋಖಲೆ ಮತ್ತು ಬಾಲಗಂಗಾಧರ ತಿಲಕ್ ಹಾಗೂ ಆಗಿನ ಕಾಲದ ಎಲ್ಲ ದೇಶ ನಾಯಕರ ಬಗ್ಗೆ ಅಪಾರವಾದ ಗೌರವವಿರಿಸಿಕೊಂಡಿದ್ದರು. ಗುರುಹಿರಿಯರನ್ನು, ಜ್ಞಾನಿಗಳನ್ನು ಗೌರವಿಸುವುದು ಗಾಂಧಿಯವರ ರಕ್ತದಲ್ಲಿಯೇ ಇದ್ದ ಗುಣವಾಗಿತ್ತು. ಆದ್ದರಿಂದ "ತಿಲಕ್ ಸ್ವರಾಜ್ಯ ನಿಧಿ" ಯ ಬಗ್ಗೆ ಹೇಳಿರುವ ಮಾತುಗಳು ಸತ್ಯಕ್ಕೆ ದೂರವಾದವು.

ಗಾಂಧೀಜಿಯೆಂದೂ ರಾಜಕಾರಣದಲ್ಲಿ ವ್ಯಾಪಾರೀಕರಣ ವನ್ನು ಮಾಡಿದವರಲ್ಲ, ಅವರು ಪಕ್ಷಗಳ ರಾಜಕಾರಣಕ್ಕೆ ಭಿನ್ನವಾದ ಪ್ರಜಾರಾಜ್ಯವನ್ನು ಪ್ರತಿಪಾದಿಸಿದವರಾಗಿದ್ದರು ಮತ್ತು ರಾಜಕಾರಣದಲ್ಲಿ ಆಧ್ಯಾತ್ಮಿಕತೆಯ ಮೂಲಕ ನೈತಿಕತೆಯನ್ನು ಸ್ಥಾಪಿಸಲು ಬಯಸಿದ್ದರು. ಅಂಬೇಡ್ಕರರ 125ನೇ ಜಯಂತಿಯ ಸಂದರ್ಭದಲ್ಲಿ ರಘೋತ್ತಮ ಹೊ.ಬರವರು ಬರೆದ ಲೇಖನ ಸಂತೋಷವನ್ನುಂಟು ಮಾಡುವುದರ ಬದಲು ನೋವನ್ನುಂಟುಮಾಡಿತು. ಯಾವ ಉದ್ದೇಶದಿಂದ ಈ ಲೇಖನವನ್ನು ಪತ್ರಿಕೆ ಪ್ರಕಟಿಸಿತು ಎಂಬುದು ಗೂಢವಾಗಿಯೇ ಉಳಿಯುತ್ತದೆ.

-ಸುರೇಂದ್ರ ಕೌಲಗಿ, ಮೇಲುಕೋಟೆ

# 'ಕಸ್ತೂರಿ ರಂಗನ್ ವರದಿ ಜಾರಿ ಏಕೆ ಬೇಡ?' ಜನಜಾಗೃತಿ ಮೂಡಿಸುವ ಕೃತಿ


## ಪುಸ್ತಕ ವಿಮರ್ಶೆ

ಕರ್ನಾಟಕ ರಾಜ್ಯ ಸರಕಾರ ತನ್ನ ಜವಾಬ್ದಾರಿಯನ್ನು ...ಂದ್ರದತ್ತ ತಳ್ಳಿ ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿದೆ. ...ಈ ಸಂದರ್ಭದಲ್ಲಿ ಪತ್ರಕರ್ತ ರಾಮಸ್ವಾಮಿ ಹುಲಕೋಡು ...ವರ 'ಕಸ್ತೂರಿ ರಂಗನ್ ವರದಿ ಜಾರಿ ಏಕೆ ಬೇಡ?' ...ಂಬ ಕೃತಿ ಪ್ರಕಟಗೊಂಡಿದೆ. ಈ ಕೃತಿಯು ಈಗ ಅತ್ಯಂತ ...ಸ್ತುತವಾದ ಕೃತಿಯಾಗಿದ್ದು ಕಸ್ತೂರಿ ರಂಗನ್ ವರದಿಯನ್ನು ...ರೋಧಿಸುವವರು ಮತ್ತು ಬೆಂಬಲಿಸುವವರು ಓದಲೇ ...ಬೇಕಾದ ಕೃತಿಯಾಗಿದೆ. ಪಶ್ಚಿಮಘಟ್ಟ ಸಂರಕ್ಷಣೆಗೆ ಪ್ರೊ| ...ಮಾಧವ ಗಾಡ್ಗಿಲ್ ವರದಿ ಹಾಗೂ ಡಾ| ಕಸ್ತೂರಿ ರಂಗನ್ ...ವರದಿ ಅಗತ್ಯ ಎಂಬ ಭ್ರಮೆ ಇರುವ ವೇಳೆಯಲ್ಲಿ, ಈ ...ಎರಡೂ ವರದಿಗಳ ಬಗ್ಗೆ ಬೆಳಕು ಚೆಲ್ಲುವ ಕಾರ್ಯವನ್ನು ...ಲೇಖಕರು ಮಾಡಿದ್ದಾರೆ.

ಕಾಡು ತಮ್ಮ ಉಸಿರಾಗಿ ಬದುಕುತ್ತಿರುವ ಜನರನ್ನು ...ಕಾಡಿನಿಂದ ಹೊರದಬ್ಬಿದರೆ ಯಾವ ಪರಿಸ್ಥಿತಿ ಉಂಟಾಗುತ್ತದೆ ...ಎನ್ನುವುದನ್ನು ವರ್ಡ್ಸ್‌ವರ್ತ್‌ನ ಕವನದೊಂದಿಗೆ ಆರಂಭಿಸಿ ...ವ ಕೃತಿ ವರದಿ ಜಾರಿಗೆ ಏಕೆ ಬಂತು ಎಂಬುದನ್ನು ...ಬರೆದಿಟ್ಟಿದ್ದಾರೆ. ಈ ಎರಡೂ ಸಮಿತಿಗಳ ವರದಿಗಳು ...ಸರ್ವೋಚ್ಚ ನ್ಯಾಯಾಲಯದ ಆದೇಶ ಎಂದು ಮೇಲಿಂದ ...ಮೇಲೆ ಡೋಂಗಿ ಪರಿಸರವಾದಿಗಳು ಹೇಳಿ, ಜನರಲ್ಲಿ ...ಭಯವನ್ನು ಉಂಟುಮಾಡಿದ್ದಾರೆ. ಪಶ್ಚಿಮಘಟ್ಟವನ್ನು ಉಳಿಸ ...ಬೇಕು ಎಂಬ ಯತ್ನಗಳು 1986ರಲ್ಲಿ ಆರಂಭವಾಗಿತ್ತು. ...ಆಗ ಡಾ| ಕೆ. ಶಿವರಾಮ ಕಾರಂತ, ಸುರೇಶ್ ಹೆಬ್ಳೀಕರ್, ...ಕೆ.ವಿ.ಸುಬ್ಬಣ್ಣ ಮುಂತಾದವರು ಸೇರಿ ಪಾದಯಾತ್ರೆ ನಡೆಸಿ ...ಹೋರಾಟ ಮಾಡಿದ್ದರು. ಇವರೆಲ್ಲರಿಗೂ ಅಪಾರವಾದ ...ಪರಿಸರ ಕಾಳಜಿ ನೈಜವಾಗಿ ಇತ್ತು, ಆದರೆ ಇದನ್ನು ...ಕೆಲವು ಎನ್.ಜಿ.ಓ.ಗಳು ಹೈಜಾಕ್ ಮಾಡಿದ್ದರು ಎಂಬುದನ್ನು ...ತಿಳಿಸಿ, ವಿದೇಶಿ ಹಣದಿಂದ ಪರಿಸರ ಉಳಿಸುವ (?) ...ಚಟುವಟಿಕೆ ನಡೆಸುತ್ತಿರುವ ಸ್ವಯಂಸೇವಾ ಸಂಘಟನೆಗಳ ...ಪ್ರತಿನಿಧಿಗಳು ಭಾಗವಹಿಸಿದ್ದು, ಮತ್ತು ಹಿಂದೆ ನಡೆದ ...ಹೋರಾಟ ಜನರ ನಡುವಿನಿಂದ ಹುಟ್ಟಿದ್ದರಿಂದ ಆದಂತಹ ...ಪ್ರಯೋಜನಗಳು ಏನು ಎಂಬುದನ್ನು ವಿವರಿಸಿದ್ದಾರೆ.

ಗೋವಾದಲ್ಲಿ ಕೀಸ್ಟೋನ್ ಫೌಂಡೇಶನ್ ಕ್ಯಾಂಪಸ್‌ನಲ್ಲಿ ...ನಡೆದ ಸಮಾವೇಶದಲ್ಲಿ ಎನ್.ಜಿ.ಓ.ಗಳು ಹೇಗೆ ...ಪರೋಕ್ಷವಾಗಿ ಪಶ್ಚಿಮಘಟ್ಟದ ಮೇಲೆ ನಿಯಂತ್ರಣವನ್ನು ...ತರಲು ಯತ್ನಿಸಿದರು ಮತ್ತು ಸರ್ವೋಚ್ಚ ನ್ಯಾಯಾಲಯದ ...ಮೂಲಕ ಹಸಿರು ಪೀಠವನ್ನು ಸ್ಥಾಪಿಸುವ ಕುರಿತು ಕೂಡ ...ಅಲ್ಲಿಯೇ ಚರ್ಚೆ ನಡೆಯಿತು. ಆಗಿನ ಪರಿಸರ ಖಾತೆ ...ಸಚಿವ ಜಯರಾಮ್ ರಮೇಶ್ ಭಾಗವಹಿಸಿ, ನೀಲಗಿರಿ ...ಡಿಕ್ಲೇರೇಶನ್ ಎಂದು ಕರೆಸಿಕೊಂಡ ಈ ಸಮಾವೇಶದಲ್ಲಿ ...ಮಾಧವ ಗಾಡ್ಗಿಲ್ ಅವರ ನೇತೃತ್ವದಲ್ಲಿಯೇ ವರದಿ ರಚಿಸ ...ಬೇಕು ಎಂಬ ತೀರ್ಮಾನವನ್ನು ಅಲ್ಲಿಯೇ ತೆಗೆದುಕೊಂಡು, ...ಸರಕಾರಕ್ಕೆ ಸೂಚನೆ ನೀಡಲಾಗಿತ್ತು, ಜೊತೆಗೆ ಪಶ್ಚಿಮಘಟ್ಟ ...ಆಡಳಿತಕ್ಕೆ ಬೇರೆ ವ್ಯವಸ್ಥೆಯನ್ನು ಮಾಡಿ "ಪಶ್ಚಿಮಘಟ್ಟ ...ಪರಿಸರ ಪ್ರಾಧಿಕಾರ" ಎಂಬುದನ್ನು ಸ್ಥಾಪಿಸಿ, ಪರ್ಯಾಯ ...ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆಯನ್ನು ವಿದೇಶಿ ನಿಯಂತ್ರ ...ಣದ ಮತ್ತು ಬಂಡವಾಳದ ಸ್ವಯಂಸೇವಾ ಸಂಸ್ಥೆಗಳು ...ಹೇಗೆ ಹೈಜಾಕ್ ಮಾಡಿದರು ಎಂಬುದನ್ನು ಸವಿಸ್ತಾರವಾಗಿ ...ತಿಳಿಸಿದ್ದಾರೆ.

ಪ್ರೊ| ಮಾಧವ ಗಾಡ್ಗಿಲ್ ವರದಿ ಅಥವ ಡಾ| ...ಕಸ್ತೂರಿ ರಂಗನ್ ವರದಿಯನ್ನು ಆರಂಭದಿಂದಲೂ ವಿರೋಧಿ ...ಸುತ್ತಾ ಬಂದದ್ದು ಕೊಡಗು ಜಿಲ್ಲೆ, ರಾಜ್ಯದ ಹಿರಿಯ ...ಚಿಂತಕ, ಪ್ರಬುದ್ಧ ರಾಜಕಾರಣಿ ಎ.ಕೆ.ಸುಬ್ಬಯ್ಯ. ...ನಾಗರಹೊಳೆಯಲ್ಲಿ ಗಿರಿಜನರನ್ನು ಸ್ಥಳಾಂತರಿಸುವ ವಿಚಾರದಲ್ಲಿ ...ಎನ್.ಜಿ.ಓ.ಗಳು ಮಧ್ಯ ಪ್ರವೇಶಿಸಿ, ವಿದೇಶಿ ಹಣವನ್ನು ...ಲಪಟಾಯಿಸುತ್ತಿದ್ದುದನ್ನು ಬಹಿರಂಗಪಡಿಸಿ, ಅವರನ್ನು ...ಡೋಂಗಿ ಪರಿಸರವಾದಿಗಳು ಎಂದು ಬಹಿರಂಗವಾಗಿ ...ಟೀಕಿಸಿದ್ದರು. ರಾಮಸ್ವಾಮಿ ಹುಲಕೋಡುರವರು ...2009-10ರಲ್ಲಿ ಪಶ್ಚಿಮಘಟ್ಟ ಸಂರಕ್ಷಣೆಯ ಹೋರಾಟವನ್ನು ...ಎನ್.ಜಿ.ಓ.ಗಳು ಹೈಜಾಕ್ ಮಾಡಿದ್ದಾರೆ-ಎಂದು ತಿಳಿಸಿದ್ದಾರೆ. ...ಆದರೆ ವಾಸ್ತವದಲ್ಲಿ 2004ರಲ್ಲಿಯೇ ಕರ್ನಾಟಕದಲ್ಲಿ ...ಎಸ್.ಎಂ.ಕೃಷ್ಣ ಸರಕಾರ ಅಸ್ತಿತ್ವದಲ್ಲಿ ಇದ್ದ ವೇಳೆಯಲ್ಲಿ, ...ಕೊಡಗು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುವ ...ಎನ್.ಜಿ.ಓ.ಗಳು "ಗ್ರೇಟರ್ ತಲಕಾವೇರಿ" ಹೆಸರಿನಲ್ಲಿ ...ಪಶ್ಚಿಮಘಟ್ಟ ಸಂರಕ್ಷಣೆಯ ವಿಚಾರವನ್ನು ಮುಂದಿಟ್ಟು, ...ವಿಶ್ವಪಾರಂಪರಿಕ ತಾಣದ ಪ್ಯಾಕ್ಸ್‌ಗೆ ಯುನೆಸ್ಕೋ ...ಬಂಡವಾಳದಿಂದ ತರುವ ಮತ್ತು ಈ ಭಾಗದಲ್ಲಿ ವಾಸಿಸುವ ...ಜನರನ್ನು ಹೊರ ಹಾಕಲು ಷಡ್ಯಂತ್ರವನ್ನು ರೂಪಿಸುವ ...ಕುರಿತು ವಿಧಾನಸೌಧದಲ್ಲಿಯೇ ಚರ್ಚೆಯನ್ನು ನಡೆಸಿದ್ದರು ...ಎಂಬುದನ್ನು ತಿಳಿದಿರಲಿಲ್ಲ ಎಂದು ಕಾಣುತ್ತದೆ. ...ಎನ್.ಜಿ.ಓ.ಗಳ ಸಂಪರ್ಕವಿಲ್ಲದೆ ಕೇವಲ ತನ್ನ ಅನುಭವದಿಂದ ...ಈ ಎಲ್ಲಾ ಚಟುವಟಿಕೆಗಳು ವಿದೇಶಿ ಹಣದಿಂದ ...ನಡೆಯುತ್ತಿವೆ ಎಂಬುದನ್ನು ತಿಳಿದಿದ್ದ ಎ.ಕೆ. ಸುಬ್ಬಯ್ಯ ...ಕೊಡಗು ಜಿಲ್ಲೆಯಲ್ಲಿ ತನ್ನ ಹೋರಾಟದಲ್ಲಿ ಕೈಜೋಡಿಸಿರುವ ...[illegible] ಸುಬ್ಬಯ್ಯನವರ ಹೆಸರಿನಲ್ಲಿ ರಾಜ್ಯ ಉಚ್ಚ ...ನ್ಯಾಯಾಲಯದಲ್ಲಿ ಈ ಡೋಂಗಿ ಪರಿಸರವಾದಿಗಳಿಗೆ ...ಬರುತ್ತಿರುವ ವಿದೇಶಿ ಹಣದ ಬಗ್ಗೆ ಸಿ.ಬಿ.ಐ. ವಿಚಾರಣೆ ...ಆಗಬೇಕು ಮತ್ತು ಅವರುಗಳು ಅರಣ್ಯ ಪ್ರದೇಶದೊಳಗೆ ...[illegible] ನಿಯಂತ್ರಿಸಬೇಕು ಎಂದು ಸಾರ್ವಜನಿಕ




ಹಿತಾಸಕ್ತಿ ಮೊಕದ್ದಮೆಯನ್ನು ಹೂಡಿದ್ದು ಕೂಡ ಈ ಕೃತಿಯಲ್ಲಿ ದಾಖಲಾಗಬೇಕಾಗಿತ್ತು, ಹಲವಾರು ಎನ್.ಜಿ.ಓ.ಗಳು ಬೇರೆ ಬೇರೆ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇವೆಲ್ಲವೂ ಒಂದೇ ನಿಯಂತ್ರಣದಲ್ಲಿ, ಬೇರೆ ಬೇರೆ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎನ್ನುವುದರ ಮೇಲೆ ಬೆಳಕು ಚೆಲ್ಲಬೇಕಾಗಿತ್ತು.

ಪ್ರೊ| ಮಾಧವ ಗಾಡ್ಗಿಲ್ ವರದಿಯನ್ನು ಸಿದ್ಧಪಡಿಸುವ ವೇಳೆಯಲ್ಲಿ ಹಿಂದೆ ಕೀಸ್ಟೋನ್ ಫೌಂಡೇಶನ್ ವತಿಯಿಂದ ನಡೆದ ಸಮಾವೇಶದಲ್ಲಿ ತೆಗೆದುಕೊಂಡ ತೀರ್ಮಾನದಂತೆ ವರದಿಯನ್ನು ಸಿದ್ಧಪಡಿಸಲಾಗಿತ್ತು ಎಂದು ರಾಮಸ್ವಾಮಿಯವರು ಹೇಳಿರುವುದನ್ನು ಗಮನಿಸಿದರೆ, ಸಂಪೂರ್ಣವಾಗಿ ಪಶ್ಚಿಮಘಟ್ಟವನ್ನು ಹೇಗೆ ನಿಯಂತ್ರಿಸಬೇಕು ಎಂಬ ನೀಲಿನಕ್ಷೆಯನ್ನು ವಿದೇಶಿಯರು ಸಿದ್ಧಪಡಿಸಿ, ಅದಕ್ಕೆ ಮಾಧವ ಗಾಡ್ಗಿಲ್‌ರವರು ತಮ್ಮ ಒಪ್ಪಿಗೆಯನ್ನು ಸಹಿ ಹಾಕುವ ಮೂಲಕ ಸೂಚಿಸಿ, ಪಶ್ಚಿಮಘಟ್ಟದ ಸಂರಕ್ಷಣೆಗೆ ಇದೊಂದು ಮಹತ್ತರವಾದ ಯೋಜನೆ ಎನ್ನುವಂತೆ ಬಿಂಬಿಸಿತ್ತು. ವರದಿ ಮೊದಲೇ ಸಿದ್ಧವಾಗಿದ್ದರಿಂದ ಸ್ಥಳೀಯರನ್ನು ಭೇಟಿಯಾಗುವ ಮತ್ತು ಅವರ ಸಮಸ್ಯೆಗಳನ್ನು ಆಲಿಸುವ ಯತ್ನಕ್ಕೆ ಹೋಗಲಿಲ್ಲ, ಹಾಗಾಗಿ ಈ ವರದಿ ಜನವಿರೋಧಿಯಾಗಿತ್ತು ಮತ್ತು ವರದಿಯನ್ನು ತಿರಸ್ಕರಿಸಬೇಕು ಎಂದು ಈ ಭಾಗದ ಜನರು ಪ್ರತಿಭಟನೆಗೆ ಮುಂದಾಗಿದ್ದರು. ಆಗ ಗೋವಾ ಫೌಂಡೇಶನ್‌ರವರು ಹಸಿರುಪೀಠದ ಮುಂದೆ ಅರ್ಜಿಯನ್ನು ಸಲ್ಲಿಸಿದ್ದರು. ಹಾಗಾಗಿ ದೀರ್ಘ ನಿದ್ರೆಯಲ್ಲಿದ್ದ ಸರಕಾರ ಡಾ| ಕಸ್ತೂರಿ ರಂಗನ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು ಎಂಬುದನ್ನು ಆಧಾರಸಹಿತ ವಾಗಿ ರಾಮಸ್ವಾಮಿಯವರು ತಿಳಿಸುವ ಮೂಲಕ, ಇದು ಸರಕಾರದ ಅಥವ ನ್ಯಾಯಾಲಯದ ಸ್ವಪ್ರೇರಣೆಯ ಕಾರ್ಯವಲ್ಲ, ಇದರ ಹಿಂದೆ ಇರುವುದು ಪಾಶ್ಚಿಮಾತ್ಯ ದೇಶಗಳು ಹಾಗೂ ವಿದೇಶಿ ದೇಣಿಗೆ ಪಡೆಯುವ ಸಂಘಟನೆಗಳು ಎಂಬುದನ್ನು ಬಹಿರಂಗಪಡಿಸಿದ್ದಾರೆ.

ಡಾ| ಕಸ್ತೂರಿ ರಂಗನ್ ಸಮಿತಿ ಕೂಡ ಹೆಚ್ಚು ಕೆಲಸ ಮಾಡದಿದ್ದರೂ ವಿಭಿನ್ನವಾದ ವರದಿಯನ್ನು ನೀಡಿತ್ತು, ಇದಕ್ಕೂ ಆಕ್ಷೇಪಣೆಗಳು ಬಂದು, ಹಿಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆ ಆದವು. ಇಷ್ಟೆಲ್ಲದರ ನಡುವೆ ಮತ್ತೆ ಎನ್.ಜಿ.ಓ.ಗಳು ಹಸಿರು ಪೀಠಕ್ಕೆ ಅರ್ಜಿ ಸಲ್ಲಿಸಿದಾಗ, ಕೇಂದ್ರ ಸರಕಾರ ಅನಿವಾರ್ಯವಾಗಿ ಕಸ್ತೂರಿ ರಂಗನ್ ವರದಿಯನ್ನು ಒಪ್ಪಿಕೊಂಡಿರುವುದಾಗಿ ನ್ಯಾಯಾಲಯಕ್ಕೆ ಪ್ರಮಾಣಪತ್ರವನ್ನು ಸಲ್ಲಿಸಿತ್ತು. ಜೊತೆಗೆ ಕರಡು ಅಧಿಸೂಚನೆಯನ್ನು ಹೊರಡಿಸಿ, ರಾಜ್ಯ ಸರಕಾರಗಳ ಆಕ್ಷೇಪಣೆಗಳನ್ನು ಕೋರಿತ್ತು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಉಪಸಮಿತಿಗಳನ್ನು ರಚಿಸಲಾಗಿತ್ತು ಎನ್ನುವ ಪೂರ್ಣ ಚಿತ್ರಣವನ್ನು ನೀಡುವ ಮೂಲಕ ಈ ವರದಿಯ ಹಿಂದೆ ಇರುವಂತಹ ಶಕ್ತಿಗಳು ಯಾವುದು ಎಂಬುದನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಇದರ ಜೊತೆಯಲ್ಲಿ ಈ ವರದಿಯಲ್ಲಿ ಏನಿದೆ ಎಂಬುದನ್ನು ಅತ್ಯಂತ ಸರಳ ಭಾಷೆಯಲ್ಲಿ ಬರೆಯುವ ಮೂಲಕ, ಈ ಎರಡೂ ವರದಿಗಳು ಕಗ್ಗಂಟು ಎನ್ನುವಂತೆ ವರ್ತಿಸುತ್ತಿದ್ದವರಿಗೆ ಅರ್ಥ ಆಗುವಂತೆ ಮಾಡಿದ್ದಾರೆ. ಗಾಡ್ಗಿಲ್ ವರದಿಗಿಂತ ಕಸ್ತೂರಿ ರಂಗನ್ ವರದಿ ಹೇಗೆ ಭಿನ್ನ ಎಂಬುದನ್ನು ವಿವರಿಸಿದ್ದಾರೆ. ಕಸ್ತೂರಿ ರಂಗನ್ ವರದಿಯಲ್ಲಿಯೂ ಆಗಿರುವಂತಹ ಎಡವಟ್ಟುಗಳನ್ನು ಬೊಟ್ಟು ಮಾಡಿದ್ದಾರೆ. ಆದರೆ ರಾಮಸ್ವಾಮಿಯವರು ಕೇವಲ ಈ ವರದಿಯನ್ನು ವಿಶ್ಲೇಷಿಸಿದ್ದಾರೆಯೇ ವಿನಹ, ಈ ವರದಿಯಲ್ಲಿ ಇರುವಂತಹ ಹಲವಾರು ಅಂಶಗಳಿಗೆ ಬೇರೆ ಬೇರೆ ನಿಯಂತ್ರಣಗಳು ಹೇಗೆ ಅನ್ವಯವಾಗುತ್ತದೆ ಎಂಬುದನ್ನು ವಿಶ್ಲೇಷಿಸುವ ಯತ್ನವನ್ನು ಮಾಡಿಲ್ಲ, ಉದಾಹರಣೆಗೆ ಕೆಂಪು ವಲಯದ ವ್ಯಾಪ್ತಿಗೆ ಬರುವಂತಹ ವೈದ್ಯಕೀಯ ಸೌಲಭ್ಯಗಳ ವಿಚಾರದಲ್ಲಿ 'ಬಯೋ ಮೆಡಿಕಲ್ ವೇಸ್ಟ್ ರೂಲ್' ಅಡಿಯಲ್ಲಿ ಹೆಲ್ತ್ ಕೇರ್ ಎಸ್ಟಾಬ್ಲಿಶ್‌ಮೆಂಟ್ ಬಗ್ಗೆ ಇರುವಂತಹ ನಿಯಂತ್ರಣಗಳು ಹೇಗೆ ಮಾರಕ ಎಂಬುದರ ಬಗ್ಗೆ ಬೆಳಕು ಚೆಲ್ಲಲು ಯತ್ನಿಸಬೇಕಾಗಿತ್ತು, ಜೊತೆಗೆ ಕಲ್ಚರಲ್ ಲ್ಯಾಂಡ್ ಸ್ಕೇಪ್ ಗುರುತಿಸಿ ಅದನ್ನು ಮತ್ತೆ ನ್ಯಾಚುರಲ್ ಲ್ಯಾಂಡ್ ಸ್ಕೇಪ್‌ನಲ್ಲಿ ಅಳವಡಿಸಿದ್ದರ ಬಗ್ಗೆ ಚರ್ಚಿಸಬೇಕಾಗಿತ್ತು.

ಪರಿಸರವಾದಿಗಳು ಮತ್ತು ಅರಣ್ಯ ಇಲಾಖೆಯು ಅರಣ್ಯ ಕಾಯ್ದೆಯಲ್ಲಿ ಹಾಗು ಈ ವರದಿಗಳಲ್ಲಿ ತಮಗೆ ಬೇಕಾದ ಅಂಶಗಳನ್ನು ಮಾತ್ರ ಜನರ ಮುಂದಿಡುತ್ತದೆ. ಆದರೆ ಇಲ್ಲಿ ಅರಣ್ಯ ಹಕ್ಕು ಕಾಯ್ದೆ ಜಾರಿಯಾಗಬೇಕು ಎಂದು ವರದಿ ಹೇಳಿರುವುದನ್ನು ಅರಣ್ಯ ನಿರ್ವಹಣಾ ಕಾರ್ಯಕ್ರಮಗಳಿಗೆ ಅರಣ್ಯವಾಸಿಗಳನ್ನೇ ಬಳಸಿಕೊಳ್ಳಬೇಕು ಮತ್ತು ವಿವಿಧ ರೀತಿ ಪ್ರೋತ್ಸಾಹಗಳನ್ನು ನೀಡಬೇಕು ಎಂಬುದನ್ನು ಪ್ರಚಾರಪಡಿಸುವ ಮೂಲಕ ವರದಿಯಲ್ಲಿ ಅಡಕವಾಗಿರುವ, ಆದರೆ ಹೆಚ್ಚು ಚರ್ಚೆಯಾಗದ ವಿಚಾರಗಳ ಬಗ್ಗೆ ವಿವರಣೆಯನ್ನು ನೀಡಿದ್ದಾರೆ.

'ನಾವೇಕೆ ವಿರೋಧಿಸಬೇಕು' ಎನ್ನುವ ಅಧ್ಯಾಯದಲ್ಲಿ ಈ ಸಮಿತಿಯನ್ನು ರಚಿಸಿದ್ದು ಸ್ವಯಂಸೇವಾ ಸಂಸ್ಥೆಗಳ ಒತ್ತಡಕ್ಕೆ ಮಣಿದು ಆಗಿತ್ತು, ಇದರಲ್ಲಿ ಕೇವಲ ಅಕಾಡೆಮಿಕ್ ತಜ್ಞರು ಇದ್ದರೇ ವಿನಹ, ಪರಿಸರದ ಬಗ್ಗೆ ಆಳವಾದ ಜ್ಞಾನವುಳ್ಳವರು ಇರಲಿಲ್ಲ, ವರದಿ ಸಿದ್ಧಪಡಿಸುವಾಗ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ, ಸಮಿತಿಯಲ್ಲಿ ಜನಪ್ರತಿನಿಧಿಗಳು ಇರಲಿಲ್ಲ, ಹಾಗಾಗಿ ಇದು ಪ್ರಜಾತಂತ್ರ ವ್ಯವಸ್ಥೆಗೆ ಮಾರಕ ಎಂದಿದ್ದಾರೆ. ಅಲ್ಲದೆ ಈ ಸಂಪೂರ್ಣ ವರದಿಯಲ್ಲಿ ಪಶ್ಚಿಮಘಟ್ಟಗಳ ಜೀವವೈವಿಧ್ಯ ಮತ್ತು ಪರಿಸರದ ವಿಚಾರದ ಬಗ್ಗೆ ಮಾತ್ರ ಚರ್ಚಿಸಲಾಗಿದೆ. ಕಾಡಿನೊಂದಿಗೆ ಬೆರೆತು ಬದುಕುತ್ತಿರುವ ಜನಸಮುದಾಯವನ್ನು ಕಡೆಗಣಿಸಲಾಗಿದೆ. ನೆಪಮಾತ್ರಕ್ಕೆ ಸ್ಥಳೀಯ ಜನಸಮುದಾಯದ ಕಲ್ಯಾಣದ ಬಗ್ಗೆ ಪ್ರಸ್ತಾಪಿಸಲಾಗಿದೆ ಎಂದು ವರದಿ ಹೇಗೆ ಜನವಿರೋಧಿ ಎಂಬುದನ್ನು ಅವರು ವಿಶ್ಲೇಷಿಸಿದ್ದಾರೆ. ಪಶ್ಚಿಮಘಟ್ಟ ಹಾಳಾಗುತ್ತಿರುವುದಕ್ಕೆ ಜನವಸತಿಯ ಒತ್ತಡ ಕಾರಣವಲ್ಲ ಎಂಬುದನ್ನು 2001ರಿಂದ 2011ರವರೆಗೆ ಚಿಕ್ಕಮಗಳೂರಿನಲ್ಲಿ 0.28, ಕೊಡಗಿನಲ್ಲಿ 1.13 ಮತ್ತು ಹಾಸನದಲ್ಲಿ 3.17 ಜನಸಂಖ್ಯೆಯ ಬೆಳವಣಿಗೆ ಆಗಿದೆ ಎನ್ನುವುದನ್ನು ದಾಖಲಿಸುವ ಮೂಲಕ, ಪಶ್ಚಿಮಘಟ್ಟ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲು ಜನಸಂಖ್ಯೆಯ ಒತ್ತಡ ಕಾರಣ ಎಂದು ಹೇಳುವವರಿಗೆ ಬಹುತೇಕ ಕಪಾಳಮೋಕ್ಷ ಮಾಡಿದ್ದಾರೆ ಎನ್ನಬಹುದು. ಸರಕಾರದ ತಪ್ಪು ನೀತಿಗಳಿಂದಾಗಿ ಸಾವಿರಾರು ಹೆಕ್ಟರ್ ಅರಣ್ಯ ನಾಶವಾಗಿದೆ ಎಂಬುದನ್ನು ಅವರು ವಿಶ್ಲೇಷಿಸಿದ್ದಾರೆ.

ಇದಲ್ಲದೆ ವನ್ಯಜೀವಿಗಳಿಂದ ಆಗುತ್ತಿರುವ ಪ್ರಾಣಹಾನಿ ಮತ್ತು ಬೆಳೆಗಳ ನಷ್ಟದ ಬಗ್ಗೆ ಎಲ್ಲಿಯೂ ಚರ್ಚೆಯನ್ನು ವರದಿಯಲ್ಲಿ ನಡೆಸಿಲ್ಲ ಎನ್ನುವುದರ ಮೂಲಕ ಮಾಧ್ಯಮಗಳು ಮತ್ತು ಹಲವಾರು ಸಂಘಟನೆಗಳು ನೀಡುವ ತಪ್ಪು ಚಿತ್ರಣವನ್ನು ಛಿದ್ರ ಮಾಡಿದ್ದಾರೆ. ಜನರನ್ನು ಹೊರಗಿಟ್ಟು ಪರಿಸರವನ್ನು ನೋಡುವ ಈ ವರದಿ, ಪರಿಸರದೊಂದಿಗೆ ಬೆರೆತು ಬದುಕುತ್ತಿರುವ ಜನರ ಸ್ವಾಭಿಮಾನದ ಬದುಕಿಗೆ ಬಗೆದ ದ್ರೋಹ ಎಂದಿದ್ದಾರೆ. ಇವೆಲ್ಲವೂ ಮೂಲಭೂತ ಕಾರಣಗಳಾದರೆ, ಹಲವಾರು ತಾಂತ್ರಿಕ ಕಾರಣಗಳಿಂದಾಗ್ಯೂ ಈ ವರದಿಗಳನ್ನು ವಿರೋಧಿಸಲೇಬೇಕು ಎಂದು ಅವರು ಹೇಳಿದ್ದಾರೆ.

ಮೂಲಭೂತವಾಗಿ ಅವರ ಕೃತಿಯಲ್ಲಿ ಇರುವಂತಹ ಪ್ರಮುಖ ಅಂಶವೆಂದರೆ ಜನರಲ್ಲಿ ಒಂದು ತಪ್ಪು ಕಲ್ಪನೆ ಇದೆ. ಮಾಧವ ಗಾಡ್ಗಿಲ್ ವರದಿ ಈಗ ಅಸ್ತಿತ್ವದಲ್ಲಿ ಇಲ್ಲ, ಕೇವಲ ಕಸ್ತೂರಿ ರಂಗನ್ ವರದಿ ಮಾತ್ರ ಅಸ್ತಿತ್ವದಲ್ಲಿ ಇದೆ ಎಂಬುದಾಗಿದೆ. ಆದರೆ ಇದು ಸರಿಯಲ್ಲ, ಮಾಧವ ಗಾಡ್ಗಿಲ್ ವರದಿಗೆ ಸಾಕಷ್ಟು ಆಕ್ಷೇಪಗಳು ಬಂದಾಗ, ಮಾಧವ ಗಾಡ್ಗಿಲ್ ವರದಿಯನ್ನು ಹೇಗೆ ಜಾರಿಗೆ ತರುವುದು ಎಂಬುದರ ಬಗ್ಗೆ ಅಧ್ಯಯನ ಮಾಡಲು ಕಸ್ತೂರಿ ರಂಗನ್ ಸಮಿತಿಯನ್ನು ರಚಿಸಲಾಗಿತ್ತು ಮತ್ತು ಇವೆರಡೂ ವರದಿಗಳು ಜೀವಂತವಾಗಿದೆ ಎನ್ನುವ ಮೂಲಕ ರಾಜ್ಯ ಸರಕಾರವಾಗಲಿ, ಕೇಂದ್ರ ಸರಕಾರವಾಗಲಿ ನೀಡುವ ಆಶ್ವಾಸನೆಯಿಂದ ಈ ಭಾಗದ ಜನರು ನಿರಾಳವಾಗಿ ಇರುವಂತೆ ಇಲ್ಲ, ಇದು ತೂಗುಗತ್ತಿಯಂತೆ ನಮ್ಮ ನೆತ್ತಿಯ ಮೇಲೆ ಸದಾ ತೂಗುತ್ತಲೇ ಇರುತ್ತದೆ ಎಂಬ ಎಚ್ಚರಿಕೆಯನ್ನು ಅವರು ನೀಡಿದ್ದಾರೆ. ಮತ್ತು ಪ್ರಮುಖವಾದ ಮತ್ತೊಂದು ಅಂಶವೆಂದರೆ ರಾಜ್ಯದ ಮತ್ತು ರಾಷ್ಟ್ರದ ಮುಖ್ಯವಾಹಿನಿಯ ಪತ್ರಿಕೆಗಳು ಎನ್.ಜಿ.ಓ.ಗಳು ಬರೆದ ಲೇಖನಗಳನ್ನಷ್ಟೇ ಪ್ರಕಟಿಸುತ್ತವೆಯೇ ವಿನಹ ಬೇರೇನನ್ನೂ ಪ್ರಕಟಿಸುವುದಿಲ್ಲ ಎಂಬ ಅಂಶವನ್ನು ಅವರು ಚರ್ಚಿಸಿದ್ದಾರೆ.

ನಮ್ಮ ಜವಾಬ್ದಾರಿಗಳು ಏನು ಎಂದು ಅವರು ತಮ್ಮ ಕೃತಿಯ ಕೊನೆಯ ಭಾಗದಲ್ಲಿ ಬಹಳ ಸುಂದರವಾಗಿ ಪಶ್ಚಿಮಘಟ್ಟವನ್ನು ಸಂರಕ್ಷಿಸಲು ನಾವು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಚರ್ಚಿಸಿದ್ದಾರೆ. ಆದರೆ ಕಾಡು ಕಡಿದು ಕಾಫಿ, ಟೀ ಎಸ್ಟೇಟುಗಳನ್ನು ನಿರ್ಮಿಸಲಾಯಿತು ಎನ್ನುವ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕಾಗಿದೆ. ಏಕೆಂದರೆ ಸರಕಾರಿ ಅರಣ್ಯ ಎಂಬುದು ಶೇ. 37ರಷ್ಟು ಇರಬೇಕು ಎನ್ನುವುದು ಸತ್ಯ. ಕಾಫಿ, ಟೀ ಎಸ್ಟೇಟುಗಳು ಎಲ್ಲಿಯೂ ಸರಕಾರಿ ಅರಣ್ಯವನ್ನು ನಾಶಪಡಿಸಿ ಆಗಿಲ್ಲ, ಈಗಲೂ ಪಶ್ಚಿಮಘಟ್ಟ ಎಂಬುದು ಉಳಿದಿದೆ ಎಂದಾದರೆ, ಮತ್ತು ಅದನ್ನು ಸಂರಕ್ಷಿಸಬೇಕು ಎಂಬ ಕೂಗು ಎದ್ದಿದೆ ಎಂದಾದರೆ, ಪಶ್ಚಿಮಘಟ್ಟವು ಗಣಿಗಾರಿಕೆ, ತೋಟಗಳ ನಿರ್ಮಾಣದ ನಂತರವೂ ಉಳಿದಿರುವುದರಿಂದ ಎನ್ನುವ ಸತ್ಯವನ್ನು ಹೇಳಲೇಬೇಕು. ನಗರದಲ್ಲಿ ವಾಸಿಸುತ್ತಿರುವವರು ತಮಗೆ ಕುಡಿಯಲು ನೀರು ಸಿಗುವುದಿಲ್ಲ ಎನ್ನುವ ಕಾರಣಕ್ಕಾಗಿ ಪಶ್ಚಿಮಘಟ್ಟವನ್ನು ಸಂರಕ್ಷಿಸ ಬೇಕು ಎಂದು ಹೇಳುವಾಗ, ಪಶ್ಚಿಮಘಟ್ಟದಲ್ಲಿ ವಾಸಿಸುವವರು ಕಾಡನ್ನು ರಕ್ಷಿಸಲು ಮಾಡುವಂತಹ ತ್ಯಾಗಕ್ಕಾಗಿ ಸರಕಾರವಾಗಲಿ, ನಗರವಾಸಿಗಳಾಗಲಿ ನೀಡುವ ಕೊಡುಗೆ ಏನು ಎಂಬುದು ಚರ್ಚೆಯಾಗಬೇಕು. ಪಶ್ಚಿಮಘಟ್ಟವನ್ನು ಸಂರಕ್ಷಿಸುವ ವಿಚಾರದಲ್ಲಿ ನಗರವಾಸಿಗಳ ಪುಕ್ಕಟೆ ಸಲಹೆಗಳು ಬೇಕಾಗಿಲ್ಲ ಎನ್ನುವ ಸತ್ಯದ ಅರಿವನ್ನು ನೀಡಬೇಕಾಗಿದೆ.

ಡೋಂಗಿ ಪರಿಸರವಾದಿಗಳು ಹೇಗೆ ಜನರನ್ನು ತಪ್ಪು ದಾರಿಗೆ ಎಳೆಯುತ್ತಾರೆ ಎನ್ನುವ ವಿಚಾರದಲ್ಲಿ ಕೊಡಗು ಜಿಲ್ಲೆಯ ಮೂಲಕ ಹಾದುಹೋಗುವ ಹೈಟೆನ್ಷನ್ ವಿದ್ಯುತ್ ಮಾರ್ಗದ ವಿಚಾರದಲ್ಲಿ ನೀಡಿದಂತಹ ಸುಳ್ಳು ಅಂಶಗಳು ಮತ್ತು ಮಂಡ್ಯದ ರೈತಸಂಘದ ಹೋರಾಟದ ವಿಚಾರಗಳು ಕೂಡ ಇಲ್ಲಿ ಚರ್ಚೆಯಾಗಬೇಕಾಗಿತ್ತು. ಏಕೆಂದರೆ ಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿ ಬರುವಂತಹ ಪ್ರಮುಖ ಪ್ರದೇಶ ಕೊಡಗು ಜಿಲ್ಲೆ, ಇಲ್ಲಿ ಕಡ್ಮಕಲ್ ಎಂಬಲ್ಲಿ ಜನರಿಗೆ ಅನುಕೂಲವಾಗುವ ಇದ್ದ ರಸ್ತೆಯನ್ನು ದುರಸ್ತಿಪಡಿಸಿದ್ದಕ್ಕಾಗಿ ಮೂವರು ಶಾಸಕರು ಸುಪ್ರೀಂಕೋರ್ಟಿನ ಮೆಟ್ಟಿಲನ್ನು ಏರುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ. 11 ಕಿ.ಮೀ. ಕ್ರಮಿಸುವ ದಾರಿ ಇದ್ದರೂ, ಸುಮಾರು 100 ಕಿ.ಮೀ. ಕ್ರಮಿಸುವ ಮೂಲಕ ಕಚೇರಿಗಳಿಗೆ ತೆರಳಲು ಹೋಗಬೇಕಾದಂತಹ ಸ್ಥಿತಿ ಮತ್ತು ಕೂಟಿಯಾಲ ಎಂಬಲ್ಲಿ 70 ಲಕ್ಷ ರೂಪಾಯಿ ವೆಚ್ಚದಲ್ಲಿ ಸೇತುವೆ ನಿರ್ಮಾಣ ಮಾಡಿದ್ದರೂ, 600 ಮೀಟರ್ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಅಡ್ಡಿಪಡಿಸಿದ ಅರಣ್ಯ ಇಲಾಖೆ ಮತ್ತು ಡೋಂಗಿ ಪರಿಸರವಾದಿಗಳು ಹೇಗೆ ಜನವಿರೋಧಿಗಳು ಎನ್ನುವುದನ್ನು ಹಂಪೆಯ ಆನೆಗೊಂದಿ ಸೇತುವೆ ವಿಚಾರದಲ್ಲಿ ನಡೆದುಕೊಂಡಂತೆಯೇ ನಡೆದುಕೊಳ್ಳುತ್ತಿದ್ದಾರೆ ಎನ್ನುವ ಬಗ್ಗೆ ಬೆಳಕು ಚೆಲ್ಲಿದ್ದರೆ ಮತ್ತಷ್ಟು ಅರ್ಥಪೂರ್ಣವಾಗುತ್ತಿತ್ತು, ಮಂಡ್ಯದಲ್ಲಿ ಕಬ್ಬು ಬೆಳೆಯಲು ನೀರು ಬೇಕು. ಹಾಗಾಗಿ ಕೊಡಗಿನಲ್ಲಿ ಯಾವುದೇ ಅಭಿವೃದ್ಧಿ ಆಗಬಾರದು ಎನ್ನುವ ಕೆ.ಎಸ್. ಪುಟ್ಟಣ್ಣಯ್ಯರಂತಹ ಡೋಂಗಿ ಪರಿಸರಪ್ರೇಮಿಗಳು, ಮಂಡ್ಯ ಪ್ರದೇಶದಲ್ಲಿ ಅರ್ಧದಷ್ಟು ಕಬ್ಬು ಬೆಳೆಸಿ, ಇನ್ನರ್ಧ ಭಾಗವನ್ನು ಅರಣ್ಯವಾಗಿಸಲು ಯತ್ನಗಳನ್ನು ಏಕೆ ಮಾಡಬಾರದು ಎನ್ನುವಂತಹ ವಿಚಾರಗಳು ಕೂಡ ಚರ್ಚೆಯಾಗಬೇಕಾಗಿದೆ. ಕೇವಲ ಆರು ಸಾವಿರ ಮರಗಳನ್ನು ಹೈಟೆನ್ಷನ್ ವಿದ್ಯುತ್ ಮಾರ್ಗಕ್ಕಾಗಿ ಕಡಿದಾಗ, ಮುಖ್ಯವಾಹಿನಿಯ ಪತ್ರಿಕೆಗಳು ಲಕ್ಷಗಟ್ಟಲೆ ಮರಗಳ ಹನನ ಎಂದು ಉತ್ಪ್ರೇಕ್ಷೆಯ ವರದಿಯನ್ನು ಪ್ರಕಟಿಸಿದ್ದು ಸೇರಿದಂತೆ ಪರಿಸರದ ವಿಚಾರದಲ್ಲಿ ಅಮಾಯಕರ ಹಾದಿ ತಪ್ಪಿಸುವ ಕೆಲಸಗಳು ಹೇಗೆ ವ್ಯವಸ್ಥಿತವಾಗಿ ನಡೆಯುತ್ತದೆ ಎಂಬುದನ್ನು ನೋಡಿರುವ ನಾವುಗಳು ಲೇಖಕರು ಹೇಳಿರುವಂತೆ ಪಶ್ಚಿಮಘಟ್ಟದ ಜನಜೀವನವನ್ನು ಉತ್ತಮಪಡಿಸುವ ಬದಲಾಗಿ ಆತಂಕ, ಅಭದ್ರತೆಗೆ ತಳ್ಳುವ, ಪರಿಸರದ ಮೇಲೂ ದೂರಗಾಮಿ ಪರಿಣಾಮ ಬೀರುವ ಈ ವರದಿಯ ಜಾರಿಯ ವಿರುದ್ಧ ಹೋರಾಟ ನಡೆಸಬೇಕು ಎನ್ನುವುದು ವಾಸ್ತವಾಂಶವಾಗಿದೆ.

ಇದು ಜನಜಾಗೃತಿ ಮೂಡಿಸುವ ಕೃತಿಯಾಗಿದೆ. ರಾಮಸ್ವಾಮಿ ಹುಲಗೋಡುರವರು ಪತ್ರಕರ್ತರಾಗಿ ನಗರವಾಸಿಯಾಗಿದ್ದರೂ, ಚಿಕ್ಕಮಗಳೂರಿನ ಕೊಪ್ಪ ಗ್ರಾಮದ ಹುಲಕೋಡಿನಲ್ಲಿ ಹುಟ್ಟಿ, ಅರಣ್ಯವನ್ನು ಹತ್ತಿರದಿಂದ ನೋಡಿದ ಅನುಭವದಿಂದ ಬರೆದಂತಹ ಕೃತಿ. ಡೋಂಗಿ ಪರಿಸರವಾದಿಗಳು ಹೇಗೆ ದಿಕ್ಕು ತಪ್ಪಿಸುತ್ತಾರೆ, ವಿದೇಶದಿಂದ ಹೇಗೆ ಪ್ರಭಾವಿತರಾಗುತ್ತಾರೆ, ಕಸ್ತೂರಿ ರಂಗನ್ ವರದಿ ಮತ್ತು ಮಾಧವ ಗಾಡ್ಗಿಲ್ ವರದಿಯಲ್ಲಿ ಇರುವಂತಹ ಮಾರಕ ಅಂಶಗಳು ಯಾವುದು ಎಂಬ ಎಲ್ಲಾ ವಿಚಾರಗಳ ಬಗ್ಗೆ ಅಧಿಕಾರಯುತವಾಗಿ ಚರ್ಚಿಸಿದ್ದಾರೆ. ಹಾಗಾಗಿ ಈ ಕೃತಿ ಮತ್ತಷ್ಟು ಜನರ ನಡುವೆ ಹೋಗಬೇಕಾದ ಅಗತ್ಯತೆ ಇದೆ. ಈ ಕೃತಿಯ ಬಗ್ಗೆ ಮತ್ತು ಕೃತಿಯಲ್ಲಿರುವಂತಹ ಅಂಶಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಹಾಗಾಗಬೇಕು ಎಂದರೆ ಈ ಕೃತಿ ನಕಲು ಮಾಡಲು ಅಥವ ಮರು ಮುದ್ರಿಸಲು ನಿಯಂತ್ರಣವನ್ನು ಹೇರಿರುವುದು ಸರಿಯಲ್ಲ. ಹೆಚ್ಚು ಚರ್ಚೆಯಾಗಬೇಕು ಎಂದಾದರೆ ಇಂತಹ ಒಂದು ಕೃತಿ ಇದೆ ಎನ್ನುವ ಬಗ್ಗೆ ಹಲವಾರು ಪತ್ರಿಕೆಗಳಲ್ಲಿ ಅವರ ಕೃತಿ ಮರುಮುದ್ರಣವಾಗುವ ಮೂಲಕ ಆಗಬೇಕು. ಇದೊಂದು ನ್ಯೂನತೆಯನ್ನು ಬಿಟ್ಟರೆ, ಉಳಿದಂತೆ ಉತ್ತಮವಾದ ಕೃತಿಯಾಗಿ ಇದು ಹೊರಹೊಮ್ಮಿದೆ.

■ ಬಿ.ಎನ್. ಮನು ಶೆಣೈ

# ಸತ್ಯದ ಬೆಳಕಿನ ವಚನ ತವನಿಧಿ-2

(ಹಿಂದಿನ ಸಂಚಿಕೆಯಿಂದ)

12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಕಾಯಕಜೀವಿಗಳ ಲಿಂಗಾಯತ ಧರ್ಮವನ್ನು ಮರೆಮಾಚುವುದೇ ವೀರಶೈವವಾದಿಗಳ ಪ್ರಯತ್ನದ ಹಿಂದಿನ ಷಡ್ಯಂತ್ರವಾಗಿದೆ. ಈ ಷಡ್ಯಂತ್ರ ನಿರಂತರವಾಗಿ ಮುಂದುವರಿದಿ ದೆ.

ಎಲ್ಲಕ್ಕಿಂತ ದೊಡ್ಡ ಸಮಸ್ಯೆ ಎಂದರೆ ನಮ್ಮ ವಿದ್ವಾಂಸರೆಲ್ಲರೂ ವೀರಶೈವ ಮತ್ತು ಲಿಂಗಾಯತ ಪದಗಳನ್ನು ಸಮಾನಾರ್ಥದಲ್ಲಿ ಬಳಸುತ್ತ ಬಂದಿರುವುದು. ಕಳೆದ ಐದಾರು ಶತಮಾನಗಳಿಂದ ವಚನಗಳಲ್ಲಿನ ಲಿಂಗಾಯತ ಮತ್ತು ಲಿಂಗವಂತ ಪದಗಳನ್ನು ತೆಗೆದು ಅವುಗಳ ಜಾಗದಲ್ಲಿ ವೀರಶೈವ ಪದವನ್ನು ಪಟ್ಟಭದ್ರ ಹಿತಾಸಕ್ತಿಗಳು ಸೇರಿಸುತ್ತ ಬಂದಿರುವುದರಿಂದಲೇ ಇವರೆಲ್ಲ ಆ ಪದಗಳನ್ನು ಸಮಾನಾರ್ಥದಲ್ಲಿ ಬಳಸುತ್ತ ಬಂದರು. ಡಾ. ಫ.ಗು. ಹಳಕಟ್ಟಿ, ಹರ್ಡೇಕರ ಮಂಜಪ್ಪನವರು, ವೀರಪ್ಪ ಬಸವಪ್ಪ ಬಿಳಿ ಅಂಗಡಿ ವಕೀಲರು, ಡಾ. ಎಸ್.ಸಿ. ನಂದಿಮಠ, ಪ್ರೊಫೆಸರ್ ಶಿ.ಶಿ. ಬಸವನಾಳ, ಡಾ. ಎಲ್. ಬಸವರಾಜು, ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಂ. ಕಲಬುರ್ಗಿ, ಡಾ. ಎಸ್.ಜಿ. ಮಹಾದೇವಪ್ಪ ಮುಂತಾದ ವಿದ್ವಾಂಸರು ಕೂಡ ವೀರಶೈವ ಮತ್ತು ಲಿಂಗಾಯತ ಪದಗಳನ್ನು ಸಮಾನಾರ್ಥದಲ್ಲೇ ಬಳಸುತ್ತ ಬಂದರು. ಗುರುವರ್ಗದವರು ಮತ್ತು ವಿರಕ್ತರು ಕೂಡ ಇದೇ ರೀತಿ ಬಳಸಿದರು. ಇಡೀ ಕಲಿತ ಲಿಂಗಾಯತ ಸಮಾಜ ಇದೇ ರೀತಿ ಬಳಸುತ್ತ ಬಂದಿತು. ಕಲಿತವರು ಹೀಗೆ ವೀರಶೈವ ಪದ ಬಳಸಿದರೆ ನಿರಕ್ಷರಿ ರೈತಾಪಿ ಜನರು ಮೊದಲಿನಿಂದಲೂ ಲಿಂಗಾಯತ ಪದವನ್ನೇ ಬಳಸುತ್ತಲಿದ್ದಾರೆ. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಒಕ್ಕಲಿಗರೆಂದರೆ ರೈತಾಪಿ ಲಿಂಗಾಯತರು ಮತ್ತು ಬಣಜಿಗರೆಂದರೆ ವ್ಯಾಪಾರ ಮಾಡುವ ಲಿಂಗಾಯತರು.

ಇತ್ತೀಚಿನ ವರ್ಷಗಳವರೆಗೂ ಲಿಂಗಾಯತ ಮತ್ತು ವೀರಶೈವವನ್ನು ಒಂದಾಗಿ ನೋಡುತ್ತಿದ್ದ ಡಾ. ಎಂ.ಎಂ. ಕಲಬುರ್ಗಿ ಮತ್ತು ಡಾ. ಎಸ್.ಜಿ. ಮಹಾದೇವಪ್ಪ ಅವರು ಆಳವಾದ ಅಧ್ಯಯನ ನಡೆಸುವ ಮೂಲಕ ವೀರಶೈವ ಮತ್ತು ಲಿಂಗಾಯತ ಬೇರೆ ಎಂಬುದು ಕಂಡುಕೊಂಡರು. ಅವು ಬೇರೆ ಬೇರೆ ಎಂಬುದರ ಕುರಿತು ಪುಸ್ತಿಕೆಗಳನ್ನೂ ಬರೆದರು. 'ವಚನೋಕ್ತ ಲಿಂಗಾಯತ ಮತ್ತು ಆಗಮೋಕ್ತ ವೀರಶೈವ' ಎಂಬುದು ನಮ್ಮ ಅರಿವಿಗೆ ಬರುವಲ್ಲಿ ಇವರ ಪಾತ್ರ ಹಿರಿದಾಗಿದೆ.

ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಅರ್ಥವಿಜ್ಞಾನದ ಪ್ರಕಾರ ಹಳೆಯ ಶಬ್ದಗಳಿಗೆ ಹೊಸ ಅರ್ಥ ಬರುವ ಪ್ರಕ್ರಿಯೆ ಸಹಜವಾಗಿಯೇ ಇದೆ. ಕನ್ನಡವೂ ಇದಕ್ಕೆ ಹೊರತಲ್ಲ. ಹಳೆಗನ್ನಡದಲ್ಲಿ ಅಪ್ಪನಿಗೆ 'ಅಮ್ಮ' ಎಂದು ಕರೆಯಲಾಗಿದೆ. ಹಿರಿಯರಾದವರಿಗೆ ಹಳೆಗನ್ನಡದಲ್ಲಿ 'ಪೆದ್ದರು' ಎಂದು ಹೇಳಲಾಗಿದೆ. ಈ ರೀತಿಯ ಬದಲಾವಣೆಗಳಲ್ಲದೆ ವಚನಗಳಲ್ಲಿ ವಿವಿಧ ಕಡೆಗಳಿಂದ ಬಂದ ಶರಣರ ಪ್ರಾದೇಶಿಕ ಶಬ್ದಗಳೂ ಸೇರಿಕೊಂಡಿವೆ. ಅಲ್ಲದೆ ವಿವಿಧ ಶಬ್ದಗಳಿಗೆ ಹೊಸ ಸೈದ್ಧಾಂತಿಕ ಅರ್ಥವನ್ನೂ ಕೊಡಲಾಗಿದೆ. ವಚನಭಾಷೆ ವಿಶಿಷ್ಟವಾಗಿದೆ. ಪೂರ್ವದ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ಹೇಳುವ ಹಾಗೆ ವಚನಗನ್ನಡವೆಂದು ಪ್ರತ್ಯೇಕವಾಗಿ ಕರೆಯುವುದು ಐತಿಹಾಸಿಕ ಅವಶ್ಯಕತೆಯಾಗಿದೆ. ಶರಣರು ಇಡೀ ರಾಜ್ಯಶಕ್ತಿಯನ್ನು ಮೌನವಾಗಿ ಎದುರು ಹಾಕಿಕೊಳ್ಳುತ್ತ ಪರ್ಯಾಯ ವ್ಯವಸ್ಥೆಯನ್ನು ರೂಪಿಸುವ ಸಂದರ್ಭದಲ್ಲಿ ರಚಿತವಾದ ವಚನಗಳಲ್ಲಿ ಶಬ್ದಗಳು ಅನ್ಯೋಕ್ತಿಯಿಂದ, ಧ್ವನ್ಯರ್ಥದಿಂದ ಮತ್ತು ಹಳೆಯ ಅರ್ಥಗಳನ್ನು ಕಳೆದುಕೊಂಡು ಹೊಸ ತೆರನಾದ ವಚನಾರ್ಥದಿಂದ ಕೂಡಿವೆ. ವಚನಗಳಲ್ಲಿ ಬಳಕೆಯಾದ ಶಬ್ದಗಳಿಗೆ ಹೊಸದಾಗಿ ಅಂಟಿಕೊಂಡ ವಚನಾರ್ಥಕ್ಕೂ ಶಬ್ದಕೋಶದ ಅರ್ಥಕ್ಕೂ ಅನೇಕ ಸಲ ಯಾವುದೇ ಸಂಬಂಧವಿರುವುದಿಲ್ಲ. ವಚನಗಳಲ್ಲಿ ಬರುವ ಶಿವ, ಗುರು, ಲಿಂಗ, ಜಂಗಮ, ಭಕ್ತಿ, ಕಾಯಕ, ಪ್ರಸಾದ, ದಾಸೋಹ ಮುಂತಾದ ಶಬ್ದಗಳು ಮತ್ತು ಪದಗಳು ವಿಶಿಷ್ಟವಾದ ಅರ್ಥಗಳನ್ನು ಹೊಂದಿವೆ. ಅವುಗಳು ಆಯಾ ವಚನಗಳ ಹಿನ್ನೆಲೆಯಲ್ಲಿ ವಿಶಿಷ್ಟ ಅರ್ಥಗಳನ್ನು ಕೂಡ ಸ್ಫುರಿಸುತ್ತವೆ. ಉದಾಹರಣೆಗೆ ಜಂಗಮ ಎಂಬ ಪದ ನಿರಂತರ, ಚೈತನ್ಯ ವಿಶ್ವ, ಜೀವಜಗತ್ತು, ಸಮಾಜ, ಲಿಂಗವಂತ ಧರ್ಮತತ್ತ್ವ ಪ್ರಸಾರಕ ಮುಂತಾದ ಅರ್ಥಗಳನ್ನು ಆಯಾ ವಚನಗಳಲ್ಲಿನ ಸಂದರ್ಭಾನುಸಾರವಾಗಿ ಧ್ವನಿಸುತ್ತದೆ. ಅದೇ ರೀತಿ ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರಗಳು ಕೂಡ ವಚನಧರ್ಮದ ಅರ್ಥಗಳನ್ನೇ ಧ್ವನಿಸುತ್ತವೆ.

ಲಿಂಗಾಯತ ಧರ್ಮಕ್ಕೆ ಮೂಲವಾದ ವಚನಗಳಲ್ಲಿನ ಚಿಂತನೆಗೆ ಮೂಲ ಯಾವುದು ಎಂಬುದನ್ನು ಅರಿತುಕೊಳ್ಳುವುದು ಈ ಕಾಲದ ಅವಶ್ಯಕತೆಯಾಗಿದೆ.

'ವೇದಕ್ಕೆ ಒಳೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ;
ತರ್ಕದ ಬೆನ್ನಬಾರನೆತ್ತುವೆ,
ಆಗಮದ ಮೂಗ ಕೊಯಿವೆ, ನೋಡಯ್ಯಾ
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ'

ಎಂದು ಬಸವಣ್ಣನವರು ಹೇಳಿದ್ದಾರೆ. 'ವೇದಕ್ಕೆ ಒಳೆಯ ಕಟ್ಟುವೆ' ಎಂದರೆ ವೇದದ ವಿರುದ್ಧ (ವೈಚಾರಿಕ) ಯುದ್ಧಕ್ಕೆ ಸನ್ನದ್ಧನಾಗುವೆ. 'ಶಾಸ್ತ್ರಕ್ಕೆ ನಿಗಳವನಿಕ್ಕುವೆ' ಎಂದರೆ ಮನುಧರ್ಮ ಶಾಸ್ತ್ರಗಳೆಂಬ ಮದ್ದಾನೆಗಳನ್ನು ವಿಚಾರವಾದ ಎಂಬ ದಪ್ಪನೆಯ ಸರಪಳಿಯಿಂದ ಕಟ್ಟಿ ಹಾಕುವೆ. 'ತರ್ಕದ ಬೆನ್ನಬಾರನೆತ್ತುವೆ' ಎಂದರೆ ಜನಸಮುದಾಯವನ್ನು ಬೇರ್ಪಡಿಸುವ ವರ್ಣ, ವರ್ಗ, ಜಾತಿ ಮತ್ತು ಲಿಂಗಭೇದಗಳನ್ನು ಸೂಚಿಸುವ ತರ್ಕಶಾಸ್ತ್ರವನ್ನು ಶಿಕ್ಷಿಸುವೆ. 'ಆಗಮದ ಮೂಗ ಕೊಯಿವೆ' ಎಂದರೆ ಅನುಭವದ ನೆಲೆ ಇಲ್ಲದ ತಂತ್ರಶಾಸ್ತ್ರಗಳು ಮತ್ತು ಆಗಮಗಳನ್ನು ಅಲ್ಲಗಳೆದು, ಅವುಗಳನ್ನು ಅಪಮಾನಕ್ಕೆ ಈಡು ಮಾಡುವೆ. ಹೀಗೆ ಬಸವಣ್ಣನವರು ಹೇಳಲು ಕಾರಣವೇನು ಎಂಬುದನ್ನು ತಿಳಿದುಕೊಳ್ಳುವುದು ಲಿಂಗವಂತ ಧರ್ಮ ರಕ್ಷಕರಿಗೆ ಅವಶ್ಯವಾಗಿದೆ.

ತಾವು ಮಾದಾರ ಚೆನ್ನಯ್ಯನ ಮಗ ಎಂದು



ಬಸವಣ್ಣನವರು ಈ ವಚನದಲ್ಲಿ ಹೇಳಿದ್ದಾರೆ. ಮನುವಾದಿ ಸಮಾಜದಲ್ಲಿ ಮಾದಿಗರು ಕಟ್ಟಕಡೆಯ ಮನುಷ್ಯರು. ಆದರೆ ಬಸವವಾದಿ ಸಮಾಜದಲ್ಲಿ ಅವರು ತಮ್ಮ ವ್ಯಕ್ತಿತ್ವ ವಿಕಸನದೊಂದಿಗೆ ಮೊಟ್ಟ ಮೊದಲ ಮಾನವರಾಗಬಲ್ಲರು ಎಂಬುದನ್ನು ಬಸವಣ್ಣನವರು ಮಾದಾರ ಚೆನ್ನಯ್ಯನವರ ಕಾಯಕ-ಪ್ರಸಾದ-ದಾಸೋಹ ಪ್ರಜ್ಞೆಯ ಮಹಾನ್ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಸೂಚಿಸಿದ್ದಾರೆ. ಅಂಥವರ ಮನೆಯ ಮಗನಾದ ಬಸವಣ್ಣನವರು 'ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದ ಅಧಿಕ ನೋಡಾ ಕೂಡಲಸಂಗಮದೇವಾ' ಎಂದು ಹೇಳುವ ಸಾಮರ್ಥ್ಯವನ್ನು ಹೊಂದಿದ್ದಾರೆ. ನಮ್ಮಂಥವರ ಮಧ್ಯೆಯೆ ಬದುಕಿದ ಬಸವಣ್ಣನವರು ಲಿಂಗಾಯತ ಎಂಬ ಹೊಸ ಜೀವನವಿಧಾನದ ಧರ್ಮವನ್ನು ಶರಣಸಂಕುಲದ ಮೂಲಕ ಜಾಗತೀಕರಣಗೊಳಿಸಿದ್ದು ಕೇವಲ ಒಂದು ತಲೆಮಾರಿನ ಅವಧಿಯಲ್ಲಿ ಮಾಡಿದ ಸಾಧನೆಯಾಗಿದೆ. ಈ ಅನನ್ಯವಾದ ಧರ್ಮವನ್ನು ಅಥವಾ ಜೀವನವಿಧಾನವನ್ನು ಅದು ಹೇಗೆ ಕಂಡುಹಿಡಿದರು ಎಂಬುದು ಸ್ವಾರಸ್ಯಕರವಾಗಿದೆ.

ಬಸವಣ್ಣನವರು ಲೌಕಿಕದಿಂದ ಅಂದರೆ ಈ ಭೂಮಿಯಿಂದ ಹೊಸತನವನ್ನು ಪಡೆದರೆ ಹೊರತು ಆಗಮಿಕ ಅಂದರೆ ಅಲೌಕಿಕ ಭ್ರಮೆಯಿಂದ ಅಲ್ಲ ಎಂಬುದಕ್ಕೆ ಅವರ ವಚನಗಳು ಸಾಕ್ಷಿಯಾಗಿವೆ. ಜನಸಮುದಾಯದ ವಿವಿಧ ಅನುಭವಗಳ ಸಾರದಿಂದ ಅವರು ಅನುಭಾವದ ಎತ್ತರಕ್ಕೆ ಏರಿದರು.

'ಭಕ್ತಿ ಇಲ್ಲದ ಬಡವ ನಾನಯ್ಯ;
ಕಕ್ಕಯ್ಯನ ಮನೆಯಲ್ಲೂ ಬೇಡಿದೆ;
ಚೆನ್ನಯ್ಯನ ಮನೆಯಲ್ಲೂ ಬೇಡಿದೆ;
ದಾಸಯ್ಯನ ಮನೆಯಲ್ಲೂ ಬೇಡಿದೆ.
ಎಲ್ಲ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ.'

ಬಸವಣ್ಣನವರು ಜನಸಮುದಾಯದ ಅನುಭವದಿಂದ ಹೊಸಬದುಕನ್ನು ರೂಪಿಸಿದರು. ಭಾರತದ ಐದು ಸಾವಿರ ವರ್ಷಗಳ ಇತಿಹಾಸದಲ್ಲಿ ಜನಸಂಸ್ಕೃತಿಯನ್ನು ಕಡೆಗಣಿಸಲಾಗಿತ್ತು, ಜನಿವಾರವುಳ್ಳ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರನ್ನು ಮಾತ್ರ ದೇವಕೃಪೆಯುಳ್ಳ ಮನುಷ್ಯರೆಂದು ಪರಿಗಣಿಸಲಾಗಿತ್ತು, ಇವರೆಲ್ಲ ಐತಿಹಾಸಿಕವಾಗಿ ಅನುತ್ಪಾದಕ ವರ್ಗದವರು. 'ನಾವು ಉತ್ಪಾದನೆಯಲ್ಲಿ ತೊಡಗುವುದು ಧರ್ಮಬಾಹಿರ; ಧರ್ಮಕಾರ್ಯಗಳು, ಸಲಹೆ ಮತ್ತು ಉಪದೇಶ ಮಾತ್ರ ನಮ್ಮ ಕರ್ತವ್ಯ' ಎಂದು ಸಾರುವ ಬ್ರಾಹ್ಮಣರು; ಯುದ್ಧದಲ್ಲಿ ಕೊಲ್ಲುವ ಅಥವಾ 'ವೀರಮರಣ' ಅಪ್ಪುವ ಕ್ಷತ್ರಿಯರು; ವಸ್ತುಗಳನ್ನು ಕೊಳ್ಳುವ ಮತ್ತು ಮಾರುವ ವೈಶ್ಯರು ಸವರ್ಣೀಯರಾಗಿದ್ದಾರೆ. ಹಿಂದಿನ ಕಾಲದಲ್ಲಿ ಈ ಸವರ್ಣೀಯರು ಎಂದೂ ಉತ್ಪಾದನೆಯಲ್ಲಿ ತೊಡಗಿದವರಲ್ಲ. ಇವರೆಲ್ಲ ಸಮಾಜದಲ್ಲಿ ಪ್ರತಿಶತ 10 ರಷ್ಟು ಪ್ರತಿಷ್ಠಿತ ಜನರು. ಅವರೊಳಗಿನ ಪ್ರತಿಶತ 5ರಷ್ಟು ಮಹಿಳೆಯರ ಬದುಕಿನ ಬಹುಭಾಗ ಶೂದ್ರರ ಹಾಗೇ ಇತ್ತು. ಆದರೆ ಪ್ರತಿಶತ 90 ರಷ್ಟು ಇರುವ ಶೂದ್ರ ಮತ್ತು ಅತಿ ಶೂದ್ರರಿಗೆ ಯಾವುದೇ ಸಾಮಾಜಿಕ ಮನ್ನಣೆ ಇರಲಿಲ್ಲ. ಅವರಲ್ಲಿನ ರೈತರಿಗೆ ಭೂಮಿಯ ಒಡೆತನವೂ ಇರಲಿಲ್ಲ. ರಾಜನೇ ಭೂಪತಿಯಾಗಿದ್ದ. ಬ್ರಾಹ್ಮಣರಿಗೆ ಅಗ್ರಹಾರಗಳಿದ್ದವು. ಅಗ್ರಾಹಾರ - ಅಗ್ರಹಾರ (ಅಗ್ರ-ಆಹಾರ) ಎಂದರೆ ಬ್ರಾಹ್ಮಣರಿಗೆ ಭೂಮಿ ಜೊತೆ ದಾನ ಕೊಟ್ಟ ಗ್ರಾಮ. ಎಲ್ಲವೂ ಮೊದಲಿಗೆ ಅವರಿಗೇ ಸಲ್ಲುವಂಥದ್ದು! ಅವರಿಗೆ ಕೊಟ್ಟ ಭೂಮಿಯಲ್ಲಿ ದುಡಿಯುವ ಗೇಣಿದಾರರಿಗೆ ಅವರೇ ಮಾಲೀಕರು. ಗೇಣಿದಾರರು ದುಡಿಯುವ ಅಗ್ರ ಪಾಲನ್ನು ಆಯಾ ಅಗ್ರಹಾರಗಳ ಬ್ರಾಹ್ಮಣರಿಗೆ ಕೊಡಬೇಕಾಗಿತ್ತು. ಉಳಿದ ಕಡೆಗಳ ಗೇಣಿದಾರರು ಸಂಬಂಧಿಸಿದ ರಾಜನಿಗೆ, ಪಾಳೆಯಗಾರನಿಗೆ, ದೇಶಗತಿಯ ದೇಸಾಯಿ, ಊರ ಗೌಡ (ಗ್ರಾಮ-ಉಂಡ-ಗಾವುಂಡ-ಗೌಡ) ಧನಿ, ಜಹಗೀರದಾರ, ಇನಾಮದಾರ, ದೇಶಮುಖ ಮುಂತಾದವರಿಗೆ ತಮ್ಮ ಉತ್ಪನ್ನದ ಬಹುಪಾಲನ್ನು ಕೊಡಬೇಕಿತ್ತು. ದೇವಾಲಯಗಳ ಪ್ರಸಾದನಿಲಯಗಳಿಗೆ ಆಹಾರಧಾನ್ಯವನ್ನು ಕೊಡುವುದು ಅನಿವಾರ್ಯವಾಗಿತ್ತು. ಗಾಣಿಗರು ಪ್ರಸಾದನಿಲಯಗಳಿಗೆ ಮತ್ತು ನಂದಾದೀವಿಗೆಗೆ ಎಣ್ಣೆಯನ್ನು ಒದಗಿಸಬೇಕಿತ್ತು. ಎಲ್ಲ ಕಾಯಕಜೀವಿಗಳು ತಮ್ಮ ಉತ್ಪನ್ನಗಳನ್ನು ದೇವಸ್ಥಾನಗಳಿಗೆ ಪುಕ್ಕಟೆ ಒದಗಿಸಬೇಕಿತ್ತು. ಯಾವುದೇ ವಸ್ತುವನ್ನು ಉತ್ಪಾದಿಸದ ಕಟ್ಟಿಗೆ ಕಡಿಯುವವರು, ಕ್ಷೌರಿಕರು, ನೀರು ತರುವವರು, ದನ ಕಾಯುವವರು, ಸುಣ್ಣಬಣ್ಣ ಬಳಿಯುವವರು ಮುಂತಾದ ಕೂಲಿಕಾರರು ಹಾಗೂ ಸೇವಕರು ತಮ್ಮ ಪ್ರದೇಶದ ಅರಸರಲ್ಲಿ, ಪಾಳೆಯಗಾರರಲ್ಲಿ ಮತ್ತು ದೇವಾಲಯಗಳಲ್ಲಿ ಬಿಟ್ಟಿಕೂಲಿ ಮಾಡಬೇಕಿತ್ತು. ಆದರೆ ಇವರ್‍ಯಾರಿಗೂ ಮಂದಿರಗಳಲ್ಲಿ ಪ್ರವೇಶ ಇರಲಿಲ್ಲ. ದೇಗುಲಗಳ ಬಗ್ಗೆ ಮತ್ತು ಸವರ್ಣೀಯ ಶೋಷಕರ ಬಗ್ಗೆ ವಿವಿಧ ಕಾಯಕಜೀವಿಗಳು ಮತ್ತು ರೈತಾಪಿ ಜನರಲ್ಲಿ ಜಿಗುಪ್ಸೆಯುಂಟಾಗಿದ್ದನ್ನು ಬಿಜ್ಜಳನ ಭಂಡಾರಿಯಾಗಿದ್ದಾಗಲೇ ಬಸವಣ್ಣನವರು ಅರಿತರು. ಕಾಯಕಜೀವಿಗಳ ಮೇಲಿನ ವಿವಿಧ ಕರಗಳು ಮತ್ತು ಶೋಷಣೆಯ ವಿವಿಧ ಪ್ರಕಾರಗಳ ಕುರಿತು ಅವರು ಆಳವಾದ ಚಿಂತನೆ ಮಾಡಿದರು. ವಿವಿಧ ಕಾಯಕಜೀವಿಗಳ ಅನುಭವವನ್ನು ಅವರು ಭಕ್ತಿಯಿಂದ ಸ್ವೀಕರಿಸಿದರು. ಅವರ ಅನುಭವದ ಪಾತ್ರೆ ಶೋಷಣೆಗೊಳಗಾದ ಜನಸಮುದಾಯದ ಅನುಭವವನ್ನು ಪಡೆಯುವ ಮೂಲಕ ತುಂಬಿಹೋಯಿತು. ಶೋಷಕ ಅಲ್ಪಸಂಖ್ಯಾತರು ಮತ್ತು ಶೋಷಣೆಗೊಳಗಾದ ಬಹುಸಂಖ್ಯಾತರ ಮಧ್ಯದ ಅಂತರವನ್ನು ಕಾಪಾಡುವಲ್ಲಿ ಮಠ, ಮಂದಿರ, ವೇದ, ಶಾಸ್ತ್ರ ಪುರಾಣ, ಆಗಮ, ಸ್ವರ್ಗ, ನರಕ, ಪುಣ್ಯ ಪಾಪ, ಶಾಪ, ಪುನರ್ಜನ್ಮ, ಮೋಕ್ಷ ಮತ್ತು ಇಂಥ ಅನಿಷ್ಟಗಳನ್ನೆಲ್ಲ ಒಳಗೊಂಡು ಮನುಷ್ಯರನ್ನು ನಿಷ್ಕ್ರಿಯಗೊಳಿಸುವ ಕರ್ಮಸಿದ್ಧಾಂತ ಮುಂತಾದವುಗಳು ಹೇಗೆ ಕಾಯಕಜೀವಿಗಳ ಅಧಃಪತನಕ್ಕೆ ಕಾರಣೀಭೂತವಾಗಿವೆ ಎಂಬುದನ್ನು ಬಸವಣ್ಣನವರು ಕಂಡುಹಿಡಿದರು. ಈ ಎಲ್ಲ ಸಂಕೋಲೆಗಳಿಂದ ಕಾಯಕಜೀವಿಗಳನ್ನು ಮುಕ್ತಗೊಳಿಸುವ ನಿರ್ಧಾರದೊಂದಿಗೆ ಹೊಸಜೀವನ ವಿಧಾನವನ್ನು ತೋರಿಸಿಕೊಟ್ಟರು.

ಸ್ಥಾವರಪ್ರತಿಷ್ಠೆ ನಾಯಕ ನರಕ. ಮಂದಿರಗಳಲ್ಲಿ ದೇವರಿಲ್ಲ, ನಿಮ್ಮ ದೇಹವೇ ದೇಗುಲ. ದೇವರು ನಿಮ್ಮೊಳಗೇ ಇದ್ದಾ[ನೆ]. ಆತನೇ ಲಿಂಗದೇವ. ಆ ಲಿಂಗದೇವನ ಕುರುಹು ಇಷ್ಟಲಿಂ[ಗ]. ಈ ಇಷ್ಟಲಿಂಗವು ಎಲ್ಲ ಅನಿಷ್ಟಗಳಿಗೆ ವಿರುದ್ಧವಾಗಿ[ದೆ]. ಲಿಂಗದೇವನಿಗೆ ಹೆಂಡಿರುಮಕ್ಕಳಿಲ್ಲ, ಆತ ಅಗಮ[್ಯ], ಅಗೋಚರ, ಅಪ್ರತಿಮ ಮತ್ತು ಅಪ್ರಮಾಣ. ಇಷ್ಟಲಿಂ[ಗ] ಮೂರ್ತಿ ಅಲ್ಲ, ನಮ್ಮ ದೇವರು ನಮ್ಮೊಳಗೆ ಇದ್ದಾ[ನೆ] ಎಂಬುದರ ಸಂಕೇತ. ಕಾಯಕದಿಂದಲೇ ನಿಮ್ಮ ವ್ಯಕ್ತಿ[ತ್ವ] ರೂಪುಗೊಳ್ಳತೊಡಗುವುದು. ಬಂದಿದ್ದನ್ನು ದೇವರ ಪ್ರಸಾ[ದ] ಎಂದು ಸ್ವೀಕರಿಸಿದಾಗ ಅದು ಬೆಳೆಯತೊಡಗುವುದು. ದೇವರ ಪ್ರಸಾದವನ್ನು ದಾಸೋಹಂಭಾವದೊಂದಿ[ಗೆ] ಸಮೂಹದ ಜೊತೆ ಹಂಚಿಕೊಂಡು ತಿಂದಾಗ ನಿಮ್[ಮ] ವ್ಯಕ್ತಿತ್ವ ಪೂರ್ಣಗೊಳ್ಳುವುದು. ಇಂಥ ಕಾಯಕಜೀವಿ ಶರಣ[ರು] ಇರುವಂಥ ಸಮಾಜವೇ ಶರಣಸಂಕುಲ. ಶರಣಸಂಕುಲದ[ಲ್ಲಿ] ಲಿಂಗಭೇದ, ವರ್ಣಭೇದ, ಜಾತಿಭೇದ ಮತ್[ತು] ವರ್ಗಭೇದಗಳಿಲ್ಲ. ಇದು ಜಾತಿಸಂಕರಗೊಂಡ ಸಂಕುಲ. ಇಲ್ಲಿ ಮಾನವ ಮತ್ತು ನಿಸರ್ಗಪರವಾದ ಎಲ್ಲ ಕಾಯಕಗಳ[ು] ಸಮಾನ. ಇಲ್ಲಿ ಸಮಗಾರ ಹರಳಯ್ಯನವರೂ ಅಷ್ಟೇ ಪ್ರಧಾನಿಯೂ ಅಷ್ಟೇ. ಯಾರೂ ಹಸಿವಿನಿಂದ ಬಳಲಬೇಕಿ[ಲ್ಲ], ಬಿಟ್ಟಿ ಕೂಲಿ ಮಾಡಬೇಕಿಲ್ಲ, ಶರಣಸಂಕುಲದ ಸಾಮೂಹಿ[ಕ] ನಿಧಿಯಾದ ಶಿವನಿಧಿಯ ಮೇಲೆ ಕಷ್ಟದಲ್ಲಿರುವವರಿಗೆ ಹಕ್ಕಿದೆ ಮುಂತಾದ ಬಸವಣ್ಣನವರ ಸುವಿಚಾರಗಳು ಲಕ್ಷಾಂತ[ರ] ಕಾಯಕಜೀವಿಗಳನ್ನು ಅವರೆಡೆಗೆ ಸೆಳೆದವು. ಅವರೆಲ್ಲ ಮೇಲ[ು] ಕೀಳುಗಳ ಭ್ರಮೆಯಿಂದ ಹೊರಬಂದರು. ಉಸಿರುಗಟ್ಟು[ವ] ವಾತಾವರಣದಲ್ಲಿದ್ದ ಅವರು ಮೊದಲ ಬಾರಿ ವಿಮೋಚನೆಯ ಗಾಳಿಯನ್ನು ಉಸಿರಾಡಿದರು. ಸಮೂ[ಹ] ಬದುಕಿನ ಆನಂದವನ್ನು ಅನುಭವಿಸಿದರು. ಸರ್ವರೀತಿಯ ಸಮಾನತೆಯನ್ನು ಸಾರುವ ಇಷ್ಟಲಿಂಗವು ಅವರನ್ನ[ು] ಒಂದುಗೂಡಿಸಿತ್ತು. ಈ ಇಷ್ಟಲಿಂಗ ತತ್ತ್ವವೇ ವಚನಗ[ಳ] ಜೀವಾಳವಾಗಿದೆ.

ಸಮಾಜದಲ್ಲಿನ ಮೌಲ್ಯಗಳನ್ನು ಬಸವಣ್ಣನವರು ಬಹ[ಳ] ಸರಿಯಾಗಿ ಕಂಡುಹಿಡಿದರು. ಯಾವ ದುಡಿಯುವ ಜನ[ರ] ಸಂಸ್ಕೃತಿಯನ್ನು ವೈದಿಕ ಸಂಸ್ಕೃತಿ ಕಡೆಗಣಿಸಿ ಮೇಲಿನ ಮೂ[ರು] ವರ್ಣದವರು ಮಾತ್ರ 'ಜನರು' ಎಂದು ಭಾವಿಸಿತ್ತೋ ಸವರ್ಣೀಯರ ಸಂಸ್ಕೃತಿಗೆ ಪರ್ಯಾಯವಾಗಿ ದುಡಿಯು[ವ] ಜನರ ಸಂಸ್ಕೃತಿಯನ್ನು ಬಸವಣ್ಣನವರು ಎತ್ತಿ ಹಿಡಿದ[ು] ಅದರ ವಿಶ್ವವ್ಯಾಪಿ ಮಹತ್ವವನ್ನು ತೋರಿಸಿಕೊಟ್ಟರು. ವಚನಗಳಲ್ಲಿ ಅಡಕವಾಗಿರುವ ಇಷ್ಟಲಿಂಗ ತತ್ತ್ವವು ನ[ಮ್ಮ] ಜನಸಾಮಾನ್ಯರ ಬದುಕಿನ ತಿರುಳಿನಿಂದಲೇ ರೂಪುಗೊಂಡ ಸಮಾಜೋ-ಧಾರ್ಮಿಕ ಮೌಲ್ಯವಾದುದು ವಿಶ್ವ ಇತಿಹಾಸದಲ್ಲೇ ಅನನ್ಯವಾದುದು. ಹೀಗೆ ಸವರ್ಣೀಯರಲ್ಲ[ದ] ಪ್ರತಿಶತ 90 ರಷ್ಟು ಶೂದ್ರ ಮತ್ತು ಅತಿಶೂ[ದ್ರ] ಕಾಯಕಜೀವಿಗಳು ಕೂಡ ಸಮಾನ ಹಕ್ಕುಗಳುಳ್ಳ ಮಾನವ[ರು] ಎಂಬುದನ್ನು ಬಸವಣ್ಣನವರು ವಚನಚಳವಳಿಯ ಮೂಲ[ಕ] ಸಾಬೀತುಪಡಿಸಿದರು.

ಸೇವೆಯ ಮೂಲಕ ಈ ಭೂಮಿಯನ್ನು ಪ್ರೀತಿಸುವುದ[ು], ಕಾಯಕ, ಪ್ರಸಾದ, ದಾಸೋಹ, ಹಂಚಿಕೊಂಡು ಉಣ್ಣುವುದು, ಸಕಲ ಜೀವಾತ್ಮರ ಬಗ್ಗೆ ಕಾಳಜಿ ವಹಿಸುವುದು, [...] ಸಂಬಂಧದ ಅಕ್ಕ, ಅಣ್ಣ, ಅಪ್ಪ, ಬೊಪ್ಪ ಶಬ್ದಗಳನ್ನು ಸಾಮಾಜಿಕ ಸಂಬಂಧವಾಗಿ ಬಳಸುವುದು, ಸಮಾಜವ[ನ್ನು] ದೇವರಾಗಿ ಕಾಣುವುದು. ದೇವನೊಬ್ಬ ನಾಮ ಹಲ[ವು] ಎಂದು ಹೇಳುವುದು ಮುಂತಾದ ಚಿಂತನೆಗಳು ರೈತಾ[ಪಿ] ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಭಾರತದ ಕೃಷಿಗೆ [...] ಸಾವಿರ ವರ್ಷಗಳ ಇತಿಹಾಸವಿದೆ ಎಂಬುದು ಈಗಾಗ[ಲೇ] ಸಂಶೋಧನೆಯಿಂದ ಸಿದ್ಧವಾಗಿದೆ. ಭಾರತದ ಕೃ[ಷಿ] ಸಂಸ್ಕೃತಿಯಷ್ಟು ಪುರಾತನವಾದ ಸಂಸ್ಕೃತಿ ಜಗತ್ತಿನ[ಲ್ಲಿ] ಇನ್ನೊಂದಿಲ್ಲ. ನೈಲನದಿ ಸಂಸ್ಕೃತಿ, ಮೊಹೆಂಜೊದಾರೊ ಸಂಸ್ಕೃತಿ, ವೈದಿಕ ಸಂಸ್ಕೃತಿ, ಮೆಸೊಪೊಟೊಮಿಯಾ ಸಂಸ್[ಕೃತಿ] ಹೀಗೆ ಯಾವುದೇ ಸಂಸ್ಕೃತಿಗಳ ಇತಿಹಾಸವನ್ನು ಗಣನ[ೆಗೆ] ತೆಗೆದುಕೊಂಡರೂ ಅವುಗಳಿಗೆ 10 ಸಾವಿರ ವರ್ಷಗ[ಳ] ಇತಿಹಾಸವಿಲ್ಲ. ಭಾರತೀಯ ಕೃಷಿ ಸಂಸ್ಕೃತಿಯಲ್ಲಿ ರಾಜ[ನು] ಭೂಪತಿಯಾಗಿದ್ದರೂ ಭೂಮಿಯ ಜೊತೆಗಿನ ನಿ[...] ಸಂಬಂಧವಿರುವುದು ರೈತನಾದವನಿಗೆ ಮಾತ್ರ. ಹೀಗೆ ನ[ಮ್ಮ] ಸಮಾಜ ರೈತಕೇಂದ್ರಿತ ಸಮಾಜವಾಗಿತ್ತು. ಎ[ಲ್ಲ] ಕಾಯಕಜೀವಿಗಳು ಈ ರೈತನ ಸುತ್ತ ಇದ್ದರು. ಇದ[ನ್ನು] ಆಯಪದ್ಧತಿ ಎನ್ನುತ್ತಾರೆ. ಆಗ ಪ್ರತಿ ಗ್ರಾಮಗಳೂ ಸ್ವಯ[ಂ] ಪರಿಪೂರ್ಣವಾಗಿದ್ದವು. ರೈತನಾದವನು ರಾಜ ಮ[...] ಅವನ ಕೈಕೆಳಗಿನ ಗೌಡ ಮುಂತಾದವರಿಗೆ ಕೊಡಬೇಕಾ[ದ] ಪಾಲನ್ನು ಕೊಟ್ಟು ಉಳಿದುದರಲ್ಲಿ ತನ್ನ ಕೃಷಿಕಾರ್ಯಗಳ[ಲ್ಲಿ] ಹಾಗೂ ದೈನಂದಿನ ಬದುಕಿನಲ್ಲಿ ಸಹಾಯ ಮಾಡ[ುವ] ಕಂಬಾರ, ಕುಂಬಾರ, ಮಡಿವಾಳ, ಹಡಪದ ಮುಂತಾ[ದ] ಆಯಗಾರರಿಗೆ ಅವರ ಸೇವೆಗೆ ಅನುಸಾರವಾಗಿ ಪಾ[ಲು] ಉಳಿದದ್ದನ್ನು ತನ್ನ ಕುಟುಂಬಕ್ಕೆ ಇಟ್ಟುಕೊಳ್ಳುತ್ತಿದ್ದ. ರ[...] ಸಂದರ್ಭದಲ್ಲಿ ಬಂದ ಬಡವರಿಗೆ ಅವರ ಪಾಲ[ನ್ನು] ಕೊಡುತ್ತಿದ್ದ! ಗ್ರಾಮದೇವತೆಯ ಪೂಜಾರಿಗೂ ಅ[...] ಉತ್ಪನ್ನದಲ್ಲಿ ಪಾಲು ಇರುತ್ತಿತ್ತು. ಹೀಗೆ ಹಂಚಿಕೊ[ಂಡು] ಉಣ್ಣುವುದರಲ್ಲೇ ಆತ ಸಕಲ ಜೀವಾತ್ಮರಿಗೆ ಲೇ[ಸನ್ನು] ಬಯಸುವುದನ್ನು ಸಹಜವಾಗಿಯೇ ರೂಢಿಸಿಕೊಂಡ.

...ು ಸಂವೇದನಾಶೀಲನಾದನೆಂದರೆ ಬೆಳೆ ಬಂದು ...ಟರಿಗ ಚೆಲ್ಲುವ ಮೂಲಕ ಕ್ರಿಮಿ, ಕೀಟ ಮತ್ತು ...ಆಹಾರ ಒದಗಿಸುತ್ತಾನೆ. ಇಷ್ಟೆಲ್ಲ ದವಾಖ್ಯಾರಿ ...ಂದ ರೈತ ಎಲ್ಲರ ಅನ್ನದಾತನಾಗಿದ್ದು ಅದಕ್ಕೆ ...ಕಾರಣವಾದ ಭೂಮಿಯನ್ನು ತನ್ನ ಜೀವದ ...ಪ್ರೀತಿಸುತ್ತಿದ್ದ ಕಾಯಕವು ಅವನ ಧರ್ಮವಾಗಿತ್ತು. ...ಮಿಯೆಂಬ ಮರ್ತ್ಯಲೋಕವೇ ಕರ್ತಾರನ ಕಮ್ಮಟ ...ಬಸವಣ್ಣನವರು ಸಾರಿದರು. ಕಾಯಕವು ಅವರ ...ೆ ಜೀವಾಳವಾಯಿತು. ದುಡಿಯುವವರು ...ದಿಲ್ಲ ಎಂಬುದನ್ನು ಅವರು ಕಂಡುಕೊಂಡರು. ...ು ಬೇಡುವುದರ ಮೂಲಕ ಇನ್ನೊಬ್ಬರಿಗಿಂತ ...ರಣವೂ ಇಲ್ಲದೆ ಸಣ್ಣವರಾಗುತ್ತಾರೆ. ದುಡಿಮೆಯು ...್ಯರಿಗೆ ವ್ಯಕ್ತಿತ್ವವನ್ನು ತಂದುಕೊಡುತ್ತದೆ. ...ುವವರೇ ಘನತವೆತ್ತ ಮಾನವರು ಎಂಬುದನ್ನು ...ಸಿದ್ಧಮಾಡಿ ತೋರಿಸಿಕೊಟ್ಟರು. ಅಂತೆಯೆ ...ಲ್ಲಿ ಕೊಡುವವರಿದ್ದರು. ಆದರೆ ಬೇಡುವವರಿರಲಿಲ್ಲ.

...ು ತಮ್ಮ ದುಡಿಮೆಯಿಂದ ಪಡೆದದ್ದನ್ನು 'ದೇವರು ... ಎಂದು ಹೇಳುತ್ತಾರೆ. ಇದನ್ನೇ ಬಸವಣ್ಣನವರು ...ಪ್ರಜ್ಞೆ ಎಂದು ಕರೆದರು. 'ನಾನು ದುಡಿದು ...ಳಿಸಿದೆ' ಎಂಬುದು ಅಹಂಕಾರವಾಗುತ್ತದೆ. ಈ ...ರವೇ ಎಲ್ಲ ಅನಿಷ್ಟಗಳಿಗೆ ಮೂಲವಾಗಿದೆ. ಆದರೆ ...ಕೊಟ್ಟ' ಎಂಬ ಪ್ರಸಾದ ಪ್ರಜ್ಞೆಯಿಂದ ಮಾನವರು ...ರದಿಂದ ಮುಕ್ತರಾಗುತ್ತಾರೆ. ಈ ಅಹಂಕಾರದಿಂದ ...ದಾಗಲೇ ಪಡೆದದ್ದನ್ನು ಸಮಾಜವೆಂಬ ದೇವರಿಗೆ ...ವುದು ತಮ್ಮ ಕರ್ತವ್ಯ ಎಂಬ ಅರಿವು ...ುವುದು. ಹೀಗೆ ರೈತರ ಅನುಭವದಿಂದಲೇ ಪ್ರಸಾದ ...ನೆ ಮೂಡಿತು ಮತ್ತು ದಾಸೋಹಂಭಾವದ ...ವನ್ನು ಅರಿತುಕೊಳ್ಳಲಾಯಿತು.

...ಮ್ಮ ಹಳ್ಳಿಗರಲ್ಲಿ ರಕ್ತಸಂಬಂಧದ ಶಬ್ದಗಳು ಸಾಮಾಜಿಕ ...ದ ಶಬ್ದಗಳಾಗಿ ಪರಿವರ್ತನೆಗೊಳ್ಳುತ್ತವೆ. ಜನರು ...ದೇ ಜಾತಿಯವರಿರಲಿ, ಅವರ ವಯಸ್ಸಿಗೆ ...ಣವಾಗಿ ಅಣ್ಣ, ಅಪ್ಪ, ಮಾವ, ಕಕ್ಕ, ಅಜ್ಜ, ಅಜ್ಜಿ ...ಅವ್ವ, ಅತ್ತೆ, ಅತ್ತಿಗೆ ಆಗುತ್ತಾರೆ. ಮನೆಯ ಆಳು ಕೂಡ ಆಳುಮಗ ಎನಿಸಿಕೊಳ್ಳುತ್ತಾನೆ. ಬಸವಧರ್ಮದಲ್ಲಿ ನಂಟುಸಂಬಂಧವಿಲ್ಲ; ಭಕ್ತಿ ಸಂಬಂಧವಿದೆ. 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ; ಬೊಪ್ಪನು ನಮ್ಮ ಡೋಹರ ಕಕ್ಕಯ್ಯ; ಚಿಕ್ಕಯ್ಯ ಎಮ್ಮಯ್ಯ ಕಾಣಯ್ಯಾ; ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ' ಎಂದು ಬಸವಣ್ಣನವರು ಹೇಳುತ್ತಾರೆ.

ರೈತಾಪಿ ಜನರು ತಮ್ಮ ಹಳ್ಳಿಯ ಜನಸಮುದಾಯವನ್ನು 'ದೈವ' ಎಂದು ಕರೆಯುತ್ತಾರೆ. ಈ ದೈವವೇ ಬಸವಧರ್ಮದಲ್ಲಿ 'ಜಂಗಮಲಿಂಗ' ಎಂದಾಗಿದೆ. ಬಸವಣ್ಣನವರು ಜೀವಜಗತ್ತನ್ನು ದೈವಸ್ವರೂಪವಾಗಿ ಕಾಣುತ್ತಾರೆ. ಜಂಗಮಲಿಂಗ ಎಂದರೆ ಸಕಲಜೀವರಾಶಿಯಿಂದ ಕೂಡಿದ ಸಮಾಜವೆಂಬ ದೇವರು ಎಂದಾಗುತ್ತದೆ. 'ಇನ್ನು ಜಂಗಮವೇ ಲಿಂಗವೆಂದು ನಂಬಿದೆ' ಎಂದು ಬಸವಣ್ಣನವರು ಹೇಳಿದ್ದಾರೆ. ಇಷ್ಟಲಿಂಗದಿಂದ ಒಳಲೋಕದ ಅರಿವನ್ನು ಮೂಡಿಸಿದ ಬಸವಣ್ಣನವರು, ಜಂಗಮಲಿಂಗದಿಂದ ಹೊರಲೋಕದ ಪ್ರಜ್ಞೆಯನ್ನು ಮೂಡಿಸಿದರು.

ಹೀಗೆ ಕಾಯಕಜೀವಿಗಳ ಅನುಭವದ ಮೂಲಕ ಹೊಸ ಜೀವನವಿಧಾನವನ್ನು ಕಂಡುಹಿಡಿದ ಬಸವಣ್ಣನವರು, ಪುರಾತನ ಶಿವಸಂಸ್ಕೃತಿಯ ಗಣಪ್ರಜ್ಞೆ, ಲೋಕಾಯತರ ಲೋಕಪ್ರಜ್ಞೆ, ಉಪನಿಷತ್ತುಗಳ ನಿರ್ಗುಣ ಮತ್ತು ನಿರಾಕಾರ ಬ್ರಹ್ಮಜ್ಞಾನ, ಜೈನರ ಅಹಿಂಸೆ, ಬೌದ್ಧರ ಅಷ್ಟಾಂಗ ಮಾರ್ಗಗಳನ್ನೊಳಗೊಂಡ ಆರ್ಯಸತ್ಯಗಳೊಂದಿಗೆ ರೂಪಿಸಿದ 'ಬಹುಜನ ಹಿತಾಯ, ಬಹುಜನ ಸುಖಾಯ' ವಿಧಾನ ಮತ್ತು ಅನುಭವ ಮಂಟಪ ಪರಿಕಲ್ಪನೆಗೆ ಆದಿಮ ರೂಪವಾಗಿ ಕಾಣುವ ಸಾಂಖ್ಯಿಕ ಚಿಂತನೆ ಮುಂತಾದವುಗಳ ಕೂಲಂಕಷ ಅಧ್ಯಯನದೊಂದಿಗೆ ಅವುಗಳ ತಿರುಳನ್ನು ಲೋಕಜ್ಞಾನದ ಒರೆಗಲ್ಲಿಗೆ ಹಚ್ಚುವುದರ ಮೂಲಕ ಸಕಲರ ಅನುಭವದ ಸಮರಸದೊಂದಿಗೆ ಹೊಸ ಅನುಭಾವದ ಸೂತ್ರವನ್ನು ಕಂಡುಹಿಡಿದರು.

ಅತ್ಯಂತ ಪುರಾತನವಾದವುಗಳನ್ನೆಲ್ಲ ಅರಗಿಸಿಕೊಂಡು ಅತ್ಯಂತ ಹೊಸತಾಗಿರುವುದನ್ನು ಕೊಟ್ಟರು. ಹೀಗಾಗಿ ಆ ಕಾಲದಲ್ಲೇ ಸಮಾನತೆ, ಸಮೂಹ ನಾಯಕತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನವ ಹಕ್ಕುಗಳು, ಸಂಸತ್ ಮತ್ತು ಸಂವಿಧಾನದ ಪರಿಕಲ್ಪನೆ ಮೂಡಿದವು.


ಜೇನು ಸಹಸ್ರಾರು ಹೂಗಳ ಮಕರಂದವನ್ನು ಹೀರುತ್ತ ತನ್ನೊಳಗಿನ ರಾಸಾಯನಿಕ ದ್ರವ್ಯದ ಮೂಲಕ ಜೇನುತುಪ್ಪವನ್ನು ತಯಾರಿಸುವಂತೆ ಬಸವಣ್ಣನವರು ಸಕಲರ ಅನುಭವಗಳನ್ನು ಒಟ್ಟಾಗಿಸಿ ತಮ್ಮ ದಿವ್ಯಜ್ಞಾನದಲ್ಲಿ ಒಂದಾಗಿಸಿ ಅನುಭಾವ ಸೃಷ್ಟಿಸಿದರು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಮಹೋತ್ತಮ ಬೀಜವೊಂದು ಫಲವತ್ತಾದ ಮಣ್ಣಿನ, ನೀರಿನ, ಗೊಬ್ಬರದ ಅಂಶಗಳನ್ನು ಹೀರುತ್ತ ಗಾಳಿ ಬೆಳಕನ್ನು ಸೇವಿಸುತ್ತ ಮೊಳಕೆಯೊಡೆದು, ಸಸಿಯಾಗಿ ಬೆಳೆಯುತ್ತ ಹೆಮ್ಮರವಾಗಿ ನಿಂತು ನಿರಂತರ ಫಲವನ್ನು ಕೊಡುವ ತೆರದಲ್ಲಿ ಬಸವಣ್ಣನವರು ಮಾನವಕುಲದ ಅನಂತ ಅನುಭವಗಳನ್ನು ತಮ್ಮದಾಗಿಸಿಕೊಳ್ಳುತ್ತ ಭೂಮಿ ಬಾಹ್ಯಾಕಾಶಗಳನ್ನು ಒಂದಾಗಿಸಿ ಬೆಳೆದು ನಿಂತು, ಲಿಂಗಾಂಗಸಾಮರಸ್ಯದಿಂದ ಹೊರಹೊಮ್ಮಿದ ಅನುಭಾವದ ಫಲಗಳನ್ನು ಜನಸಾಗರಕ್ಕೆ ನೀಡಿದರು.

ಈ ತೆರನಾದ ಲಿಂಗಾಂಗ ಸಾಮರಸ್ಯದ ಅರಿವಿನ ಮೂಲಕ ಪ್ರತಿಯೊಬ್ಬರು ಅನುಭಾವಿಯಾಗಬಲ್ಲರು ಎಂಬುದನ್ನು ತೋರಿಸಿಕೊಟ್ಟು ಅಂಥ ಅನುಭಾವಿಗಳ ಸಂಕುಲವನ್ನೇ ಸೃಷ್ಟಿಸಿದರು. ಮಾನವಕುಲದ ಬಗೆಗಿನ ಅತೀವ ಕಾಳಜಿಯ ಕಾರಣ ಅವರು ಈ ಅದ್ವಿತೀಯ ಅನುಭವದ ಮೂಲಕ ಮಾನವ ಹಕ್ಕುಗಳು, ಸಮೂಹ ನಾಯಕತ್ವ, ಪ್ರಜಾತಾಂತ್ರಿಕ ಚಿಂತನೆಗಳು ಮತ್ತು ಸಂವಿಧಾನ ಅಂಶಗಳಿಂದ ಕೂಡಿದ ವಚನಗಳ ರಚನೆ ಮಾಡಿದರು ಮತ್ತು ಈ ಸತ್ಯದ ಸಂದೇಶ ಸಾರುವ ವಚನ ಚಳವಳಿಗಾರರ ದೊಡ್ಡ ಪಡೆಯನ್ನೇ ನಿರ್ಮಿಸಿದರು.

ಸೂರ್ಯ, ಚಂದ್ರ, ಪೃಥ್ವಿ ಮೊದಲಾದ ಆಕಾಶಕಾಯಗಳು, ಗಿಡ, ಮರ, ಪಶು, ಪಕ್ಷಿ, ಮಾನವಕುಲ ಹೀಗೆ ಎಲ್ಲಕ್ಕೂ 'ಅಂಗ' ಎಂದು ಕರೆಯಲಾಗುವುದು. ಇವೆಲ್ಲವುಗಳ ಅಸ್ತಿತ್ವಕ್ಕೆ ಮೂಲವಾಗಿರುವ ಚೈತನ್ಯವನ್ನೇ 'ಲಿಂಗ' ಎಂದು ಕರೆಯಲಾಗಿದೆ. ಒಳಗಿನ ಅರಿವಿಗೆ ಮೂಲವಾಗಿರುವ ಈ ಚೈತನ್ಯವೆಂಬ ಲಿಂಗ ಮತ್ತು ಹೊರಗಿನ ಪ್ರಜ್ಞೆಗೆ ಕಾರಣವಾಗುವ ಅಂಗದ ಸಾಮರಸ್ಯದಿಂದಲೇ ಕ್ರಿಯಾಶೀಲ ವಿಶ್ವದ ಸೃಷ್ಟಿಯಾಗಿದೆ. ಇಡೀ ಲೋಕದ ಜೊತೆ ಒಂದಾಗಿ ಎಲ್ಲವನ್ನೂ ಒಳಗೊಳ್ಳುತ್ತ ನಮ್ಮೊಳಗಿನ ಚೈತನ್ಯರೂಪಿ ಲಿಂಗದ ಜೊತೆ ಸಮರಸ ಹೊಂದುವುದೇ ಲಿಂಗಾಂಗಸಾಮರಸ್ಯ.

ಇಂಥ ಲಿಂಗಾಂಗಸಾಮರಸ್ಯಕ್ಕೆ ಅಡ್ಡಿ ಬರುವ ಎಲ್ಲ ಮೂಢನಂಬಿಕೆ, ಶೋಷಣೆ ಮತ್ತು ಭೇದಭಾವವನ್ನು ಅಲ್ಲಗಳೆದು ನಿಜದ ನೆಲೆಯನ್ನು ತೋರಿಸುವ ವಚನಗಳನ್ನು ಆಯ್ಕೆ ಮಾಡಿ ವಿವಿಧ ವಿಭಾಗಗಳಲ್ಲಿ ಮರುಹೊಂದಿಸಿ 'ವಚನ ತವನಿಧಿ'ಯಾಗಿಸಿ ನಮಗೆ ಕೊಡುತ್ತಿರುವ ಪ್ರಕಾಶ ಕಶೆಟ್ಟಿ ನಿಜಕ್ಕೂ ಅಭಿನಂದನಾರ್ಹರು. ಯಾವುದೇ ಲಿಂಗವಂತ ಸ್ವಾಮಿಗಳು ಮತ್ತು ವಚನ ತಜ್ಞರು ಇಲ್ಲಿಯವರೆಗೆ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಮತ್ತು ತರ್ಕಬದ್ಧವಾಗಿ ವಚನಗಳ ವಿಂಗಡನೆಯ ಗ್ರಂಥದ ಸಂಕಲನ ಮಾಡಿಲ್ಲ. ವಚನಪ್ರಿಯರಿಗೆ ಮತ್ತು ಈ ಜನಮುಖಿ ಧರ್ಮವನ್ನು ಪಾಲಿಸುವವರಿಗೆ ಇದೊಂದು ಮಹತ್ವದ ಕಾಣಿಕೆಯಾಗಿದೆ.

ಬಸವಣ್ಣನವರ ಮಹತ್ವವನ್ನು ಸಾರುವ 'ಶ್ರೀಗುರು ಬಸವ', ಲಿಂಗದೇವನ ಕುರಿತ 'ದೇವರು', ಕುಟುಂಬ ಕಾಳಜಿಯ 'ಸತಿಪತಿ ಧರ್ಮ', ಮಾನವರನ್ನು ಅಧೀರರನ್ನಾಗಿ ಮಾಡುವ 'ಮೂಢಾಚರಣೆಗಳ ಖಂಡನೆ', ಮಾನವರನ್ನು ಐಹಿಕ ಆಸೆಗಳಿಂದ ಮುಕ್ತಗೊಳಿಸುವ 'ಅಷ್ಟಾವರಣಗಳು', ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ 'ಷಟ್‌ಸ್ಥಲಗಳು', ಅರಿವನ್ನು ಆಚರಣೆಗೆ ತರುವ 'ಪಂಚಾಚಾರಗಳು', ಲಿಂಗಸಂಸ್ಕಾರಕ್ಕೆ ಸಂಬಂಧಿಸಿದ 'ಲಿಂಗತತ್ತ್ವ', ಸಾಮಾಜಿಕ ಪ್ರಜ್ಞೆಯ 'ಜಂಗಮತತ್ವ', ವಿಭೂತಿಯ ಮಹತ್ವವನ್ನು ಸಾರುವ 'ವಿಭೂತಿತತ್ತ್ವ', ದೈನಂದಿನ ಬದುಕಿಗೆ ಬೇಕಾದ 'ಲೋಕನೀತಿ' ಮುಂತಾದ ವಿಭಾಗಗಳಿಂದ ಕೂಡಿದ ಈ ಸಂಕಲನ ವಚನಾಭ್ಯಾಸಿಗಳಲ್ಲಿ ಹೊಸ ಚೈತನ್ಯ ತುಂಬುತ್ತವೆ.



ಒಟ್ಟು 600ಕ್ಕೂ ಹೆಚ್ಚು ಪುಟಗಳುಳ್ಳ ಈ ಗ್ರಂಥ 175 ವಚನಕಾರರ 2000 ವಚನಗಳನ್ನು ಒಳಗೊಂಡಿದೆ. ಇದೊಂದು ಆಕರಗ್ರಂಥವಾಗಿ ಜನಮನ್ನಣೆ ಗಳಿಸುವುದರಲ್ಲಿ ಸಂಶಯವಿಲ್ಲ.

■ ರಂಜಾನ್ ದರ್ಗಾ


# ...ೈನಾ ನೆಹವಾಲ್: ಬ್ಯಾಡ್ಮಿಂಟನ್ ಸಾಮ್ರಾಜ್ಯದ ಮಹಾರಾಣಿ!!

ಭಾರತದ ಸೈನಾ ನೆಹವಾಲ್ ಈಗ ವಿಶ್ವ ...ಟನ್ ಆಡುಂಬೋಲದ ನಂಬರ್ ಒನ್ ಸಾಧಕಿ!! ...ರ ಹರೆಯದ ಈ ಅನನ್ಯ ಆಟಗಾರ್ತಿಗೆ ಜಾಗತಿಕ ...ಂಟನ್ ಫೆಡರೇಶನ್ ವಿಶ್ವದ ನಂಬರ್ ಒನ್ ...ಂಕವನ್ನು ಅಧಿಕೃತವಾಗಿ ಘೋಷಿಸಿದೆ. ಅಲ್ಲಿಗೆ ಸೈನಾರ ...ಪರಿಶ್ರಮ, ಬದ್ಧತೆ, ವಿನಯವಂತಿಕೆಯ ಆಟಕ್ಕೆ ...ಾನ್ಯತೆ ಸಿಕ್ಕಂತಾಗಿದೆ!!

...ದೊಂದು ಕಾಲವಿತ್ತು; ಬ್ಯಾಡ್ಮಿಂಟನ್ ಜಗತ್ತಿನಲ್ಲಿ ..., ದಕ್ಷಿಣ ಕೊರಿಯಾ ಮತ್ತು ಮಲೇಷ್ಯಾದ ದಿಗ್ಗಜರೇ ...ಮುತ್ತಿದ್ದ ದಿನಗಳವು. ಈ ಮೂರು ದೇಶದಲ್ಲಷ್ಟೇ ...ಶ್ರೇಷ್ಠ ಬ್ಯಾಡ್ಮಿಂಟನ್ ಆಟಗಾರರಿದ್ದರು. ಅಗ್ರ ಸ್ಥಾನ- ... ಈ ದೇಶದ ಆಟಗಾರರಲ್ಲಿ ಹಂಚಿಕೆಯಾಗುತ್ತಿತ್ತು; ...ಕಸ್ವಾಮ್ಯ ಮುರಿದ ಕೀರ್ತಿ ಇಂಡಿಯಾದ ಸೈನಾರದು! ...ರಾಷ್ಟ್ರಗಳು ಮಹಿಳಾ ಬ್ಯಾಡ್ಮಿಂಟನ್ ಅಂಕಣದಲ್ಲಿ ...ದ್ದ ಪ್ರಭುತ್ವಕ್ಕೆ ಸೈನಾ ಸವಾಲಾಗಿ ನಿಂತರು; ಗೆದ್ದರೂ ... ಅಷ್ಟೇ ಅಲ್ಲ, ಆಕೆ ಕಠಿಣ ಪರಿಶ್ರಮ ಮತ್ತು ...ಕ ಕ್ಷಮತೆ ಕಾಪಾಡಿಕೊಂಡು ವಿಶ್ವಮಟ್ಟದ ಅಗ್ರಮಾನ್ಯರ ...ೆ ತಾನೇ ಪ್ರಭುತ್ವ ಸ್ಥಾಪಿಸಿದರು! ಸೋಲು-ಗೆಲುವುಗಳ ...ೆ ಛಲ ಬಿಡದೆ ಏಕಾಗ್ರತೆಯಿಂದ ಆಡಿದ ಸೈನಾ ...ಲ್ಲೇ ಅತ್ಯುಗ್ರ ಸ್ಥಾನಕ್ಕೇರಿದ ದೇಶ ಮೊಟ್ಟ ಮೊದಲ ...ಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

...ರಿಯಾಣ ಮೂಲದ ಈ ಹುಡುಗಿ ಭಾರತೀಯ ...ರಂಗದಲ್ಲಿ ಬೆಳೆದ ರೀತಿಯೇ ರೋಚಕ. ಈಕೆ ...ವೀರ್ ಸಿಂಗ್-ಉಷಾರಾಣಿ ದಂಪತಿಯ ಎರಡನೇ ...ರತ್ನ! ಹರ್‌ವೀರ್ ಸಿಂಗ್ ಉದ್ಯೋಗಕ್ಕಾಗಿ ...ರಾಬಾದ್‌ನಲ್ಲಿ ನೆಲೆ ನಿಂತಿದ್ದಾರೆ. ಹೀಗಾಗಿ ಸೈನಾ ...ದರಾಬಾದ್ ಬಾಲೆಯಾಗೇ ಇಡೀ ಜಗತ್ತಿಗೆ ...ಚಿತರಾಗಿದ್ದಾರೆ. 1990ರಲ್ಲಿ ಜನಿಸಿದ ಈ ಕ್ರೀಡಾ ... ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಗೆದ್ದ ಮೊದಲ ...ಯೆಂಬ ಖ್ಯಾತಿ ಚಿಕ್ಕವರಿರುವಾಗಲೇ ಸಾಧಿಸಿದ್ದಾರೆ. ...ಂಟನ್‌ನಲ್ಲಿ ಭಾರತಕ್ಕೆ ಒಲಂಪಿಕ್ ಪದಕ ತಂದ ...ದಲ ಮಹಿಳೆಯೂ ಈಕೆಯೇ!

...ನಾ ಮೊದಲು ಬ್ಯಾಡ್ಮಿಂಟನ್ ತರಬೇತಿ ಶುರು ... [illegible] ಆರಿಫ್ ಮಾರ್ಗದರ್ಶನದಲ್ಲಿ, ಸಣ್ಣ ... ಆಕೆ ದೊಡ್ಡ ಬ್ಯಾಡ್ಮಿಂಟನ್ ಪಟುವಾಗುವ ... ತೋರಿಸಿದ್ದರು. ... ಆಕೆ ಆಲ್ ಇಂಗ್ಲೆಂಡ್ ... [illegible] ಇಂಡಿಯಾದ ಎರಡನೇ ... ಪುಲ್ಲೇಲ ಗೋಪಿಚಂದ್‌ರ ... ಸೈನಾ ತನ್ನ ... ಮೊದಲು ... 2003ರ ಜೂನಿಯರ್ ... ಗೆದ್ದು, ಈ ಚೆಕೊಸ್ಲೋವಾಕಿಯಾ ... ಗೆದ್ದಾಗಲಿಂದ ಆರಂಭವಾದ ಸೈನಾರ



ದಿಗ್ವಿಜಯದ ಯಶೋಗಾಥೆ ಈಚೆಗೆ ಆಕೆ ವಿಶ್ವ ನಂಬರ್ ಒನ್ ಕಿರೀಟ ತಲೆಗೇರಿಸಿಕೊಳ್ಳುವ ತನಕ ಸಾಗಿದೆ.

2004ರಲ್ಲಿ ಸೈನಾ ಏಷ್ಯನ್ ಸೆಟಲೈಟ್ ಓಪನ್ ಪ್ರಶಸ್ತಿ ಗೆದ್ದರು; ಆದರೆ ಆಕೆಯ ಕ್ರೀಡಾ ಬದುಕಿನ ದೆಸೆ ಬದಲಾಗಿದ್ದು 2005ರಲ್ಲಿ. ಸೈನಾ ಈ ವರ್ಷ ಹಲವು ಪ್ರಶಸ್ತಿ-ಪುರಸ್ಕಾರ ಪಡೆದರು. ಸತತ ಎರಡು ವರ್ಷ (2006 ಮತ್ತು 2007) ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್‌ನಲ್ಲೂ ಪ್ರಶಸ್ತಿ ಪಡೆದ ಸೈನಾ ಬ್ಯಾಡ್ಮಿಂಟನ್ ಲೋಕದ ಭರವಸೆಯ ತಾರೆಯಾಗಿ ಹೊಳೆಯ ಹತ್ತಿದರು. 2006ರಲ್ಲಿ ಫಿಲಿಪೈನ್ಸ್‌ನಲ್ಲಿ ನಡೆದ ಫೋರ್‌ಸ್ಟಾರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಜಯ, ಜೈಪುರದಲ್ಲಿ ಏಷ್ಯನ್ ಸೆಟಲೈಟ್ ಟೂರ್ನಿ ಪ್ರಶಸ್ತಿ, ಮೆಲ್ಬೋರ್ನ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕಂಚಿನಪದಕ ಪಡೆದ ಸೈನಾ ತಾನೊಬ್ಬ ಅಭಿಜಾತ ಪ್ರತಿಭೆಯ ಬ್ಯಾಡ್ಮಿಂಟನ್ ಪಟು ಎಂಬುದನ್ನು ನಿಸ್ಸಂಶಯವಾಗಿ ಸಾಬೀತುಮಾಡಿ ಕೊಂಡರು!

2009 ಬಳಿಕವಂತೂ ಸೈನಾ ನೆಹವಾಲ್ 'ಸೂಪರ್ ಸೈನಾ' ಎಂದೇ ವಿಶ್ವ ವಿಖ್ಯಾತರಾಗಿ ಹೋದರು. ಬ್ಯಾಡ್ಮಿಂಟನ್ ದಂತಕತೆ ಪ್ರಕಾಶ್ ಪಡುಕೋಣೆಯ ಪ್ರತಿಭೆಯೊಂದಿಗೆ ಸೈನಾರ ಕ್ರೀಡಾಕೌಶಲ್ಯ ಹೋಲಿಕೆಯಾಗತೊಡಗಿತು. 2009ರಲ್ಲಿ ಇಂಡೋನೇಷ್ಯಾ ಸೂಪರ್ ಸೀರೀಸ್ ಟೂರ್ನಿ, 2010ರಲ್ಲಿ ಹಾಂಕಾಂಗ್ ಸೂಪರ್ ಸೀರೀಸ್ ಟೂರ್ನಿ ಮತ್ತು ಸಿಂಗಾಪುರ ಸೂಪರ್ ಸೂಪರ್ ಸೀರೀಸ್ ಟೂರ್ನಿ, 2012ರಲ್ಲಿ ಇಂಡೋನೇಷ್ಯಾ ಸೂಪರ್ ಸೀರೀಸ್ ಟೂರ್ನಿ ಹಾಗು ಡೆನ್ಮಾರ್ಕ್ ಸೀರೀಸ್ ಸೀರೀಸ್ ಟೂರ್ನಿ ಹಾಗು ಡೆನ್ಮಾರ್ಕ್ ಸೀರೀಸ್ ಟೂರ್ನಿಗಳಲ್ಲಿ ಆರು ಸೂಪರ್ ಸಿಕ್ಸ್ ಕಿರೀಟಗಳನ್ನು ಸೈನಾ ಪಡೆದು ಗೆಲ್ಲುವ ಮೂಲಕ ಜಗತ್ತಿನ ಗಮನ ಸೆಳೆದು ಈ ವರ್ಷ (2015) ಆಲ್ ಇಂಗ್ಲೆಂಡ್ ಚಾಂಪಿಯನ್ ಶಿಪ್‌ನಲ್ಲಿ ಫೈನಲ್ ತಲುಪಿ ಬ್ಯಾಡ್ಮಿಂಟನ್ ಬದುಕಿನಲ್ಲಿ ಮಹತ್ವದ ತಿರುವುಕಂಡರು.

ಸೈನಾ ಮಾಡಿದ ಈ ಸಾಧನೆ ದೇಶದ ಯಾವ ಆಟಗಾರ್ತಿಯೂ ಹಿಂದೆಂದೂ ಮಾಡಿರಲಿಲ್ಲ, ಪುರುಷರ ವಿಭಾಗದಲ್ಲಿ ಇಂಥ ಸಾಧನೆ ಪ್ರಕಾಶ್ ಪಡುಕೋಣೆ ಮತ್ತು ಗೋಪಿಚಂದ್ ಮಾಡಿದ್ದರು. "ರ್‍ಯಾಂಕಿಂಗ್ ಶಾಶ್ವತವಲ್ಲ... ಸ್ಥಿರ ಪ್ರದರ್ಶನ ಶಾಶ್ವತ..." ಎನ್ನುವ ಸೈನಾ ವಿಶ್ವ ಬ್ಯಾಡ್ಮಿಂಟನ್ ಸಂಸ್ಥೆ ಆಯೋಜಿಸುವ ಜಾಗತಿಕ ಮಟ್ಟದ ಚಾಂಪಿಯನ್ ಶಿಪ್‌ಗಳಲ್ಲಿ ತೋರಿರುವ ಸಾಧನೆಯಿದೆಯಲ್ಲ, ಅದು ಅತ್ಯದ್ಭುತ! ರಾಷ್ಟ್ರೀಯ ಚಾಂಪಿಯನ್‌ಶಿಪ್, ರಾಷ್ಟ್ರೀಯ ಕ್ರೀಡಾಕೂಟ, ಏಷ್ಯನ್ ಚಾಂಪಿಯನ್‌ಶಿಪ್ ಮತ್ತು ಚೀನಿ ತೈಪೆ ಚಾಂಪಿಯನ್‌ಶಿಪ್‌ಗಳಲ್ಲೂ ಸೈನಾ ಪ್ರತಿಭೆ ಪ್ರಜ್ವಲಿಸಿದೆ. ಈ ಎಲ್ಲ ಸ್ಪರ್ಧೆಗಳಲ್ಲೂ ಸೈನಾ ಚಿನ್ನ ಬಾಚಿದ್ದಾರೆ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಗೆಲ್ಲುವುದೆಂದರೆ ಸುಮ್ಮನೆ ಮಾತಲ್ಲ; ಅದೊಂದು ದೊಡ್ಡ ಸಾಧನೆ. ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಒಲಂಪಿಕ್ಸ್‌ನಲ್ಲಿ ಈ ಶ್ರೇಷ್ಠ ಆಟಗಾರ್ತಿ ವಿರೋಚಿತ ಸೋಲು ಹಾಗು ಅರ್ಹ ಗೆಲುವುಗಳನ್ನು ಕಂಡಿದ್ದಿದೆ.

ಸತತ ಸೋಲುಗಳನ್ನು ಕಂಡಾಗ ಸೈನಾ 'ಗುರು'ವನ್ನು ಬದಲಿಸಿ ಸುದ್ದಿಯಾಗಿದ್ದು ಇದೆ. ಯಾವುದೇ ಕ್ರೀಡಾಪಟು ಮತ್ತು ತರಬೇತಿದಾರರ ನಡುವೆ ಹೊಂದಾಣಿಕೆ ಇಲ್ಲದಿದ್ದರೆ ಯಶಸ್ಸು ಮರೀಚಿಕೆ ಆಗೋದು ಸಹಜ. ಇಂಥದೊಂದು ಗೊಂದಲ ಸೈನಾ ಮತ್ತಾಕೆಯ ಗುರು ಗೋಪಿಚಂದ್ ನಡೆಯೂ ಆಗಿತ್ತು. ಗೋಪಿಚಂದ್ ಉದಯೋನ್ಮುಖ ಆಟಗಾರರಾದ ಕೆ. ಶ್ರೀಕಾಂತ್ ಮತ್ತು ಪಿ.ವಿ. ಸಿಂಧೂಗೆ ಹೆಚ್ಚು ಮಹತ್ವ ನೀಡಿ ತನ್ನನ್ನು ಕಡೆಗಣಿಸುತ್ತಿದ್ದಾರೆಂಬ ಭಾವನೆ ಒಂದು ಹಂತದಲ್ಲಿ ಸೈನಾಗೆ ಬಂದಿತ್ತು. ಹಾಗಂತ ಆಕೆ ಗುರುವಿನ ಬಗ್ಗೆ ಹಗುರವಾಗೇನೂ ಮಾತಾಡಲಿಲ್ಲ.

ವೃತ್ತಿಪರ ಕೋಚ್ ಜತೆಗಿದ್ದೂ ಯಶಸ್ಸು ಕಾಣದಿದ್ದರೆ ಗುರು ಬದಲಾವಣೆ ಅನಿವಾರ್ಯ ಆಗುತ್ತದೆ. ಸೈನಾ ಹಾಗೇ ಮಾಡಿದರು. ಕಳೆದ ವರ್ಷ ಆಕೆ ಬರೀ ಎರಡೇ ಪ್ರಶಸ್ತಿ ಪಡೆಯುವಂತಾಗಿತ್ತು, ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್‌ಗೆ ಬಂದು ಮುಗ್ಗರಿಸಿದ್ದರು. ಆಗಾಕೆ ಗುರು ಬದಲಿಸುವ ನಿರ್ಧಾರಕ್ಕೆ ಬಂದರು. ಗೋಪಿಚಂದ್ ಕೂಡ ಅಪಸ್ವರ ಎತ್ತಲಿಲ್ಲ. ಗುರು-ಶಿಷ್ಯೆ ನಡುವಿನ ವೈಮನಸ್ಯ ಇದೇ ಮೊದಲೇನಲ್ಲ. 2011ರಲ್ಲೂ ಆಕೆ ಗೋಪಿಚಂದ್ ತರಬೇತಿ ಬಿಟ್ಟಿದ್ದರು. ಬೆಂಗಳೂರಲ್ಲಿರುವ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿ ಸೇರಿದ ಸೈನಾಗೆ ಅಲ್ಲಿ ಗುರುವಾದವರು ವಿಮಲ್‌ಕುಮಾರ್.

ಬ್ಯಾಡ್ಮಿಂಟನ್ ಲೋಕದ ದಂತಕತೆ ಪ್ರಕಾಶ್ ಪಡುಕೋಣೆ, ಗುರು ವಿಮಲ್‌ಕುಮಾರ್ ಮತ್ತು ಶ್ರದ್ಧಾವಂತ ಆಟಗಾರ್ತಿ ಸೈನಾ ಒಂದೆಡೆ ಸೇರಿದರೆ ಕೇಳಬೇಕಾ? ಸೈನಾ ನೋಡು-ನೋಡುತ್ತಿದ್ದಂತೆಯೇ ವಿಶ್ವದ ಅಗ್ರಸ್ಥಾನ ತಲುಪಿಬಿಟ್ಟರು. ಬೆಂಗಳೂರಿನ ತರಬೇತಿಯಲ್ಲಿ ಆಕೆಯ ದಿಗ್ವಿಜಯ ಸಾಲಾಗಿ ನಡೆಯಿತು. ಚೀನಾ ಓಪನ್, ಆಸ್ಟ್ರೇಲಿಯಾ ಓಪನ್, ಆಲ್ ಇಂಗ್ಲೆಂಡ್ ಫೈನಲ್, ಇಂಡಿಯನ್ ಸೂಪರ್ ಸಿರೀಸ್... ಒಂದೊಂದಾಗಿ ಸೈನಾ ಪಡೆದರು. ಆಕೆಯ ಬದ್ಧತೆ ಕಂಡು ವಿಮಲ್‌ಕುಮಾರ್ "ಸೈನಾ ಗೆಲುವಿನಲ್ಲಿ ನನ್ನ ಪಾತ್ರಕ್ಕಿಂತ ಆಕೆಯ ಕಠಿಣ ಪರಿಶ್ರಮವೇ ಮುಖ್ಯ" ಎಂದು ಉದ್ಗರಿಸಿದರು. ಆದರೆ ಸೈನಾ ವಿಶ್ವದ ನಂಬರ್ ಒನ್ ಆದಾಗ ತನ್ನ ಗೆಲುವಿಗೆ ಗುರು ವಿಮಲ್‌ಕುಮಾರ್‌ರ ತರಬೇತಿ, ಪ್ರಕಾಶ್ ಪಡುಕೋಣೆಯ ಕಾಳಜಿಯ ಸಲಹೆ-ಸೂಚನೆಗಳೇ ಕಾರಣ ಎಂದು ವಿನಮ್ರವಾಗಿ ಹೇಳಿದ್ದಾರೆ. ಪದ್ಮಶ್ರೀ, ಅರ್ಜುನ್, ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ಪಡೆದಿರುವ ಸೈನಾರ ಕಣ್ಣೀಗ ಬರಲಿರುವ ರಿಯೋ ಒಲಂಪಿಕ್ಸ್ ಚಿನ್ನದ ಪದಕದ ಮೇಲಿದೆ.

ಒಂದಂತೂ ಖರೆ. ಸೈನಾ ನೆಹವಾಲ್ ಬ್ಯಾಡ್ಮಿಂಟನ್ ಪ್ರಪಂಚದಲ್ಲಿ ಕಂಡ ನಿರಂತರ ಯಶಸ್ಸಿನೊಂದಿಗೆ ದೇಶದ ಯುವಪೀಳಿಗೆಯಲ್ಲಿ ಒಂಥರಾ ಸಂಚಲನವೂ ಮೂಡಿದೆ. ಹೆಚ್ಚೆಚ್ಚು ತರುಣ-ತರುಣಿಯರು ಬ್ಯಾಡ್ಮಿಂಟನ್ ಆಟದಂಗಣದತ್ತ ಆಕರ್ಷಿತರಾಗುತ್ತಿದ್ದಾರೆ. ಪ್ರಕಾಶ್ ಪಡುಕೋಣೆ ಮತ್ತು ಪುಲ್ಲೇಲ ಗೋಪಿಚಂದ್ ಚಾಂಪಿಯನ್ ಆಗಿದ್ದಾಗ ಭಾರತದಲ್ಲಿ ಬ್ಯಾಡ್ಮಿಂಟನ್‌ಗೆ ಅಂಥ ಕ್ರೇಜ್ ಇರಲಿಲ್ಲ. ಅದಿನ್ನು ವೃತ್ತಿಪರತೆ ಕಂಡಿರಲಿಲ್ಲ. ಮಹಿಳಾ ಆಟಗಾರ್ತಿಯರ ಸಂಖ್ಯೆಯಂತೂ ತೀರಾ ಕಡಿಮೆಯಿತ್ತು. ಹಣವುಳ್ಳವರ ಸಂತಾನದ ಕೈಲಷ್ಟೇ ಬ್ಯಾಡ್ಮಿಂಟನ್ ಬ್ಯಾಟ್ ಇರುತ್ತಿತ್ತು.


ಆದರೆ ಸೈನಾ ಕಂಡ ಯಶಸ್ಸಿನ ನಂತರ ಬ್ಯಾಡ್ಮಿಂಟನ್‌ಗೆ ಹೊಸ ಖದರು ಬಂದುಬಿಟ್ಟಿದೆ. ಹೊಸ-ಹೊಸ ಬ್ಯಾಡ್ಮಿಂಟನ್ ಕ್ಲಬ್‌ಗಳು ತಲೆ ಎತ್ತುತ್ತಿವೆ. ಸರ್ಕಾರ ಸಹ ಅಕಾಡೆಮಿ ಶುರು ಮಾಡುತ್ತಿದೆ. ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಪ್ರಕಾಶ್ ಪಡುಕೋಣೆ ಅಕಾಡೆಮಿ ಮತ್ತು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿರುವ ಸರ್ಕಾರದ ಅಕಾಡೆಮಿಯಲ್ಲಿರುವ ಉತ್ಸಾಹಿ ಕ್ರೀಡಾಪಟುಗಳೇ ಸೈನಾರ ಬ್ಯಾಡ್ಮಿಂಟನ್ 'ಪ್ರಭಾವ'ಕ್ಕೆ ಸಾಕ್ಷಿಯಾಗುತ್ತಿದ್ದಾರೆ! ಬ್ಯಾಡ್ಮಿಂಟನ್ ಕ್ರೀಡೆಯಲ್ಲಾದ ಬದಲಾವಣೆಗೆ ಸೈನಾರ ಯಶೋಗಾಥೆಯೇ ಕಾರಣ.

ಭಾರತಕ್ಕೆ ಕೀರ್ತಿ ತಂದ ಈ ಹುಡುಗಿ ಹಲವು ವರ್ಷ ಬ್ಯಾಡ್ಮಿಂಟನ್ ಸಾಮ್ರಾಜ್ಯದ ಅನಭಿಷಿಕ್ತ ಅಧಿನಾಯಕಿ ಆಗಿರಲೆಂಬುದೇ 'ಹಚಿ' ಹಾರೈಕೆ.

■ ಕುದ್ರೋಳಿ...

ಅನುರಣನ

# ನೀರೊಳಗಿನ ಸಂಗತಿಗಳು



ಡಾ. ಟಿ.ಎಸ್. ಚನ್ನೇಶ್
channeshts@gmail.com


ಇಡೀ ಭೂಮಿಯ ಮೇಲ್ಮೈಯಲ್ಲಿರುವ ಸಂಗತಿಗಳಲ್ಲಿ ಎಲ್ಲವೂ ಮಣ್ಣಿಗೆ ಅಥವಾ ನೀರಿಗೇ ಸೇರಿದ್ದು. ಹಾಗೆ ನೋಡಿದರೆ ಭೂಮಿಯನ್ನು ನೀರಿನಿಂದಾದ ಗ್ರಹ ಎಂತಲೇ ಕರೆಯಬೇಕು ಏಕೆಂದರೆ ಭೂಮಿಯನ್ನು ಅತಿ ಹೆಚ್ಚು ಆವರಿಸಿಕೊಂಡ ವಸ್ತು ನೀರು. ಉಳಿದಂತೆ ಅಲ್ಲಲ್ಲಿ ನೆಲ ಮುದ್ದೆಯಂತೆ ತೇಲುತ್ತಿದೆ. ಬರೀ ಭೂಮಿಯಷ್ಟೇ ಅಲ್ಲ! ನಮ್ಮ ದೇಹ ಕೂಡ 60% ನೀರಿನಿಂದಲೇ ಉಂಟಾಗಿದೆ. ಪ್ರತೀ ಜೀವಿಯಲ್ಲೂ ನೀರೇ ದೇಹದ ಬಹು ಮುಖ್ಯಭಾಗ. ಭೂಮಿಯ ಮೇಲಿನ ವಸ್ತುಗಳಲ್ಲಿ ಅತಿಹೆಚ್ಚು ಅಧ್ಯಯನಗಳು ನಡೆದಿರುವುದು ಕೂಡ ನೀರು ಮತ್ತು ಅದರ ಪ್ರಭಾವಗಳ ಕುರಿತೇ. ಅಲ್ಲದೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಅತ್ಯಂತ ಚರ್ಚೆಯಲ್ಲಿರುವ ವಸ್ತುವೂ ನೀರೇ ಆಗಿದೆ. ಇತಿಹಾಸಕಾಲದಿಂದಲೂ ವಿಜ್ಞಾನವು ಸಹ ನೀರನ್ನು ಕುರಿತು ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿದ್ದರೂ ಈ ಕೆಲಸ ಮಾತ್ರ ನಿರಂತರವಾಗಿ ನಡೆಯುತ್ತಲೇ ಇದೆ. ಇಂದಿಗೂ ತನ್ನ ವೈವಿಧ್ಯಮಯವಾದ ಗುಣಗಳಿಂದ ಕುತೂಹಲಗಳ ಗಣಿಯಾಗಿರುವ ನೀರು ವಿಜ್ಞಾನಕ್ಕೆ- ಅದರಲ್ಲೂ ಜೈವಿಕ ವಿಜ್ಞಾನಕ್ಕೆ- ಸದಾ ಅವಕಾಶಗಳನ್ನು ಒದಗಿಸುತ್ತಲೇ ಇದೆ. ಇದರಿಂದಾಗಿ ನೀರು ಸದಾ ಸುದ್ದಿಯಲ್ಲಿರುವ ವಸ್ತುವೇ.

ನಾವು ಊಟ ಇಲ್ಲದೆ ಒಂದು ತಿಂಗಳು ಇರಬಹುದು ಆದರೆ ನೀರಿಲ್ಲದೆ ಒಂದು ವಾರ ಕೂಡ ಇರುವುದಕ್ಕೆ ಆಗುವುದಿಲ್ಲ. ತನ್ನೆಲ್ಲ ವಿಶೇಷತೆಗಳನ್ನು ಜೊತೆಲ್ಲಿಟ್ಟುಕೊಂಡ ನೀರಿಗೆ ವೈವಿಧ್ಯಮಯವಾದ ಹೆಸರುಗಳಿವೆ. ಅದನ್ನು ಡೈ ಹೈಡ್ರೋಜನ್ ಮಾನಾಕ್ಸೈಡ್, ಆಕ್ಸಿಡೇನ್, ಹೈಡ್ರಾಕ್ಸಿಲಿಕ್ ಆಮ್ಲ ಹಾಗೂ ಹೈಡ್ರೋಜನ್ ಹೈಡ್ರಾಕ್ಸೈಡ್ ಎಂಬುದಾಗಿ ಕರೆಯಲಾಗುತ್ತದೆ. ಹೀಗೆ ಆಮ್ಲ ಹಾಗೂ ಪ್ರತ್ಯಾಮ್ಲ ಎರಡೂ ಹೆಸರುಗಳುಳ್ಳ ಅಪರೂಪದ ರಸಾಯನಿಕ ನೀರು. ಜತೆಗೆ ನಿಸರ್ಗದಲ್ಲಿ ಘನ, ದ್ರವ ಹಾಗೂ ಅನಿಲ ಈ-ಮೂರೂ ರೂಪದಲ್ಲಿ ಏಕಕಾಲದಲ್ಲಿ ಸಿಗುವ ಏಕೈಕ ವಸ್ತು ನೀರು. ಘನ ವಸ್ತುವಾಗಿ ನೀರು ದ್ರವವಾದ ನೀರಿಗಿಂತ ಹಗುರ ಅದಕ್ಕೇ ಮಂಜುಗಡ್ಡೆಯು ನೀರಿನ ಮೇಲೆ ತೇಲುತ್ತದೆ. ಸಾಂದ್ರತೆಯ ಅಧ್ಯಯನಕ್ಕೆ ನೀರೇ ಆಧಾರ. ನೀರಿನ ಸಾಂದ್ರತೆಯನ್ನು ಒಂದು ಎಂದಿಟ್ಟುಕೊಂಡೇ ಉಳಿದ ವಸ್ತುಗಳ ಸಾಂದ್ರತೆಯನ್ನು ಅಳೆಯಲಾಗುತ್ತದೆ. ಅಲ್ಲದೆ ಶುದ್ಧ ನೀರು ಬಣ್ಣವಿಲ್ಲದ, ವಾಸನೆಯಿಲ್ಲದ ವಸ್ತು. ದ್ರಾವಕವಾಗಿ ನೀರಿಗೆ ವಿಶೇಷ ಸ್ಥಾನ, ಹೆಚ್ಚೂಕಡಿಮೆ ಎಲ್ಲವನ್ನೂ ತನ್ನಲ್ಲಿ ಕರಗಿಸಿಕೊಳ್ಳುವ ಗುಣ ಇದಕ್ಕಿದೆ. ಇನ್ನೊಂದು ವಿಶೇಷವೆಂದರೆ ತನ್ನ ಉಷ್ಣತೆಯಲ್ಲಿ $0^0$ ಸೆಂಟಿಗ್ರೇಡ್‌ಗಿಂತ ಹೆಚ್ಚಾದರೂ ಅಥವಾ ಕಡಿಮೆಯಾದರೂ ಗಾತ್ರದಲ್ಲಿ ಮಾತ್ರ ದೊಡ್ಡದಾಗುತ್ತದೆ. ಇನ್ನೂ ವಿಚಿತ್ರವೆಂದರೆ ಸುಲಭವಾಗಿ ಜಾರುವ ಹಾಗೂ ಹತ್ತಿಕೊಳ್ಳುವಂತಹ ಎರಡೂ ಗುಣಗಳನ್ನು ಹೊಂದಿದೆ. ಹೀಗೆ ಏಕಕಾಲದಲ್ಲಿ ಎರಡೆರಡು ಬಗೆಯ ವೈರುಧ್ಯ ಗುಣಗಳನ್ನು ಹೊಂದಿರುವ ವಿಶೇಷತೆ ನೀರಿಗೆ ಮಾತ್ರ.

ಹಾಗೆಯೇ ನೀರಿಗೆ ಪೋಲಾರಿಟಿ ಅಥವಾ ಧ್ರುವೀಯ ಗುಣ ಇದೆ. ಅದರಲ್ಲಿನ ಆಮ್ಲಜನಕ ಮತ್ತು ಜಲಜನಕಗಳ ನಡುವಿನ ವಿದ್ಯುದಾವೇಶದಲ್ಲಿ ಇರುವ ವ್ಯತ್ಯಾಸದಿಂದಾಗಿ ನೀರು ಧ್ರುವೀಯ ಗುಣವನ್ನು ಹೊಂದಿದೆ. ಆಮ್ಲಜನಕದ ತುದಿಯಲ್ಲಿ ಸ್ವಲ್ಪ ಋಣವಿದ್ಯುತ್ ಹಾಗೂ ಜಲಜನಕದ ತುದಿಯಲ್ಲಿ ಧನವಿದ್ಯುತ್ ಚಾರ್ಜ್‌ಅನ್ನು ಹೊಂದಿರುತ್ತದೆ. ಈ ಗುಣದ ಕಾರಣದಿಂದಲೇ ಅದಕ್ಕೆ ಅನೇಕ ವಸ್ತುಗಳ ಕರಗಿಸಿಕೊಳ್ಳುವ, ಜತೆಗೆ ಯಾವುದೇ ವಸ್ತುವಿನ ಮೇಲ್ಮೈಗೆ ಸುಲಭವಾಗಿ ಅಂಟುವ ಗುಣವನ್ನು ಹೊಂದಿದೆ. ಆಮ್ಲಜನಕವು ಎರಡು ಜಲಜನಕದ ಅಣುಗಳ ಜತೆಗೆ ನೇರವಾಗಿ ರಚನೆಯನ್ನು ಉಂಟುಮಾಡದೆ, ಬಾಗಿದ ರೂಪದಲ್ಲಿರುತ್ತದೆ. ಹಾಗಾಗಿ ಜಲಜನಕವಿಲ್ಲದ ಭಾಗದಲ್ಲಿ ಋಣವಿದ್ಯುತ್ ಅಂಶವನ್ನೂ, ಜಲಜನಕ ಇರುವೆಡೆ ಧನವಿದ್ಯುದಂಶವನ್ನೂ ಹೊಂದಿದೆ. ಒಂದು ವೇಳೆ ಈ ರಚನೆಯು ನೇರವಾಗಿ ಇದ್ದಿದ್ದರೆ ನೀರು ಧ್ರುವೀಯ ಗುಣವನ್ನೇ ಹೊಂದಿರುತ್ತಿರಲಿಲ್ಲ. ಇದರಿಂದಾಗಿಯೇ ಅದರ ದ್ರಾವಕ ಗುಣವೂ ವಿಶೇಷವಾಗಿದೆ.

ನೀರು ಒಂದು ವಿಶೇಷವಾದ ಉಷ್ಣತೆಯ ಸಾಮರ್ಥ್ಯವನ್ನು ಹೊಂದಿದೆ. ಇದರಿಂದಾಗಿ ಅದರ ಪ್ರತೀ ಅಣುವಿನಿಂದ ಆವಿಯಾಗುವಾಗ ಬಯಸುವ ಉಷ್ಣವು ಅತಿ ಹೆಚ್ಚು. ಕಾರಣವೆಂದರೆ ಅದರಲ್ಲಿನ ಜಲಜನಕದ ನಡುವಣ ಬಂಧವು ಅತೀ ಗಟ್ಟಿಯಾದ ಬಂಧವಾಗಿದ್ದು ಬಿಡುಗಡೆಗೆ ಹೆಚ್ಚು ಶಕ್ತಿ ಬಯಸುತ್ತದೆ. ಇದರಿಂದಲೇ ಇಡೀ ಭೂಮಿಯ ಉಷ್ಣತೆಯನ್ನು ತನ್ನ ಎಲ್ಲಾ ಮೂರೂ ರೂಪಗಳಲ್ಲಿ ಬದಲಾಗುತ್ತಾ, ಇಡೀ ವಾತಾವರಣದ ಹವಾಮಾನ ನಿಯಂತ್ರಿಸುತ್ತದೆ. ಇದರಿಂದಾಗಿ ನೀರಿನ ಉಷ್ಣತೆಯಲ್ಲಿ ಸಾಮಾನ್ಯವಾಗಿ ಹೆಚ್ಚು- ಕಡಿಮೆ ಆಗುವುದಿಲ್ಲ. ಈ ಒಂದೇ ರೀತಿಯ ಸಮತೋಲನದ ವಿಶೇಷತೆಯಿಂದಾಗಿ ನೆಲದ ಮೇಲಿನ ಇದರ ಹೊದಿಕೆಯು ಇಡೀ ಭೂಮಿಯನ್ನು ಅಗಾಧವಾದ ಸೂರ್ಯರಶ್ಮಿಯಿಂದ ಕಾಪಾಡಿದೆ. ನಿರಂತರವಾಗಿ ನೀರಿನ ಅಣುಗಳು ಒಂದು ರೂಪದಿಂದ ಮತ್ತೊಂದು ರೂಪವನ್ನು ಪಡೆಯುತ್ತಾ ಭೂಮಿ ಮತ್ತು ಆಗಸ ನಡುವೆ ಪಯಣದಲ್ಲಿದ್ದು ನಡುವಿನ ಹವಾಮಾನಕ್ಕೆ ಏರುಪೇರಾಗದಂತೆ ಸಹಾಯಕವಾಗಿವೆ. ಆದಾಗ್ಯೂ ಇದರ ಒಟ್ಟಾರೆ ನಿಸರ್ಗದ ಚಕ್ರದಲ್ಲಿ ನೆಲದ ಮೇಲೆ ಹಂಚಿಕೆಯಾಗುವ ಮಾರ್ಗದ ಪ್ರಶ್ನೆಗಳಂತೂ ನಿತ್ಯ ನಿರಂತರವಾಗಿವೆ. ನೀರೊಳಗಿನ ಸಂಗತಿಗಳು ತಿಳಿದಷ್ಟೂ ಬೆರಗನಿಟ್ಟು ಭೂಮಿಯ ಜೀವಂತಿಕೆಯನ್ನು ಕಾಪಾಡಿವೆ.

ಹೀಗೆ ನೀರು ಸದಾ ಚಲನೆಯಲ್ಲಿದ್ದು ಇಡೀ ಭೂಮಿಯ ಜೀವಂತಿಕೆಯನ್ನು ಕಾಪಾಡುತ್ತಿದೆ. ಈ ಭೂಮಿಯ ಮೇಲಣ ಒಟ್ಟಾರೆ ನೀರು ಸುಮಾರು 1386 ದಶಲಕ್ಷ ಘನಕಿಲೋಮೀಟರ್‌ಗಳು ಎಂದು ಒಂದು ಅಂದಾಜು. ಇದೆಲ್ಲವೂ ನಿರಂತರವಾಗಿ ಜಲಚಕ್ರದಲ್ಲಿ ಭಾಗಿಯಾಗಿ ಮಳೆಹನಿಯು ಪಯಣದಲ್ಲಿದೆ. ಮೇಲುನೋಟಕ್ಕೆ ಇದು ಒಂದು ಬೃಹತ್ ಪ್ರಮಾಣದ ಜಲರಾಶಿ ಅನ್ನಿಸಿದರೂ, ಇಡೀ ಭೂಮಿಯ ದ್ರವ್ಯರಾಶಿಗೆ ಹೋಲಿಸಿದಲ್ಲಿ ಇದು ಅತ್ಯಲ್ಪ. ಇದು ಭೂದ್ರವ್ಯರಾಶಿಯ ಕೇವಲ 0.025% ಮಾತ್ರವೇ! ಅದರಲ್ಲಿಯೂ ಅತ್ಯಮೂಲ್ಯವಾದ ಕುಡಿಯಲು ಯೋಗ್ಯವಾದ ನೀರು ಅದರಲ್ಲಿನ ಪ್ರತಿಶತ 2.7ರಷ್ಟು ಮಾತ್ರ. ಇದಿಷ್ಟೇ ನೀರು ಎಲ್ಲಾ ಜೀವಿಸಮುದಾಯಗಳನ್ನು ಸಾಕುವ ಹೊಣೆಹೊತ್ತಿದೆ. ಇದೊಂದು ಸುದೀರ್ಘ ಪಯಣದಂತೆ ನಿರಂತರವಾಗಿ ನಡೆಯುತ್ತಲೇ ಇದೆ.




ಈ ಪಯಣ ಕೇವಲ ಬಾಯಾರಿಕೆಯನ್ನು ತಣಿಸುವುದಕ್ಕಷ್ಟೇ ಅಲ್ಲ, ಸಕಲ ಜೀವಚರಗಳ ಮತ್ತು ಸೂರ್ಯನ ನಡುವಣ ಶಕ್ತಿಯನ್ನೂ ವರ್ಗಾಯಿಸುವ ನಿರಂತರತೆಗೆ ಬದ್ಧವಾಗಿದೆ. ಸೂರ್ಯನಶಾಖಕ್ಕೆ ಸಾಗರಗಳಿಂದ ಆಗಸಕ್ಕೆ ಏಣಿಹಾಕಿ ನೀರು ಏರುತ್ತದೆ. ಪ್ರತೀ ದಿನ ಸುಮಾರು 4,30,000 ಘನಕಿಲೋಮೀಟರಿನಷ್ಟು ನೀರು ಸಾಗರಗಳಿಂದಲೇ ವಾತಾವರಣದ ಉಷ್ಣತೆಗೆ ಆವಿಯಾಗಿ ಆಗಸವನ್ನು ಸೇರುತ್ತದೆ. ಪ್ರತಿಯಾಗಿ ನೀರಿನಿಂದ ಒಂದಷ್ಟು ತಂಪು ಭೂಮಿಗೆ ಸಿಗುತ್ತದೆ. ಜೊತೆಗೆ ನದಿ ಸರೋವರಗಳಿಂದ, ಅಲ್ಲದೆ ಜೀವರಾಶಿಗಳ ಉಸಿರಾಟದಿಂದಲೂ ಆಗಸವನ್ನು ಸೇರುವ ನೀರಾವಿಯು ಸರಿಸುಮಾರು 70,000 ಘನಕಿಲೋಮೀಟರಿನಷ್ಟಾಗುತ್ತದೆ. ಇದಿಷ್ಟೂ ದಿನಂಪ್ರತಿ ಭೂಮಿಯ ತಂಪಾಗುವಿಕೆಯ ಕೆಲಸದಲ್ಲಿ ಭಾಗಿಯಾಗಲಿದೆ. ಇದು ವಾತಾವರಣದ ಗಾಳಿಗಿಂತ ತುಸು ಕಡಿಮೆ ಸಾಂದ್ರವಾಗಿದ್ದು ಮೇಲಕ್ಕೆ ಗಾಳಿಗುಂಟ ಸಾಗುತ್ತದೆ. ವಾತಾವರಣದ ಒಟ್ಟು ಶಕ್ತಿಯ ಸರಿಸುಮಾರು ಅರ್ಧದಷ್ಟು ಕೇವಲ ಈ ನೀರಾಟದಲ್ಲೇ ಬಳಕೆಯಾಗುತ್ತದೆ.

ಮೇಲೇರಿದಂತೆ ನೀರಾವಿಯ ಮೇಲೆ ಗಾಳಿಯ ಒತ್ತಡ ಕಡಿಮೆಯಾಗುತ್ತಾ ಸಾಗುತ್ತದೆ. ಇದರಿಂದ ನೀರಾವಿ ಸಾಂದ್ರವಾಗುತ್ತಾ ಮತ್ತಷ್ಟು ತಂಪಾಗುತ್ತದೆ. ಉತ್ತರವೆಂಬಂತೆ ನೀರಾವಿಯಿಂದ 0.008 ರಿಂದ 0.8ಮಿ.ಮೀ. ಗಾತ್ರದ ನೀರಹನಿಗಳು ವಿಕಸನಗೊಳ್ಳುತ್ತವೆ. ಇವೇ ಒಂದಕ್ಕೊಂದು ಸೇರುತ್ತಾ ಮೋಡಗಳಾಗುತ್ತಾ ಬೆಳೆಯುತ್ತವೆ. ಇಂಥಾ ಕಡೆ ಪ್ರತೀ ಘನಮೀಟರ್ ಗಾಳಿಗೆ ಕೇವಲ 10 ಗ್ರಾಂ ನೀರು ದೊರಕುವುದೆಂಬುದೇ ಒಂದು ಅಚ್ಚರಿ! ನೀರಾವಿಯೊಳಗಣ ಎಲ್ಲಾ ಶಕ್ತಿಯು ಸಾಂದ್ರವಾದಂತೆ ಕಳೆದುಕೊಳ್ಳುತ್ತಾ ಸಾಗುವಾಗ ಹೊಮ್ಮಿದ ಸ್ವಲ್ಪವೇ ಶಾಖವು ಏರೊತ್ತಡ ನಿರ್ಮಿಸಲು ಸಹಾಯಕವಾಗಲಿದೆ. ವಾತಾವರಣದ ಉಷ್ಣತೆಯೂ ಹೇಗೂ ತಂಪಾಗಿಯೇ ಇರುತ್ತದೆ. ಆಗ ಆವಿಯಾಗುವ ವಲಯಗಳ (ಉಪ ಉಷ್ಣವಲಯ ಹಾಗೂ ಧ್ರುವಗಳು) ಮತ್ತು ಸಾಂದ್ರವಾಗುವ ವಲಯಗಳ (ಭೂಮಧ್ಯ ಭಾಗಗಳು) ನಡುವೆ ಸಂವಹನ ವಿದ್ಯುತ್ ಪ್ರವಾಹವು ಉಂಟಾಗಲಿದೆ. ಆದರೆ ಈ ಏರೊತ್ತಡವು ನಿರಂತರವಾಗಿ ನೀರಾವಿಯ ಸಾಂದ್ರೀಕರಣವನ್ನು ಪ್ರೋತ್ಸಾಹಿಸುವುದಿಲ್ಲ. ನೀರಹನಿಗಳು 0.1 ಮಿ.ಗ್ರಾಂ ಗಾತ್ರವನ್ನು ಪಡೆಯುತ್ತಲೇ ಅವುಗಳಿಗೆ ಪ್ರತೀ ಸೆಕೆಂಡಿಗೆ ಒಂದು ಮೀಟರ್ ವೇಗದಿಂದ ಬೀಳುವ ಶಕ್ತಿಬರುತ್ತದೆ. ಆಗ ನೋಡಿ ಹನಿಗಳು ಭೂಮಿಯಕಡೆ ಮುಖಮಾಡುತ್ತವೆ. ಮಳೆಯಾಗಿಯೋ, ಮಂಜುಗಡ್ಡೆಯುಳ್ಳ ಆಲಿಕಲ್ಲುಗಳಾಗಿಯೋ ಒಟ್ಟು ನೀರಾಗಿ, ಅಂತೂ ನೆಲದ ಕಡೆಗೇ ಅವುಗಳ ಪಯಣವಂತೂ ಖಾತ್ರಿ.

ಇಷ್ಟೆಲ್ಲಾ ನೀರಿನ ಅರಿವು ಸಾಕಷ್ಟು ಸಮಯದಿಂದ ವಿಕಾಸಗೊಂಡಿದೆ. ಮಾನವನ ಚರಿತ್ರೆಯಲ್ಲಿ ನೀರಿಗೆ ಅತ್ಯಂತ ಪ್ರಮುಖವಾದ ಸ್ಥಾನ. ಇದು ಕೇವಲ ಮಾನವರಿಗಷ್ಟೇ ಅಲ್ಲ, ಎಲ್ಲಾ ಜೀವಿಗಳ ಇತಿಹಾಸಕ್ಕೂ ಸಂಬಂಧಿಸಿದ್ದಾಗಿದೆ. ಮೂಲಭೂತವಾಗಿ ಎಲ್ಲಾ ಜೀವಿಗಳ ಉಗಮವು ನೀರಿನ ದೆಸೆಯಿಂದಲೆ ಆಗಿದ್ದರಲ್ಲಿ ಯಾವ ಸಂಶಯವೂ ಇಲ್ಲ. ಇಂದಿಗೂ ಅನ್ಯಗ್ರಹಗಳ ನಮ್ಮ ವೈಜ್ಞಾನಿಕ ಹುಡುಕಾಟದಲ್ಲಿ ಅಲ್ಲಿ ನೀರಿದೆಯೇ ಎಂಬ ಪ್ರಶ್ನೆಯಲ್ಲಿ ಉತ್ತೇಜಿತವಾಗಿರುವುದು ಬಹುಶಃ ನಮ್ಮೆಲ್ಲರ ಅರಿವಿಗೆ ಬರದೇ ಇರದು. ಎಲ್ಲಾ ಹುಡುಕಾಟಗಳೂ ನೀರಿಂದಲೇ ಆರಂಭಗೊಂಡಿರುವ ಬಗೆಗೂ ನಮಗೆ ಅರಿವಿರಲು ಸಾಕು.



ಒಂದು ಮನೆಯನ್ನು ಬಾಡಿಗೆಗೆ ಪಡೆಯುವಾಗಲೂ ಅಥವಾ ಒಂದೂರಿಗೆ ನೆಲೆಗೊಳ್ಳುವಾಗಲೂ ನಮ್ಮ ಬಹುಮುಖ್ಯ ಆಸಕ್ತಿಯೆಂದರೆ ಅಲ್ಲಿ ನೀರಿನ ಸೌಕರ್ಯವಿದೆಯೇ? ಎಂಬುದರಿಂದಲೇ ಆರಂಭ! ಭೂಮಿಯ ಉಗಮದಲ್ಲಿ ತಂಪಾಗಲು ಆರಂಭದ ನಂತರದ ದೀರ್ಘ ಮಳೆಯ ಹಿನ್ನೆಲೆಯಿಂದ ಅಗಾಧವಾದ ಜೀವಜಲ ಸೃಷ್ಟಿಯಾಯಿತು. ಅದೇ ಸಾಗರಗಳನ್ನು ಸೇರಿ ಇಂದಿಗೂ ಇರುವ ನೀರಿನ ಮೂಲ ಸೆಲೆಯಾಗಿದೆ. ಭೂಮಿಯನ್ನು ಬಹುಪಾಲು ಆವರಿಸಿರುವ ನೀರ ಮೇಲ್ಮೈಯಾಗಿ ರೂಪುಗೊಂಡಿವೆ. ಭೂಮಿಯ ಮೇಲಿನ ಹೆಚ್ಚಿನ ಪಾಲಿನ ನೀರೂ ಕೂಡ ಈ ಸಾಗರಗಳ ನೀರೆ. ಒಟ್ಟು ನೀರಿನ 96.5 % ರಷ್ಟು ಉಪ್ಪು ನೀರು. ಸುಮಾರು 1% ನೀರು ಉಪ್ಪು ನೀರಿನ ಅಂತರ್ಜಲ ಹಾಗೂ ಸರೋವರದಲ್ಲಿದೆ. ಉಳಿದ ಬಳಸಬಹುದಾದ ಸಿಹಿ ನೀರು ಕೇವಲ 2.5 ರಷ್ಟು ಮಾತ್ರ. ಭೂಮೇಲ್ಮೈಯಲ್ಲಿನ ಬಳಸಬಹುದಾದ ಸಿಹಿನೀರು ಕೇವಲ 1.3% ಮಾತ್ರ, ಉಳಿದ 98.7% ಅಂತರ್ಜಲ ಮತ್ತು ಹಿಮಗಡ್ಡೆಗಳಲ್ಲಿದೆ. ಮೇಲ್ಮೈಯ ನೀರೂ ಸಹ ವಿವಿಧ ಕಡೆ ಹಂಚಿದೆ. ಸರೋವರಗಳಲ್ಲಿ (20.1%), ಮಂಜುಗಡ್ಡೆಯಾಗಿಯೂ (73.1%), ನದಿಗಳಲ್ಲಿ ಮಣ್ಣು ಹಾಗೂ ವಾತಾವರಣದಲ್ಲಿಯೂ (6.8%) ಸೇರಿಕೊಂಡಿದೆ.

ನೀರು ಒಂದು ಅಚ್ಚರಿಯ ರಸಾಯನಿಕ ವಸ್ತು. ಭೂಮಿಯ ಮೇಲಿನ ಬಹುಪಾಲು ವಸ್ತುಗಳನ್ನು ತನ್ನಲ್ಲಿ ಕರಗಿಸಿಕೊಳ್ಳುವ ಗುಣವನ್ನು ಒಳಗೊಂಡಿದೆ. ಭೂಮಿಯ ಮೇಲಿರುವ ಅತ್ಯಂತ ಹೆಚ್ಚಿನ ಸಂಯುಕ್ತವೆಂದರೆ ನೀರು. ಈ ಮೊದಲು ತಿಳಿಸಿದಂತೆ ನೀರು ನಿಸರ್ಗದಲ್ಲಿ ಜಲಚಕ್ರವಾಗಿ ಐದು ಹಂತಗಳಲ್ಲಿ ಸುತ್ತುತ್ತಲಿರುತ್ತದೆ ಇದೊಂದು ನಿರಂತರವಾದ ಚಲನೆ. ಈ ಹಂತಗಳೆಂದರೆ ಬಾಷ್ಪೀಕರಣ, ತಂಪಾಗಿ-ಘನೀಕರಣ ಮಳೆಯಾಗುವುದು, ನೆಲದಾಳಕ್ಕೆ ನೀರಿಳಿಯುವುದು ಹಾಗು ನೆಲದಮೇಲೆ ಹರಿವುದು. ಸುಮಾರು 100 ವರ್ಷಗಳ ನೀರಿನ ಸುತ್ತಾಟದಲ್ಲಿ 98 ವರ್ಷಗಳಷ್ಟು ಕಾಲ ಸಾಗರದಲ್ಲೂ, 20 ತಿಂಗಳ ಮಂಜುಗಡ್ಡೆಯಾಗಿಯೂ, 2 ವಾರ ನದಿ ಸರೋವರಗಳಲ್ಲಿಯೂ ಮತ್ತು ವಾರಕ್ಕಿಂತ ಕಡಿಮೆ ವಾತಾವರಣದಲ್ಲಿಯೂ ಕಳೆಯುತ್ತದೆ. ನೀರು ಭೂಮಿಯ ವಾತಾವರಣದ ಉಷ್ಣತೆಯನ್ನು ನಿಯಂತ್ರಿಸುವುದು ನಿಸರ್ಗದಲ್ಲಿ ಮೂರೂ ರೂಪಗಳಲ್ಲಿ (ಘನ, ದ್ರವ, ಅವಿ ಕಂಡುಬರುವ ಒಂದೇ ವಸ್ತು. ಘನರೂಪವು ದ್ರವರೂಪಕ್ಕಿಂ 9%ರಷ್ಟು ಹಗುರವಾಗಿದ್ದು ನೀರಿನ ಮೇಲೆ ಸಾಮಾನ್ಯವಾ ತೇಲುವುದು. ಎಲ್ಲಾ ಜೀವಿಗಳಿಗೂ ನೀರು ಬೇಕೇಬೇಕು ನೀರನ್ನು ಉಪ್ಪಾಗಿಸುವುದು ಬಹು ಸುಲಭ. ಕೇವ ಸಾವಿರದಲ್ಲಿ ಒಂದು ಭಾಗದಷ್ಟು ಉಪ್ಪನ್ನು ನೀರಿ ಸೇರಿಸಿದರೂ ನೀರು ಉಪ್ಪಾಗಿ ರುಚಿಯಲ್ಲಿ ಬದಲಾವ ಹೊಂದುತ್ತದೆ. ಬಹಳ ಸುಲಭವಾಗಿ ಮಲಿನವಾಗು ವಸ್ತು ಕೂಡ ನೀರು. ಕೇವಲ ಒಂದು ಲೀಟರ್ ಗ್ಯಾ ಒಂದು ದಶಲಕ್ಷ ನೀರನ್ನು ಮಲಿನ ಮಾಡಬಲ್ಲದು.

## ನೀರಿನ ಬಳಕೆ

ಮಾನವರು ಒಟ್ಟು ಬಳಸುವ ವಸ್ತುಗಳಲ್ಲಿ ನೀರಿ ಅಗ್ರಸ್ಥಾನ. ನಮ್ಮ ಮುಂಜಾವಿನ ಎಲ್ಲಾ ಬಗೆಯ ಕೆಲಸಗಳೂ ಆರಂಭವಾಗುವುದೇ ನೀರಿನ ಬಳಕೆಯಿಂದ ನಮ್ಮ ಇಡೀ ಆಹಾರದ ಉತ್ಪಾದನೆಯು ನೀರನ್ನೆ ನಂ ಒಳಗೊಂಡ ಒಂದು ಬೃಹತ್ ವ್ಯವಸ್ಥೆ. ಅದಕ್ಕಾಗಿಯೆ ಜಗತ್ತಿನ ಒಟ್ಟಾರೆಯ ನೀರಿನ ಉಪಯೋಗದಲ್ಲಿ ಹೆಚ್ಚು ಪಾಲನ್ನು ನೀರಾವರಿಯು ಪಡೆದುಕೊಂಡಿದೆ. ಸುಮಾ 69% ನೀರಿನ ಬಳಕೆಯಲ್ಲಿ ನೀರಾವರಿಯ ಪಾಲಿ ಇದರಲ್ಲಿ ಸುಮಾರು 20–35% ರಷ್ಟು ಸುಸ್ಥಿರವಾ ನೀರಾವರಿ ಪದ್ಧತಿಯಾಗಿಲ್ಲ. ಒಬ್ಬ ವ್ಯಕ್ತಿಯ ಒಂದು ದಿನ ಒಟ್ಟಾರೆಯ ಆಹಾರದ ತಯಾರಿಗೆ ಬೇಕಾದ ನೀರ ಸುಮಾರು 3000 ಲೀಟರ್‌ಗಳು. ನಾನು ಉಣ್ಣುವ ಅನ್ನ ಒಂದು ಕಿಲೋ ಅಕ್ಕಿಯ ಉತ್ಪಾದನೆಗೆ ಬರೋಬ್ಬ 5000 ಲೀ ನೀರು ಬೇಕು. ಕುಡಿಯಲು ಬೇಕಾದ ನೀರಿ ಹೋಲಿಸಿದಲ್ಲಿ ಇದು ಅತೀ ಹೆಚ್ಚೇ ಏಕೆಂದರೆ ಕುಡಿಯಲ ಸುಮಾರು 3–5 ಲೀಟರ್ ನೀರು ಬೇಕು. ಸುಮಾರು ಬಿಲಿಯನ್ ಜನಸಂಖ್ಯೆಗೆ ಬೇಕಾದ ನೀರನ್ನು ಊಹಿಸಿದಾ ಅದರ ಅಗಾಧತೆಯ ಅರಿವಾದೀತು. ಇಷ್ಟೂ ಜನ ಆಹಾರದ ತಯಾರಿಗೆ ಸುಮಾರು 7.1 ಮಿಲಿಯನ್ ಉದ್ದದ ಮತ್ತು 100 ಮೀಟರ್ ಅಗಲದ ಚಾನೆಲ್‌ನ 10 ಮೀಟರ್ ಆಳದಲ್ಲಿ ನೀರು ಹರಿಸುವಷ್ಟು ನೀರ ಬೇಕಾಗುತ್ತದೆ. ಅಂದರೆ ಈ ಭೂಗೋಳವನ್ನು ಸುಮಾ 180ಪಟ್ಟು ಸುತ್ತುವಷ್ಟು ದೂರದ ನೀರಿನ ನಾಲೆ 100 ಮೀಟರ್ ಅಗಲವಿದ್ದು ಅದರಲ್ಲಿ 10 ಮೀಟರ ಆಳವಿರಬೇಕಾಗುತ್ತದೆ. ಇದರ ಊಹೆ ಖಂಡಿ ಅಖಂಡವಾದುದು. ನೀರ ಬಳಕೆಯೇ ಹಾಗೆ.

ಹಾಗೆಯೇ ಸುಮಾರು 22%ನಷ್ಟು ನೀರು ನಮ ಬಹುಪಾಲು ಯಾಂತ್ರೀಕರಣದ ಉದ್ಯಮಗಳಿ ಬಳಕೆಯಾಗುತ್ತದೆ. ಮುಖ್ಯವಾಗಿ ಶಕ್ತಿ ಉತ್ಪಾದಿಸು ಸ್ಥಾವರಗಳಿಗೆ ನೀರು ಬಹುಪಾಲು ಬಳಕೆಯಾಗುತ್ತದೆ. ನಂತ ಖನಿಜ ಮತ್ತು ಪೆಟ್ರೋಲ್ ಸ್ಥಾವರಗಳಲ್ಲಿ ಅಗಾಧವಾ ನೀರು ಬಳಕೆಯಾಗುತ್ತದೆ. ವಿವಿಧ ರಸಾಯನಿಕಗ ಉದ್ಯಮಗಳಿಗೆ ಅಲ್ಲದೆ ವಿವಿಧ ತಯಾರಿಕಾ ಘಟಕಗಳ ನೀರು ಬಳಕೆಯಾಗುತ್ತದೆ. ಬಹಳ ಮುಖ್ಯವಾ ದ್ರಾವಕವಾದ್ದರಿಂದ ಇದಕ್ಕೆ ಕೈಗಾರಿಕೆಗಳಲ್ಲಿ ಬಹಳ ಬೇಡಿ ಕೃಷಿಗೆ ಹೋಲಿಸಿದರೆ ಕಡಿಮೆಯೇ. ಉಳಿದಂತೆ ಸುಮಾ 8% ನಷ್ಟು ಮಾತ್ರವೇ ದೈನಂದಿನ ಮನೆಬಳಕೆಗೆ ನೀ ಉಪಯೋಗವಾಗುತ್ತದೆ. ಇದನ್ನು ಮುಖ್ಯವಾಗಿ ಕುಡಿಯ ಅಡಿಗೆಗೆ ಸ್ನಾನಕ್ಕೆ ದೈನಂದಿನ ತೊಳೆಯುವ ಕ್ರಿಯೆಗಳ ಅಲ್ಲದೆ ಮನೆಗಳ ಕೈತೋಟಕ್ಕೆ ಬಳಸುವ ನೀರನ ಒಳಗೊಂಡಿದೆ. ಪ್ರತೀ ಮನುಷ್ಯ ಸುಮಾರು 5 ಲೀಟರ್‌ನಷ್ಟು ನೀರನ್ನು ಪ್ರತೀ ದಿನ ಬಳಸುವನೆಂ ಅಂದಾಜು ಮಾಡಲಾಗಿದೆ.

## ಕೊನೆ ಮಾತು

ನಮಗೆಲ್ಲಾ ಟಾಪ್ ಟೆನ್ ಕ್ರೇಜ್ ಇದೆಯಲ್ಲ ಬಾಟಲ್ ನೀರನ್ನು ಕೊಳ್ಳುವ ಗ್ರಾಹಕರಿರುವ ದೇಶಗಳ ನಮ್ಮದು ಟಾಪ್ ಟೆನ್ ದೇಶಗಳಲ್ಲೊಂದು! ಪ್ರಸ್ತು ಬಾಟಲಿ ನೀರಿನ ವಹಿವಾಟು 9000 ಕೋ ರೂಪಾಯಿಗಳನ್ನು ದಾಟಲಿದೆ. ಅದರಲ್ಲಿ 40%ರ ವಹಿವಾಟು ಪೆಪ್ಸಿ, ಕೊಕೋಕೋಲಾದಂತ ಬಹುರಾಷ್ಟ್ರೀಯ ಕಂಪನಿಗಳ ತೆಕ್ಕೆಯಲ್ಲಿದೆ. ಇಟ ಮೂಲದಿಂದ ಬಂದು ಭಾರತೀಯವಾದ ಕಂಪನಿ ಬಿಸ್ಲೆ ಕೈಲಿ 40% ಇದೆ. ಇನ್ನುಳಿದ 20% ನಮ್ಮವೇ ಅ ಸಣ್ಣ ಪುಟ್ಟ ಸ್ಥಳೀಯ ಕಂಪನಿಗಳು ನೋಡಿಕೊಳ್ಳುತ್ತಿ ದೇಸಿ ನೀರನ್ನೂ ಬಹುರಾಷ್ಟ್ರೀಯ ನೀರು ಮಾಡಿ ನಾ ಕುಡಿಯುತ್ತಿದ್ದೇವೆ.


ಯೋಗೇಶ್ ಮಾಸ್ಟರ್


ಸುಗಾಣದ ಹೂರಣ


# ಅಸಂಗತಂ ಸೌಗತಂ ಮತಮ್


ಬ್ರಹ್ಮಸೂತ್ರವೇ ಆಗಲಿ, ಇನ್ನಿತರ ಸಿದ್ಧಾಂತಗಳ
ತಾದ ಗ್ರಂಥಗಳೇ ಆಗಲಿ ಅವುಗಳನ್ನು ಓದುತ್ತಾಹೋದರೆ
ಸುವುದೇನೆಂದರೆ, ಇವು ಏಕೆ ಬೇಕು ಎಂದು. ಸಾಮಾನ್ಯ
ರ ನಿತ್ಯಬದುಕಿನ ಅಗತ್ಯಗಳಿಗೆ ಏನೂ ಸ್ಪಂದಿಸದ,
ರ ರೋಗರುಜಿನಗಳಿಗೆ ಔಷಧಿಯಾಗದ,
ಾರ್ಷಣ್ಯಗಳನ್ನು ನಿವಾರಿಸಿಕೊಳ್ಳುವುದಕ್ಕೆ ಏನೂ ದಿಕ್ಕಾಗದ
ುಗಳು ಏತಕ್ಕಾದರೂ ಬೇಕು ಎಂದು
ೀಚಿಸುವಂತಾಗುತ್ತದೆ.

ಜನರ ನಿತ್ಯಬದುಕಿಗೆ ನೆರವಾಗುವಂತಹ, ಅವರ
ಷ್ಟಗಳಿಗೆ ಮುಕ್ತಿ ಕೊಡುವಂತಹ, ಶೋಷಣೆಗಳಲ್ಲಿ
ಲಿರುವವರಿಗೆ ಬಿಡುಗಡೆ ಕೊಡಿಸುವಂತಹ, ದೈಹಿಕ,
ನಸಿಕ ಮತ್ತು ಭಾವನಾತ್ಮಕ ಸ್ಥೈರ್ಯವನ್ನು ನೀಡುವಂತಹ
ಲೋಗಿಕ ವಿಚಾರಗಳನ್ನು ಯಾವ ರೀತಿಯಲ್ಲಿಯೂ
ಲ್ಲದೇ, ಒಂದು ವೇಳೆ ಅವು ಇದ್ದರೂ ಸರಳ ಭಾಷೆಗಳಲ್ಲಿ










ದೇ, ಅರ್ಥವೇ ಆಗದಿರುವಂತಹ, ಎಂದಿಗೂ
ಯಾಗದಿರುವಂತಹ ವಿಷಯಗಳನ್ನು ಅನೇಕ ಪಂಡಿತರು
ವಾದಿಕೊಂಡು ಹೆಣಗಾಡಿಕೊಳ್ಳುತ್ತಾ ಹೈರಾಣವಾಗಿ
ದರು. ಆದರೆ, ತಾವು ಮಾತಾಡುವ ಭಾಷೆಯಲ್ಲಿ
ು ಮಾತಾಡರೆಂದು, ತಮಗೆ ತಿಳಿಯದ ಅದೇನೋ
ತ್ವವಾದದ್ದು ಇವರಿಗೆ ಗೊತ್ತೆಂದು ಇಂತಹ ಪಂಡಿತರನ್ನು
ಡಿ ವ್ಯರ್ಥವಾಗಿ ಬೇಸ್ತು ಬಿದ್ದ ಜನ ಇವರನ್ನು ಬರಿದೇ
ಕವಾಗಿ ಹಿಂಬಾಲಿಸುತ್ತಾರೆ, ಮಾನಸಿಕವಾಗಿ
ಳಾಗಿಬಿಟ್ಟಿರುತ್ತಾರೆ, ಭಾವನಾತ್ಮಕವಾಗಿ ಹಚ್ಚಿಕೊಂಡು
ಧಿಸುತ್ತಿರುತ್ತಾರೆ.

ಅದೇನೇ ಇರಲಿ, ನಿಜವಾಗಿಯೂ ಈ ಸಿದ್ಧಾಂತಗಳು
ಗಾಗಿ ಎಂದು ಯೋಚನೆ ಮಾಡುವಾಗ, ಉತ್ತುವಲ್ಲಿ,
ವಲ್ಲಿ ಬೆಳೆಯುವಲ್ಲಿ, ರೋಗ ರುಜಿನ ಬಂದಲ್ಲಿ ಔಷಧಿ
ುವಲ್ಲಿ, ಮನೆಯಲ್ಲಿ ಸಂಬಂಧಗಳು ಯಾವುದೇ
ಕ್ಕೆ ಮುರಿದುಹೋಗುವಾಗ ಅದನ್ನು ಬೆಸೆಯುವಲ್ಲಿ,
ಜೀವಿಗಳನ್ನು ಔದಾರ್ಯ, ಸಾಮರಸ್ಯ ಮತ್ತು
ತೆಯಿಂದ ಕಂಡು ಅವರೊಡನೆ ಸಹಬಾಳ್ವೆ ನಡೆಸುವಲ್ಲಿ,
ಮತ್ತು ಸ್ವವರ್ಗಗಳ ಪಾಲನೆ, ಪೋಷಣೆ, ನಿರ್ವಹಣೆ
ಸಮತೋಲನ ಕಾಪಾಡುವಲ್ಲಿ, ಪ್ರಕೃತಿಯ ಅಥವಾ
ವುದೇ ವಿಷಯದಲ್ಲಿ ರಸಿಕತೆಯಿಂದ ಮೈಮರೆತು
ದಿಸುವಲ್ಲಿ ಇವು ಹೇಗೆ ನೆರವಾಗುತ್ತವೆ ಎಂದೇ ಅನೇಕ
ಂಥದ ಸಂತರು ಮತ್ತು ಕ್ರಾಂತಿಕಾರಕ ಕವಿಗಳು
ಗಳನ್ನು ಸಂಪೂರ್ಣವಾಗಿ ನಿರಾಕರಿಸಿ ಜನಸಾಮಾನ್ಯ
ದಿಗೆ ಬೆರೆತು ಅವರ ಅನುಭವಗಳನ್ನು ಗೌರವಿಸುತ್ತಾ,
ಗಳಲ್ಲಿ ಅನುಭಾವವನ್ನು ಹುಡುಕುತ್ತಾ ಜನಸಾಮಾನ್ಯರ
ರಗಳಿಗೂ ಪ್ರತಿಷ್ಠೆಯನ್ನು ಕಟ್ಟಿಕೊಡುವಲ್ಲಿ ಶ್ರಮಿಸುತ್ತಾ,
ಿತ್ಯಗಳಿಂದ ಉಂಟಾದ ಹಣಾಹಣಿಗಳಿಂದ ಉಂಟಾದ
ಪಟಗಳಿಗೆ ಒಂದಷ್ಟು ಮಟ್ಟಿಗಿನ ಸಮಾಧಾನ ತಂದರು.

ಾರ್ಮಿಕತೆಯೂ ತನ್ನ ಸಮೀಪವರ್ತಿಗಳಿಗೆ, ಒಂದು
ಯಲ್ಲಿ ಸಮೂಹವಾಗಿ ರಚಿತವಾಗಿರುವಂತಹ
ಾಜಗಳಿಗೆ ಯಾವುದೋ ಜಂಜಡಗಳಿಂದ,
ಾರಗಳಿಂದ ಮುಕ್ತಿ ಕಾಣಿಸಲೆಂದೇ ಉಂಟಾಗಿರುವಾಗ,
ರ್ಮಗಳನ್ನು ಮತ್ತೊಂದು ಧರ್ಮದ ನೆಲೆಯಿಂದ
ಖಂಡಿಸುವುದಾಗಲಿ, ಶ್ರೇಷ್ಠತೆಯ ಗೀಳಿನೊಂದಿಗೆ
ಯು ಸಾಧಿಸಲು ಹೋಗುವುದಾಗಲಿ ಅಸೂಕ್ಷ್ಮತೆಯ
ಅಪಕ್ವತೆಯ ಪರಮಾವಧಿಯೇ ಸರಿ ಎಂದು ನನಗೆ
ತ್ತದೆ. ಬೌದ್ಧ ಧರ್ಮ ಅಥವಾ ಇನ್ಯಾವುದೇ ಧರ್ಮವು
ನೆಲೆಯಿಂದ ಹುಟ್ಟಿತು, ಅದು ಯಾರನ್ನೆಲ್ಲಾ
ಸಿದಿತು, ಯಾವ ಯಾವ ಪರಿಸ್ಥಿತಿಯಲ್ಲಿರುವವರು
ಾಸ್ತಿಗೆ ಒಳಗೊಳ್ಳತೊಡಗಿದರು ಎಂಬುದನ್ನು
ದಾಗ, ಆ ಧರ್ಮವು (ಪಾರಿಯ) ಎಷ್ಟಿಗೆ ಒಯ್ಯುತ್ತಿದೆ,
ಗೆ ಪ್ರಸ್ತುತವಾಗುತ್ತಿದೆ ಎಂಬುದನ್ನು ಸಾಕ್ಷೀಕರಿಸುವುದು
ಅರ್ಥಮಾಡಿಕೊಳ್ಳುವುದು ಒಂದು ಪ್ರಣಾಳಿಕೆಯ

ಲಕ್ಷಣವಾಗಿ ತೋರುತ್ತದೆ.

ಆದರೆ, ಬೌದ್ಧ ಧರ್ಮವು ಅಸಂಗತ ಧರ್ಮವೆಂದು ತೀರ್ಪು ಕೊಡುವನು ಶಂಕರ. ಏಕಾಗಿ ಎನ್ನುವುದಕ್ಕೆ ಬಹಳ ಸ್ಪಷ್ಟವಾದ ಕಾರಣಗಳಿವೆ. ಚಾರ್ವಾಕ, ಬೌದ್ಧ ಮತ್ತು ಜೈನ ಧರ್ಮಗಳು ವೈದಿಕ ಧರ್ಮವನ್ನು ನಿರಾಕರಿಸುತ್ತವೆ ಎಂದು.

ಬ್ರಹ್ಮಸೂತ್ರಕ್ಕೆ ಶಂಕರ ತನ್ನ ಭಾಷ್ಯದಲ್ಲಿ ತಿರಸ್ಕರಿಸಿರುವ ಮತಗಳಲ್ಲಿ ವೈದಿಕವಾದ ಮೀಮಾಂಸ, ಅವೈದಿಕವಾದ ಸಾಂಖ್ಯಾದಿಗಳು ಎಂದು ಎರಡು ಪಂಗಡಗಳನ್ನು ಮಾಡಬಹುದು. ಸಾಂಖ್ಯ ಯೋಗ, ವೈಶೇಷಿಕ, ಮಾಹೇಶ್ವರ, ಭಾಗವತ - ಈ ಮತಗಳನ್ನೂ ಬೌದ್ಧ ಜೈನ ಮತಗಳಂತೆಯೇ ತಾರ್ಕಿಕರ ಮತಗಳೆಂದೇ ಶಂಕರ ಭಾವಿಸುತ್ತಾನೆ.

ಬೌದ್ಧ ಧರ್ಮವು ಸರಿಯಿಲ್ಲ ಎನ್ನಲು ಶಂಕರ ಕೊಡುವ ಕಾರಣವನ್ನು ನಿಮ್ಮ ಮುಂದೆ ಇಡುವೆನು. ಸಂಸ್ಕೃತದಲ್ಲಿ ಹೇಳಿರುವುದಾದರೂ, ಅದರ ಕನ್ನಡಾನುವಾದವನ್ನೇ ಮುಂದಿಡುತ್ತಿದ್ದೇನೆ. ಅದು ಅರ್ಥವಾದರೆ ಸರಿ. ಇಲ್ಲವಾದರೆ ಅಂತಹ ಪದಗಳ ಗುಚ್ಛವನ್ನು ಮನರಂಜನೆಯ ದೃಷ್ಟಿಯಿಂದ ನೋಡಿ ಆನಂದಿಸಿ.

"... ಸ್ವಭಾವದ ಉಪರಾಗವಿಲ್ಲದೆ ಹೇತುಫಲಭಾವವನ್ನು ಒಪ್ಪಿದವನ ಮತದಲ್ಲಿ ಎಲ್ಲೆಲ್ಲಿಯೂ ಆ ಹೇತು ಫಲಭಾವವು ಬಂದೊದಗುವುದರಿಂದ ಅತಿಪ್ರಸಂಗವಾಗುವುದು. ಇದಲ್ಲದೆ, ಉತ್ಪಾದ, ವಿರೋಧ ಎಂಬಿವು ವಸ್ತುವಿನ ಸ್ವರೂಪವೇ ಆಗಿರುವವೋ, ಅವಸ್ಥಾಂತರವೋ, ವಸ್ತ್ವಂತರವೇ ಆಗಿರುವವೋ? ಹೇಗೂ ಈ ಮತವು ಉಪಪನ್ನವಾಗುವುದಿಲ್ಲ, ಮೊದಲನೆಯದಾಗಿ ಉತ್ಪಾದ ನಿರೋಧಗಳು ವಸ್ತುವಿನ ಸ್ವರೂಪವೇ ಆದರೆ ಆಗ ವಸ್ತು ಶಬ್ಧವೂ ಉತ್ಪಾದ ನಿರೋಧ ಶಬ್ಧಗಳೂ ಪರ್ಯಾಯವೆಂದೇ ಆಗುವದು. ಹಾಗಿಲ್ಲದೆ ಅವುಗಳಲ್ಲಿ ಯಾವದೋ ಒಂದು ವಿಶೇಷವು ಇರುತ್ತದೆಯೆಂದೂ ಉತ್ಪಾದ, ನಿರೋಧ ಎಂಬ ಶಬ್ದಗಳಿಂದ ನಡುವೆ ಇರುವ ವಸ್ತುವಿನ ಮೊದಲು, ಕೊನೆ ಎಂಬ ಅವಸ್ಥೆಗಳನ್ನು ಹೇಳುತ್ತೇನೆ ಎಂದು ತಿಳಿಯುವುದಾದರೆ, ಹೀಗಾದರೂ ಮೊದಲು, ಕೊನೆ, ನಡುವೆ ಎಂಬ ಮೂರು ಮೂರು ಕ್ಷಣಗಳಿಗೆ ಸಂಬಂಧಪಟ್ಟಿದೆಯೆಂದಾಗಿ ವಸ್ತುವು ಕ್ಷಣಿಕವೆಂದು ಒಪ್ಪಿರುವುದನ್ನು ಬಿಡಬೇಕಾಗುತ್ತದೆ. ಇನ್ನು ಉತ್ಪಾದ ನಿರೋಧಗಳು ಕುದುರೆ ಕೋಣಗಳಂತೆ ವಸ್ತುವಿಗಿಂತ ಅತ್ಯಂತವಾಗಿ ಬೇರೆಯೇ, ಆಗ ವಸ್ತುವನ್ನು ಉತ್ಪಾದ ನಿರೋಧಗಳು ಮುಟ್ಟಿಯೇ ಇಲ್ಲವಾದ್ದರಿಂದ ವಸ್ತುವು ಶಾಶ್ವತವಾಗಬೇಕಾಗಬಹುದು. ವಸ್ತುವಿನ ಉತ್ಪಾದ ನಿರೋಧಗಳು ದರ್ಶನ, ಅದರ್ಶನ ಆಗಿವೆ ಹಾಗೂ ಅವು ದ್ರಷ್ಟುವಿನ ಧರ್ಮಗಳೇ ಹೊರತು ವಸ್ತುವಿನ ಧರ್ಮಗಳಲ್ಲವಾದ್ದರಿಂದ ವಸ್ತುವು ಶಾಶ್ವತವೇ ಆಗಬೇಕಾಗುವದು. ಆದ್ದರಿಂದಲೂ ಸೌಗತ (ಬೌದ್ಧ) ಮತವು ಅಸಂಗತವು."

ಮೊದಲಾಗಿ ಇದು ಕನ್ನಡವೇ ಅಲ್ಲವೆನಿಸುವಷ್ಟು ಸಂಸ್ಕೃತ ಪ್ರಭಾವದಲ್ಲಿದೆ. ಕನ್ನಡದ ಕ್ರಿಯಾಪದಗಳನ್ನು ಅಲ್ಲಲ್ಲಿ ನೋಡುತ್ತೀರಿ. ಈ ರೀತಿಯಲ್ಲಿ ಮಾತಾಡುತ್ತಿರುವುದನ್ನು ನಾವು ಕಂಡಾಗ ಸಾಮಾನ್ಯ ವರ್ಗದ ಜನರಿಗೇನು ಅರ್ಥವಾಗುವುದು? ಹಾಗೆಂದ ಕೂಡಲೇ ಅವುಗಳಲ್ಲಿ ಅರ್ಥವಿಲ್ಲವೆಂದೇನಿಲ್ಲ, (ಈ ಮೇಲಿನದನ್ನು ಓದಿ ಅರ್ಥಮಾಡಿಕೊಳ್ಳಲು ನಾನು ಕಪಿಲನ ಸಾಂಖ್ಯ ಕಾಣದನ ವೈಶೇಷಿಕವೇ ಮೊದಲಾಗಿ ಬೇರೆ ಬೇರೆ ಸಿದ್ಧಾಂತಗಳನ್ನು ಓದಿ, ಒಂದು ಹಂತಕ್ಕೆ ಅರ್ಥಮಾಡಿಕೊಳ್ಳಲಾಯಿತು. ಆದರೂ ಅನ್ನಿಸಿದ್ದು ಇದರಿಂದ ಏನು ಪ್ರಯೋಜನ? ಜನರಿಗೆ, ಅವರ ಸಮಗ್ರ ಬದುಕಿಗೆ ಏನು ಉಪಯೋಗವಾಗುತ್ತದೆ ಎಂದು ಗಮನಿಸಿ ನೋಡಿದರೆ ನನಗಂತೂ ಏನೇನೂ ಕಾಣಲಿಲ್ಲ) ಅವರವರ ಕ್ಷೇತ್ರದ ಭಾಷೆ ಆಯಾ ತಜ್ಞರಿಗೇ ಅರ್ಥವಾಗುವುದು. ವಿಜ್ಞಾನ ಕ್ಷೇತ್ರದ ಆವಿಷ್ಕಾರ, ಸಂಶೋಧನೆಗಳಲ್ಲಿ ತೊಡಗಿರುವವರ ಭಾಷೆ ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ, ಅದು ಆ ಕ್ಷೇತ್ರದ ಪರಿಣಿತ ವಿಜ್ಞಾನಿಗೇ ಅರ್ಥವಾಗುವುದು. ಆದರೆ, ವಿಜ್ಞಾನಿಯು ಆ ಭಾಷೆಯಲ್ಲಿ ಸಂವಹನ, ಅಧ್ಯಯನ, ಪ್ರಯೋಗ ಮಾಡಿದ ಸಾಧನೆಯ ಫಲಾನುಭವಿಗಳೆಂದರೆ ಸಾಮಾನ್ಯ ಜನರು. ಅದೇ ರೀತಿಯಲ್ಲಿ ವೈದ್ಯಕೀಯ, ತಂತ್ರಜ್ಞಾನ, ಮನೋವಿಜ್ಞಾನ ಇತರ ಕ್ಷೇತ್ರಗಳೂ ಕೂಡ. ಈ ಮೇಲಿನ ಪಾಂಡಿತ್ಯದ ಕ್ಷೇತ್ರ ಮಾತ್ರ ಯಾವ ಸಾಮಾನ್ಯ ಜನಕ್ಕೂ ನೆರವಾಗಲಾರದು ಎಂಬುದು ಇಲ್ಲಿ ಅಭಿಪ್ರಾಯ. ಆದರೆ, ಈ ಪಾಂಡಿತ್ಯದ ಮೂರ್ತಿಗಳ ಹಿಂದೆ ಪ್ರಭುತ್ವದವರು ಮರುಳಾಗಿ ಹೋಗುತ್ತಾರೆ, ರಾಜಕೀಯ ಪಲ್ಲಟಗಳೇ ಆಗಿ ಹೋಗುತ್ತವೆ. ಸಾಮಾನ್ಯ ಜನರು ಬೆರಗಾಗಿ ಬೆನ್ನು ಹಿಡಿಯುತ್ತಾರೆ, ಸಮಾಜವು ಛಿದ್ರವಾಗಿ ಹೋಗುತ್ತವೆ. ಈ ರೀತಿಯ ದೊಡ್ಡ ದೊಡ್ಡ ದುರಂತಗಳು ಧಾರ್ಮಿಕ ಪಂಡಿತರ ಮತ್ತು ಪುರಾಣಗಳನ್ನು ಹೊಸೆದ ಅಧಿಕ ಪ್ರಸಂಗಿಗಳಿಂದ ಮನುಕುಲ ಯಾವ ವಿಷಯದ ಬಗ್ಗೆ ತನ್ನ ಗಮನ ಹರಿಸಬೇಕೋ ಅದನ್ನು ಬಿಟ್ಟು ಅನಗತ್ಯವಾದ ವಿಷಯಗಳಿಗೆ ತಲೆಕೆಡಿಸಿಕೊಂಡು ನಶಿಸುತ್ತಿವೆ.

## ಶಂಕರ ಶಂಖನಾದ

'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ', ಬ್ರಹ್ಮವೊಂದೇ ಸತ್ಯ, ಜಗತ್ತು ಮಿಥ್ಯೆ, ಜೀವ ಬ್ರಹ್ಮಕ್ಕಿಂತ ಬೇರೆಯಲ್ಲ ಎಂಬುದಾಗಿ ಶಂಕರ ಅದ್ವೈತ ಸಿದ್ಧಾಂತದ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸುತ್ತಾನೆ. ಆತ್ಮದ ಸ್ವರೂಪವನ್ನೂ ಮತ್ತು ಪರಮಾತ್ಮದ ಸ್ವರೂಪವನ್ನೂ ತನ್ನ ಕಾವ್ಯ ಮತ್ತು ಗದ್ಯಗಳಲ್ಲಿ ವಿವರಿಸುತ್ತಾ ಅವುಗಳಲ್ಲಿ ಸಮಗುಣಗಳನ್ನು, ಸಮ ಸ್ವಭಾವವನ್ನು ಕಂಡುಕೊಳ್ಳುತ್ತಾ ಹೋಗುತ್ತಾನೆ.

ಪರಮಾತ್ಮನನ್ನು ವರ್ಣಿಸುವಾಗ ತನ್ನ ಪರಾಪೂಜೆ ಸ್ತೋತ್ರದಲ್ಲಿ "ಪೂರ್ಣನಾಗಿರುವವನನ್ನು ಆವಾಹನೆ ಮಾಡುವುದೆಲ್ಲಿ? ಸರ್ವಕ್ಕೂ ಆಧಾರಭೂತನಾಗಿರುವವನಿಗೆ ಆಸನವನ್ನು ಹಾಕುವುದೆಲ್ಲಿ? ಸ್ವಚ್ಛನಾಗಿರುವವನಿಗೆ ಪಾದ್ಯವನ್ನು ಮತ್ತು ಅರ್ಘ್ಯವನ್ನು ಕೊಡುವುದೆಂತು? ಶುದ್ಧನಾಗಿರುವವನಿಗೆ ಆಚಮನ ಕೊಡುವುದೆಂತು? ನಿರ್ಮಲನಾದವನಿಗೆ ಸ್ನಾನವೆಲ್ಲಿಯದು? ವಿಶ್ವವನ್ನೇ ಉದರದಲ್ಲಿ ಧರಿಸಿರುವವನಿಗೆ ವಸ್ತ್ರವೆಲ್ಲಿಯದು? ನಿರಾಲಂಬನಾದವನಿಗೆ ಉಪವೀತದಿಂದೇನು? ನಿರ್ಗಂಧನಾದವನಿಗೆ ಪುಷ್ಪದಿಂದೇನು?" ಇತ್ಯಾದಿಯಾಗಿ ಕೇಳುತ್ತಾ ಆರತಿ, ನೈವೇದ್ಯ, ಪ್ರದಕ್ಷಿಣೆ ಎಲ್ಲಾ ಬಗೆಯ ಪೂಜೋಪಚಾರಗಳನ್ನು ನಿರಾಕರಿಸುವ ಶಂಕರ ಏಕಬುದ್ಧಿಯಿಂದ ದೇವೇಶನಲ್ಲಿ ಪರಾಪೂಜೆಯನ್ನು ಮಾಡಬೇಕು ಎಂದು ಹೇಳುತ್ತಾನೆ.

ಪರಮಾತ್ಮನನ್ನು ಎಲ್ಲಕ್ಕೂ ಮೀರಿದ ಪೂರ್ಣನೆಂದು ವಿವರಿಸಿದ ಶಂಕರ ತನ್ನ ಆತ್ಮವನ್ನೂ ಅದೇ ಬಗೆಯಲ್ಲಿ ಹೇಳುತ್ತಾ ಹೋಗುವನು. ದಶಶ್ಲೋಕಿಯಲ್ಲಿ "ನಾನು ಭೂಮಿಯೂ ಅಲ್ಲ, ನೀರೂ ಅಲ್ಲ, ತೇಜಸ್ಸು, ವಾಯು ಆಕಾಶಗಳೂ ಅಲ್ಲ, ಇವುಗಳ ಸಮೂಹವೂ ಅಲ್ಲ, ಸುಷುಪ್ತಿ (ಕನಸಿಲ್ಲದ ನಿದ್ರೆಯು) ಕಾಲದಲ್ಲಿ ಸಿದ್ಧನೂ ಅವಶೇಷನೂ (ಇತರ ವಸ್ತುಜ್ಞಾನವಿಲ್ಲದೆ ಏಕಜ್ಞಾನರೂಪದಲ್ಲಿ ಉಳಿದವನೂ) ಆದ ಕೇವಲ ಶಿವನೇ ನಾನು" ಎಂದು ಹೇಳುತ್ತಾ ಅವನು ಬಹು ಮುಖ್ಯವಾಗಿ "ನನಗೆ ಬ್ರಹ್ಮ (ಬ್ರಾಹ್ಮಣ) ಕ್ಷತ್ರಾದಿ (ಕ್ಷತ್ರಿಯವೇ ಮೊದಲಾದ) ವರ್ಣಗಳಿಲ್ಲ, ವರ್ಣಾಶ್ರಮಗಳಿಗೆ ವಿಧಿಸಿದ ಆಚಾರಗಳೂ ಮತ್ತು ಧರ್ಮಗಳೂ ನನಗಿಲ್ಲ, ಯೋಗಿಗಳಿಗೆ ಉಚಿತವಾದ ಧಾರಣ, ಧ್ಯಾನ ಮುಂತಾದ ಅಷ್ಟಾಂಗ ಯುಕ್ತ ಯೋಗವೂ ನನಗಿಲ್ಲ" ಎಂದು ಹೇಳಿ ಇನ್ನೂ ಮುಂದುವರಿದು, "ನನಗೆ ಸಾಂಖ್ಯ, ಶೈವ, ಪಾಂಚರಾತ್ರ, ಜೈನ, ಮೀಮಾಂಸಕ ಮತ ಮೊದಲಾದವು ಯಾವುವೂ ಇಲ್ಲ, ಶ್ರೇಷ್ಠವಾದ ಅನುಭವದಿಂದ ವಿಶುದ್ಧಾತ್ಮನಾದುದರಿಂದ ಅವಶೇಷನಾದ ಕೇವಲ ಶಿವನೇ ನಾನು" ಎಂದು ಘೋಷಿಸಿಕೊಳ್ಳುತ್ತಾನೆ.

## ಆತ್ಮಾತ್ವಂ ಗಿರಿಜಾ ಮತಿಃ

ನಾನತ್ವಗಳನ್ನು ನಿರಾಕರಿಸುವ ಶಂಕರನ ಪರಮಶ್ಚರ್ಯದ ನಡವಳಿಕೆ ಎಂದರೆ ದೇವತೆಗಳ ವಿವಿಧತೆಗಳನ್ನು ಒಪ್ಪುವುದು. ತಾನು ಶೈವನಲ್ಲವೆಂದರೂ ಶೈವ ಸಿದ್ಧಾಂತಿಯಾಗಿ ತೋರುತ್ತಾನೆ. ಬ್ರಾಹ್ಮಣನಲ್ಲವೆಂದರೂ ಬ್ರಾಹ್ಮಣನಾಗಿ ವರ್ತಿಸುತ್ತಾನೆ. ಕೆಲವೊಮ್ಮೆ ಶಂಕರ ಬಳಸುವ ಶಿವ ಎಂಬ ಪದವು ಶೈವದ ಶಿವವಾಗದೇ ಬರಿದೇ ಗುಣ ಸಂಕೇತವೇ ಎಂದೂ ಅನ್ನಿಸುತ್ತದೆ. ಕುವೆಂಪು ಶಿವ ಎಂಬ ಶಬ್ದವನ್ನು ಮಂಗಳಮಯ ಅಥವಾ ದೈವತ್ವ ಎಂದು ಪೌರಾಣಿಕ ಶಿವನರ್ಥವಿಲ್ಲದೇ ಬಳಸಿದಂತೆ.

ಇದು ಶಿವಮಾನಸಪೂಜಾ ಸ್ತೋತ್ರದಲ್ಲಿ ಇನ್ನೂ ಪುಷ್ಟೀಕರಿಸುವಂತೆ ಹೇಳುತ್ತಾನೆ. "ನೀನೇ ನನ್ನ ಆತ್ಮಾ, ಗಿರಿಜೆಯೇ ಬುದ್ಧಿ, ಇಂದ್ರಿಯಗಳು ನಿನ್ನ ಸಹಚರರು, ಈ ದೇಹವೇ ನಿನ್ನ ಮನೆ, ವಿಷಯದ ಸುಖದ ಅನುಭವವೇ ನಿನ್ನ ಪೂಜೆ, ನಿದ್ರೆಯೇ ಸಮಾಧಿಸ್ಥಿತಿಯು, ಕಾಲ್ನಡಿಗೆಯೆಲ್ಲವೂ ನಿನಗೆ ಪ್ರದಕ್ಷಿಣೆ ಮತ್ತು ಆಡುವ ಮಾತೆಲ್ಲವೂ ಸ್ತೋತ್ರಗಳು, ಹೇ ಶಂಭು, ನಾನು ಏನೇನು ಕರ್ಮವನ್ನು ಮಾಡುತ್ತೇನೆಯೋ ಅದೆಲ್ಲವೂ ನಿನ್ನ ಆರಾಧನೆ" ಎಂದು ಹೇಳುವ ಶಂಕರ ಮಾನಸಿಕವಾಗಿ ಆರಾಧನೆಯನ್ನು ಮಾಡುತ್ತಾನೆ. ಈ ಆರಾಧನೆ ಯಾರಿಗೆ? ತಾನೇ ಅವನು ಎನ್ನುತ್ತಾ ತನಗೋ, ಅವನೇ ತಾನು ಎನ್ನುತ್ತಾ ಅವನಿಗೋ?


ಅದೇನೇ ಇರಲಿ, ಶಂಕರನ ಒಲವು ಹೆಚ್ಚು ಹೆಚ್ಚು ಅಮೂರ್ತವಾದ ಬ್ರಹ್ಮನ ಕಡೆಗೆ ಹೊರಳುತ್ತದೆ. ಆತ್ಮವೆಂದೂ ತನ್ನ ಅಸ್ತಿತ್ವವನ್ನೂ, ಪರಮಾತ್ಮವೆಂದೂ ಇನ್ನೊಂದು ಉನ್ನತವಾದ ಅಸ್ತಿತ್ವವನ್ನು ಗುರುತಿಸಿ, ಈ ಎರಡಲ್ಲೂ ಸಮಾನಗುಣಗಳನ್ನು, ಸ್ವಭಾವ ಧರ್ಮವನ್ನು ಗುರುತಿಸುತ್ತಾ ಈ ಎರಡೂ ಎರಡಲ್ಲ ಎಂದೇ ಹೇಳುತ್ತಾನೆ.

ಅದೆಲ್ಲಾ ಸರಿ, ಆದರೆ, ಆತನಿಗೆ ಕಾಸ್ಮೊಲ್ಯಾಮ್ ದೇವರ ಪರಿಕಲ್ಪನೆಯನ್ನು ಒಡೆಯಲು ಸಾಧ್ಯವೇ ಆಗಲಿಲ್ಲ, ಹೋಗಲಿ ಅದನ್ನು ಸರಿಯಾಗಿ ಕಟ್ಟಿಕೊಡಲೂ ಆಗಲಿಲ್ಲ, ಸಿಕ್ಕ ಸಿಕ್ಕ ದೇವರ ಮೇಲೆಲ್ಲಾ ಸ್ತುತಿಗಳನ್ನು, ಅಷ್ಟಕಗಳನ್ನು ರಚಿಸುತ್ತಾ ನಿರಾಕಾರ, ನಿರ್ಲಿಂಗವಾದ ಪರವಸ್ತುವನ್ನು ಅದರಲ್ಲಿ ನೋಡಲು ಪ್ರಯತ್ನಿಸಿದನೇ? ಹಾಗಿದ್ದರೆ, ಅವನು ಪ್ರತಿಪಾದಿಸಿದ ಬ್ರಹ್ಮ ಎಂಬುದು ಯಾವುದು? ತನ್ನನ್ನು ಗುರುತಿಸಿಕೊಂಡ ಬ್ರಹ್ಮ ಬೇರೆಯಾದರೆ ಅವನು ಶರಣು ಹೋಗಿ, ಪಾದಗಳ ಮೇಲೆ ಹೊರಳಾಡಿ, ಆರಾಧನೆಗಳನ್ನು ಮಾಡಿದ ಗಣೇಶ, ದೇವಿ, ಶಿವ, ವಿಷ್ಣು, ಸರಸ್ವತಿ, ಕೃಷ್ಣ ಇವುಗಳೆಲ್ಲಾ ಏನು?


ತನ್ನಲ್ಲೇ ಬಗೆ ಹರಿಸಲಾರದಷ್ಟು ಪ್ರಶ್ನೆಗಳನ್ನು, ಗೊಂದಲಗಳನ್ನು ತಗುಲಿ ಹಾಕಿಕೊಂಡಿರುವ ಶಂಕರ, ಬೌದ್ಧರ ಹುಟ್ಟಾ ಶತ್ರುವಾಗಿ ಪರಿಣಮಿಸಿದ್ದು ಮಾತ್ರ ವಿಚಿತ್ರ.

ಶಂಕರ: ಹಿಂದೂ ಪುನರುದ್ಧಾರಕನೋ ಅಥವಾ ಬೌದ್ಧರ ಸಂಹಾರಕನೋ - ಎಂಬ ಪ್ರಬಂಧವನ್ನು ಕೆಂಟುಕೀ ಟೆಕ್ಸಾಸ್ ಎಂಬಾತ ಜಾರ್ಜಿಯೋ ವಿಶ್ವವಿದ್ಯಾಲಯದಲ್ಲಿ ಮಂಡಿಸಿದ್ದಾನೆ. ಅದರಲ್ಲಿ ಬಹಳ ಮುಖ್ಯವಾದ ಅಂಶಗಳನ್ನು ಅತ ಚರ್ಚೆ ಮಾಡಿದ್ದಾನೆ. ಮುಂದೆ ನೋಡೋಣ. ■

# ಅಂಬಾನಿ, ಅದಾನೀಸ್ ಆಸ್ಥಾನದಲ್ಲಿ... ದೇವನೂರರ ಬರಹಕ್ಕೆ ಪೂರಕವಾಗಿ





ದೇವನೂರ ಮಹಾದೇವರ ಲೇಖನವನ್ನು ಓದಿ ಈ ಪ್ರತಿಕ್ರಿಯೆ ಬರೆಯುತ್ತಿದ್ದೇನೆ. ಮೋದಿ ಸರಕಾರವು ಈಗ ಇಡುತ್ತಿರುವ ಹೆಜ್ಜೆ ನಮಗೆ ನಿರೀಕ್ಷಿತವೇ ಆಗಿದೆ. ಅವರಿಗೆ ಒಂದು ಸರಿಯಾದ ಆರ್ಥಿಕನೀತಿಯು ಇರುವ ಹಾಗೆ ಕಾಣುತ್ತಿಲ್ಲ, ಅಥವಾ ಅವರ ಕನ್ನಡಕವು ಸರಿಯಿಲ್ಲ. ಅದನ್ನು ಮೊದಲು ರಿಪೇರಿ ಮಾಡಿಸಬೇಕಾದ ಅಗತ್ಯವೂ ಇದೆ. ಅವರ ಕನ್ನಡಕವು ಹಾಳಾಗಿರುವುದರಿಂದ ಅವರಿಗೆ ಬಡವರು, ಭೂಹೀನ ಕಾರ್ಮಿಕರು, ಕೊಳಗೇರಿಯ ಜನರು ಕಾಣಿಸುವುದೇ ಇಲ್ಲ. ಬಂಡವಾಳಶಾಹಿಗಳಿಗೆ ಬೇಕಾದ ಹಾಕುತ್ತಿವೆ. ಅವರಿಗೆ ಎಷ್ಟು ಕೋಟಿ ಇದೆ ಎಂದು ವರದಿ ಮಾಡುತ್ತವೆ. ಕೋಟಿಗೆ ಎಷ್ಟು ಸೊನ್ನೆಯನ್ನು ಹಾಕಬೇಕು ಎಂದು ನಮಗೆ ಗೊತ್ತಾಗದ ಸ್ಥಿತಿಯಲ್ಲಿ ನಾವು ಇದ್ದೇವೆ. ಆದರೆ ಯಾರು ಹಸಿವಿನಿಂದ ಸತ್ತಿದ್ದಾರೆ ಎನ್ನುವುದು ಗೊತ್ತಾಗುವುದೇ ಇಲ್ಲ. ನಮಗೆ ಅರಿವು ಇರಬೇಕಾಗಿರುವುದು ಇದರ ಬಗ್ಗೆ. ಯಾವಾಗ ಒಂದು ಸರಕಾರವು ರೈತರನ್ನು ಕೊಂದು ರಾಜ್ಯವನ್ನು ಕಟ್ಟುತ್ತೇವೆ ಎಂದು ಹೊರಡುತ್ತದೆಯೋ ಅದು ರೈತರ ಜೀವದ ಮೇಲೆಯೇ ಗೋರಿಯನ್ನು ಕಟ್ಟುತ್ತದೆ. ಈಗ ನಡೆಯುತ್ತಿರುವುದು ಇಂತಹದ್ದೇ. ಭೂಸ್ವಾಧೀನ ಪ್ರಕ್ರಿಯೆಯು ಪ್ರಾರಂಭವಾದರೆ ಮನುಷ್ಯರ ಜೀವದ ಮೇಲೆ ಅದು ಯಾವ ಲೆಕ್ಕವನ್ನೂ ಇಡುವುದೆ ಇಲ್ಲ. ಈ ದೃಷ್ಟಿಯಿಂದ ಇದು ಅಮಾನವೀಯವಾದ ಒಂದು ಕಾನೂನು ಆಗಿದೆ. ಈಗ ಅತ್ಯಂತ ತುರ್ತಾಗಿ ಸಾಮಾನ್ಯ ಜನರು ಹೇಗೆ ಆತ್ಮವಿಶ್ವಾಸದಿಂದ ಬದುಕಬೇಕು ಎನ್ನುವುದು ಮುಖ್ಯವೇ ಹೊರತು ಉಳಿದ ಸಂಗತಿಗಳಲ್ಲ. ಇಲ್ಲಿ ಮತ್ತೆ ಮತ್ತೆ ಹೇಳಬೇಕಾದ ಮಾತುಗಳೆಂದರೆ ಜನರ ಪರವಾಗಿ



ಜಮಖಾನವನ್ನು ಹಾಸಿ ಸ್ವಾಗತಿಸುತ್ತಿದ್ದಾರೆ. ಇದರ ಒಂದು ಪರಿಣಾಮವೇ ಭೂಸ್ವಾಧೀನ ಕಾನೂನು. ಇದರ ಪರಿಣಾಮವನ್ನು ನಾವು ಈಗ ಊಹಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ. ಇದು ರೈತರನ್ನು ಕೊಂದು ಅವರ ಜಮೀನನ್ನು ಭೂಮಾಫಿಯಾದ ಜನರಿಗೆ ಕೊಡುವ ಉದ್ದೇಶವನ್ನು ಮಾತ್ರವೇ ಹೊಂದಿದೆ. ಮೊದಲು ಜನರನ್ನು ಭೂಹೀನರನ್ನಾಗಿ ಮಾಡಬೇಕು. ಹಾಗೆ ಮಾಡಿದನಂತರ ಉಳಿದ ಕೆಲಸವು ಸುಲಭ. ಭೂಮಿ ಮತ್ತು ಅದನ್ನು ದೇವರೆಂದೆ ಪರಿಗಣಿಸಿದವರು ರೈತರು. ಉಳಿದುದು ಅರ್ಥಹೀನ. ಮಾತೃ ಭೂಮಿ ಎನ್ನುವುದನ್ನು ಮಾರಾಟ ಮಾಡಿದ ಜನರು ಎಲ್ಲಿಗೆ ಹೋಗಬೇಕು? ಅವರ ಜೀವನದ ಕತೆಯೇನು? ಒಂದು ಎಕರೆಯೋ; ಅರ್ಧ ಎಕರೆಯೋ ಇಟ್ಟುಕೊಂಡು ಜೀವನವನ್ನು ನಡೆಸುತ್ತಿರುವವರು ಎಲ್ಲಿಗೆ ಹೋಗುತ್ತಾರೆ ಎನ್ನುವ ಕನಿಷ್ಠ ಪ್ರಜ್ಞೆಯು ಇಲ್ಲದಂತೆ ಈ ಕಾನೂನನ್ನು ಮಾಡಲಾಗಿದೆ. ಭೂಮಿ ಎಂದರೆ ಅದು ಭಾರತದ ಜೀವನ ಕ್ರಮ. ಒಂದು ಎಕರೆ ಅಥವಾ ಅರ್ಧ ಎಕರೆ ಇರುವವವರು ಈಗ ಕೊನೆಪಕ್ಷ ವರ್ಷದುದ್ದಕ್ಕೂ ಊಟವನ್ನಾದರೂ ಮಾಡುತ್ತಾರೆ. ರಾಗಿ ಮುದ್ದೆಯನ್ನಾದರೂ ತಿನ್ನುತ್ತಾರೆ. ಅವರ ಆಹಾರವನ್ನು ಕಸಿದರೆ ಅವರು ಏನು ಮಾಡಬೇಕು? ಅಂಥವರ ಭೂಮಿಯನ್ನೂ ಕಸಿದುಕೊಳ್ಳುವ ಈ ಯೋಜನೆಯನ್ನು ಒಂದು ವಿಪರ್ಯಾಸವೆಂದೇ ನಾವು ಹೇಳಬೇಕಾಗುತ್ತದೆ.

ಇತ್ತೀಚೆಗೆ ಪತ್ರಿಕೆಗಳು ಭಾರತದ ಅತೀ ಹೆಚ್ಚಿನ ಶ್ರೀಮಂತರು ಯಾರು ಎಂದು ಮುಖಪುಟದಲ್ಲಿ




ಯೋಚನೆ ಮಾಡಬೇಕಾದ ಸರಕಾರವು ಕೆಲವು ಜನರ ಗೊಂಬೆಯಂತೆ ಕೈಕಾಲು ಕುಣಿಸುವುದು ನಮ್ಮ ಜನರ ಆತ್ಮಹತ್ಯೆಗೆ ಮಾಡುವ ಹುನ್ನಾರ ಮಾತ್ರವೇ ಆಗಿದೆ. ಹಾಗೆ ನೋಡುವುದಿದ್ದರೆ ಅನೇಕ ಕಾರ್ಯಕ್ರಮಗಳು ನಡೆಯಬೇಕಾದ್ದು ಯಾವುದರ ಕುರಿತು ಎಂದು ಯೋಚಿಸ ಬೇಕಾಗಿದೆ. ಜನರು ಕೇಳುವುದು ಆಹಾರ, ಕುಡಿಯಲು ನೀರು ಮತ್ತು ಒಂದು ಸಣ್ಣ ಮನೆ. ಇದರ ಕುರಿತಾಗಿ ನಿಜವಾಗಿಯೂ ಯಾವ ಯೋಜನೆ ಇದೆ? ಮಳೆನೀರಿನ ಸಂಗ್ರಹ ಊರಿಗೊಂದು ದೊಡ್ಡ ಕೆರೆ ಮುಂತಾದವು ಯಾಕೆ ಆದ್ಯತೆಯ ಕ್ಷೇತ್ರವಾಗುತ್ತಿಲ್ಲ? ಕೆರೆಯನ್ನು ಮುಚ್ಚುವುದು ಹೆಚ್ಚುಗಾರಿಕೆಯಲ್ಲ, ರಾಸಾಯನಿಕ ಗೊಬ್ಬರ ಬಳಸುವುದು ಬೇಕಾಗಿಯೂ ಇಲ್ಲ ಮತ್ತು ರಾಸಾಯನಿಕ ವಿಷವನ್ನು ಮಾತೃಭೂಮಿಗೆ ಉಣಿಸಲಾಗುತ್ತದೆ ಮತ್ತು ಒಂದು ಸಲಕ್ಕೆ ಮುಕ್ತಾಯವಾಗುವ ಅಧಿಕ ಇಳುವರಿ ನೀಡುತ್ತದೆ ಎನ್ನುವ ಪ್ರಚೋದನೆಗಳು ಜನರನ್ನು ಕೊಲ್ಲುತ್ತದೆ. ಒಂದು ಕಡೆಯಿಂದಲೇ ಸಾಮಾನ್ಯ ಜನರನ್ನು ಆತ್ಮಹತ್ಯೆಗೆ ಸಿದ್ಧಮಾಡುವ ಯೋಜನೆಗಳನ್ನು ಬಿಡುವುದು ಅಗತ್ಯ. ನಾವು ಈಗ ಮಾಡಬೇಕಾದ್ದು ಸಾವಯವ ಕೃಷಿ. ಅದಕ್ಕೆ ಪ್ರೋತ್ಸಾಹ ಬೇಕಿದೆ. ಸಣ್ಣ ಹಿಡುವಳಿದಾರರ ಪ್ರಶ್ನೆಯನ್ನು ಮತ್ತು ಅದರ ಸಮಸ್ಯೆಗಳನ್ನು ಯಾಕೆ ಸರಕಾರವು ಯೋಚಿಸುವುದೇ ಇಲ್ಲ?

ನಮ್ಮ ಜನರ ಪ್ರಾಣ ಉಳಿಸಿಕೊಳ್ಳುವುದೂ ಘನ ಸರಕಾರದ ಕಾರ್ಯಕ್ರಮವಾಗಬೇಕು. ಬಂಡವಾಳಶಾಹಿಗಳ ಮೆರವಣಿಗೆಯು ಯಾವುದೇ ದೃಷ್ಟಿಯಿಂದ ಸಾಧುವಲ್ಲ. ದೇವನೂರರ ಅತ್ಯಂತ ಸಮಯೋಚಿತವಾದ ಈ ಬರಹವು ಈಗ ನಿಜವಾಗಿಯೂ ಮತ್ತೊಮ್ಮೆ ಯೋಚಿಸುವಂತೆ ಮಾಡಿದೆ.

- ಕೇಶವ ಶರ್ಮ.ಕೆ., ಈಮೇಲ್ ಮೂಲಕ

### ದೇವನೂರ ಮಹಾದೇವರ ಲೇಖನ ಮಾರ್ಮಿಕವಾಗಿದೆ

ಈ ವಾರದ ಸಂಚಿಕೆಯಲ್ಲಿ ಬಂದಿರುವ ದೇವನೂರ ಮಹಾದೇವರ ಲೇಖನ ಮಾರ್ಮಿಕವಾಗಿದೆ. ಈ ಲೇಖನದ ಮೂಲಕ ಲೇಖಕರು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಇನ್ನೊಂದು ಭಯಾನಕ ಮುಖವಾಡವನ್ನು ಬಯಲು ಮಾಡಿದ್ದಾರೆ.

ರೈತರ ಉದ್ಧಾರ ಮಾಡುತ್ತೇನೆ ಎಂದು ಹೇಳುತ್ತ ಪ್ರಧಾನಿ ಗದ್ದುಗೆ ಏರಿದ ಮೋದಿ ಅಧಿಕಾರ ಸಿಕ್ಕಿದ ಕೆಲವೇ ತಿಂಗಳುಗಳಲ್ಲಿ ಈ ದೇಶದ ಕೋಟ್ಯಾಂತರ ಪ್ರಜೆಗಳಾಗಿರುವ ರೈತರ ಆಶಯಕ್ಕೆ ವಿರುದ್ಧವಾಗಿ ರೈತರ ಮರಣಶಾಸನದಂತಿರುವ ಭೂಸ್ವಾಧೀನ ಸುಗ್ರೀವಾಜ್ಞೆ ಕಾಯ್ದೆ ಜಾರಿಗೆ ತರಲು ಹೊರಟರು. ಗುಜರಾತಿಯಾಗಿ ತನ್ನದು ಅಪ್ಪಟ ಬಂಡವಾಳದ ವ್ಯಾಪಾರಿ ಮನಸ್ಸು ಎಂಬುದನ್ನು ನಿರೂಪಿಸಿದರು. ಅವರ ಇತರೇ ಕೆಲವು ಯೋಜನೆಗಳ ಬಗ್ಗೆ ಎಲ್ಲರ ಸಹಮತವಿದ್ದರೂ ಪ್ರಮುಖವಾಗಿ ಭಾರತದ ಬೆನ್ನೆಲುಬು ಆಗಿರುವ ರೈತರ ಹಿತವನ್ನು ಕಡೆಗಣಿಸಿ ಬಂಡವಾಳಗಾರರ ಸಮೃದ್ಧಿಯನ್ನು ಬಯಸಿದ ಮೋದಿಯವರು ನಿಜಕ್ಕೂ ಹೆತ್ತ ತಾಯಿಯ ಒಡಲನ್ನೇ ಬಗೆಯುವ ರಾಕ್ಷಸೀಕೃತ್ಯವನ್ನು ಮಾಡಲು ಹೊರಟಿದ್ದಾರೆ. ರೈತರ ಬಗ್ಗೆ ನಿಜವಾದ ಕಾಳಜಿ, ಪ್ರೀತಿ, ಅಭಿಮಾನ, ಗೌರವ ಇರುವ ಪ್ರತಿಯೊಬ್ಬರೂ ಪಕ್ಷಾತೀತವಾಗಿ ಈ ಕಾಯ್ದೆಯನ್ನು ವಿರೋಧಿಸಿ ರೈತರನ್ನು ಕಾಪಾಡಿ ಭಾರತ ಮಾತೆಯ ಮಾನವನ್ನು ಉಳಿಸಬೇಕಾಗಿದೆ.

- ಲಕ್ಷ್ಮೀಕಾಂತ ಮಿರಜಕರ, ಶಿಗ್ಗಾಂವ

### ಸೌಂದರ್ಯಲಹರಿ ಪವಿತ್ರ ಸ್ತೋತ್ರವೋ, ವಿರಹಿಯೊಬ್ಬನ ಪ್ರೇಮಪತ್ರವೋ?

ಶಂಕರಾಚಾರ್ಯರು ಮಲೆಯಾಳಂನಲ್ಲಿ ಯಾಕೆ ಬರೆಯಲಿಲ್ಲ ಎಂದು ಯೋಗೇಶ್ ಮಾಸ್ಟರ್ ಎತ್ತಿರುವ ಪ್ರಶ್ನೆ ಸೂಕ್ತವಾದುದು. ಬಸವೇಶ್ವರರು ತನ್ನ ಮಾತೃ ಭಾಷೆ ಕನ್ನಡದಲ್ಲಿಯೇ ಬರೆದರು, ಮಧ್ವಾಚಾರ್ಯ ತನ್ನ ಮಾತೃಭಾಷೆ ತುಳು ಹಾಗೂ ಕನ್ನಡ ಎರಡರಲ್ಲೂ ಬರೆದರು, ರಾಮಾನುಜಾಚಾರ್ಯ ತನ್ನ ಭಾಷೆ ತಮಿಳಿನಲ್ಲಿಯೂ ಬರೆದರು, ಮಹಾರಾಷ್ಟ್ರ ಹಾಗೂ ಆಂಧ್ರದ ಮಹಾನ್ ಸಂತರೆಲ್ಲ ತಮ್ಮ ಮಾತೃಭಾಷೆಯಲ್ಲಿ ಕೃತಿಗಳನ್ನು ನಿರ್ಮಿಸಿದ್ದಾರೆ. ಆದರೆ ಶಂಕರನೇಕೆ ತನ್ನ ಮಾತೃಭಾಷೆಗೆ ದ್ರೋಹ ಬಗೆದಿದ್ದು?

ಶಂಕರ ವಿರಚಿತ ಸಂಸ್ಕೃತ ಸ್ತೋತ್ರಗಳಲ್ಲಿ ಅತ್ಯಂತ ಪವಿತ್ರವೆಂದು ಪರಿಗಣಿಸಲಾಗಿರುವ ಸೌಂದರ್ಯಲಹರಿಯ ಕನ್ನಡ ಅನುವಾದ ಓದಿದಾಗ ನನಗೆ ಅನಿಸಿದ್ದು - ಇದು ಪವಿತ್ರ ಸ್ತೋತ್ರವೋ ಅಥವಾ ವಿರಹಿಯೊಬ್ಬ ತನ್ನ ಪ್ರೇಯಸಿಗೆ ಬರೆದ ಪ್ರೇಮಪತ್ರವೋ? ಶಂಕರರು ಜಗನ್ಮಾತೆಯನ್ನು ವರ್ಣಿಸುವಾಗ ಒಬ್ಬ ಗಂಡಸು ಉನ್ಮತ್ತನಾಗಿ ಪ್ರೇಯಸಿಯ ನಗ್ನ ಅಂಗಾಂಗ ವರ್ಣಿಸುವಂತೆ ಜಗನ್ಮಾತೆಯ ಅಂಗಾಂಗ - ಅಂದರೆ ತುಟಿ, ಮೊಲೆ, ಸೊಂಟ, ನಿತಂಬ, ಜಘನ, ತೊಡೆ ಇವುಗಳ ಸೌಂದರ್ಯವನ್ನು ಅತಿ ರಸಿಕತೆಯಿಂದ ಶಂಕರರು ವರ್ಣಿಸಿದ್ದಾರೆ! ಹಾಗೆ ನೋಡಿದರೆ ವೈದಿಕ ಸಂತರಲ್ಲಿ ಹೆಚ್ಚಿನವರು ಅತ್ಯಂತ ರಸಿಕರು ಎಂಬುದು ನಿಜ, ಆದರೆ ತಾಯಿಯನ್ನೂ ವರ್ಣಿಸುವಾಗ ಶಂಕರರ ವಿನಹ ಬೇರಾರೂ ಇಷ್ಟೊಂದು ರಸಿಕತನ ತೋರಿಲ್ಲ.



ಮಹಾಭಾರತದಲ್ಲಿ ಎಂಬತ್ತು ವರ್ಷದ ಮುದಿಯ ದುಶ್ಶಾಸನನು ಎಪ್ಪತ್ತು ವರ್ಷದ ಮುದುಕಿ ದ್ರೌಪದಿಯ ಸೀರೆಯ ಸೆಳೆವಾಗ ರಾಜಸಭೆಯಲ್ಲಿದ್ದ ನೂರು ವರ್ಷದ ರಸಿಕ ಮುದುಕರೆಲ್ಲಾ ದ್ರೌಪದಿಯ ಅಂಗಾಂಗಗಳ ಸೌಂದರ್ಯ ಆಸ್ವಾದಿಸಿದಂತೆ ಶಂಕರರು ಆದಿ ಮಾತೆಯ ಅಂಗಾಂಗಗಳ ಸೌಂದರ್ಯ ಕಲ್ಪನೆಯಲ್ಲೇ ಆಸ್ವಾದಿಸಿದ್ದು! ರಾಮಾಯಣ ಮಹಾಭಾರತ ಈ ಎರಡೂ ಯುಗಗಳಲ್ಲಿ ಇದ್ದ ಜಾಂಬವಂತನ ಮಗಳು ಜಾಂಬವತಿ ಸಾವಿರ ವರ್ಷದ ವೃದ್ಧೆಯಾದರೂ ಕೃಷ್ಣನು ಆ ಜಾಂಬವತಿಯನ್ನು ಮದುವೆಯಾಗಿ ಆ ಹೆಂಡತಿಯನ್ನು ತಾಯಿಯಂತೆ ನೋಡಿಕೊಂಡಿದ್ದೇ ಶಂಕರರಿಗೂ ಸ್ಫೂರ್ತಿಯಾಗಿರಬಹುದೇನೋ!

ಕನ್ನಡಪ್ರಭಕ್ಕೆ ವಿ.ಭಟ್ಟರ ಗ್ರಹಣ ಬಿಟ್ಟದ್ದು ಒಳ್ಳೆಯದಾಯಿತು. ಚಂದ್ರನು ಸೂರ್ಯನ ಬಾಡಿಗೆಯ ಬೆಳಕಿನಿಂದ ಬೆಳಗಿದಂತೆ ವಿ.ಭಟ್ಟರು ಮೊದಲಿಗೆ ಸಂಕೇಶ್ವರರ ಬೆಳಕಿನಿಂದ ವಿಜಯ ಕರ್ನಾಟಕದಲ್ಲಿ ಬೆಳಗಿದರು. ಆದರೆ ಸಂಕೇಶ್ವರರ ನೆರಳಿನಿಂದ ಹೊರಸರಿದ ನಂತರ ಭಟ್ಟರ ನಿಜ ಯೋಗ್ಯತೆ ಎಲ್ಲರಿಗೂ ಅರ್ಥವಾಯಿತು. ಹಾಗಾಗಿ ಈಗ ವಿ.ಭಟ್ಟರು ದೋಣಿಯೇ ಇಲ್ಲದ ನಾವಿಕರಾಗಿದ್ದಾರೆ. ಆದರೂ ತನ್ನ ವರಸೆ ಬಿಟ್ಟಿಲ್ಲ, ಗುರು ಚಂಭಟ್ಟ ಅಮೆರಿಕ ಮತ್ತು ಜಪಾನ್ ಸರಕಾರಗಳಿಗೆ ವಾಸ್ತು ಸಲಹೆಗಾರನಾಗಿ ತಾನು ನಿಯುಕ್ತಿಯಾಗಿರುವುದಾಗಿ ಬೊಂಗು ಬಿಟ್ಟಂತೆ ಶಿಷ್ಯ ವಿ.ಭಟ್ಟರೂ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಹೊನ್ನಾವರದಿಂದ ತಾನೇ ಬಿಜೆಪಿ ಅಭ್ಯರ್ಥಿ ಎಂ[...] ಬಡಾಯಿ ಕೊಚ್ಚುತ್ತಿದ್ದಾರೆ.

ವೀರ ಸಿಖ್ ಜನಾಂಗದಲ್ಲೂ ದಲಿತರಿದ್ದಾರೆ ಹಾಗ[...] ಕಪ್ಪು ವರ್ಣದ ಇವರ ಸ್ಥಿತಿಯೂ ಪಂಜಾಬಿನ[...] ಕರುಣಾಜನಕವಾಗಿದೆ ಎಂದು ಪ್ರವೀಣ್ ಎಸ್ ಶೆ[...] ಅವರ ಪತ್ರ ಓದಿ ಬೇಸರವಾಯಿತು. ಹಿಂದೂ ಧರ್ಮ[...] ನರಕದಿಂದ ಪಾರಾಗಲು ಪಂಜಾಬ ದಲಿತರು ಐನೂ[...] ವರ್ಷಗಳ ಹಿಂದೆ ಸಿಖ್ ಧರ್ಮ ಸ್ವೀಕರಿಸಿದರೂ ಅಲ್ಲಿಯ[...] ಅವರು ಅಸ್ಪೃಶ್ಯರಾಗುಳಿದರು ಎಂಬುದು ವಿಪರ್ಯಾಸ[...]

ಸಲ್ಮಾನ್ ಖಾನನಿಗೆ ಕೇವಲ ಎರಡು ದಿನದ ಬೇ[...] ಕೊಡಿಸಿದ್ದಕ್ಕೆ ವಕೀಲ ಹರೀಶ್ ಸಾಳ್ವೆಗೆ ಮುಪ್ಪತ್ತು [...] ಫೀಸ್, ಅವನ ಶಿಕ್ಷೆಯನ್ನು ಅಮಾನತಿನಲ್ಲಿಡಿಸಿದ ವಕೀ[...] ಅಮಿತ್ ದೇಸಾಯಿಗೆ ಐವತ್ತು ಲಕ್ಷ ಫೀಸ್. ಆದ[...] ಅವನ ಕಾರಿನಡಿ ಬಿದ್ದು ಸತ್ತವನ ಕುಟುಂಬಕ್ಕೆ ಬರಿ ಬ[...] ಸಹಾನುಭೂತಿ ಅಷ್ಟೇ. ಇದುವೇ ನಮ್ಮ ಭಾರತ್ ಮಹಾ[...] ಬಡವರಿಗೆ ಸಹಾಯ ಮಾಡದಿದ್ದರೆ ಪರವಾಗಿಲ್ಲ ಆದ[...] ಪ್ರಸಿದ್ಧ ವ್ಯಕ್ತಿಗಳಿಗೆ ಸಹಾಯ ಮಾಡದಿದ್ದರೆ ಜನರು ತನ್ನ[...] ನಂಬುವುದು ಕಡಿಮೆ ಮಾಡುತ್ತಾರೆ ಎಂಬ ಭಯ ಭಾರ[...] ಮುವತ್ಮೂರು ಕೋಟಿ ದೇವರಿಗೂ ಕಾಡುತ್ತಿರುವಂತಿ[...] ಕಾರಣ' ಎಲ್ಲಾ ವಿಷಯಗಳಲ್ಲೂ ದೇವರನ್ನು ನಡು[...] ತುರುಕುವುದು ಭಾರತೀಯರ ಐತಿಹಾಸಿಕ ಚಾಳಿ!

- ವೀರಪ್ಪ ದಿ.ಎನ್, ಮದಿಕೆ[...]


### ಹುಳಿಮಾಮರ ಬಿದ್ದ ಅವಕಾಶವನ್ನು ದುರ್ಬಳಸಿ ಬೆಳೆದ ವಿ.ಭಟ್ಟ

ಸದಾನಂದ ಗೌಡರು ರಾಜ್ಯಾಧ್ಯಕ್ಷರಾಗಿದ್ದಕ್ಕಾಗಿ[...] ಬಿಜೆಪಿ ಅಧಿಕಾರಕ್ಕೇರಿತು ಎನ್ನುವಂತೆ ರಾಜ್ಯದಲ್ಲಿ ದೊ[...] ಜಾಲ (Network) ವೊಂದರ ಹಿನ್ನೆಲೆಯುಳ್ಳ ವ್ಯವಹಾ[...] ಸಂಕೇಶ್ವರರ ಶ್ರಮದ ಕೊಡುಗೆಯನ್ನು ಮೂಲೆಗೊತ್ತಿ [...] ಸಾರಥ್ಯದಿಂದಲೇ ವಿಕ ನಂ.1. ಎನಿಸಿತೆಂದು ಬಿಂಬಿಸಿಕೊ[...] (ಕಪ್ರಕ್ಕೆ ಬಂದ ಆರಂಭದಲ್ಲಿ ಇದೇ ಅಹಂನಿಂದ 'ನಾ[...] ಏನೇನ್ ಮಾಡ್ತೇವಂತ ನೋಡ್ತಾ ಇರಿ' ಎಂದು ಮುಖಪ[...] ದಲ್ಲೇ ಉತ್ತರ ಕುಮಾರನಂತೆ ಭಟ್ಟರು ದೊಡ್ಡದ[...] ಬೊಂಬಡಾ ಬಜಾಯಿಸಿಕೊಂಡಿದ್ದರು) ವಿಶ್ವೇಶ್ವರ ಭಟ[...] ಅಸಲಿಯತ್ತು ಇದೀಗ ಬಹಿರಂಗಗೊಂಡಿದೆ. ಕನ್ನಡ ಪ[...] ಹಾಗು ಸುವರ್ಣದ 'ಪ್ರಭೆ' ಬೆಳಗಿಸುತ್ತಾರೆಂದೇ ಕರೆತರಲ[...] ಭಟ್ಟರು ಕಪ್ರದ ಪ್ರಭೆಯನ್ನು ಮತ್ತಷ್ಟು ಮಂಕುಗೊಳಿಸಿ[...] ಸಾಧನೆಯೆನಿಸಿಬಿಟ್ಟಿತು. ಈ ಸಾಧನೆಗಾಗಿ ರಾಜೀ[...] ಚಂದ್ರಶೇಖರ್‌ರಿಂದ ಭಟ್ಟರಿಗೆ ಸಿಕ್ಕ 'ಅರ್ಧಚಂ[...] ಪ್ರಯೋಗದ ಕೊಡುಗೆ ಅನೇಕರಿಗೆ ಸಿಹಿಸುದ್ದಿಯೆನಿಸಿರುವ[...] ಹೌದಾದರೂ ಇದರಲ್ಲಿ ಖುಷಿಪಡುವಂತಾದ್ದು ಏ[...] ಇಲ್ಲ, ಯಾಕೆಂದರೆ, ಇತ್ತೀಚಿನ ದಿನಗಳಲ್ಲಿ ಬೆಲೆ (ಹ[...] ನೆಲೆಯನ್ನೂ) ಕಳೆದುಕೊಳ್ಳುತ್ತಿರುವ ಭಟ್ಟರು ತನ್ನ [...] ದ ಸುವರ್ಣ ಯುಗದಲ್ಲಿ ಮಾಡಬಾರದ್ದನ್ನೆಲ್ಲ ಮ[...] ರಿಪೇರಿ ಮಾಡಲಾಗದಂತೆ ತಣ್ಣಗೆ ಸಾಮಾಜಿಕ ವಿಷವ[...] ಯಶಸ್ವಿಯಾಗಿ ಬಿತ್ತಿಯಂತೂ ಆಗಿದೆ ತಾನೆ?

ಸಮಾಜದಲ್ಲಿ ಕೊಳಕು ವಿಷ ಹರಡುವವರಿಗೆ ಉಗ[...] ತಕ್ಕ ಉತ್ತರ ನೀಡಿ ಬಾಲಬಿಚ್ಚದಂತೆ ಮಾಡುತ್ತಿದ್ದ ಲಂಕೇ[...] ಕಾಲದಲ್ಲೇ ಈ ಭಟ್ಟರು ಪತ್ರಿಕೋದ್ಯಮದಲ್ಲಿದ್ದರು. ಆದ[...] ದಲ್ಲಿ ಸಂಯುಕ್ತ ಕರ್ನಾಟಕದಲ್ಲಿದ್ದ ಭಟ್ಟರು ಬಾಲಬಿ[...] ಮಾತ್ರ ವಿಕದಲ್ಲಿ. ತನ್ನ ಮನೆಹಾಳ ಬುದ್ಧಿಗೆ ತಕ್ಕಂತಿರ[...] ಪ್ರತಾಪ ಸಿಂಹನಂತಹ ಬುದ್ಧಿಗೇಡಿಯನ್ನ ಬೆಳೆಸಿದ್ದು, ಭೈ[...] ನಾರಾಯಣಾಚಾರ್ಯನಂತವರಿಗೆ ಮಣೆ, ಅನ್ಯರ ದ್ವೇ[...] ಜತೆಗೆ ಹಿಂದೂತ್ವದ ವಿಜೃಂಭಣೆ, ಮತಾಂತರ ರಂಪ[...] ನಾಯಿ ನರಿಗಳಂತವರೆಲ್ಲ ಅನಂತ ಮೂರ್ತಿ, ಕಾರ್ನಾಡ[...] ಹಿರಿಯರ ಬಗ್ಗೆ ಕೀಳಾಗಿ ಮಾತಾಡುವಂತಹ ಸನ್ನಿವೇಶ[...] ಸೃಷ್ಟಿಸಿ ಬೆಳೆಸಿದ್ದು, 'ಬುದ್ಧಿಜೀವಿ' ಗಳೆಂಬುವುದನ್ನ ಲೇವಡಿ[...] ಪದವನ್ನಾಗಿಸಿದ್ದು, ಯಾವುದೇ ಘಟನೆ/ ಪ್ರಕರಣದ ಕುರಿ[...] ತುಲನಾತ್ಮಕ ವಿಮರ್ಶೆಯ ಬದಲು ಜನಾಭಿಪ್ರಾಯ[...] ಹುಚ್ಚೆಬ್ಬಿಸಿ ಜನರನ್ನು ಗೊಂದಲಕ್ಕೆ ದೂಡುವುದು ಒಂ[...] ಎರಡೇ ಈತ ಮಾಡಿದಂತಹ ಅನಾಹುತಗಳು ಅಬ್ಬಬ್ಬಾ[...] ಯಾವುದೋ ಮಹಾ ಮರವೊಂದು ಬಿದ್ದಾಗ ಆ ಖ[...] ಜಾಗವನ್ನು ತರಹೇವಾರಿ ಕಳೆಗಳು ಆಕ್ರಮಿಸುವುದುಂ[...] ಲಂಕೇಶ್ ಇಲ್ಲದ ಕಾಲವನ್ನು ಸರಿಯಾಗಿ ಬಳಸಿಕೊ[...] ಜನರನ್ನ ಅಡ್ಡದಾರಿಗೆಳೆಯುತ್ತಾ ಬೆಳೆದದ್ದೇ ಈ ಭ[...] ಸಾಧನೆ.

'ತಪ್ಪಾಯ್ತು ತಿದ್ಕೋತೀವಿ' ಎಂಬ ಪದ ಶುದ್ಧ[...] ಬಗ್ಗೆ ಇನ್ನಿಲ್ಲದಂತೆ ಕಾಳಜಿ ತೋರುವ ಈತ ವೆ[...]

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ [...] ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು ನ[...] ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗ[...] ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹ[...]



ಸಿಎಂ ಸಿದ್ದರಾಮಯ್ಯರ ಕುರಿತಾಗಿ 'ಉಸಾರು' ಎಂದು ಲೇವಡಿ ಮಾಡಿದ್ದನ್ನ ರಾಜಶೇಖರ್ ಅವರು ಚೆನ್ನಾಗಿ ವಿಶ್ಲೇಷಿಸಿದ್ದಾರೆ. (ಸಿದ್ದರಾಮಯ್ಯರದ್ದು ಹಳ್ಳಿಗಮಾರರ ಕೀಳವರ್ಗದವರ ಭಾಷೆ ಇದ್ದಿರಬಹುದು ಆದರೆ ಈ ವಿಪ್ರ ಪಂಡಿತೋತ್ತಮ ಮಾಡಿದ ಅನಾಹುತ ಹೇಳಹೋದರೆ ಈತನ್ನ ಯಾರೂ ಕ್ಷಮಿಸಲಾರರು. ಅದೆಂದರೆ, ಅಂಗವಿಕಲರ ಕುರಿತಾಗಿ ತಿಕ್ಕಲು ಶಬ್ದವೊಂದನ್ನ ಹುಟ್ಟುಹಾಕಿದ್ದು ಅದೇ 'ವಿಕಲಚೇತನ' ಪದ. ಅಂದರೆ ಚೇತನರಹಿತರು ಅರ್ಥಾತ್ ಶವಸಮಾನರು ಎಂದು) ಇದು ಅತನ ವಿಕೃತ ಬುದ್ಧಿಯನ್ನ ಚೆನ್ನಾಗಿ ಬಿಂಬಿಸುತ್ತದೆ. ಸುವರ್ಣದಲ್ಲಿ ಕಾಳಿಸ್ವಾಮಿಯ ಪೇಟ ತೆಗೆಸಿ ಮಹಾಸಾಧನೆ (ನಂತರ ಅದನ್ನೇ ಹೈಲೈಟ್ ಮಾಡಲಾಯಿತು) ಯಂತೆ ತೋರಿಸಿದ್ದ ಈತ ಕಟ್ಟಾ ಕೊಳಕ ರಾಘವೇಶ್ವರನ ವಿಚಾರದಲ್ಲಿ ಜಾತಿಬಂಧುವೆನ್ನುವ ಕಾರಣಕ್ಕೆ ಮರ್ಯಾದೆ ಬಿಟ್ಟು ವರ್ತಿಸುತ್ತಾನೆ. ಊರಿಗೆ ಊರೇ ಮುಕ್ಕಾಲು ಭಾಗ ಹವ್ಯಕ ಸಮೂಹವೇ ರಾಘವನ ವಿರುದ್ಧ ತಿರುಗಿನಿಂತಿದ್ದರೂ ಅತನ ನೀಚ ಕಾರ್ಯಗಳಿಗೆಲ್ಲ ನಾಚಿಕೆ ಬಿಟ್ಟು ಈತ ಬೆಂಬಲಿಸುತ್ತಾನಲ್ಲದೇ ಅದಕ್ಕೂ ಕೀಳಾಗಿ ಸಂತ್ರಸ್ತೆ ಪ್ರೇಮಲತಾ ಹೆಣ್ಣೆಂಬುದನ್ನೇ ಮರೆತು ಆಕೆಯ ಬಗ್ಗೆ ಅತ್ಯಂತ ಕೀಳಾಗಿ ಸುಳ್ಳುಗಳನ್ನು ವ್ಯವಸ್ಥಿತವಾಗಿ ಬರೆಯುತ್ತಾ ತಾನು ಎಂತಹ ಕೆಳಮಟ್ಟಕ್ಕಿಳಿಯಲೂ ಕೂಡ ಹೇಸಲಾರೆ ಎಂಬುವುದನ್ನ ಸಾಬೀತುಪಡಿಸುವುದರೊಂದಿಗೆ ತನ್ನ ಪರಮಗುರು ರಾಘವನಂತೆ ತಾನೂ ಒಬ್ಬ ವಿಕಲಚೇತನ (ಆತ್ಮಚೇತನಕ್ಕೆ ವೈಕಲ್ಯ ತಂದುಕೊಂಡಂತವರು) ಎಂಬುವುದನ್ನ ತೋರಿಸಿಕೊಳ್ಳುತ್ತಾನೆ. ಇಂತವರು ಇದ್ದರೆಷ್ಟು ಬಿಟ್ಟರೆಷ್ಟು?

- ಅವಿನಾಶ್ ಎಂ.ಎಸ್, ನೆಲ್ಲಿಕಾರ್


## ನಾಣ್ನುಡಿಗಳನ್ನು ಬದಲಿಸುವ ಅಗತ್ಯವಿದೆ

ಯಾವುದಾದರೂ ಸೆಲೆಬ್ರಿಟಿ ಅಥವಾ ರಾಜಕಾರಣಿಯ ವಿರುದ್ಧ ಕೋರ್ಟಿನಲ್ಲಿ ತೀರ್ಪು ಬಂದು ಆರೋಪಿಗಳಿಗೆ ಶಿಕ್ಷೆ ಘೋಷಣೆಯಾದ ಕೂಡಲೇ ಸಾಮಾನ್ಯ ಜನರು ಉದುರಿಸುವ ನಾಣ್ನುಡಿಗಳೆಂದರೆ - ಉಪ್ಪು ತಿಂದವ ನೀರು ಕುಡಿಯಲೇ ಬೇಕು, ಮಾಡಿದ್ದುಣ್ಣೋ ಮಾರಾಯ, ಕಾನೂನಿನ ಕೈ ಉದ್ದವಿದೆ, ಕಾನೂನಿನ ಮುಂದೆ ಎಲ್ಲರೂ ಸಮಾನರು, ಸತ್ಯಕ್ಕೆ ಜಯವಾಯಿತು, ದೇವರಿದ್ದಾನೆ ಎಂದು ಸಾಬೀತಾಯಿತು, ಮುಂತಾದವು. ಗುದ್ದೋಡು ಪ್ರಕರಣದಲ್ಲಿ ಸಲ್ಮಾನ್ ಖಾನನಿಗೆ ಹಾಗೂ ಭ್ರಷ್ಟಾಚಾರ ಪ್ರಕರಣದಲ್ಲಿ ಜಯಲಲಿತಾಗೆ ಕೋರ್ಟಿನಲ್ಲಿ ಶಿಕ್ಷೆ ಘೋಷಣೆಯಾದ ಕೂಡಲೇ ಇಂತಹವೇ ನಾಣ್ನುಡಿಗಳನ್ನು ಜನರು ಉಪಯೋಗಿಸಿ ಖುಷಿಪಟ್ಟಿದ್ದರು. ಆದರೆ ಸಲ್ಮಾನನಿಗೆ ಸುಲಭವಾಗಿ ಬೇಲ್ ಸಿಕ್ಕ ಮೇಲೆ ಹಾಗೂ ಜಯಲಲಿತಾರನ್ನು ಕರ್ನಾಟಕ ಹೈಕೋರ್ಟ್ ಆರೋಪಮುಕ್ತಗೊಳಿಸಿದ ಮೇಲೆ ಈ ನಾಣ್ನುಡಿಗಳನ್ನು ಹೀಗೆ ಬದಲಿಸುವ ಅಗತ್ಯವಿದೆ - ಉಪ್ಪು ತಿಂದವ ತುಪ್ಪ ಕುಡಿಯುತ್ತಾನೆ, ಕಾನೂನಿನ ಕೈ ಉದ್ದವಿದೆ ಆದರೆ ಹಣದ ಕೈ ಅದಕ್ಕಿಂತ ಉದ್ದವಿದೆ, ಕಾನೂನಿನ ಮುಂದೆ ಎಲ್ಲರೂ ಸಮಾನರು ಆದರೆ ಧನಿಕರು ಮತ್ತು ಪ್ರಭಾವಿಗಳು ಹೆಚ್ಚು ಸಮಾನರು, ಮಾಡಿದ್ದನ್ನು ಪರರಿಗೆ ಉಣ್ಣಿಸೋ ಮಾರಾಯ, ಸತ್ಯಕ್ಕೆ ಜಯ ತಾತ್ಕಾಲಿಕ ಸುಳ್ಳಿಗೆ ಜಯ ಶಾಶ್ವತ, ದೇವರಿದ್ದಾನೆ ಆದರೆ ಅವನಿಗೇ ಗೊತ್ತಿಲ್ಲ ಅವನು ಇದ್ದಾನೆಂದು!

ಬಹಳ ಹಿಂದೆಯೇ ಚಾರ್ಲ್ಸ್ ಡಿಕೆನ್ಸ್ ಎಂಬ ಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರ ಹೇಳಿದ್ದಾನೆ "ಕಾನೂನು ಒಂದು ಕತ್ತೆ. ಅದನ್ನು ಸರಿಯಾಗಿ ದುಡಿಸಿಕೊಳ್ಳಬಲ್ಲ ಆಗಸನೇ ಸಫಲ ನ್ಯಾಯವಾದಿ!" ರಾಜಸ್ಥಾನದ ಕೃಷ್ಣಮೃಗ ಬೇಟೆಯಲ್ಲಿ ಸಹ ಸಲ್ಮಾನ್ ಖಾನನ ಪ್ರಕರಣ ಹಲವು ವರ್ಷಗಳಿಂದ ರಾಜಸ್ಥಾನ ಕೋರ್ಟಿನಲ್ಲಿ ಎಳೆದಾಡುತ್ತಿದೆ. ಆದರೆ ಅದರ ನಂತರ ಅಂತಹದ್ದೇ ಒಂದು ಪ್ರಕರಣದಲ್ಲಿ ಸಂಜಯ್ ದತ್ ನಮ್ಮ ಬೆಳಗಾವಿ ಜಿಲ್ಲೆಯ ಕಾಡಿನಲ್ಲಿ ಬೇಟೆಯಾಡಿ ಸಿಕ್ಕಿ ಬಿದ್ದರೂ ಕರ್ನಾಟಕದ ಖಾನಾಪುರ ಕೋರ್ಟು ಪುರಾವೆ ಇಲ್ಲವೆಂದು ಸಂಜಯ್ ದತ್ತನನ್ನು ದೋಷಮುಕ್ತಗೊಳಿಸಿತು. ಜಯಲಲಿತಾಳ ಪ್ರಕರಣವನ್ನೂ ಕರ್ನಾಟಕ ಹೈಕೋರ್ಟ್ ಖುಲಾಸೆಗೊಳಿಸಿತು. ಘೋರ ಅತ್ಯಾಚಾರ ಪ್ರಕರಣದಲ್ಲೂ ಕರಾವಳಿಯ ಒಬ್ಬ ಸ್ವಾಮೀಜಿಗೆ ಸುಲಭವಾಗಿ ಬೇಲ್ ಸಿಕ್ಕಿತು. ಹಾಗಾಗಿ ಸಲ್ಮಾನ್ ಖಾನ್ ಸಹ ತನ್ನ ಕೃಷ್ಣಮೃಗ ಬೇಟೆಯ ಕೇಸನ್ನು ರಾಜಸ್ಥಾನದಿಂದ ಕರ್ನಾಟಕಕ್ಕೆ ವರ್ಗಾಯಿಸಬೇಕೆಂದು ಕೋರಿದರೆ ಆಶ್ಚರ್ಯವಿಲ್ಲ, ಕರ್ನಾಟಕದ ಕೋರ್ಟುಗಳಲ್ಲಿ ಆರೋಪಿಗಳು ಖುಲಾಸೆಗೊಳ್ಳುವುದು ಸುಲಭವೆಂದು ಭಾರತವಿಡೀ ಸುದ್ದಿಯಾಗಿದೆ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

# ಕನ್ನಡ ಚಿತ್ರದಲ್ಲಿ ಮಿಥುನ್ ಚಕ್ರವರ್ತಿ






ಶಿವರಾಜ್‌ಕುಮಾರ್ ಅಭಿನಯದ 'ಸಂತೆಯಲ್ಲಿ ನಿಂತ ಕಬೀರ' ಚಿತ್ರದಲ್ಲಿ ದೊಡ್ಡ ತಾರಾಗಣವೇ ಇದೆಯಂತೆ. ಸಂತ ಕಬೀರನ ಪಾತ್ರದಲ್ಲಿ ಶಿವಣ್ಣ ಅಭಿನಯಿಸುತ್ತಿದ್ದು ಅವರ ಗುರುಗಳಾದ ರಮಾನಂದ ಅವರ ಪಾತ್ರವನ್ನು ಮಿಥುನ್ ಚಕ್ರವರ್ತಿ ನಿರ್ವಹಿಸಲಿದ್ದಾರಂತೆ.

ಹಾಗೆ ನೋಡಿದರೆ ಅಮಿತಾಬ್ ಬಚ್ಚನ್ ಈ ಪಾತ್ರವನ್ನು ನಿರ್ವಹಿಸಲಿದ್ದಾರೆ ಎನ್ನುವ ಮಾತು ಈ ಹಿಂದೆ ಕೇಳಿಬಂದಿತ್ತು, ಆದರೆ ಈಗ ಯಾಕೋ ಅದು ಸಾಧ್ಯವಾಗುವ ಲಕ್ಷಣ ಕಾಣುತ್ತಿಲ್ಲ, ಹಾಗಾಗಿ ಅಮಿತಾಬ್ ಬದಲಿಗೆ ಮಿಥುನ್ ಚಕ್ರವರ್ತಿ ಅವರನ್ನು ರಮಾನಂದರ ಪಾತ್ರಕ್ಕೆ ಆಯ್ಕೆ ಮಾಡಲು ನಿರ್ದೇಶಕರು ಯೋಚಿಸಿದ್ದಾರಂತೆ.

ಚಿತ್ರದ ಶೀರ್ಷಿಕೆ ಸೂಚಿಸುವ ಹಾಗೆ, ಇದು ಸಂತ ಕಬೀರ್ ದಾಸ್‌ನ ಜೀವನಚರಿತ್ರೆ. ಭೀಷ್ಮ ಸಹಾನಿ ಅವರ 'ಕಬೀರ ಕಡಾ ಬಝಾರ್' ಕೃತಿಯನ್ನಾಧರಿಸಿ 'ಸಂತೆಯಲ್ಲಿ ನಿಂತ ಕಬೀರ' ಚಿತ್ರಕಥೆ ರಚಿಸಲಾಗಿದೆ. ಕಬೀರ್ ದಾಸ್ ಆಗಿ ಶಿವಣ್ಣ ಕಾಣಿಸಿಕೊಳ್ಳುತ್ತಿದ್ದರೆ, ಅವರ ತಂದೆ ಪಾತ್ರದಲ್ಲಿ ಓಂ ಪುರಿ ಮತ್ತು ತಾಯಿಯಾಗಿ ಅಕ್ಷತಾ ರಾವ್ ಅಭಿನಯಿಸಲಿದ್ದಾರೆ. ಶಿವಣ್ಣನಿಗೆ ಜೋಡಿಯಾಗಿ ಮಲೆಯಾಳಂ ನಟಿ ಸನುಷ ಇದ್ದಾರೆ. ಕಾಲಿವುಡ್ ನಟ ಶರತ್ ಕುಮಾರ್, ಅವಿನಾಷ್, ಶರತ್ ಲೋಹಿತಾಶ್ವ, ದತ್ತಣ್ಣ ಸೇರಿದಂತೆ ದೊಡ್ಡ ತಾರಾಬಳಗ ಚಿತ್ರದಲ್ಲಿದೆ.

# ಮುಂದಿನ ವರ್ಷ ಹಸೆಮಣೆ ಏರಲಿರುವ ರಣಬೀರ್-ಕತ್ರೀನಾ




ಬಾಲಿವುಡ್‌ನ ಜೋಡಿಹಕ್ಕಿಗಳಾದ ರಣಬೀರ್ ಕಪೂರ್ ಮತ್ತು ಕತ್ರೀನಾ ಕೈಫ್ ಯಾವಾಗ ಮದುವೆಯಾಗಲಿದ್ದಾರೆ ಎಂಬ ವದಂತಿಗೆ ಕಡೆಗೂ ತೆರೆ ಬಿದ್ದಿದೆ. "ಕತ್ರಿನಾರನ್ನು ಪ್ರೀತಿಸುತ್ತಿರುವುದು ನಿಜ. ಸಿನಿಮಾ ಕುಟುಂಬದ ಹಿನ್ನೆಲೆಯಿಂದ ಬಂದಕಾರಣ ಈ ವಿಷಯದಲ್ಲಿ ಗೌಪ್ಯತೆ ಕಾಪಾಡಿಕೊಂಡು ಬಂದಿದ್ದೆ. ಹಾಗಾಗಿ ನಮ್ಮಿಬ್ಬರ ಪ್ರೇಮದ ವಿಚಾರವನ್ನು ಇಷ್ಟು ದಿನ ಮಾತನಾಡಲಿಲ್ಲ. ಸದ್ಯಕ್ಕೆ ಇಬ್ಬರೂ ಚಿತ್ರೀಕರಣದಲ್ಲಿ ಬಿಜಿಯಾಗಿದ್ದೇವೆ. ಮುಂದಿನ ವರ್ಷದ ಕೊನೆಗೆ ಮದುವೆಯಾಗಬೇಕೆಂದಿದ್ದೇವೆ" ಎಂದಿದ್ದಾರೆ ರಣಬೀರ್.

"ನನಗೀಗ 33 ವರ್ಷ. ನನಗೂ ಕುಟುಂಬ ಬೇಕು... ನನ್ನಂತೆಯೇ ಒಂದು ಕುಟುಂಬ ಬೇಕು ಎಂದು ಕತ್ರಿನಾ ಸಹ ಬಯಸಿದ್ದಾಳೆ. ಇದೇ ಸೂಕ್ತ ಸಮಯ ಎಂದು ಭಾವಿಸಿದ್ದೇವೆ. ಇದರಲ್ಲಿ ಮುಚ್ಚಿಡುವಂತಹ ವಿಷಯವೇನೂ ಇಲ್ಲ" ಎಂದು ಅವರು ಹೇಳಿದ್ದಾರೆ. ■

# ಮಾತಲ್ಲೆ ಮನೆ ಕಟ್ಟಿ ಅಂಗೈಲೇ ಆಕಾಶ ತೋರಿದವರು

ಪ್ರಧಾನಿ ಮೋದಿಗೆ ಅಮೆರಿಕದ ಟೈಮ್ ನಿಯತಕಾಲಿಕದ ಮುಖಪುಟದಲ್ಲಿ ಕಾಣಿಸಿಕೊಳ್ಳುವ ಸೌಭಾಗ್ಯ ದೊರೆತುದನ್ನು ಕಂಡ ಅಭಿಮಾನಿಗಳು ಹುಚ್ಚೆದ್ದು ಕುಣಿಯತೊಡಗಿದ್ದಾರಂತೆ. ಸಂದರ್ಶನಕ್ಕೆ ಪೂರ್ತಿ ಎರಡು ಗಂಟೆಗಳು ತಗಲಿದರೆ ಮುಖಪುಟ ಮತ್ತು ಒಳಗಿನ ಚಿತ್ರಗಳಿಗಾಗಿ ಸುಮಾರು ಒಂದು ಗಂಟೆಯಷ್ಟು ಸಮಯ ಬೇಕಾಯಿತಂತೆ. ಆದರೆ ಸಂದರ್ಶನವನ್ನು ಗಮನವಿಟ್ಟು ಓದಿದವರಿಗೆ ಇದೊಂಥರಾ ಪಾವತಿ ಸುದ್ದಿಯಂತಿದೆ ಎಂದು ಅನಿಸದಿರದು. 2007ರಿಂದಲೂ ಮೋದಿಯ ವ್ಯಕ್ತಿತ್ವವನ್ನು ಕಟ್ಟುವ ಗುತ್ತಿಗೆಯನ್ನು ಪಡೆದುಕೊಂಡಿರುವ ಆಪ್ಕೊ ಇಂಟರ್‌ನ್ಯಾಷನಲ್ ಎಂಬ ಅಮೆರಿಕನ್ ವಶೀಲಿಬಾಜಿ ಸಂಸ್ಥೆಯ ಕೈವಾಡ ಇಲ್ಲಿ ಇಲ್ಲವೆನ್ನಲು ಸಾಧ್ಯವಿಲ್ಲ. ಆಪ್ಕೊ ಕಂಪೆನಿಯ ಕಾರ್ಯಕ್ಷೇತ್ರಗಳು ಅಮೆರಿಕ ಮಾತ್ರವಲ್ಲದೆ ಇನ್ನೂ ಅನೇಕ ದೇಶಗಳಿಗೆ ವ್ಯಾಪಿಸಿವೆ. ಅದರ ಗ್ರಾಹಕರ ಪಟ್ಟಿಯಲ್ಲಿ ಇಸ್ರೇಲ್, ಕಜಕಿಸ್ಥಾನ, ತುರ್ಕಮೆನಿಸ್ಥಾನ, ಅಜರ್‌ಬೈಜಾನ್ ಮುಂತಾದ ನಿರಂಕುಶ ಪ್ರಭುತ್ವಗಳೂ ಇವೆ. ನೈಜೀರಿಯದ ಸರ್ವಾಧಿಕಾರಿ ಶನಿ ಅಬಾಚ, ಕಜಕಿಸ್ಥಾನದ ಸರ್ವಾಧಿಕಾರಿ ನೂರ್‌ಸುಲ್ತಾನ್ ನಜರ್‌ಬಯೇವ್, ಅಮೆರಿಕದ ಜಾರ್ಜ್ ಬುಷ್, ಡಿಕ್ ಚೇನಿ ಮತ್ತು ಬ್ರಿಟನ್‌ನ ಟೋನಿ ಬ್ಲೇರ್‌ರಂತಹ ಯುದ್ಧಕೋರ ನಾಯಕರ ಇಮೇಜನ್ನು ಬದಲಾಯಿಸುವಲ್ಲಿ ಆಪ್ಕೋ ಪಾತ್ರ ಮಹತ್ತರವಾದುದು ಎನ್ನಲಾಗುತ್ತದೆ.

ಟೈಮ್ ಸಂದರ್ಶನದ ಓದುಗರಲ್ಲಿ ಕೆಲವರಿಗಾದರೂ ಮೋದಿ ಸರ್ಕಾರದ ಆಳ್ವಿಕೆಯಲ್ಲಿ ಭಾರತ ಹಾಲುಜೇನು ಹರಿಯುವ ಬಹುಸಂಸ್ಕೃತಿಯ ನಾಡು, ಜಾತ್ಯತೀತತೆಯ ಬೀಡು ಆಗಿಬಿಟ್ಟಿದೆ ಅನಿಸಿದರೆ ಅದು ಅವರ ತಪ್ಪಲ್ಲ, ಮೋದಿಯ ಮಾತುಗಾರಿಕೆಯೆ ಅಂಥಾದ್ದು. ಆದರೆ ಮೋದಿಯ ಮಾತು ಮತ್ತು ಕೃತಿಗಳ ನಡುವೆ ಅಜಗಜಾಂತರ ವ್ಯತ್ಯಾಸ ಇರುವುದನ್ನು ಕೊಂಚ ತಡವಾಗಿಯಾದರೂ ಮತದಾರ ಪ್ರಭುಗಳು ಗಮನಿಸಲಾರಂಭಿಸಿದ್ದಾರೆ. ಮತೀಯ ಸಂಘರ್ಷದ ಬಗ್ಗೆ ಭಾಷಣ ಕುಟ್ಟುವ ಮೋದಿ ಮತೀಯ ದ್ವೇಷವನ್ನು ಹೆಚ್ಚಿಸುವಂತಹ ಸಂಘ ಪರಿವಾರದ ಗಲಭೆಕೋರರನ್ನು ತಡೆಯುವ ಕೆಲಸವನ್ನು ಮಾಡದಿರುವುದು ಜನರ ಗಮನಕ್ಕೆ ಬಂದಿದೆ. ಅಲ್ಪಸಂಖ್ಯಾತರನ್ನು, ರೈತರನ್ನು, ಕಾರ್ಮಿಕರನ್ನು ಇನ್ನಷ್ಟು ಆತಂಕ ಸ್ಥಿತಿಗೆ



ದೂಡುತ್ತಿರುವ ಮೋದಿ ಸರ್ಕಾರದ ಹುನ್ನಾರ ಜನರಿಗೆ ಅರ್ಥವಾಗುತ್ತಿದೆ. ಇವರು ಬಂಡವಾಳಶಾಹಿಗೆ ಬೇಕಾಗಿರುವ ಅಧೀನ ಕಾರ್ಮಿಕ ವರ್ಗವನ್ನು ತಟ್ಟೆಯ ಮೇಲಿಟ್ಟು ಸಮರ್ಪಿಸಲು ಮುಂದಾಗಿರುವುದು, ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿರುವ ಇವರ ನೂತನ ಭೂಸ್ವಾಧೀನ ಮಸೂದೆ ಹಿಂದಿನ ಬ್ರಿಟಿಷ್ ಕಾಯ್ದೆಗಿಂತಲೂ ಭಯಂಕರವಿರುವುದು ಮತ್ತು ಹೆಚ್ಚುತ್ತಿರುವ ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಮತದಾರರ ಗಮನಕ್ಕೆ ಬಂದಿವೆ. ಜನರಿಗೆ ಇವರ 'ಅಟ್ಟ ಹತ್ತಿದ ಮೇಲೆ ಏಣಿಗೆ ಒದೆಯುವ' ಗುಣದ ಅರಿವು ಆಗುತ್ತಿದೆ.

ಜನ ಎಚ್ಚೆತ್ತುಕೊಳ್ಳುತ್ತಿರುವುದನ್ನು ಕಂಡು ಆತಂಕಕ್ಕೊಳಗಾದ ಮೋದಿ ಸರ್ಕಾರ ತನ್ನ ಹಿಂದಿನ ಜನಪ್ರಿಯತೆಯನ್ನು ಉಳಿಸಿಕೊಳ್ಳಲು ಕೆಲವೊಂದು ಗಿಮಿಕ್‌ಗಳನ್ನು ಮಾಡಲಾರಂಭಿಸಿದೆ. ಟೈಮ್ ಸಂದರ್ಶನ ಅವುಗಳಲ್ಲೊಂದು ಎನ್ನಬಹುದು. ಮತ್ತೊಂದು ಹತಾಶ ಯತ್ನದ ಭಾಗವಾಗಿ ಅದಿಂದು 'ಯುಪಿಎ ಸರ್ಕಾರದ ಕೆಲವು ವಿಫಲ ಆರ್ಥಿಕ ಸ್ಕೀಮುಗಳಿಗೆ ಹೊಸಾ ಮೆರುಗು ಕೊಟ್ಟು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದೆ. ತುಕ್ಕು ಹಿಡಿದಿರುವ 'ಸ್ವಾವಲಂಬನ' ಸ್ಕೀಮನ್ನು ಕೈಗೆತ್ತಿಕೊಂಡು ಅದಕ್ಕೆ ಚೂರುಪಾರು ಬದಲಾವಣೆ ಮಾಡಿ ಅಟಲ್ ಪಿಂಚಣಿ ಎಂಬ ಹೊಸಾ ಹೆಸರಿನೊಂದಿಗೆ ಬಿಡುಗಡೆ ಮಾಡಿದೆ! ಅತ್ಯಂತ ಕಡಿಮೆ ವೆಚ್ಚದಲ್ಲಿ ದೊಡ್ಡ ಮಟ್ಟನ ಪ್ರಚಾರ ಗಿಟ್ಟಿಸುವ ಈ ಚಮತ್ಕಾರ ಹೇಗಿದೆ ಅಂದರೆ ಬೆಂಗಳೂರಿನಿಂದ ಮಂಗಳೂರಿಗೆ ಹೊರಟವನಿಗೆ ಮಂಡ್ಯತನಕ ಟಿಕೆಟ್ಟು ತೆಗೆದುಕೊಟ್ಟು "ಉಳಿದ ಟಿಕೆಟ್ಟು ನೀನೇ ಖರೀದಿಸಪ್ಪಾ" ಎಂದ ಹಾಗೆ! ಮಿಕ್ಕಂತೆ ಜನ ಪಡಬೇಕಾದ ಪಡಿಪಾಟಲಿನಲ್ಲಿ ಯಾವ ಸುಧಾರಣೆಯೂ ಆಗಿಲ್ಲ. ಅವರು ಯಥಾಪ್ರಕಾರ ಪಿಂಚಣಿ ಚೆಕ್ಕುಗಳಿಗಾಗಿ ಪರದಾಡಬೇಕು, ಬ್ಯಾಂಕು, ಏಜೆಂಟರುಗಳಿಗೆ ಎಡತಾಕಬೇಕು, ಲಂಚ ನೀಡಲೇಬೇಕು.


ಸರ್ಕಾರಕ್ಕೆ ನಿಜಕ್ಕೂ ರೈತರಿಗೆ ನೆರವಾಗುವ ಮನಸ್ಸು ಇದ್ದಿದ್ದರೆ ಮಾರ್ಗಗಳು ಖಂಡಿತಾ ಇದ್ದವು. ಒಂದು, ಅದು ಕೃಷಿ ಉತ್ಪನ್ನಗಳ ಖರೀದಿ ಬೆಲೆಯನ್ನು ಹೆಚ್ಚಿಸಬಹುದಿತ್ತು. 2013-14ನೆ ಸಾಲಿನಲ್ಲಿ ಕೃಷಿ ಕ್ಷೇತ್ರದ ಉತ್ಪಾದನೆ ರೂ. 9,00,000 ಕೋಟಿ ದಾಟಿತ್ತು, ಆಗ ಸರ್ಕಾರ ಖರೀದಿ ಬೆಲೆಯನ್ನು ಶೇಕಡಾ 1ರಷ್ಟು ಹೆಚ್ಚಿಸಿದ್ದರೂ ರೈತರಿಗೆ 9000 ಕೋಟಿಗಳಷ್ಟು ಆದಾಯ ದೊರೆಯುತ್ತಿತ್ತು. 9000 ಕೋಟಿ ಎಲ್ಲಿ ಅಟಲ್ ಪಿಂಚಣಿ ಸ್ಕೀಮಿಗಾಗಿ ಸರ್ಕಾರ ನೀಡಬಹುದಾದ ಜುಜುಬಿ 200 ಕೋಟಿ ಎಲ್ಲಿ? (ಯುಪಿಎ ಸರ್ಕಾರ ಆದರ 'ಸ್ವಾವಲಂಬನ'ಕ್ಕೆ ರೂ. 100 ಕೋಟಿ ಮೀಸಲಿಟ್ಟಿತ್ತು, ಮೋದಿ ಸರ್ಕಾರ ಈಗ ತನ್ನ ಪಿಂಚಣಿ ಸ್ಕೀಮಿಗೆ 200 ಕೋಟಿಯಷ್ಟಾದರೂ ಅನುದಾನ ನೀಡಬಹುದೆಂಬ ಎಣಿಕೆ).

ಎರಡನೆಯದಾಗಿ ಮೋದಿ ಸರ್ಕಾರ ಕಾರ್ಪೊರೇಟುಗಳಿಗೆ ಮಣೆ ಹಾಕುವ ನೀತಿಯನ್ನು ಕೊನೆಗಾಣಿಸಿ ಸಾಲ ವಸೂಲಿಗಿಳಿಯಬಹುದಿತ್ತು. ಕಳೆದ ಏಳು ವರ್ಷಗಳ ಅವಧಿಯಲ್ಲಿ ನಮ್ಮ ಬ್ಯಾಂಕುಗಳು ಕಾರ್ಪೊರೇಟು ಮತ್ತಿತರ ವಾಣಿಜ್ಯ ಸಂಸ್ಥೆಗಳಿಗೆ ಕೊಟ್ಟಿರುವ ಸಾಲದ ಮೊತ್ತವೆ ಸುಮಾರು 5 ಲಕ್ಷ ಕೋಟಿ ರೂಪಾಯಿಗಳಷ್ಟಾಗಬಹುದು! ಈ ಕಾರ್ಪೊರೇಟು ಸಾಲವನ್ನು "ನಿಷ್ಪ್ರಯೋಜಕ ಸಂಪತ್ತು" ಎಂಬ ಗೌರವಾನ್ವಿತ ಹೆಸರಿನಿಂದ ಕರೆಯಲಾಗುತ್ತದೆ! ಮೋದಿ ಸರ್ಕಾರ ತಾನು ಹೇಳಿಕೊಳ್ಳುವಂತೆ ನಿಜಕ್ಕೂ ಜನಸ್ನೇಹಿ, ರೈತಸ್ನೇಹಿ, ಕಾರ್ಮಿಕಸ್ನೇಹಿ ಆಗಿದ್ದರೆ ಕಳೆದ ಏಳು ವರ್ಷಗಳಲ್ಲಿ ಕಾರ್ಪೊರೇಟ್‌ಗಳು ಮನ್ನಾ ಮಾಡಿಸಿಕೊಂಡ ಸುಮಾರು 3,25,000 ಕೋಟಿ ರೂಪಾಯಿಗಳನ್ನು ಅವುಗಳಿಂದ ವಸೂಲಿ ಮಾಡಬಹುದಿತ್ತಲ್ಲವೇ? ಯಾಕೆ ಮಾಡುತ್ತಿಲ್ಲ? ಉಳಿದಿರುವ ಸುಮಾರು 2,50,000 ಕೋಟಿ ರೂಪಾಯಿಗಳಷ್ಟು ಕೆಟ್ಟ ಸಾಲವನ್ನು ಕೂಡಲೆ ತೀರಿಸಬೇಕೆಂದು ಯಾಕೆ ಹೇಳುತ್ತಿಲ್ಲ? ಮಾತ್ರವಲ್ಲ ತೆರಿಗೆ ಮನ್ನಾ, ಸುಂಕ ಮನ್ನಾ ಇತ್ಯಾದಿಗಳ ಮೂಲಕ ಕಾರ್ಪೊರೇಟುಗಳಿಗೆ ಪ್ರತಿವರ್ಷ ದಾಟಿಸುತ್ತಿರುವ ಲಕ್ಷಾಂತರ ಕೋಟಿ ರೂಪಾಯಿಗಳಷ್ಟು ಬಿಟ್ಟಿ ದುಡ್ಡನ್ನು ಯಾಕೆ ನಿಲ್ಲಿಸುತ್ತಿಲ್ಲ? ಇವಕ್ಕೆಲ್ಲ ಹೋಲಿಸಿದರೆ ರೈತರ ಬಾಕಿ ಸಾಲದ ಪ್ರಮಾಣ ತೀರಾ ತೀರಾ ನಗಣ್ಯ. ಪರಿಸ್ಥಿತಿ ಹೀಗಿರುವಾಗ ಈ 'ಹೊಸಾ' ಸ್ಕೀಮುಗಳೆಂಬ ಮಂಕುಬೂದಿ ಎರಚಲು ಹೊರಟಿರುವ ಸರ್ಕಾರದ ಕ್ರಮದ ಬಗ್ಗೆ ಜನ ಸಹಜವಾಗಿಯೆ ರೊಚ್ಚಿಗೆದ್ದಿದ್ದಾರೆ. ಅವರೀಗ 'ಎಲ್ಲದಕ್ಕೂ ಮೊದಲು ನೂರು ದಿನಗಳೊಳಗಾಗಿ ದೇಶದ ಪ್ರತಿಯೊಬ್ಬ ಪ್ರಜೆಯ ಕಿಸೆಗೆ ಬಂದು ಬೀಳಬೇಕಾಗಿದ್ದ 15 ಲಕ್ಷ ರೂಪಾಯಿ ಎಲ್ಲಿದೆ, ತೋರಿಸಲಿ' ಎಂದು ಕೇಳತೊಡಗಿದ್ದಾರೆ.


(ಅಂಕಿಅಂಶಗಳಿಗೆ ಆಧಾರ: ಪ್ರೊ. ಭರತ್ ಜುನ್‌ಜುನ್‌ವಾಲಾ, ಪ್ರೊ. ಎಸ್.ಎಸ್ ಚಾರಿಯವರ ಲೇಖನಗಳು; ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ವರದಿ) ■

## ಬೂಸಿ ಬಸ್ಯ... ಮೋದಿ!

61



Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 27-05-2015 RNI No. KARKAN200




## ನೂರು ಕೋಟಿ ಕನಸಿನಲ್ಲಿ ಕನಸುಗಾರ

ಕೆಲವು ವರ್ಷಗಳ ಹಿಂದೆ ಕ್ರೇಜಿಸ್ಟಾರ್ ರವಿಚಂದ್ರನ್ ತಮ್ಮ ನಟನೆಯ ಯಾವುದೇ ಚಿತ್ರದ ಪತ್ರಿಕಾಗೋಷ್ಠಿ ಇರಲಿ, ಆ ಪತ್ರಿಕಾಗೋಷ್ಠಿಯಲ್ಲಿ ತಪ್ಪದೇ ತಮ್ಮ 'ಮಂಜಿನ ಹನಿ' ಚಿತ್ರದ ಬಗ್ಗೆ ಮಾತಾಡುತ್ತಿದ್ದರು. ಆಗೆಲ್ಲ ಅವರು ಪದೇ ಪದೇ ಹೇಳುತ್ತಿದ್ದದ್ದು ಒಂದೇ ಮಾತು. ಅದು "ಮಂಜಿನ ಹನಿ ಖಂಡಿತ ದಾಖಲೆ ಮಾಡುತ್ತೆ. ಜೊತೆಗೆ ನೂರು ಕೋಟಿ ಬಿಸ್ನೆಸ್ ಕೂಡ ಮಾಡುತ್ತೆ." ಆದರೆ ಅದ್ಯಾಕೊ ಆ ಚಿತ್ರ ತೆರೆಗೆ ಬಂದು ದಾಖಲೆ ಮಾಡುವ ಸೂಚನೆ ಸದ್ಯಕ್ಕಂತೂ ಕಾಣುತ್ತಿಲ್ಲ, ಆದರೂ ನಮ್ಮ ರವಿಮಾಮ ನೂರು ಕೋಟಿ ಕನಸನ್ನು ಮಾತ್ರ ಬಿಟ್ಟಿಲ್ಲ. ಈಗಲೂ ಯಾವುದೇ ಪತ್ರಿಕಾಗೋಷ್ಠಿ ಇರಲಿ ಅಥವಾ ಯಾವುದೇ ಟಿವಿ ಕಾರ್ಯಕ್ರಮವಿರಲಿ, ಕ್ರೇಜಿಸ್ಟಾರ್ ರವಿಚಂದ್ರನ್ ಕೊಂಚ ಬದಲಾವಣೆಯೊಂದಿಗೆ ತಮ್ಮ ಚಿತ್ರ ನೂರು ಕೋಟಿ ಬಿಸ್ನೆಸ್ ಮಾಡಿ ದಾಖಲೆ ಮಾಡುವ ಬಗ್ಗೆ ಖಂಡಿತ ಮಾತಾಡುತ್ತಾರೆ. ಆ ಬದಲಾವಣೆ ಏನೆಂದರೆ 'ಮಂಜಿನಹನಿ' ಚಿತ್ರದ ಬದಲು 'ಅಪೂರ್ವ' ಚಿತ್ರದ ಹೆಸರನ್ನ ಹೇಳುವುದು. ಹೌದು ಇತ್ತೀಚೆಗೆ ಖಾಸಗಿ ವಾಹಿನಿಯ ರಿಯಾಲಿಟಿ ಷೋ ಒಂದರಲ್ಲಿ ತಮ್ಮ 'ಅಪೂರ್ವ' ಚಿತ್ರದ ಬಗ್ಗೆ ಮಾತನಾಡಿದ ಕ್ರೇಜಿಸ್ಟಾರ್ "ಈ ಚಿತ್ರ ಖಂಡಿತ ದಾಖಲೆ ಮಾಡುತ್ತೆ, ಜೊತೆಗೆ 100 ಕೋಟಿ ರೂ. ಬಿಸ್ನೆಸ್ ಕೂಡ ಮಾಡುತ್ತೆ" ಎಂದರು. ಈ ಮಾತು ಕೇಳಿದ ಗಾಂಧೀನಗರದ ಮಂದಿ ವ್ಯಂಗ್ಯದ ನಗೆ ಬೀರಿದರು.

ಕಾರಣ ಇಷ್ಟೇ: ಕನ್ನಡ ಸಿನಿಮಾದ ಮಾರುಕಟ್ಟೆ ಬಹಳ ಚಿಕ್ಕದು. ಚಿತ್ರ ಸೂಪರ್ ಡೂಪರ್‌ಹಿಟ್ಸ್ ಆದರೂ ಅಬ್ಬಬ್ಬಾ ಅಂದ್ರೆ 40-50 ಕೋಟಿ ಬಿಸ್ನೆಸ್ ಆಗಬಹುದು. ಸತತ ಒಂದು ವರ್ಷ ಎಲ್ಲಾ ಷೋ ಹೌಸ್‌ಫುಲ್ ಆದ 'ಮುಂಗಾರು ಮಳೆ' ಚಿತ್ರ ಗಳಿಸಿದ್ದೂ 30 ಕೋಟಿ. ಇತ್ತೀಚೆಗೆ ತೆರೆಕಂಡು ಇದುವರೆಗಿನ ಎಲ್ಲಾ ದಾಖಲೆಗಳನ್ನು ಮುರಿದ ಚಿತ್ರ 'ಮಿ. ? ಮಿಸೆಸ್ ರಾಮಾಚಾರಿ' ಗಳಿಸಿದ್ದು 40 ಕೋಟಿ ರೂಪಾಯಿಗಳು. ಅಂಥಾದ್ರಲ್ಲಿ ನಮ್ಮ ಕನಸುಗಾರ ನೂರು ಕೋಟಿ ಕನಸು ಕಾಣುವುದು ಎಷ್ಟು ಸಮಂಜಸ ಎಂದು ಗಾಂಧೀನಗರದ ಮಂದಿ ಮಾತಾಡಿಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್ ವಾಸ್ತವವನ್ನು ಅರಿತುಕೊಂಡು ಭ್ರಮಾಲೋಕದಿಂದ ಹೊರಬಂದು ಆದಷ್ಟು ಬೇಗ 'ಅಪೂರ್ವ'ವನ್ನು ತೆರೆಗೆ ತರಲಿ.

## ನೇಪಾಳ ಭೂಕಂಪ ಸಂತ್ರಸ್ತರ ನೆರವಿಗೆ ಅಣ್ಣಾವ್ರ ಕುಟುಂಬ

ನೇಪಾಳದಲ್ಲಿನ ಭೀಕರ ಭೂಕಂಪ, ಅಲ್ಲಿನ ಜನರ ಕಷ್ಟಕಾರ್ಪಣ್ಯಗಳು ಈಗ ಮುಗಿಲುಮುಟ್ಟಿವೆ. ನೇಪಾಳ ಜನರಿಗಾಗಿ ಜಗತ್ತಿನ ಹಲವಾರು ಸಂಘಸಂಸ್ಥೆಗಳು ಮತ್ತು ವ್ಯಕ್ತಿಗಳು ತಮ್ಮ ಕೈಜೋಡಿಸಿದ್ದಾರೆ; ಸಹಾಯಹಸ್ತ ಚಾಚಿದ್ದಾರೆ. ಆ ನಿಟ್ಟಿನಲ್ಲಿ ಕನ್ನಡ ಚಿತ್ರರಂಗ ಮತ್ತು ಮಾಧ್ಯಮಗಳೂ ಸಹ ದೇಣಿಗೆ ಸಂಗ್ರಹಿಸುತ್ತಿದ್ದು ಅಲ್ಲಿನ ನಿರಾಶ್ರಿತರಿಗೆ ಸಹಾಯಹಸ್ತ ನೀಡುವ ಘನಕಾರ್ಯ ನೆರವೇರಿಸುತ್ತಿವೆ. ಈ ನಿಟ್ಟಿನಲ್ಲಿ ಅಣ್ಣಾವ್ರ ಕುಟುಂಬ ನೇಪಾಳ ಭೂಕಂಪ ಸಂತ್ರಸ್ತರ ನೆರವಿಗೆ ದೇಣಿಗೆ ನೀಡಿತು. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಹಾಗೂ ಅವರ ಪುತ್ರ ವಿನಯ್ ರಾಜ್‌ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ಪ್ರಧಾನಮಂತ್ರಿಗಳ ಪರಿಹಾರ ನಿಧಿಗೆ 10 ಲಕ್ಷದ ಚೆಕ್ ಅನ್ನು ಹಸ್ತಾಂತರಿಸಿದರು. ಜೊತೆಗೆ ನಾವೆಲ್ಲಾ ಅಂದರೆ ಚಿತ್ರರಂಗವೇ ಒಟ್ಟಾಗಿ ಇಂತಹ ದುರಂತಕ್ಕೆ ನಮ್ಮ ಕೈಲಾದ ಸಹಾಯ ಮಾಡಬೇಕು ಎನ್ನುವ ಕರೆಯನ್ನು ಶಿವಣ್ಣ ನೀಡಿದರು. ಈಗಾಗಲೇ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನೇಪಾಳ ಸಂತ್ರಸ್ತರಿಗೆ ಐದು ಲಕ್ಷ ರೂಪಾಯಿಗಳ ದೇಣಿಗೆ ನೀಡಿದೆ.

## ಮತ್ತೆ ಘರ್ಜಿಸಲಿರುವ ಕನ್ವರ್‌ಲಾಲ್

ಮಂಡ್ಯದ ಗಂಡು ಅಂಬರೀಶ್ ಅವರ ವೃತ್ತಿಬದುಕಿನ ಅದ್ಭುತ ಚಿತ್ರಗಳಲ್ಲಿ 'ಅಂತ' ಒಂದು. ಈ ಚಿತ್ರದ ಮೂಲಕ ಅಂಬಿ ರೆಬೆಲ್ ಸ್ಟಾರ್ ಆಗಿ ಸ್ಯಾಂಡಲ್‌ವುಡ್‌ನಲ್ಲಿ ಘರ್ಜಿಸಿದರು. ಇದೀಗ ಮತ್ತೆ 'ಅಂತ' ಚಿತ್ರ ಮೂವತ್ತು ವರ್ಷಗಳ ಬಳಿಕ ಪ್ರೇಕ್ಷಕರ ಮುಂದೆ ಬರಲು ಸಿದ್ಧವಾಗಿದೆ. ಇದೇ ಮೇ 29ರಂದು ಅಂಬರೀಶ್ ಅವರು 63ನೇ ವರ್ಷಕ್ಕೆ ಅಡಿಯಿಡುತ್ತಿದ್ದಾರೆ. ಈ ಸಂದರ್ಭದಲ್ಲಿ ಚಿತ್ರ ರೀ ರಿಲೀಸ್ ಆಗುತ್ತಿದೆ. ವಿಶೇಷ ಎಂದರೆ 5.1 ಡಿಜಿಟಲ್ ಸೌಂಡ್‌ನಲ್ಲಿ ಚಿತ್ರ ಬಿಡುಗಡೆಯಾಗುತ್ತಿರುವುದು. "ಕುತ್ತೆ ಕನ್ವರ್ ನಹಿ ಕನ್ವರ್ ಲಾಲ್ ಭೋಲೋ..." ಎಂಬ ಅಬ್ಬರದ ಧ್ವನಿಯನ್ನು ಅಂಬಿ ಅಭಿಮಾನಿಗಳು ಮತ್ತೆ ಕೇಳಲು ತುದಿಗಾಲಲ್ಲಿ ನಿಂತಿದ್ದಾರೆ. ಅಂಬರೀಶ್ ಅವರ 63ನೇ ಹುಟ್ಟುಹಬ್ಬ ಆದಕಾರಣ ಚಿತ್ರವನ್ನು ಕೇವಲ 63 ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಲಾಗುತ್ತಿದೆ.



ಸಿನಿಮಾ ಸುದ್ದಿ
ಕಾರ್ತಿಕ್ ಸಿ.ಎಸ್




## ಸದ್ಯಕ್ಕೆ ಕನ್ನಡದಲ್ಲಿ ನಟಿಸಲ್ವಂತೆ ಸಮಂ



ಸ್ಯಾಂಡಲ್‌ವುಡ್ 'ರಾಜಾಹುಲಿ' ರಾಕಿಂಗ್ ಸ್ಟಾರ್ ಯಶ್ ಅಭಿನಯದ, ಕೆ.ಮಂಜು ನಿರ್ಮಾಣದ ಚಿತ್ರಕ್ಕೆ ಇಷ್ಟು ದಿನ ದಕ್ಷಿಣದಲ್ಲಿ ಮಿಂಚುತ್ತಿದ್ದ ಬಳ್ಳಿ ಸಮಂತಾ ನಾಯಕಿಯಾಗಿ ಆಯ್ಕೆ ಆಗಿದ್ದಾರೆ ಎಂದು ಗಾಂಧೀನಗರದಲ್ಲಿ ಭಾರಿ ಸುದ್ದಿಯಾಗಿತ್ತು, ಇದನ್ನು ಸ್ವತಃ ಕೆ.ಮಂಜು ಒಪ್ಪಿಕೊಂಡು "ಹೌದು, ಸಮಂತಾರನ್ನು ಅಪ್ರೋಚ್ ಮಾಡಲಾಗಿದೆ. ಅವರನ್ನು ಕನ್ನಡಕ್ಕೆ ಕರೆತರುತ್ತೇವೆ" ಎಂದು ಬಿಟ್ಟಿ ಪ್ರಚಾರ ಪಡೆದರು.

ಆದರೆ ಇದೀಗ ಬಲ್ಲ ಮೂಲಗಳಿಂದ ಬಂದ ಸುದ್ದಿಯ ಪ್ರಕಾರ ಸಮಂತಾರನ್ನು ಯಾರೊಬ್ಬ ಕನ್ನಡ ನಿರ್ಮಾಪಕರಾಗಲಿ ಅಥವ ನಿರ್ದೇಶಕರಾಗಲಿ ಅಪ್ರೋಚ್ ಮಾಡಿಲ್ಲವಂತೆ. ಸದ್ಯಕ್ಕೆ ಸಮಂತಾ ತೆಲುಗು ಹಾಗು ತಮಿಳು ಚಿತ್ರಗಳಲ್ಲಿ ಬಿಜಿ ಇರುವ ಕಾರಣ ಆಕೆ ಕನ್ನಡದಲ್ಲಿ ನಟಿಸೊ ಸಾಧ್ಯತೆ ಕಮ್ಮಿಯಂತೆ. ಒಟ್ಟಿನಲ್ಲಿ ಸಮಂತಾ ಅವರ ಜಾಗಕ್ಕೆ ಇನ್ಯಾವ ಪರಭಾಷೆ ನಟಿಯನ್ನು ಕರೆ ತರುವೆ ಎಂದು ಹೇಳಿ ಇನ್ನೆಷ್ಟು ಬಿಟ್ಟಿ ಪ್ರಚಾರವನ್ನು ಕೆ.ಮಂಜು ಪಡೆಯುತ್ತಾರೆ ಎಂದು ಗಾಂಧೀನಗರ ಆಡಿಕೊಳ್ಳುತ್ತಿದೆ.



## ಸಮಸ್ಯೆಯಲ್ಲಿ ಚಲನಚಿತ್ರ ನಿರ್ದೇಶಕರ ಸಂಘ

ನಿರ್ದೇಶಕರ ಸಂಘದ ಸಮಸ್ಯೆ ಯಾಕೋ ಉಲ್ಬಣಿಸುತ್ತಿದೆ. ಮತ ನಿಯಮಾವಳಿ ಪ್ರಕಾರವೇ ಅಧಿಕೃತವಾಗಿ ಪಿ.ಹೆಚ್. ವಿಶ್ವನಾಥ್ ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿ ಅನಂತರ ಒಂದಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದರು. ಅದೇಕೋ ಏನೋ ಅವರನ್ನು ಏಕಾಏಕಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲ ಅದಕ್ಕೆ ಕಾರ್ಯದರ್ಶಿಗಳು ನೀಡಿರುವ ಕಾರಣ ಇಂತಿದೆ: ಮೊನ್ನೆ ಉಪಸ್ಥಿತಿಯಲ್ಲೇ ನಡೆದ ವಿಶೇಷ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹತ್ತು ಕಾರ್ಯಕಾರಿ ಸಮಿತಿ ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಿದ್ದರು. ಮತ್ತೆ ದಿನಾಂಕ 9.4.2015 ರಂದು ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಸಭೆಯಲ್ಲಿ ಅಧ್ಯಕ್ಷ ಪಿ.ಹೆಚ್.ವಿಶ್ವನಾಥ್ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆ ಉಪಾಧ್ಯಕ್ಷರಾಗಿದ್ದ ಬಿ.ರಾಮಮೂರ್ತಿ. ಅವರನ್ನು ಹಂಗಾಮಿ ಅಧ್ಯಕ್ಷ ಮಾಡಲಾಯಿತು."

ಆದರೆ ಅಧ್ಯಕ್ಷ ಪಿ.ಹೆಚ್.ವಿಶ್ವನಾಥ್ ಇದಕ್ಕೆ ಒಪ್ಪದೇ "ಇದು ನಿಯಮಾವಳಿಗಳಿಗೆ ವಿರುದ್ಧವಾದದ್ದು. ಹಾಗಾಗಿ ಇದಕ್ಕೆ ನನ್ನ ಒಪ್ಪಿಗೆಂ ಎಂದು ಧಿಕ್ಕರಿಸಿದ್ದಾರೆ. ಅಲ್ಲದೆ ಇದೇ ಭಾನುವಾರ ಸರ್ವಸದಸ್ಯರ ಸಭೆ ಕರೆದಿದ್ದಾರೆ. ಸರ್ವಸದಸ್ಯರ ಸಭೆಯಲ್ಲಿ ಏನಾಗುವುದು ಎಂಬುದನ್ನು ನೋಡಬೇಕಾಗಿದೆ. ಹಾಗೆ ನೋಡಿದರೆ ಸಂಘದ ನಿಯಮಾವಳಿಗಳ ಕಾರ್ಯಕಾರಿ ಸಮಿತಿಯ ಯಾವುದೇ ಪದಾಧಿಕಾರಿಯನ್ನಾಗಲಿ ಸಮಿತಿಯ ಸದಸ್ಯರನ್ನಾಗಲಿ ಅವಿಶ್ವಾಸ ನಿರ್ಣಯದ ಮೂಲಕ ತೆಗೆದು ಹಕ್ಕು ಕಾರ್ಯಕಾರಿ ಸಮಿತಿಗೆ ಇಲ್ಲದೆ ಇರುವುದು ಸತ್ಯ. ಹಾಗೆ ಕಾರ್ಯಕಾರಿ ಸಮಿತಿ ಈ ನಿರ್ಧಾರ ತೆಗೆದುಕೊಳ್ಳುವ ಮೂಲಕ ನೀತಿನಿಯಮಗಳನ್ನು ಗಾಳಿಗೆ ತೂರಿದೆ ಎನ್ನುವುದು ವಿಶ್ವನಾಥ್ ದೂರು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com